
ಪುಸ್ತಕ ಪ್ರಪಂಚ

ಏಪ್ರಿಲ್ ೧೯೮೯



ಡಾ. ಶಂಕರ ಮೊಕಾಶಿ ಪುಣೇಕರ್

ಪುಸ್ತಕ ಪ್ರಪಂಚ
ಮಾಸಿಕ

ಸಂಪುಟ: ೪೩   ಸಂಚಿಕೆ ೯

10/4

ಪ್ರಧಾನ ಸಂಪಾದಕರು
ಪ್ರೊ|| ದೇ. ಜವರೇಗೌಡ
ಸಂಪಾದಕ
ಆರ್. ಬೋರಯ್ಯ
ಸದಸ್ಯರು
ದೇವನೂರು ಶಿವಮಲ್ಲು
ಅಧ್ಯಕ್ಷರು
ಕೆ. ಎನ್. ವೆಂಕಟಕೃಷ್ಣಯ್ಯ
ಪ್ರಧಾನ ಕಾರ್ಯದರ್ಶಿ
ಜಿ. ಟಿ. ನಾರಾಯಣರಾವ್
ಡಾ. ಎಚ್. ಸಂಜೀವಯ್ಯ
ರಾ. ವೆಂ. ಶ್ರೀನಿವಾಸಮೂರ್ತಿ
ಸುಧಾಕರ
ಕ್ಯಾತನಹಳ್ಳಿ ರಾಮಣ್ಣ
ಪರಮಶಿವ ನಡುಬೆಟ್ಟ
ಮಲೆಯೂರು ಗುರುಸ್ವಾಮಿ
ಲಿಂಗದೇವರು ಹಳೇಮನೆ

ಪರಿವಿಡಿ

ಪುಸ್ತಕ ವಿಭಾಗ

PUSTAKA PRAPANCHA : Monthly

Published and printed by Karnataka State Adult Educa
Council, Mysore-4. Price : Rupees five

ಬಿಡಿಪ್ರತಿ : ರೂ. 5

ವಾರ್ಷಿಕ ಚಂದಾ : ರೂ. 30

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 300

ಸಂಸ್ಥೆಗೆ : ರೂ. 500

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು 570 004

ಡಾ. ಶಂಕರ ಮೊಕಾಶಿ ಪುಣೇಕರ

ಎಚ್ಚೆಸ್ಕೆ

ತಮ್ಮ 'ಅವಧೇಶ್ವರಿ' ಕಾದಂಬರಿಗಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿರುವ ಡಾ. ಶಂಕರ ಮೊಕಾಶಿ ಪುಣೇಕರ ಅವರು ನಮ್ಮ ಪ್ರತಿಭಾವಂತ ಲೇಖಕರಲ್ಲೊಬ್ಬರು. ನವ್ಯ, ನವ್ಯೋತ್ತರ, ನವ್ಯೇತ್ತರ, ನವೋದಯ ಮುಂತಾದ ಯಾವುದೇ ಪಂಥದ ಚೀಟಿಯನ್ನು ಅವರ ಸಾಹಿತ್ಯಕೃತಿಗಳಿಗೆ ಹಚ್ಚುವುದು ಸಾಧ್ಯವಿಲ್ಲ. ಇಂಥ ಯಾವುದೇ ಬಡಿದಾಟದಲ್ಲಿ ಸಿಲುಕಿಕೊಳ್ಳದೆ ಬರೆಯುವ ಜಾಣ್ಮೆ ಪುಣೇಕರ ಅವರದು! ಪಾಶ್ಚಾತ್ಯ ಸಾಹಿತ್ಯ ಸಂದರ್ಭಕ್ಕೆ ಒಪ್ಪುವಂಥ ಪ್ರಕಾರಗಳನ್ನು ಅಂತಂತೆಯೇ ಕನ್ನಡಕ್ಕೆ ತರುವುದರಲ್ಲಿ ಅವರಿಗೆ ನಂಬಿಕೆಯಿಲ್ಲ. ಸಾಹಿತ್ಯದ ಮೂಲ ಪ್ರವಾಹ ದಲ್ಲಿ ಬೆರೆಯಬೇಕಾದರೆ ಪರಂಪರೆಯನ್ನು ಬಿಟ್ಟುಕೊಡದೆ ಮುಂದು ವರಿಸಬೇಕು ಎನ್ನುವುದು ಮೊಕಾಶಿಯವರ ಬರಹಗಳನ್ನು ಒಟ್ಟಾರೆ ನೋಡಿದಾಗ ಅನಿಸದೆ ಇರದು. ಬರಹಗಾರನಿಗೆ ಮುಖ್ಯವಾಗಿ ಇರಬೇಕಾದ್ದು, ಅವರೇ ಹೇಳಿರುವಂತೆ, 'ಜೀವನ ನಿಷ್ಠೆ'. 'ಬೇಸರ ವರಿಯದಂತೆ ಸುತ್ತುವರಿಯುವ ಕಲೆ ನಿಜವಾದ ಪ್ರತಿಭಾವಂತ ಲೇಖಕನ ವಿಶಿಷ್ಟ ಗುಣ' ಎಂದು ಮೊಕಾಶಿಯವರು ಒಂದು ಕಡೆ ಬರೆದುಕೊಂಡಿದ್ದಾರೆ. ಅವರ ಕೃತಿಗಳಿಗೂ ಈ ಮಾತು ಅನ್ವಯ ವಾಗಲೇಬೇಕು.

ಕಪ್ಪನೆಯ ದಪ್ಪಕಟ್ಟಿನ ಕನ್ನಡಕದ, ಕಪ್ಪುಬಿಳಿ ಮೀಸೆಯ, ತಾಂಬೂಲಚರ್ವಣದಿಂದ ಕೆಂಪಾದ ತುಟಿ ಹಲ್ಲುಗಳ, ಡಿಸ್ನೆಯ ಮಿಕಿ ಮೌಸಿನಂತೆ ಸದಾ ನಗುವ ತುಟಿಗಳ, ಕಣ್ಣುಗಳ, ಅಗಲ ಹಣೆಯ, ದುಂಡುಮೊಗದ ಪುಣೇಕರರು ಯಾವುದೇ 'ಗಾಳಿಗೆ' ವಶರಾಗದ ಸರಳವ್ಯಕ್ತಿ. ೧೯೨೮ರ ಮೇ ೮ ರಂದು ಧಾರವಾಡದಲ್ಲಿ ಹುಟ್ಟಿದ ಶಂಕರ ಮೊಕಾಶಿಯವರ ತಂದೆ ರಾವಜಿರಾವ ಮೊಕಾಶಿ, ತಾಯಿ ಸುಂದರಾಬಾಯಿ. ಶಂಕರ ಮೊಕಾಶಿ ಅವರು ಐವರು ಮಕ್ಕಳ ತಂದೆ. ಅವರ ಪೈಕಿ ಮೂರು ಗಂಡು, ಎರಡು ಹೆಣ್ಣು.

ಶಂಕರ ಮೊಕಾಶಿ ಪುಣೇಕರರು ತಮ್ಮ ತಾಯಿಯ ತಂದೆ ರಾಮಭಾವು ಪುಣೇಕರರ ಮನೆಯಲ್ಲಿ ಬೆಳೆದವರು. ಧಾರವಾಡದ ಕೆ. ಇ. ಬೋರ್ಡ್ ಹೈಸ್ಕೂಲು, ಕೆ. ಇ. ಬೋರ್ಡ್ ಆರ್ಟ್ಸ್ ಕಾಲೇಜು, ಕರ್ನಾಟಕ ಕಾಲೇಜು, ಕರ್ನಾಟಕ ವಿಶ್ವವಿದ್ಯಾಲಯ ಗಳಲ್ಲಿ ಅವರ ವಿದ್ಯಾಭ್ಯಾಸ. ಅವರ ಪದವಿ ಎಂ.ಎ., ಪಿ.ಎಚ್.ಡಿ.

ಡಾ. ಶಂಕರ ಮೊಕಾಶಿ ಪುಣೇಕರ ಅವರು ಬಿ. ಎ. (ಆನರ್ಸ್) ಮಾಡಿದ ಮೇಲೆ ನಾಲ್ಕು ವರ್ಷಗಳ ಕಾಲ ಸರ್ಕಾರಿ ಪ್ರೌಢಶಾಲೆಯೊಂದರಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದರು. ಎಂ. ಎ. ಮಾಡಿದ ಮೇಲೆ ಕಾಲೇಜಿನಲ್ಲಿ ಅಧ್ಯಾಪಕರಾದರು. ಅನಂತರ ಪ್ರವಾಚಕರಾಗಿಯೂ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದರು. ಮುಂಬಯಿಯ ಐಐಟಿಯಲ್ಲಿ ಇಂಗ್ಲಿಷ್ ಉಪಪ್ರಾಧ್ಯಾಪಕರಾಗಿದ್ದರು. ಕರ್ನಾಟಕ ವಿಶ್ವವಿದ್ಯಾಲಯ ದಲ್ಲೂ ಇದ್ದರು. ಉಡುಪಿಯಲ್ಲಿ ಕಾಲೇಜಿನ ಪ್ರಾಚಾರ್ಯರಾಗಿದ್ದರು. ನಿವೃತ್ತಿ ಹೊಂದುವ ಮುನ್ನ ಹಲವು ವರ್ಷ ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯಲ್ಲಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರು. ಒಟ್ಟು ಮೂವತ್ತೆಂಟು ವರ್ಷಗಳ ಕಾಲ ಕೆಲಸ ಮಾಡಿ ನಿವೃತ್ತಿ ಹೊಂದಿದ ಮೇಲೆ ಮತ್ತೆ ಧಾರವಾಡಕ್ಕೆ ಧಾವಿಸಿದರು. ಅಲ್ಲಿ ತಣ್ಣಗೆ ಕುಳಿತು ಓದುವುದು, ಬರೆಯುವುದು, ಚಿಂತಿಸುವುದು, ಸಂಶೋಧನೆ ನಡಸುವುದು—ಇದು ಅವರ ಸದ್ಯದ ಹವ್ಯಾಸ.

ನಾನು ಒಟ್ಟು ಹದಿನೇಳು ಇಂಗ್ಲಿಷ್ ಗ್ರಂಥಗಳನ್ನೂ ಹದಿಮೂರು ಕನ್ನಡ ಗ್ರಂಥಗಳನ್ನೂ ಪ್ರಕಟಿಸಿದ್ದೇನೆ ಎನ್ನುವ ಡಾ. ಶಂಕರ ಮೊಕಾಶಿ ಪುಣೇಕರ ಅವರ ಮೊದಲ ಕೃತಿ 'ಗಾನಕೇಳಿ' ೧೯೪೭ರಲ್ಲಿ ಪ್ರಕಟವಾಯಿತಾದರೂ ಅವರು ಸಾಹಿತ್ಯಾಸಕ್ತರ ಗಮನ ಸೆಳೆದದ್ದು ೧೯೫೦ರಲ್ಲಿ—'ಗಂಗವ್ವ ಗಂಗಾಮಾಯಿ' ಕಾದಂಬರಿಯನ್ನು ಪ್ರಕಟಿಸಿ ದಾಗ. ಸಾಹಿತ್ಯಲೋಕದಲ್ಲಿ ಅದೊಂದು ಬಿರುಗಾಳಿಯನ್ನೇ ಎಬ್ಬಿಸಿತು. ಅದನ್ನು ಕುರಿತು ಕುರ್ತಕೋಟಿಯವರು ಹೇಳಿರುವ ಮಾತು ಗಮನಾರ್ಹ: 'ಮೊಕಾಶಿಯವರು ವ್ಯಕ್ತಿಗಳ ಅಂತರಂಗದ ಚಿತ್ರಣದಲ್ಲಿ ಬಹು ದೊಡ್ಡ ಪ್ರಗತಿಯನ್ನು ಸಾಧಿಸಿದ್ದಾರೆ. ಇಲ್ಲಿಯವರೆಗೆ ಕಾದಂಬರಿಯಲ್ಲಿಯ ವ್ಯಕ್ತಿಗಳು ಕೇವಲ ಭಾವಜೀವಿಗಳಾಗಿದ್ದುವು. ಅವುಗಳ ಪರವಾಗಿ ಲೇಖಕ ಯೋಚಿಸಬೇಕಾಗುತ್ತಿತ್ತು. ಯೋಚನೆಯ ವಿಷಯದಲ್ಲಿ ಕಾದಂಬರಿಕಾರರು ತಮ್ಮ ಪಾತ್ರಗಳಿಗೆ ಸ್ವಾತಂತ್ರ್ಯ ಕೊಟ್ಟಿರಲಿಲ್ಲ. ಮೊಕಾಶಿಯವರ ಕಾದಂಬರಿಗಳಲ್ಲಿಯ ವ್ಯಕ್ತಿಗಳೆಲ್ಲ ಬಹಳ ಮಟ್ಟಿಗೆ ಸ್ವತಂತ್ರವಾಗಿ ವರ್ತಿಸುತ್ತವೆ.' ಹೀಗಾಗಿ ಮೊಕಾಶಿಯವರ ಈ ಕಾದಂಬರಿ ಎಲ್ಲರ ಗಮನ ಸೆಳೆಯಿತು. ಅದು ಐದು ಮುದ್ರಣಗಳನ್ನು ಕಂಡಿತು.

'ಸುಧಾ' ಕಾದಂಬರಿ ಸ್ಪರ್ಧೆಯಲ್ಲಿ ಈಚೆಗೆ ಪ್ರಥಮ ಬಹುಮಾನ ಪಡೆದ 'ನಟ-ನಾರಾಯಣಿ' ಕಾದಂಬರಿ ಕೂಡ ಕುರ್ತಕೋಟಿಯವರ ಈ ಮಾತುಗಳನ್ನು ನಿಜಗೊಳಿಸುತ್ತದೆ. ತಮ್ಮ 'ಗಂಗವ್ವ ಗಂಗಾಮಾಯಿ'ಯು ಮೈತುಂಬ ಸಂಪ್ರದಾಯದ ಮುದ್ರೆಗಳು ಎಂದು ಬಣ್ಣಿಸಿದ ಮೊಕಾಶಿಯವರು 'ನಟ-ನಾರಾಯಣಿ'ಯನ್ನು 'ನವ್ಯೋತ್ತರ ಎಕ್ಸಿಸ್ಟೆಂಶಿಯಲಿಸ್ಟ್ ಪತ್ತೇದಾರಿ ಕಾದಂಬರಿ' ಎಂದು ಬಣ್ಣಿಸಿದ್ದರೂ ಅವರಲ್ಲಿ ಅಸ್ತಿತ್ವವಾದ, ವಿಷ್ಣುಮಾಯೆ, ನವ್ಯ ಸಾಹಿತ್ಯದ ತಂತ್ರಗಳು ಎಲ್ಲವನ್ನೂ ಗೇಲಿಮಾಡಿದ್ದಾರೆಂದು ಹೇಳಲಾಗಿದೆ. 'ನಟ-ನಾರಾಯಣಿ' ಪತ್ತೇದಾರಿ ಕಾದಂಬರಿಗಿಂತಲೇ ಉದಯ

ವಾದರೂ, 'ಎಲ್ಲ ಸಾಹಿತ್ಯ ಪರಿಸರವೇ ಬಸೆಲ್ಲಾದಾಗ ಗೇಲಿಯೇ ಕೊನೆಯ ಉಪಾಯ' ಎಂದು ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಡಾ. ಶಂಕರ ಮೊಕಾಶಿ ಪುಣೇಕರರು ಕಾದಂಬರಿಗಳನ್ನು ಮಾತ್ರವಲ್ಲದೆ ಕವನಗಳನ್ನೂ ವಿಮರ್ಶೆಯ ಕೃತಿಗಳನ್ನೂ ರಚಿಸಿದ್ದಾರೆ. ಅವರ 'ಮಾಯಿಯ ಮೂರು ಮುಖಗಳು' ಕವನ ಸಂಕಲನ ೧೯೭೦ರಲ್ಲಿ ಪ್ರಕಟವಾಯಿತು. ಇದು ಕೂಡ ಸಾಹಿತ್ಯ ಪ್ರಿಯರೆಲ್ಲರ ಮೆಚ್ಚುಗೆ ಗಳಿಸಿತು. ಮಾಯಿಗೆ ಮೂರೇ ಮುಖಗಳೇಕೆ? ಎಂದರೆ, 'ನಾಲ್ಕನೆಯ ಮುಖವನ್ನು ಕಂಡಿಲ್ಲ'. 'ಮಾಯಿ, ಮಹಾಮ್ಮಾಯಿ ಮೂರು ವಿಧದಿಂದ ನೀನೆಮ್ಮ ತಾಯಿ' ಎಂದು ಮೊದಲಗನ ಕವನ ತನ್ನ ಧ್ವನಿಯಿಂದ, ಪ್ರತಿಮೆಗಳಿಂದ ನಮ್ಮ ಮನಸ್ಸುಗಳನ್ನು ಸೆರೆ ಹಿಡಿಯುತ್ತದೆ. 'ಬೆಳಕಿಗೆ ಬೆನ್ನು ಮಾಡಿ ನಡೆಯುತಿರೆ ನನ್ನ ನೆರಳನ್ನು ಎಡಹುವೆನು! ಬೆಳಕಿನತ್ತ ತಿರುಗಲೇ?–ಕಣ್ಣು ಕುಕ್ಕುವುದು! ಬೆಳಕೇ ಕತ್ತಲಿಸ ಹೊರಟಾಗ, ಕಣ್ಣು ಕಥೆಯೇನು?' ಎಂಬ, 'ನೆರಳು ಬೆಳಕು' ಕವನದ ಸಾಲುಗಳು 'ಕಣ್ಣು ಕಟ್ಟಿಸುವ ನೆರಳಿ'ನ, 'ಕಣ್ಣು ಕುಕ್ಕಿಸುವ ಬೆಳಕಿ'ನ ಮೇಲೆ ನಮ್ಮನ್ನು ಹಾಯಿಸುತ್ತವೆ. ಪುಣೇಕರ ಅವರು ನಮ್ಮ ಕೈಗೆ ನಿಲುಕಿಯೂ ನಿಲುಕದೆ ಜಾರಿಕೊಳ್ಳುತ್ತಾರೆ.

ಮೊಕಾಶಿಯವರ ವಿಮರ್ಶೆಯೂ ಸತ್ವಪೂರ್ಣವಾದದ್ದು. ಯಾವುದೇ ವಾದಕ್ಕೆ, 'ಇಸಮ್ಮ'ಗೆ ಒಳಗಾಗದೇ ಸ್ವತಂತ್ರವಾಗಿ ವಿಚಾರ ಹರಿಸುವುದು ಅವರ ಹೆಚ್ಚುಗಾರಿಕೆ. 'ಶಾಶ್ವತತೆ, ಶಾಶ್ವತತೆಯ ಅಪೇಕ್ಷೆಯಿಂದ ಬರುವ ಗುಣವಲ್ಲ. ಜೀವನನಿಷ್ಠೆ, ಪಾತ್ರಗಳಿಗೆ ತೋರುವ ಗೌರವ, ಸಮಯಜ್ಞತೆ, ಸಂದರ್ಭದ ಯಥಾರ್ಥ ಕಲ್ಪನೆ, ಔಚಿತ್ಯ (ವಿಶಾಲ ಅರ್ಥದಲ್ಲಿ), ಇವುಗಳಿಂದ ಬರುತ್ತದೆ', ಎಂದು ಅವರು 'ಸಾಹಿತ್ಯ ಮತ್ತು ಅಭಿರುಚಿ' ಎಂಬ ಕೃತಿಯಲ್ಲಿ ಬರೆದಿದ್ದಾರೆ. ಪಾಶ್ಚಾತ್ಯ ವಿಮರ್ಶೆಯ ಇತಿಹಾಸವನ್ನು ಕುರಿತು ಬರೆದಿರುವ ಮೊಕಾಶಿಯವರು ಬೇಂದ್ರೆಯವರ ಕಾವ್ಯ ಮೀಮಾಂಸೆಯನ್ನು ಮಾಡಿದ್ದಾರೆ. ಬೇಂದ್ರೆಯವರ ಪ್ರತಿಭಾ ವೈಪುಲ್ಯವೇ ಅವರ ಕೃತಿಗಳಲ್ಲಿ ಹಲವೇಳೆ ದೋಷವಾಗಿಯೂ ಪರಿಣಮಿಸಿದೆ ಎನ್ನುವ ಮೊಕಾಶಿಯವರು ಈ ದೋಷವೂ ದೋಷವಲ್ಲ ಎನ್ನುತ್ತಾರೆ. ಏಕೆಂದರೆ ಅವರಲ್ಲೂ ಪ್ರತಿಭೆ ಮಿಂಚುತ್ತದೆ. ಆದರೆ ಅವರ ಎಲ್ಲ ಕವನಗಳಲ್ಲೂ ಬೇಂದ್ರೆತನ ಇದ್ದೇ ಇರುತ್ತದೆ ಎಂಬುದು ಮೊಕಾಶಿಯವರ ಅಭಿಪ್ರಾಯ.

ಮೊಕಾಶಿ ಅವರು ಹಿಂದೂಸ್ತಾನಿ ಸಂಗೀತ ಪ್ರಿಯರು. ಅದನ್ನು ಆಳವಾಗಿ ಅಭ್ಯಾಸ ಮಾಡಿದ್ದಾರೆ. ಅವರ ಅನೇಕ ಕೃತಿಗಳಲ್ಲಿ ಅವರ ಸಂಗೀತದ ಗುಂಗು ಹರಿದಿದೆ ಎನಿಸುತ್ತದೆ. ಒಂದು ಒಳ್ಳೆಯ ಸಂಗೀತವನ್ನು ಕೇಳಿದಂಥದೇ ಅನುಭವವಾಗುತ್ತದೆ, ಅವನ್ನು ಓದಿದಾಗ.

ಶಂಕರ ಮೊಕಾಶಿ ಪುಣೇಕರರು ಭಾರತೀಯ ಪರಂಪರೆಯನ್ನು ಸಂಪೂರ್ಣವಾಗಿ ಅರಗಿಸಿಕೊಂಡವರು ಪಾಶ್ಚಾತ್ಯ ಅರ್ಥ ಜೀರ್ಣ ತತ್ವಜ್ಞಾನಗಳು ಅತಿಬುದ್ಧಿವಂತಿಕೆಯವು ಅವುಗಳ ಅರೆಬರೆ ಜ್ಞಾನದಿಂದ ನಮ್ಮಲ್ಲಿ ತುಂಬ ಅನಾಹುತವಾಗುತ್ತಿದೆ. ಅದು ಬಹಳ ಗೊಂದಲಕ್ಕೆ ಎಡೆಗೊಟ್ಟಿದೆ ವಿವಿಧ ತತ್ವಜ್ಞಾನಿಗಳು ರಚಿಸಿಕೊಂಡ ವಿಚಾರ ಮಹಲು

ಗಳಿಂದ ನಮಗೆ ಪ್ರಯೋಜನವಿಲ್ಲ, ಸಾವಿರಾರು ವರ್ಷಗಳಿಂದ ನಮ್ಮ ಧರ್ಮ, ಅಧ್ಯಾತ್ಮಗಳನ್ನು ವ್ಯಾಪಿಸಿರುವ ಈಶಾವಾಸ್ಯ ತತ್ವವನ್ನು ಮೀರಿಸುವಂಥದು ಇಲ್ಲ ಎನ್ನುತ್ತಾರೆ ಮೊಕಾಶಿ.

ಇಂಗ್ಲಿಷಿನಲ್ಲಿ 'ದ ಕ್ಯಾಪ್ಟಿವ್' 'ದ ಪ್ರಿಟೆಂಡರ್' ಎಂಬ ಕವನಸಂಕಲನಗಳನ್ನು, ಗೋಕಾಕರ ಸಾಹಿತ್ಯ ಕುರಿತು, ಕೃತಿಯನ್ನೂ ವಿಶ್ವವಿದ್ಯಾನಿಲಯ ಸುವರ್ಣ ಮಹೋತ್ಸವ ಬಹುಮಾನ, ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಬಹುಮಾನ, ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ, ಸುಧಾ ಕಾದಂಬರಿ ಸ್ಪರ್ಧೆ ಬಹುಮಾನ ಮುಂತಾದ ಹಲವು ಬಹುಮಾನಗಳನ್ನು ಪಡೆದಿದ್ದಾರೆ. ಡಾ. ಶಂಕರ ಮೊಕಾಶಿ ಪುಣೇಕರ ಅವರ 'ಅವಧೇಶ್ವರಿ' ಕಾದಂಬರಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳಿಸಿದೆ. ವೇದಕಾಲೀನ ಸಮಾಜದ ಪುನಃಸೃಷ್ಟಿ ಈ ಕಾದಂಬರಿ.

ಡಾ. ಶಂಕರ ಮೊಕಾಶಿ ಪುಣೇಕರರು ಅವಧೇಶ್ವರಿಗಾಗಿ, ಹಾಗೂ ಅದಕ್ಕೆ ಮುಂಚೆ, ನಡೆಸಿದ ಸಂಶೋಧನೆಯ ಕಾರ್ಯವನ್ನು ಈಚೆಗೂ ಮುಂದುವರಿಸಿದ್ದಾರೆ. ಪೌರಸ್ತ್ಯ ಪ್ರಾಚೀನ ಲಿಪಿಶಾಸ್ತ್ರದ ಸಂಯುಕ್ತ ಸಿದ್ಧಾಂತವೊಂದರ ಅಭ್ಯಾಸ ನಡೆಸಿದ್ದಾರೆ. ಹರಪ್ಪನ್, ಫಿನಿಶಿಯನ್, ಸೆಮೆಟಿಕ್, ಇಜಿಪ್ಷಿಯನ್, ಕ್ಯೂನಿಫಾರ್ಮ್ ಲಿಪಿಗಳನ್ನು ಕೂಡಿಸುವ ಯಾವುದಾದರೂ ತತ್ವ ಇದೆಯೋ ಎಂಬುದರ ಅನ್ವೇಷಣೆ ನಡೆದಿದೆ. ಅವರ ಮಿದುಳಿನಲ್ಲಿ ಬೇರಾವ ಹೊಸ ಅಲೆ ಬರುವುದೋ ನೋಡಬೇಕು.

ಡಾ. ಶಂಕರಮೊಕಾಶಿ ಪುಣೇಕರ ನಮ್ಮ ಚಿಂತನಶೀಲ ಸ್ವೋಪಜ್ಞ ಬರಹಗಾರರು. ನಿರಂತರ ಕುತೂಹಲವೇ, ಜಿಜ್ಞಾಸೆಯೇ ಅವರ ಬದುಕಿನ ರಹಸ್ಯ.

ಯಾವನು ಕಾನೂನಿಗೆ ಪೂರ್ಣ ಮರ್ಯಾದೆ ಕೊಡುವನೋ ಅವನು ಕಾನೂನುಭಂಗ ಚಳವಳಿಗೆ ಅತ್ಯಂತ ಅರ್ಹ.

ಗಾಂಧೀಜಿ

ಡಾ|| ಶಂಕರಮೊಕಾಶಿ ಪುಣೇಕರ್ ಅವರ

“ಅವಧೇಶ್ವರಿ”

ಸೀತಾರಾಮ ಜಾಗೀರ್‌ದಾರ್

‘ಅವಧೇಶ್ವರಿ’ ಈ ವರ್ಷದ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನವನ್ನು ಪಡೆದಿರುವ ವೇದಕಾಲೀನ ರಾಜಕೀಯ ಜೀವನವನ್ನು ಚಿತ್ರಿಸಿರುವ ಕನ್ನಡ ಕಾದಂಬರಿ. ಇದರ ಕರ್ತೃ: ಡಾ|| ಶಂಕರಮೊಕಾಶಿ ಪುಣೇಕರ್. ಈ ಕೃತಿಯನ್ನು ಲೇಖಕರೇ ಹೇಳಿರುವಂತೆ “ಕಾದಂಬರಿಯಾಗೇ ಓದಬೇಕು, ಸಂಶೋಧನೆಯೆಂದಲ್ಲ”. ಡಾ|| ಪುಣೇಕರ್ ಅವರು ಕನ್ನಡದ ಕೆಲವೇ ಪ್ರತಿಭಾವಂತ ಲೇಖಕರಲ್ಲಿ ಒಬ್ಬರು. ‘ಗಂಗವ್ವ ಗಂಗಾಮಾಯಿ’ ಕಾದಂಬರಿ ಸುಮಾರು ಐದು ಮುದ್ರಣಗಳನ್ನು ಕಂಡಿದೆ; ಇದು ಅವರೊಬ್ಬ ಪ್ರತಿಭಾವಂತ ಲೇಖಕರೆನ್ನುವುದಕ್ಕೆ ಸಾಕ್ಷಿ. ಶ್ರೀಯುತರದು ಬಹುಮುಖಪ್ರತಿಭೆ. ಪ್ರಸ್ತುತ ಕೃತಿ ೩೬೬ ಕಿರೀಟದಳ (ಕ್ರೌನ್ ಸೈಜ್) ಪುಟಗಳಲ್ಲಿ ವ್ಯಾಪಿಸಿನಿಂತಿದೆ. ಅದರಲ್ಲಿ ಐದು ಪುಟಗಳು ಮುನ್ನುಡಿಗೆ ಮೀಸಲಾಗಿವೆ. ಕಾದಂಬರಿಯ ಆರಂಭದ ಪುಟ ಕೃತಿಯ ವಸ್ತುವನ್ನು ಹೀಗೆ ಸೂಚಿಸಿದೆ:

ಶ್ರೀರಾಮಚಂದ್ರನ ಹೆಸರಿನಿಂದ ಪುನೀತವಾದ ಅಯೋಧ್ಯೆ ಈಗ ಕುಗ್ರಾಮವಾಗಿದೆ. ಶ್ರೀರಾಮನು ಬರುವ ಮೊದಲು ಅಂಥ ಕುಗ್ರಾಮವೇನೂ ಅಲ್ಲ; ಆದರೆ ಸಾಮ್ರಾಜ್ಯವೂ ಅಲ್ಲ. ೩೦–೪೦ ಗ್ರಾಮಗಳಿಗೆ ಅಧಿಪತಿಯಾಗಿ ರಾಜ್ಯಭಾರಮಾಡುತ್ತಿದ್ದ ಶ್ರೀ ಪುರುಕುತ್ಸಮಹಾರಾಜನ ರಾಜಧಾನಿಯಾಗಿತ್ತು. ಪುರುಕುತ್ಸನು ಸುಖಲೋಲುಪನು. ಇವನ ರಾಣಿ ನರ್ಮದಾ ಪುರುಕುತ್ಸಾನಿ. ಆದರೆ ಹೆಂಡತಿಯ ಜೊತೆಗೆ ಅವನಿಗೆ ಏನೂ ಸಂಬಂಧವಿರಲಿಲ್ಲ. ಏಕೆಂದರೆ ಪುರುಕುತ್ಸಾನಿ, ಪುರುಕುತ್ಸ ಮಹಾರಾಜನ ತಂಗಿಯೂ ಹೌದು. ಸೂರ್ಯವಂಶದ ಪದ್ಧತಿಯಂತೆ ಚಿಕ್ಕಂದಿನಲ್ಲೇ ಅವನ, ಅವನ ತಂಗಿಯ ವಿವಾಹ ಜರುಗಿ ಹೋಗಿತ್ತು. ರಾಜಮನೆತನದಲ್ಲಿ ಹೊರಗಿನವರು ಬಾರದಂತೆ

ಮಾಡುವ ವ್ಯವಸ್ಥೆ ಇದು. ಇಜಿಪ್ಶಿಯನ್ ರಾಜಮನೆತನಗಳಲ್ಲಿ ನಡೆದುಬಂದ ರೀತಿಯಿದು. ಪುರುಕುತ್ಸ ಮಹಾರಾಜನು ಪುರುಕುತ್ಸಾನಿ ತನ್ನ ತಂಗಿಯೆಂಬುದನ್ನು ಕೊನೆಯವರೆಗೂ ಮರೆಯಲು ಸಾಧ್ಯವಾಗಲಿಲ್ಲ. ಅವರಿಗೆ ಮಕ್ಕಳೂ ಆಗಲಿಲ್ಲ. ರಾಜಮನೆತನದ ಸಮಾನ ಅಧಿಕಾರಿಣಿಯಾಗಿದ್ದ ಪುರುಕುತ್ಸಾನಿ ತನ್ನ ವರ್ಚಸ್ಸಿನಿಂದ ಅಣ್ಣ-ಗಂಡನ ರಾಜ್ಯ ಸೂತ್ರಗಳನ್ನು ಭದ್ರವಾಗಿ ಕೈಯಲ್ಲಿ ಇರಿಸಿಕೊಂಡು ನಿಜವಾದ ರಾಜ್ಞಿಯಂತೆ ಆಳುತ್ತಿದ್ದಳು. ಆದರೆ ಸಂಸಾರಸುಖವೊಂದು ಅವಳಿಗೆ ನಿಲುಕದ ವಿಷಯವಾಗಿತ್ತು. ರಾಜಮನೆತನದ ಈ ವಿಶಿಷ್ಟ ವಿವಾಹಪದ್ಧತಿ ಹೇಗೆ ಮಾಯವಾಯಿತೆಂಬುದೇ ನಮ್ಮ ಕಾದಂಬರಿಯ ವಿಷಯ.

* * *

ಕಾದಂಬರಿ ಕಿಸೆಯೊಳಗಿನ ರಂಗಭೂಮಿ. ಈ ರಂಗಭೂಮಿಯ ಮೇಲೆ ಅನೇಕ ದೃಶ್ಯಗಳ ಪ್ರದರ್ಶನವಿದ್ದು ಹತ್ತಾರುಪಾತ್ರಗಳು ತಮಗೆ ತಕ್ಕಂತೆ ಅಭಿನಯಿಸಿವೆ—ಇಲ್ಲಿ. ಮುಖ್ಯತಃ ಮೂರು ಭಾಗಗಳಿದ್ದು ಕೊನೆಯ ಭಾಗದಲ್ಲಿ ಮತ್ತೆ ಎರಡು ಭಾಗಗಳು ಇಲ್ಲಿ ಇದ್ದು (?) ಎಂದರೆ ಪುಟ ೧೧೫ ರಿಂದ ೧೯೩ರವರೆಗೆ ಮತ್ತು ಪು. ೧೯೩ ರಿಂದ ೩೬೬ ರವರೆಗೆ ಬೇರೆ ಬೇರೆಯಾಗಿ ವಿವರಿಸಲ್ಪಟ್ಟಿವೆ. ಪುರುಕುತ್ಸನಿಂದ ಭಾಗ-೧, ಭದ್ರಾಯುವಿನಿಂದ ಭಾಗ-೨ ಮತ್ತು ತ್ರಸದಸ್ಯುವಿನಿಂದ ಭಾಗ ವಿಭಾಗಗಳು—ಇಡೀ ಕಾದಂಬರಿಯ ವಸ್ತುವಾಗಿವೆ; ನಾಯಕ, ನಾಯಕಿ ಮತ್ತು ಖಳನಾಯಕರು ಎಂಬ ತ್ರಿಕೋನದ ಆಧಾರ ಸ್ತಂಭಗಳಾಗಿವೆ. ಕಥಾಪ್ರವಾಹ ಹೀಗೆ ಹರಿದಿದೆ:

೧

ಅಯೋಧ್ಯೆಯಿಂದ ಸ್ವಲ್ಪ ದೂರದಲ್ಲಿಯೆ ಆಮ್ರವನ. ಅಲ್ಲೊಂದು ಭವ್ಯ ಗುಡಿಸಲು. ಆ ಗುಡಿಸಿಲಿನಲ್ಲಿ ಪುರುಕುತ್ಸ ಮಹಾರಾಜ ಪಾನಮತ್ತನಾಗಿ ಜೀವನ ಸಾಗಿಸ ಹತ್ತಿದ್ದಾನೆ. ಆ ಗುಡಿಸಿಲಿಗೆ ಬೇಲಿ. ಬೇಲಿಯ ಹೊರಗೆ ಆರು ಪಹರೆಯವರು. ಇತ್ತ ಗುಡಿಸಿಲಿನೊಳಗೆ ಮಹಾರಾಜ ಹಾಗೂ ಆತನ ಆಪ್ತ ಆಳು ೧೭ ವರ್ಷದ ಕಾಲಿಯಾ. ಕಾಲಿಯಾನಿಗೆ ಅಯೋಧ್ಯೆಯ ಭಾಷೆ ಹೊಸದು ಹೊರಗಿನ ಜನರ ಸಂಪರ್ಕವಿಲ್ಲದ್ದರಿಂದ ಆ ನುಡಿಯನ್ನು ಕಲಿಯುವದಕ್ಕೂ ಅವಕಾಶವಿದ್ದಿಲ್ಲ. ಪುರುಕುತ್ಸ ಮಹಾರಾಜನಿಗೆ ಪಾನೀಯದ ಜೊತೆಗೆ ಪರಸ್ತ್ರೀ ಗಮನದ ಜಾಡ್ಯ. ಈ ಜಾಡ್ಯಕ್ಕೆ ಮದ್ದನ್ನು ಒದಗಿಸುವವ ತಾರ್ಕ್ಷ್ಯ. ರಾಜ್ಯ ಉಪಭೋಗಕ್ಕೆ ಗಣಿಕೆಯರನ್ನೋ ವಾರಾಂಗನೆಯರನ್ನೋ ಕರೆತಂದು ಒಪ್ಪಿಸುತ್ತಿದ್ದ. ಬಂದವರು ರಾಜನ ಸಹವಾಸವಾದ ಮೇಲೆ ತಾವೂ ಕುಡಿದು ಮಲಗುತ್ತಿದ್ದರು. ಹೀಗೆ ಮಲಗಿದವರನ್ನು, ಮತ್ತಿನಲ್ಲಿರುವವರನ್ನು, ಬೇಗ ಎಬ್ಬಿಸಿ ಹೊರಗೆಬಿಟ್ಟುವುದು—ಪಹರೆಯವರಿಗೆ ಒಪ್ಪಿಸುವುದು—ಇದು ಕಾಲಿಯಾನ ನಿತ್ಯಕರ್ಮ. ಯಾರು ಎಲ್ಲಿಂದ ಬಂದರು, ಎಲ್ಲಿಗೆ ಹೋದರು, ಇವು ಒಂದೂ ಅವನಿಗೆ ತಿಳಿಯವು; ಹೀಗೆ ಎರಡು ವರ್ಷ ಕಳೆದಿವೆ. ಕಾಲಿಯಾನದು ನಾಗಜನಾಂಗದ ಭಾಷೆ; ಅಯೋಧ್ಯೆಯ ಜನರದು ಆರ್ಯಭಾಷೆ. ವಾಸ್ತವದಲ್ಲಿ ಅವೆರಡೂ ಒಂದೇ ಭಾಷೆಯ ಎರಡು ಭೇದಗಳು.

ಎರಡು ಪ್ರಾದೇಶಿಕ ನುಡಿಭೇದಗಳು (Dialects) ಆಗಿದ್ದರಿಂದ ಕೇಳುವವರಿಗೆ ಒಂದು ಬಗೆಯ ವಿರಸವೇ ಸರಿ. ಕಾಲಿಯಾ, ತಾರ್ಕ್ಷ್ಯ, ರಾಜಮನೆತನ ಎಂಬರೆ ಪುರುಕುತ್ಸನ ಮಾತ ಇವರಿಗೆ ಸಾಗಸಂಶವರೇ. ಈ ಒಂದು ಕಾರಣದಿಂದಲೇ ರಾಣಿ ಕಾಲಿಯಾನನ್ನು ತನ್ನ 'ಅಣ್ಣ–ಗಂಡ' ಪುರುಕುತ್ಸನ ಸೇವೆಗೆ ನೇಮಿಸಿದ್ದಳು. ಪುರುಕುತ್ಸನ ಜೀವನದ ದಾರಿ ಅಧೋಗತನದ ಪಾತಳಿಯಲ್ಲಿ ಹರಿಯಲು ಅವರ ನಿಷೇಕದ ದಿನದಿಂದಲೇ ಆರಂಭವಾಯಿತು. ರಾಜ ರಾಣಿ, ಅಣ್ಣ ತಂಗಿ, ಗಂಡಹೆಂಡಿರಂತೆ ಬಾಳಬೇಕಾದ ಸಂದರ್ಭದಲ್ಲಿ ಹಾಗೆ ವರ್ತಿಸದೇ ಇದ್ದುದು.

ಐಗುಪ್ತದೇಶದ ಫೆರೋದೊರೆಗಳ ದೂರದಸಂಬಂಧಿ ಮಾಂಧಾತ ಮಹಾರಾಜ. ಆತನ ಹೆಂಡತಿ ಬಿಂದುಮತಿದೇವಿ. ತಮ್ಮ ಪದ್ಧತಿಯಂತೆ ರಾಜವಂಶದ ರಕ್ತಶುದ್ಧ ಉಳಿಯಬೇಕು. ಅದಕ್ಕಾಗಿ ತೀರ ಸಮೀಪದ ಸಂಬಂಧಿಯನ್ನೇ ಮದುವೆಯಾಗಬೇಕು. ಮಾಂಧಾತ ಐಗುಪ್ತದೇಶಕ್ಕೆ ಪತ್ರಬರೆದು ಅವರ ಸೂಚನೆಯಂತೆ ತನ್ನ ಮಕ್ಕಳಾದ ಪುರುಕುತ್ಸ ಹಾಗೂ ನರ್ಮದಾಪುರುಕುತ್ಸಾನಿ ಇವರಿಗೆ ಮದುವೆ ಮಾಡಿದ. ಮದುವೆಯ ಸಮಯದಲ್ಲಿ ವರನ ವಯಸ್ಸು ೧೨ ವರ್ಷ, ಮತ್ತು ವಧುವಿನದು ೮ ವರ್ಷ. ಮದುವೆಯಾದ ಕೆಲವೇ ವರ್ಷಗಳಲ್ಲಿ ತಂದೆತಾಯಿ ಇಬ್ಬರೂ ಮರಣವನ್ನಪ್ಪಿದರು. ತಂದೆಯ ಅನಂತರ ಪುರುಕುತ್ಸ ಮನ್ನೆಯರ ಹಾಗೂ ತಮ್ಮದೇ ಆದ ನಾಗಬ್ರಾಹ್ಮಣರ ಸಹಾಯದಿಂದ ಸಿಂಹಾಸನವನ್ನು ಏರಿಕುಳಿತ. ರಾಜರಾಣಿ ಇಬ್ಬರೂ ಸಿಂಹಾಸನವನ್ನು ಅಲಂಕರಿಸಿದರು. ತಾಯಿ ಬಿಂದುಮತಿಗೆ ಈ ಅಣ್ಣತಂಗಿಯರ ವಿವಾಹ ಇಷ್ಟವಿದ್ದಿಲ್ಲ. ಆದರೆ ತನ್ನ ಗಂಡನ, ವಂಶಪಾರಂಪರ್ಯದ ಒತ್ತಡ—ಇವಕ್ಕೆ ಮಣಿದಿದ್ದಳು. ಪುರುಕುತ್ಸಾನಿಯು ಪುರುಕುತ್ಸನಿಗಿಂತ ಬಲಶಾಲಿಯಾಗಿದ್ದುದನ್ನು ಕಂಡು ಮತ್ತು ಅವಳು ಪುರುಕುತ್ಸನನ್ನು ಸದಾ ಆಟದಲ್ಲಿ ಹೊಡೆಯುವುದನ್ನೂ ಬಡಿಯುವದನ್ನೂ ನೋಡಿ ಅವರ ಭವಿಷ್ಯಕ್ಕೆ ಚಿಂತಿಸಿ ಚಿಂತಿಸಿ ಆ ಚಿಂತೆಯ ಯಾತನೆಯಲ್ಲೇ ಸತ್ತಳು. ಮಾಂಧಾತನೂ ರಾಜಯಕ್ಷ್ಮ (ಕ್ಷಯರೋಗ)ದಿಂದ ಮಡಿದ. ಅನಾಥರಾದ ರಾಜಕುಮಾರ ಹಾಗೂ ರಾಜಕುಮಾರಿ ಅಯೋಧ್ಯೆಯ ರಾಜ್ಯಕ್ಕೆ ನಾಥರಾದರು. ಪುರುಕುತ್ಸ ರಾಜನಾದರೂ ರಾಣಿಯ ಮೊದಲ ದಿನದ ದುರ್ವರ್ತನೆಯಿಂದ ದೂರ ಉಳಿಯಲು ಇಷ್ಟಪಟ್ಟ. ತಂದೆ ತೀರಿ, ಸಿಂಹಾಸನಕ್ಕೆ ತಾನೇರಿದ ಕೂಡಲೆ ಪುರುಕುತ್ಸಾನಿಯ ಜೊತೆಗೆ ಒಡನಾಟವನ್ನು ಬಿಟ್ಟುಕೊಟ್ಟನು. ಬೇರೆಯ ಕೋಣೆಯಲ್ಲಿ ಮಲಗಲು ಆರಂಭಿಸಿದ. ಜಿಹ್ವೆಯ ಚಾಪಲ್ಯಕ್ಕೆ ಅವನ ಸುತ್ತ ಒಂದು ಗುಂಪು ಏರ್ಪಟ್ಟಿತು; ನಾಲಗೆಯ ನಂಟು ಗಣಿಕಾನಾರಿಯರಿಗೆ, ವಾರವನಿತೆಯರವರೆಗೆ ಚಾಚಿತು. ಪುರುಕುತ್ಸನೇ ರಾಜನಾದದ್ದರಿಂದ ಜೊತೆಗಾರರ ನಿರ್ಬಂಧನೆ ಹೊರಟುಹೋಯಿತು. ಮೊದಮೊದಲು ಆಟವೆಂದು ಭಾವಿಸಿದ ಪುರುಕುತ್ಸಾನಿ ಜೊತೆಗಾರನು ಕೈಬಿಟ್ಟಿದಕ್ಕೆ ಕಿಂಚಿತ್ ನೊಂದುಕೊಂಡರೂ ಆಟಕ್ಕಾಗಿ ಸರದಾರನೊಬ್ಬನ ಮಗಳು ಮತ್ತು ಮಗ ವಜ್ರ ಹಾಗೂ ಸುಂದರಿ ಎಂಬವರನ್ನು ಜೊತೆಗಾರರನ್ನಾಗಿ ಮಾಡಿಕೊಂಡಳು. ಇದರಿಂದ ಗಂಡಹೆಂಡಿರ ಮಧ್ಯ ಬಿಟ್ಟಬಿರುಕು ಇನ್ನಷ್ಟು ಅಗಲವಾಯಿತು. ಪುರುಕುತ್ಸಾನಿ ಅಥವಾ ಅವಧೇಶ್ವರಿಯ ಹೃದಯಕ್ಕೆ ಇವನ ಸ್ನೇಹವಾದ ಆರು ತಿಂಗಳಲ್ಲೇ ಇನ್ನೊಂದು ಪೆಟ್ಟು ಬಿತ್ತು. ಸುಂದರಿಯ ಮದುವೆಯಾಯಿತು; ಆದೇ

ನಗರದ ಇನ್ನೊಬ್ಬ ಸರದಾರನ ಮಗ ವತ್ಸರಾಜನೆಂಬ ಯುವಕನೊಂದಿಗೆ. ಗೆಳತಿಯ ಮದುವೆ ಅನಂತರದ ಅನುಭವ ಅವಧೇಶ್ವರಿಯ ಕಣ್ಣು ತೆರೆಯಿಸಿತು. ತನ್ನ ಸ್ತ್ರೀತ್ವದ ಅರಿವಾಯಿತು. ವಯೋಗುಣಕ್ಕೆ ಸಹಜವಾದ ಕಾಮೋದಯವಾಯಿತು. ಗೆಳತಿಯ ಗರ್ಭಧಾರಣೆ ಆಕೆಯ ಮನಸ್ಸಿನಲ್ಲಿಯೂ ತವಕನ್ನುಂಟುಮಾಡಿತು. ಒಡೆಯನ ಮೇಲೆ ನಿಗಾ ಸುರುವಾಯಿತು. ಚೇಟಿಯರಿಂದ ಒಡೆಯನ ಜೀವನದ ಪದ್ಧತಿಯ ಸುಳಿವೂ ದೊರೆಯಿತು. ಆಗ ತನ್ನ ಹಕ್ಕನ್ನು ಸ್ಥಾಪಿಸುವ ಬಯಕೆ ಗರಿಗೆದರಿತು. ಆಕೆಯ ದಾಸಿಯರು ಬೇಕಾದ ವ್ಯವಸ್ಥೆಯೆಲ್ಲವನ್ನೂ ಮಾಡಿದರು; ರಾಣಿಯನ್ನು ಶೃಂಗರಿಸಿದರು, ರಾಜನ ಶಯ್ಯಾಗಾರಕ್ಕೆ "ನಿನ್ನ ರೂಪಲಾವಣ್ಯಗಳನ್ನು ನೋಡಿ ಅರಸು ಕುಣಿಯುತ್ತ ನಿನ್ನನ್ನು ಅಪ್ಪಿಕೊಳ್ಳುತ್ತಾನೆ" ಎಂದು ಉತ್ತೇಜನವಿತ್ತು ಕಳಿಸಿದರು.

ಅರಸನ ಕೋಣೆಯ ಮುಂದೆ ತಾರ್ಕ್ಷ್ಯನು ಕರೆದುಕೊಂಡು ಬಂದ ಪಕ್ಷ್ಮಾ ಎಂಬ ನೃತ್ಯವಿಶಾರದೆ ಗಣಿಕೆ ಸಜ್ಜಾಗಿ ಕುಳಿತಿದ್ದಳು. ಎಲ್ಲ ಕಾರ್ಯಕ್ರಮಗಳು ಅರಸನ ಆಜ್ಞೆಯ ಮೇರೆಗೆ ನಡೆಯುತ್ತಿದ್ದವು. ಆದರೆ ಇಂದು ರಾಣಿಯ ಆಗಮನ ಎಲ್ಲರನ್ನೂ ವಿಹ್ವಲಗೊಳಿಸಿತು. ತಾರ್ಕ್ಷ್ಯ ತಬ್ಬಿಬ್ಬಾದ. ಪಕ್ಷ್ಮಾಳಿಂದ ಅವಳನ್ನು ಪಾಟಲೀಪುತ್ರದಿಂದ ಕರೆತಂದವನೂ ತಾರ್ಕ್ಷ್ಯ ಎಂದು ಗೊತ್ತಾಯಿತು. ಅವನ ಸೂಚನೆಯ ಮೇರೆಗೆ ಪಕ್ಷ್ಮಾ ಸಭಾಂಗಣಕ್ಕೆ ಹೋಗದೆ ಸುತ್ತುವರೆದು ಹೊರಬಾಗಿಲನ್ನು ಕಂಡಳು. ಇತ್ತಕಡೆ ಪುಳುಕುತ್ತಾನಿ ಶಯ್ಯಾಗೃಹವನ್ನು ಪ್ರವೇಶಿಸಿ ಗಂಡನೊಂದಿಗೆ ಇನ್ನೂ ದುಮುದುಮು ಮುಖದಲ್ಲಿ ಹೆಂಡತಿಯ ಹಕ್ಕನ್ನು ಪ್ರಸ್ತಾಪಿಸಿದಳು. ಸಮೀಪ ಕುಳಿತು ಊಟಕ್ಕೆ ಬಡಿಸಿದಳು; ಅವನೊಂದಿಗೇ ಹಾಸಿಗೆಯಲ್ಲಿ ಪವಡಿಸಿದಳು. ಒಲ್ಲದ ಮನಸ್ಸಿಗೆ ಬೆಲ್ಲ ಸಿಹಿಯಾದೀತೆ? ಪಕ್ಕದಲ್ಲಿದ್ದ ಪತ್ನಿ ಪತ್ನಿಯಂತೆ ಅವನಿಗೆ ತೋರಲೆ ಇಲ್ಲ. ಸ್ಪಷ್ಟವಾಗಿ ಒಮ್ಮೆ ಹೇಳಿಯೂ ಬಿಟ್ಟ—

"ಒಮ್ಮೆ ನಿನಗೆ ನಾನು ಲಭ್ಯವಾಗುವ ಸಂಧಿ ಇತ್ತು. ಅಂದು ನೀನೇ ನನ್ನನ್ನು ಹೊಡೆದು ಬಡಿದು ಮೂಲೆಯಲ್ಲಿ ಮಲಗ ಹಚ್ಚಿದೆ. ಈಗ ಅನುಭವಿಸು. ನನ್ನಿಂದ ಇದು ಆಗದ ಕೆಲಸ!" ಹತಾಶಳಾದ ರಾಣಿ ಅತ್ತ ಇನ್ನೊಂದು ವಿಚಾರ ಮಾಡದೆ ರಾಜನನ್ನು ತಾರ್ಕ್ಷ್ಯನಿಗೆ ಒಪ್ಪಿಸಿಬಿಟ್ಟಳು. ಮತ್ತೆ ನಾಗಬಾಲಕ ಕಾಲಿಯಾನನ್ನು ಅವನ ಸೇವೆಗೆ ಇಟ್ಟಳು. ತಾರ್ಕ್ಷ್ಯ ಕಾಲಿಯಾ ಇಬ್ಬರೂ ನಾಗವಂಶದ ಕ್ಷತ್ರಿಯರು. ತಾಯಿಯ ತೌರಿನ ಕಡೆಯ ಜನರು. ತಾರ್ಕ್ಷ್ಯನಂತು ತಾಯಿ ತಂದೆಯರ ಕಾಲದಲ್ಲಿ ಬಂದು ತಾಯಿಯ ಸೇವಕನಾಗಿ ನೆಚ್ಚಿನ ಬಂಟನಾಗಿ ಬಾಳನ್ನು ನಡೆಸಿದ. ಊರ ಜನ ರಾಜಗೃಹದಲ್ಲಿ ಗಣಿಕೆಯರ ಗಮನಾಗಮನ ಯೋಗ್ಯವಲ್ಲವೆಂದು ಭಾವಿಸಿದರು. ರಾಣಿಗೂ ಅದೇ ಬೇಕಾಗಿತ್ತು. ಅಂತೆಯೆ ಅವನ ಸಲಹೆಯ ಮೇರೆಗೆ ರಾಜನನ್ನು ಅಯೋಧ್ಯೆಗೆ ಹತ್ತಿರದಲ್ಲಿದ್ದ ಆಮ್ರವನಕ್ಕೆ ಸಾಗು ಹಾಕಿದಳು. ಅದು ಅರಮನೆಯಿಂದ—ಅಯೋಧ್ಯೆಯಿಂದ—ಕೇವಲ ಒಂದೂವರೆ ಗಾವುದ ಅಂತರದಲ್ಲಿತ್ತು; ಅಷ್ಟೆ. ರಾಣಿಯ ರಾಜ್ಯ ವಿಸ್ತಾರದ ಸುಪ್ತ ಹಂಬಲ ರಾಜನ ವಿಷಯಲೋಲುಪತೆಯನ್ನೂ ಬಳಸಿಕೊಂಡಿತು. ಬಯ್ದು ಹಳಿದು ಕಳಿಸಿದ ಪಕ್ಷ್ಮಾದೇವಿಯನ್ನೇ ಕರೆಸಿ ರಾಜನಿಗೆ ಸುಖವಾಗುವಂತೆ ವರ್ತಿಸಿ, ಶ್ರಾವಸ್ತಿಗೆ ಸೇರಿದ ಮೂಲತಃ ಅಯೋಧ್ಯೆಗೆ ಸೇರಿದ ನಾಲ್ಕು ಹಳ್ಳಿಗಳನ್ನು, ಪಕ್ಷ್ಮಾದೇವಿ

ಯನ್ನು ಶ್ರಾವಸ್ತಿಯ ಸುಭಾನು ಮಹಾರಾಜನಿಗೆ ಒಪ್ಪಿಸಿ, ಪುರುಕುತ್ಸನಿ ಪುನಃ ಪಡೆದುಕೊಂಡಳು. ತನ್ಮೂಲಕ ತನ್ನ ಹಾಗೂ ರಾಜನ ನಡುವೆ ಒಳ್ಳೆಯ ಬಾಂಧವ್ಯ ಏರ್ಪಡಬಹುದೆಂದು ಭಾವಿಸಿದ್ದಳು; ಅಷ್ಟೇ ಅಲ್ಲ ಪಕ್ಷ್ಮಾ ಎಂಬ ಅಡೆತಡೆ ಕೊನೆಯ ವರೆಗೂ ಆದರಿಂದ ನಿವಾರಿತವಾಗಿತ್ತು. ಈ ಕೆಲಸ ಬಹಳ ನಾಜೋಕಿನಿಂದ ವಿಷಯಾಸಕ್ತ ವ್ಯಕ್ತಿಯಿಂದಲೇ (ಭದ್ರಮುಖ ದೇವರಾಜ = ಮುಖಭದ್ರವಾದದ್ದು, ವೈ ಇಂದ್ರನ ಮನೋಭಾವದ್ದು!) ಅವಧೇಶ್ವರಿ ಮಾಡಿಸುತ್ತಾಳೆ. ನವುರಾಗಿ ಛೀಮಾರಿ ಹಾಕಿ, ಕಳೆದುಹೋದ ಆಸ್ತಿ ಪುನಃ ಅವನಿಗೇ ಕೊಡುವ ಸೂಚನೆಯನ್ನು ಕೊಟ್ಟು ಆ ವ್ಯಕ್ತಿ ಮಾನ ಕಳೆದುಕೊಂಡು ಕುಪಿತನಾಗುವುದಕ್ಕೆ ಪ್ರತಿಯಾಗಿ ರಾಣಿಯ ಆಡಳಿತ ಕೌಶಲಕ್ಕೆ ಮೆಚ್ಚಿ ಸಹಜ ಮನೋಭಾವದಲ್ಲಿ "ಮಹಾದೇವೀ" ಎಂದು ಸಂಬೋಧಿಸುತ್ತಾನೆ. ಅಂದಿನಿಂದ ಎಲ್ಲರೂ ಆಕೆಯನ್ನು "ಮಹಾದೇವೀ" ಎಂದೇ ಕರೆಯಲು ಆರಂಭಿಸಿದರು. ಅದು ಅವಳ ಖಾಯಂ ಹೆಸರಾಯಿತು. ಯಾರಿಗೂ ಗೊತ್ತಿಲ್ಲದೆ (ಜನರಲ್ಲಿ ಬೊಬ್ಬಾಟ ವಿಲ್ಲದೆ) ರಕ್ತಪಾತವಿಲ್ಲದೆ ಶ್ರಾವಸ್ತಿಯ ನಾಲ್ಕು ಹಳ್ಳಿಗಳು ಅಯೋಧ್ಯೆಗೆ ಸೇರಿದ್ದವು. ಅಲ್ಲಿ ಸಂಭ್ರಮವೇ ಸಂಭ್ರಮ!

೨

ಪಕ್ಷ್ಮಾರಾಣಿ, ಜೀವನದಿಂದ ಪುರುಕುತ್ಸನಿಗೆ, ಸುಭಾನುವಿನಲ್ಲಿಗೆ ಹೋದುದರಿಂದ ದೂರವಾದಳು. ಆಕೆಯ ನಿರ್ಗಮನ ಮಹಾರಾಜನ ಮನೋಭೂಮಿಕೆಯಲ್ಲಿ ಇನ್ನೊಂದು ಶಾಶ್ವತ ಏರ್ಪಾಡಿಗೆ ಸಿದ್ಧವಾಯಿತು. ಅಂತೆಯೇ ಪಕ್ಷ್ಮಾರಾಣಿಯ ಪಲಾಯನ ಮಹಾರಾಜರಲ್ಲಿ ಯಾವ ಕ್ರೋಧವನ್ನೂ ಹುಟ್ಟಿಸಲಿಲ್ಲ. ಆಕೆಯೊಂದಿಗೆ ಹತ್ತು ದಿನ ಸುಖಪಟ್ಟರೂ ತೃಪ್ತಿ ಮೂಡಲಿಲ್ಲ. "ತಾರ್ಕ್ಷ್ಯ! ನನಗೆ ಮದುವೆಯಾಗಬೇಕು!" ಎಂದಿಷ್ಟೇ ಮಹಾಜರು ಹೇಳಿದರು. ತಾರ್ಕ್ಷ್ಯನಿಗೆ ಹೊಸ ಸಂಕಟ ಶುರುವಾಯ್ತು. ರಾಜನ ಮಾತನ್ನು ಯಥಾವತ್ತ ವರದಿಯನ್ನು, ಮಹಾರಾಣಿಗೆ ಒಪ್ಪಿಸುವ ಧೈರ್ಯ ತಾರ್ಕ್ಷ್ಯನಿಗಾಗಲಿಲ್ಲ. ರಾಜನ ಆಶೆಯನ್ನು ಈಡೇರಿಸಲು ಹಲವು ಪ್ರಯತ್ನಗಳನ್ನು ಮಾಡಿದ. ಅದಕ್ಕಾಗಿ ಯಾರಿಗೂ ಹೇಳದೆ ಹತ್ತು ದಿನ ತನ್ನ ಊರಿಗೆ ಹೋಗುವ ನೆಪ ವೊಡ್ಡಿ ಮಹಾರಾಜ ಮತ್ತು ಮಹಾರಾಣಿಯರ ಸಮ್ಮತಿ ಪಡೆದು ಉತ್ತರ ಕಾಶಿಯ ಕಡೆಗೆ ಪ್ರಯಾಣವನ್ನು ಬೆಳೆಸಿದ. ಒಡೆಯನ ಆಶೆಯನ್ನು ಈಡೇರಿಸುವುದಕ್ಕೆ ಯಾರೂ ಸಿಕ್ಕದಿದ್ದಾಗ ಕಾಲಿಯಾನ ಚಿಕ್ಕತಂಗಿಯನ್ನೇ ಹೊತ್ತು ತಂದ. ತಾನಾಗಿಯೇ ತಾರ್ಕ್ಷ್ಯ ಆಕೆಯನ್ನು ಅರಸನಿಗೆ ಒಪ್ಪಿಸದೆ ಬೇರೊಬ್ಬ ರಾಹುತನ ಮೂಲಕ ಆ ಕೆಲಸವನ್ನು ಮಾಡಿಸಿದ. ತಂದ ಅಫೀಮಿನ ಅಮಲಿನಲ್ಲಿ ಎಚ್ಚರವಿಲ್ಲದ ಹುಡುಗಿಯನ್ನು ಮಹಾರಾಜರು ಕಣ್ಣರಳಿಸಿ ನೋಡಿದರು. ಹುಡುಗಿ ಚೆಲುವೆಯೇನೋ ಹೌದು. ಆದರೆ....

"ಕೊರಳಲ್ಲಿ ಕರಿಮಣಿಯ ಸರಗಳು, ನಾಗಮುದ್ರಿಕೆಯ ಹಿತ್ತಾಳೆಯ ತಾಯಿತ, ಕೈಯಲ್ಲಿ ಕರಿದಾರ, ಗಲ್ಲದಮೇಲೆ ಹಚ್ಚೆ....ನಾಗಕನ್ನಿಕೆಯ ಎಲ್ಲ ಲಕ್ಷಣಗಳೂ ಇದ್ದವು" ಕಾಲಿಯಾನ ತಂಗಿ ಎಂದು ಮಸದಟ್ಟಾದಾಗ ತಲೆ ಚಚ್ಚಿಕೊಂಡರು. 'ತಂಗಿ' ಶಬ್ದ ಓಕರಿಕೆಯನ್ನು ತಂದು ವಾಂತಿ ಮಾಡಿಸಿತು. ಮಹಾರಾಜರು ಮದುವೆಯ ಆಶೆಗೆ ಮಂಗಳ ಹೇಳಿದರು.

೩

ಕಾಲಿಯಾನಿಗೆ ಅಂದು ಕಂಡ ಹುಡುಗಿ ತನ್ನ ತಂಗಿ ಎಂದು ಗೊತ್ತಾದಾಗ ಕೋಪಸಂತಪ್ತನಾದನು. ಅಂತಃಕೋಣೆಯಲ್ಲಿ ನೆಲದಮೇಲೆ ಎಚ್ಚರವಿಲ್ಲದೆ ಬಿದ್ದಿರುವ ಹುಡುಗಿಗೆ ಚಾದರ ತಂದು ಹೊದ್ದಿಸಿದ. ತನ್ನ ತಂಗಿ ನಾಗಿಯಾ! ಬಲಿಯಾದಳು !! ಕಾಮ ಕಾಳರಕ್ಕಸನಿಗೆ ಆಹುತಿಯಾದಳೆಂದು ಪರಿತಪಿಸಿ ಕ್ರೋಧದಿಂದ ಸಿಡಿದೆದ್ದರೂ ಸಿಟ್ಟನ್ನು ಪ್ರದರ್ಶಿಸದೆ ಸದ್ದುಗದ್ದಲ ಮಾಡದೆ ಅಲ್ಲಿಂದ ಆಕೆಯನ್ನು ಎತ್ತಿಕೊಂಡು ಕುದುರೆಯಮೇಲೆ ತನ್ನ ಊರಿಗೆ ಯಾರಿಗೂ ಹೇಳದೆ ಓಡಿಹೋಗುತ್ತಾನೆ. ಅವನ ಊರು ಅಮರುಗ್ರಾಮ. ಮಹಿಯವನಿಂದ ಕದ್ದ ಆ ಚಪಲಕುದುರೆಗೂ ಅಮರುವನ್ನು ಮುಟ್ಟಲು ಮಧ್ಯಾಹವೇ ಆಯಿತು. ಇತ್ತ ಊರಿನಲ್ಲಿ ಮಗಳು ಕಳೆದು ಹೋದ ದುಃಖದಲ್ಲಿ ತಂದೆ ವಾಸುಕಿ ತಾಯಿ ಭೋಗಿಯಾ ಚಿಂತಿತರಾಗಿ ಊಟ ನಿದ್ರೆಯನ್ನು ಬಿಟ್ಟು ಕುಳಿತಿದ್ದರು. ತಂದೆ ಹುಡುಕಾಟ ನಡೆಸಿದ್ದರು. ನಾಗಿಯಾಳೊಂದಿಗೆ ಕಾಲಿಯಾನ ಆಗಮನ ಆ ಕುಟುಂಬದಲ್ಲಿ ತಕ್ಷಣ ನೆಮ್ಮದಿಯನ್ನು ತಂದಿತು. ಆದರೆ ಕ್ರೋಧದ ಸರ್ಪ ಕಾಲಿಯಾನಲ್ಲಿ ಒಳಗೊಳಗೆ ಹೆಡೆಮಾಡುತ್ತಿತ್ತು. ರಾಜನನ್ನು ತಾರ್ಕ್ಷ್ಯನನ್ನು ಕೊಲ್ಲುವುದಕ್ಕೆ ಯೋಚಿಸುತ್ತಿತ್ತು.

ಅಮರುದ ಊರಿಗೆ ಆ ಹೆಸರು ಬಂದುದು ಅಲ್ಲಿನ ಪೇರಲ ತೋಟ (ಸೀಬೆಯ ಹಣ್ಣಿನ ತೋಟ)ದಿಂದ. ಆ ತೋಟ ಶ್ರೀ ವಾಮದೇವ ಮಹರ್ಷಿಗಳು ಬೆಳಸಿದ್ದು. ವಾಮದೇವರು ಈಗ ಹಿಮಾಲಯಕ್ಕೆ ತಪಸ್ಸಿಗೆ ಹೋಗಿದ್ದರು. ತೋಟದ ಉಸ್ತುವಾರಿ ನೋಡಲಿಕ್ಕೆ ತಮ್ಮ ಶಿಷ್ಯೋತ್ತಮ 'ದೇವದೇವ' ಎಂಬ ಮುನಿಗಳನ್ನು ಅಲ್ಲಿ ಬಿಟ್ಟಿದ್ದರು. ದೇವದೇವರೂ ಪರಮ ತಪಸ್ವಿಗಳು; ತ್ರಿಕಾಲಜ್ಞಾನಿಗಳು. ಅವರು ಕಟ್ಟಿದ ತಾಯಿತದ ಮಹಿಮೆಯೇ ನಾಗಿಯಾಳನ್ನು ಕಾಯ್ದಿತ್ತು. ದೇವದೇವರನ್ನು ಕಂಡು ಆ ಕುಟುಂಬ ಹರ್ಷವನ್ನು ತಳೆದರು. ಮಹರ್ಷಿಗಳ ಮುಗುಳುನಗೆಯಲ್ಲಿ ಕಾಲಿಯಾ ಏನೆಲ್ಲವನ್ನೂ ಕಂಡುಕೊಂಡ. 'ಎಲ್ಲ ಗೊತ್ತಿದೆ. ಆದರೆ ಎಲ್ಲ ಹೇಳಲಿಲ್ಲ ನಮ್ಮ ಪುಣ್ಯ!' ಎಂದುಕೊಂಡ.

೪

ಮಹಾರಾಣಿಗೆ ತಾರ್ಕ್ಷ್ಯ ನಾಗಿಯಾಳನ್ನು ಎತ್ತಿಕೊಂಡು ಬಂದ ಸಂಗತಿಯನ್ನು ವಿವರಿಸಿದ. ಅದರಿಂದ ಹುಟ್ಟುವ ಸಮಸ್ಯೆಗಳ ಸರಮಾಲೆಯನ್ನು ವಿಸ್ತರಿಸಿದ. ಕಾಲಿಯಾ ಮಾಯವಾದುದನ್ನು ಕಂಡು ಪೇಚಾಡಿದ. ಮುಂದಿನ ವ್ಯವಹಾರ ಮಹಾರಾಣಿಗೆ ಬಿಟ್ಟು ಮನೆಗೆ ಹೋದ.

ಚಿಕ್ಕವಯಸ್ಸೇ ಆದರೇನಾಯಿತು; ರಾಜರಾಣಿಯರ ಗುಟ್ಟನ್ನು ತಿಳಿದ ಸೇವಕನೊಬ್ಬ ಓಡಿಹೋದನೆಂದರೆ, ಅವನು ಶತ್ರುವಾದನೆಂದರೆ, ಆಗುವ ಅನರ್ಥಗಳು ಬಹಳ ಎಂದು ಮಹಾರಾಣಿ ಅಮರುದಕ್ಕೆ ಹೋಗಿ ದೇವದೇವ ಮಹರ್ಷಿಗಳನ್ನು ಕಂಡು ಅನಂತಿಕಾದೇವಿಯನ್ನು ಪೂಜಿಸಿ ಕುಲಧರ್ಮ ಮುಗಿಸುವ ನೆಪದಲ್ಲಿ ಮುಂದಿನ ಸಮಸ್ಯೆಗಳನ್ನು ಬಿಡಿಸುವ ಎಳೆಗಳನ್ನು ಕಂಡಳು. ಯೋಚಿಸಿದ್ದೆ ತಡ ಅಮರುದಕ್ಕೆ ಪ್ರಯಾಣ

ಬೆಳೆಸಿ ದೇವದೇವನನ್ನು ಕಂಡಳು. ತನ್ನ ಅಳಲನ್ನು ತೋಡಿಕೊಂಡಳು. ಮಹರ್ಷಿಗಳೂ ಆಕೆಯ ಆಶೆಯಂತೆ ಶತಚಂಡೀ ಹೋಮವನ್ನು ಮಾಡಲು ನಿರ್ಧರಿಸಿದರು. ಆಶ್ರಮದಲ್ಲಿ ಕಾಲಿಯಾ ಕಾಣದಿರಲು ರಾಣಿಗೆ ಕಳವಳವಾಯಿತು. ಎರಡು ದಿವಸವಿದ್ದು ಹೋಮವನ್ನು ಮುಗಿಸಿಕೊಂಡು ಹೊರಡಲು ಸಿದ್ಧವಾದಳು. ದೇವದೇವರು ನಮಸ್ಕರಿಸಿದ ಆಕೆಗೆ "ಪುತ್ರವತೀಭವ!" ಎಂದು ಆಶೀರ್ವದಿಸಿದರು. ತನ್ನ ಸ್ಥಿತಿ ಅರಿತ ರಾಣಿ ಮಹರ್ಷಿಗಳ ಹರಕೆಯನ್ನು ಔಪಚಾರಿಕವೆಂದು ಬಗೆದಳು. ಮಹಾರಾಣಿಯ ಮನಸ್ಸು ಚಂಚಲ ವಾಯಿತು ಮತ್ತೆ ಆಕೆಗೆ ಮಹರ್ಷಿಗಳು ಹೇಳಿದ "ಪರಚಕ್ರದ" (ದಾಳಿಯ) ವಿಚಾರ ಚಿಂತನೆಯ ಆಳಕ್ಕೆ ಇಳಿಸಿತು. ಶತಾಯುಗತಾಯ ಕಾಲಿಯಾನನ್ನು ಹಿಡಿಯಬೇಕೆನ್ನುವ ಹಂಬಲ ತಂತಾನೆ ಕೂಡಿಬಂತು. ಮಹಾರಾಜನನ್ನು ಆಮ್ರವನದಲ್ಲಿ ಕೊಲ್ಲಬೇಕೆಂದು ಯೋಜನೆ ಹಾಕಿಕೊಂಡು ಹೊರಟ ಕಾಲಿಯಾ ತಾರ್ಕ್ಷ್ಯನ ಬಲೆಗೆ ಜೀವಂತ ಸಿಕ್ಕಿಹಾಕಿ ಕೊಂಡ. ಇನ್ನೊಂದೆಡೆ ದಂಡನಾಯಕನ ಪದವಿಗೆ ದೇವರಾಜನ ಮಗ ವತ್ಸರಾಜನನ್ನು ಏರಿಸಿ ತಂದೆ ಮಕ್ಕಳಲ್ಲಿ ತಂದೆಯನ್ನು ಪದವಿಯಿಂದ ಇಳಿಸಿದರೂ ಆತನ ಪ್ರೇಯಸಿ ಪಕ್ಷ್ಮಾರಾಣಿಯನ್ನು ಸಂಧಿಸುವ ಅವಕಾಶ ಕಲ್ಪಿಸಿದ್ದಳು. ಹಾವಿನ ಹಲ್ಲನ್ನು ಕಿತ್ತು ಹಾವನ್ನು ಆಡಿಸುವ ಆಡಳಿತದ ಕುಶಲಕಲೆ ರಾಣಿಗೆ ಕರತಲಾಮಲಕವಾಗಿತ್ತು. ಮರುದಿನ ಸೆರೆಹಿಡಿದ ಕಾಲಿಯಾನೊಬ್ಬನನ್ನೇ ಮಹಾರಾಣಿಯ ಎದುರು ನಿಲ್ಲಿಸಲಾ ಯಿತು. ಕಾಲಿಯಾನಿಗೆ ರಾಣಿ ಏನು ಶಿಕ್ಷೆ ವಿಧಿಸುತ್ತಾಳೊ ಎಂಬ ಭಯ. ಆದರೆ ಅದಕ್ಕೆ ವಿರುದ್ಧವಾಗಿ ಏನು ಆಗಿಲ್ಲವೇನೊ ಎನ್ನುವವರಂತೆ ಅವನನ್ನು ಪ್ರಶ್ನಿಸಿ ಅವನು ಟಾಂಕಿಯ ಗ್ರಾಮದಲ್ಲಿ ಜೀವಂತ ಚಿರತೆಯನ್ನು ಸೆರೆಹಿಡಿದ ಪ್ರಸಂಗವನ್ನು ಕೇಳಿ ಪ್ರಶಂಸಿಸಿ ಅವನು ಮುಂದಾಳು ಆಗಬೇಕು. ಆದರೆ ಅದಕ್ಕೊಂದು ಪರೀಕ್ಷೆಯಲ್ಲಿ ತೇರ್ಗಡೆ ಆಗಬೇಕು ಎಂದು ಪರಿತ್ರೋತ್ತಿ ಅವನ ಅಪರಾಧ ಅವನ ತಂಗಿಗೆ ಆದ ಅಪರಾಧಕ್ಕೆ ಸೇಡೆ ವಿನಃ ವಾಸ್ತವದಲ್ಲಿ ಅವನಿಗೆ ರಾಜನ ಮೇಲೆ ಸೇಡು ತೀರಿಸಿಕೊಳ್ಳುವ ಆ ನೆಪಕ್ಕಾಗಿ ಇಷ್ಟೆಲ್ಲ ಅನಾಹುತ ಆಯಿತೆಂದು ಸಮಾಧಾನ ಹೇಳಿ ಶ್ರಾವಸ್ತಿಯ ಮೇಲೆ ದಾಳಿಮಾಡಿದ ಭಿಲ್ಲರ ಪಡೆಯನ್ನು ಅಯೋಧ್ಯೆಯ ಸೈನ್ಯ ಸೋಲಿಸಿದರೂ ಅವರ ರಾಜನೂ ಅವನ ಜೋಡಿಯ ಆರು ಜನರೂ ಶರಭಾರಣ್ಯದಲ್ಲಿ ಅಡಗಿ ಕುಳಿತಿದ್ದಾರೆ. ಅವರನ್ನು ಶೋಧಿಸಿ ಬಂಧಿಸುವುದು ಕಾಲಿಯಾನ ಕೆಲಸವೆಂದು ಹೇಳಿ, ಅದರಲ್ಲಿ ಅವನು ಗೆದ್ದರೆ ಅವನನ್ನು ಆ ಅಮರುವಿಗೆ ದಳಪತಿಯನ್ನಾಗಿ ಮಾಡುವುದಾಗಿ ಹೇಳಿ ಕಾಲಿಯಾನನ್ನು ಕಠಿಣ ಕೆಲಸಕ್ಕೆ ನಿಯೋಜಿ ಸಿದಳು.

ಅತ್ತ ವತ್ಸರಾಜ ಇತ್ತ ಕಾಲಿಯಾ ಹೀಗೆ ಎರಡು ಕಡೆಯಿಂದ ಭಿಲ್ಲರ ಆ ಚಿಕ್ಕ ಪಡೆಯನ್ನು ಆಕ್ರಮಿಸಿದರು. ಬೆಳಗಿನ ಜಾವದಲ್ಲಿ ಇನ್ನೂ ಭಿಲ್ಲರು ಮಲಗಿರುವ ಸಮಯದಲ್ಲಿ ಅವರನ್ನು ಕಾಲಿಯಾ ಸಂಧಿಸಿ ಬಂಧಿಸಿದನು. ಅನಂತರ ಆ ಸೆರೆಯಾಳುಗಳನ್ನು ಮಹಾರಾಣಿಗೆ ಒಪ್ಪಿಸಿ ಸೈ ಅನ್ನಿಸಿಕೊಂಡನು. ಕಾಡಾಡಿಯಾದವನು ನಾಡಾಡಿಯಾದನು. ಅವನು [illegible] ರಾಣಿಯಿಂದ [illegible] ಪಡೆದು ಹೋದನು. ಸೆರೆಸಿಕ್ಕ ಭಿಲ್ಲ ರಾಜನು "ಶ್ರಾವಸ್ತಿಯ [illegible] ಬಹಳಷ್ಟು ದಿನ ಭಿಲ್ಲರ ಜೀವಿಸುತ್ತಾರೆ. [illegible] ಎತ್ತಿಕೊಂಡು

ಹೋಗುತ್ತಾರೆ" ಎಂದು ಹೇಳಿ ತಮ್ಮ ಕೊಲೆ–ಸುಲಿಗೆ–ದರೋಡೆಗಳಿಗೆ ಕಾರಣವನ್ನು ತಿಳಿಸಿದನು. "ಅಯೋಧ್ಯೆಯಲ್ಲಿ ಇರಗೊಟ್ಟರೆ ಇಲ್ಲಿಯೂ ಅದೇ ಕೆಲಸವನ್ನು ಮಾಡುತ್ತೀರಾ" ಎಂದು ನೇರ ಪ್ರಶ್ನೆ ಹಾಕಿದಳು. ಆಗ ಆಕೆಗೆ ಆತ ಅಯೋಧ್ಯೆಯ ಜನರು ತಮಗೆ ಅಂತಹ ಉಪದ್ರವವನ್ನು ಕೊಟ್ಟಿಲ್ಲ. ಆದುದರಿಂದ ಅವರೊಂದಿಗೆ ಯಾವ ದ್ವೇಷವೂ ಇಲ್ಲ ಎಂದು ತಿಳಿಸಿದ. ವಿಪರೀತ ನಡೆವಳಿಯನ್ನು ವ್ಯಕ್ತಪಡಿಸಿದರೆ ಸುಭಾನುವಿಗೆ ಕಾಣಿಕೆ ಕೊಡುವು ದಾಗಿ ಹೆದರಿಸಿಯೂ ಬಿಟ್ಟಳು. ಶ್ರಾವಸ್ತಿಯವರ ಚಿತ್ರಹಿಂಸೆಗಿಂತ ಅಯೋಧ್ಯೆಯ ಕಾಡಿನಲ್ಲಿ ವಾಸಮಾಡುವುದು ಲೇಸು ಎಂದು ತೀರ್ಮಾನಿಸಿದರು. ಅನಾಯಾಸವಾಗಿ ಭಿಲ್ಲರು ಕೈವಶರಾದರು. ಈ ಮಧ್ಯೆ ಮಹಾರಾಜರ ಆರೋಗ್ಯ ಕೆಟ್ಟಿತು. ಒಂದು ದಿನ ಜ್ವರದ ಉಮ್ಮಳಿಕೆಯಲ್ಲಿ

"ನಾನು ನನ್ನ ರಾಣಿಯನ್ನು ಕಾಣಬೇಕು!" ಎಂದು ಹಂಬಲಿಸಿದನು.

ರಾಹುತನಿಂದ ವಾರ್ತೆ ಅರಮನೆಗೆ ಮುಟ್ಟಿತು. ಸುದ್ದಿಯನ್ನು ಕೇಳಿದೊಡನೆ ಪುರುಕುತ್ಸಾನಿ ಆಮ್ರವನಕ್ಕೆ ಧಾವಿಸಿದಳು.

"ಬಂದೆಯಾ ಪುರುಕುತ್ಸಾನಿ! ಬರುವೆಯೋ ಇಲ್ಲವೊ ಎಂದಿದ್ದೆ!" ಎಂದರು.

ಮಹಾರಾಣಿ ಅವರ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಕೂದಲು ನೇವರಿಸಿದಳು. ಜ್ವರದ ತಾಮಸದಲ್ಲಿ ಮಹಾರಾಜರು ಪುರಕುತ್ಸಾನಿಗೆ ತಮ್ಮ ಕಾಮ ವಾಸನೆಯನ್ನು ಹೇಳಿದರು. ರಾಣಿ ಆರೋಗ್ಯದ ನೆಪವೊಡ್ಡಿ ಆ ದಿನ ಕೂಡಲಿಲ್ಲ. "ನಾಳೆ ಜ್ವರ ಕಡಮೆಯಾದರೆ ಬರುತ್ತೀಯಾ!" ಎಂದು ಅಂಗಲಾಚಿದರು. ರಾಣಿ ಒಪ್ಪಿದಳು. ಆದರೆ ಮರುದಿನ ಜ್ವರ ಇನ್ನಷ್ಟು ಹೆಚ್ಚಾದುದರ ವಾರ್ತೆ ಬಂದಿತು. ರಾಣಿ ಆಮ್ರವನಕ್ಕೆ ಹೋಗಿ ರಾಜನ ಶುಶ್ರೂಷೆಯನ್ನು ತಾನೇ ಎದ್ದು ಕುಳಿತು ಮಾಡಿದಳು. ನಿದ್ದೆಯಿಲ್ಲದುದಕ್ಕೆ ಬಳಲಿ ಬೆಂಡಾದಳು. ಅರಮನೆಗೆ ಮರಳಿದಾಗ ಅಲ್ಲಿ ಅಥರ್ವವೇದ ಬ್ರಾಹ್ಮಣ ವಿರೋಧಿಗಳು ಶತಚಂಡಿಯಾಗವನ್ನು ವಿರೋಧಿಸಿ ದೊಡ್ಡ ಗದ್ದಲ ನಡೆಸಿದ್ದರು. ಅವರಿಗೆ ಅವರ ದೇವತೆಗಳನ್ನೂ ಪೂಜಿಸಲು ಹೇಳಿ ವಾಸಂತಿಕಾದೇವಿಯ ಪೂಜೆಯನ್ನು ಏರ್ಪಡಿಸಲು ಹೇಳಿ ಸಮಾಧಾನಪಡಿಸಿ ಕಳಿಸಿದಳು. ಆ ಬ್ರಾಹ್ಮಣರ ಮುಖಂಡತ್ವವನ್ನು ಸಿಂಹಭಟ್ಟ ಎಂಬ ಬ್ರಾಹ್ಮಣನು ಹೊತ್ತಿದ್ದ. ವಾಸಂತಿಕಾದೇವಿಯ ಪೂಜೆಯೂ ನಡೆದುದು ಒಂದು ವಿಶೇಷ. ವೈದ್ಯರ ಚಾತುರ್ಯವೊ, ಶತಚಂಡೀಹೋಮದ ಪ್ರಭಾವವೋ ಮಹಾರಾಜರ ಆರೋಗ್ಯವು ಸುಧಾರಿಸಿ ಗುಣಮುಖರಾದರು. ರಾಣಿ ರಾಜ ಇಬ್ಬರು ವಾಸಂತಿಕಾ ದೇವಾಲಯಕ್ಕೆ ಹೋಗಿ ಪೂಜೆ ಸಲ್ಲಿಸಿ ತೀರ್ಥಪ್ರಸಾದಗಳನ್ನು ಪಡೆದರು. ದೇವಾಲಯದಲ್ಲಿ ಮಹಾರಾಜರ ಕಣ್ಣಿಗೆ ಅವರಿಂದ ದೂರ ಇಡಲ್ಪಟ್ಟ ವೇಶ್ಯೆ ಮ್ಯ ನಯನೆ, ಮ್ಲಾನ ಮುಖಳು, ಕಂಡಳು!

ಮರುದಿನ ಮಹಾರಾಣಿ ಅವರು ಗ್ರಾಮಕ್ಕೆ ದೇವದೇವರು ನಡೆಸುತ್ತಿದ್ದ ಯಾಗಕ್ಕೆ ಹೋದಳು. ಕಾಲಿಯಾ ಅಚ್ಚುಕಟ್ಟಾಗಿ ವ್ಯವಸ್ಥೆಯನ್ನು ಮಾಡಿದ್ದ. ಈ ಅವನು ಪಾಳ್ಯಗಾರ. ಆಶ್ರಮದಲ್ಲಿ ರಾಣಿಗೆಂದು ಅವರ ಗುರು ವಾಮದೇವರಿಂದ ವಿಶೇ ಆದೇಶ ಬಂದಿತ್ತು; ವಿಸ್ತಾರ ದೃಷ್ಟಿಯನ್ನು ಹೊಂದಲು, ಸಂಕುಚಿತ ದೃಷ್ಟಿಯನ್ನು ತ್ಯಜಿಸಲು. ಗ್ರಹಗಳು ಪರಚಕ್ರ ಎಂದ ಶತ್ರು ಸೈನ್ಯದ ದಾಳಿಯನ್ನು ಸೂಚಿಸುತ್ತಿದ್ದವು

ಪಶ್ಚಿಮ ದಿಕ್ಕಿನಿಂದ ಪರಚಕ್ರ ಬಂದೀತೆಂದು ಆಕೆ ಭಾವಿಸಿದ್ದಿಲ್ಲ. ಆ ಕಡೆಯಿಂದ ಬರುವ ಸಂಭವವಿದ್ದಿಲ್ಲ; ಋಷಿಗಳು ಸಂದೇಹಪಟ್ಟು ಆ ಕಡೆಯಿಂದಲೇ ಬರಬಹುದೆಂದು ನುಡಿದರು. ತುಸು ಸಮಯ ಮೌನ. ಅನಂತರ ರಾಣಿ ನಮಸ್ಕರಿಸಿದಳು. ಋಷಿಗಳು ಆಶೀರ್ವದಿಸಿದರು.

"ಪುತ್ರವತೀ ಭವ!"

ರಾಣಿಗೆ ಎರಡೂ ಸಂಗತಿಗಳ ಅರ್ಥವಾಗಲಿಲ್ಲ. ಊಟಮಾಡಿ ಅಯೋಧ್ಯೆಗೆ ಪ್ರಯಾಣ ಬೆಳೆಸಿದಳು.

ಅಯೋಧ್ಯೆಯಲ್ಲಿ ಚೇಟಿ ಅರಸರು ಆಮ್ರವನಕ್ಕೆ ಹೋದರೆಂದು ತುಟಿಪಿಟಿಕಿದಳು. "ಮತ್ತೆ ಅದೇ, ಮಹಾರಾಣಿ!" ಎಂದು ತಾರ್ಕ್ಷ್ಯ ಜೋಲುಮೋರೆ ಹಾಕಿದ್ದ. ಮಹಾ ರಾಜನ ಇಂಗಿತ ಆಕೆಗೆ ಪೂರ್ಣಾಹುತಿ ದಿನ ವಾಸಂತಿಕಾದೇವಿಯ ದೇವಾಲಯದಲ್ಲಿ ಸಿಕ್ಕಿತ್ತು. ಅಂತೆಯೆ ಯಾವ ಹೆಚ್ಚಿನ ಉಸಾಬರಿಗೆ ಹೋಗದೆ ರಾಜ್ಯಾಡಳಿತದಲ್ಲಿ ಮನಸ್ಸನ್ನು ಇನ್ನಷ್ಟು ಗಾಢವಾಗಿ ಲೀನವಾಗಿಸಿದಳು. ಆಕೆಯ ಚರರು ಹತ್ತಾರು ವೇಷ ಗಳಲ್ಲಿ ದ್ವಾರಕೆಯಿಂದ ಗಾಂಧಾರದವರೆಗೆ ಸಂಚರಿಸಿಬಂದರು. ಭೃಗುಕಚ್ಛ, ಮಾಳವ, ಅವಂತಿ, ಹಸ್ತಿನಾಪುರ, ಕುರುಪಾಂಚಾಲ, ಕ್ರಿವಿ, ಪಂಚನದ, ಅಹಿಚ್ಛತ್ರ, ಕಾಶ್ಮೀರ, ಕುರುಜಾಂಗಲ, ತಕ್ಷಕ, ಮಿಥಿಲೆ, ಮದ್ರ, ಶಕ, ಹರಿಯೂಪಿಯ, ತ್ರಿಪುರ (ಪಶ್ಚಿಮ), ಔದುಂಬರ, ಕೈಕಯ (ಕೇಕಯ?), ಅಂಬಷ್ಟ, ಬರ್ಬರ, ಬಹ್ಲೀಕ, ಮ್ಲೇಚ್ಛ ಮತ್ತು ಮತ್ಸ್ಯ ಮುಂತಾಗಿ ಹಲವು ದೇಶಗಳನ್ನು ಸಂಚರಿಸಿ ಬಂದರು. ಯಾವ ನಾಡಿನಲ್ಲಿಯೂ ಯುದ್ಧಸನ್ನಾಹ, ದಂಡಯಾತ್ರೆ ಅವರಿಗೆ ಕಂಡು ಬರಲಿಲ್ಲ. ಅಯೋಧ್ಯೆಯು ಭದ್ರವಾಗಿತ್ತು; ಶಾಂತಿ, ಸುವ್ಯವಸ್ಥೆ, ಗುಪ್ತಸೈನ್ಯ, ಶಸ್ತ್ರಾಸ್ತ್ರಗಳ ಸಂಗ್ರಹಣೆ ಎಲ್ಲ ಅದ್ದೂರಿಯಾಗಿತ್ತು. ಮಹಾರಾಣಿಗೆ, ಅಯೋಧ್ಯೆಯು ಒಂದು ಜೀವಕ್ಕೆ, ಹೃದಯ ಪರಿತಪಿಸುತ್ತಿತ್ತು!

※

ದಶಾರ್ಣದ ದೊರೆ ಭದ್ರಾಯುಶಕ್ರ (ಸಗರ) ಶಬರರ ಪಡೆಯನ್ನು ಕಟ್ಟಿಕೊಂಡು ದಂಡೆತ್ತಿ ಬಂದ. "ಪಶ್ಚಿಮದಿಂದ ಪರಚಕ್ರ ಬರುವ ವಾಮದೇವರ ಸಂದೇಶ ಹೀಗೆ ಸತ್ಯ ವಾಯಿತು." ಆತ ಅಯೋಧ್ಯೆಯನ್ನು ಗೆಲ್ಲದಿದ್ದರೂ ಅದರ ರಾಜ ಪುರುಕುತ್ಸನನ್ನು ಅವನ ವೇಶ್ಯೆ ಮೃಗನಯನೆ ಸಹಿತ ಅಪಹರಿಸಿಕೊಂಡು ಹೋದ. ಅನಂತರ ಹತ್ತು ವರ್ಷ ಅಯೋಧ್ಯೆ ನಿರ್ಬಾಧಿತವಾಗಿ ಉಳಿಯಿತು. ಪುರುಕುತ್ಸ ಮಹಾರಾಜನ ಸುಳಿವು ಯಾರಿಗೂ ಹತ್ತಲಿಲ್ಲ. ಮಹಾರಾಜ ಯುದ್ಧದಲ್ಲಿ ಮರಣಹೊಂದಿದನೆಂದು ಕೆಲವು ಜನ, ಇಲ್ಲ ಎಂಬ ವದಂತಿ ಒಂದೆಡೆ—ತತ್ಕಾರಣದಿಂದ ಪುರುಕುತ್ಸಾನಿ ವಿಧವೆ ಎನಿಸಲಿಲ್ಲ. ಪುರುಕುತ್ಸಾನಿಯ ರಾಜ್ಯ ಶಾಸನದ ಕುಶಲತೆಯನ್ನು ಮೆಚ್ಚಿ ಭದ್ರಾಯು ಸಂದೇಶ ಕಳಿಸಿದನು—

"ಆಕೆಯ ವಿವಾಹ ಭಾರತೀಯ ಪದ್ಧತಿಯಿಂದ ನ್ಯಾಯಸಮ್ಮತವಲ್ಲವೆಂದು, ತನ್ನನ್ನು ಮದುವೆಯಾಗಬೇಕೆಂದು ತಮ್ಮ ರಾಜ್ಯಗಳು ಒಂದಾದರೆ ಕಾಶಿ, ವಂಗ, ಅಂಗ, ಕಲಿಂಗ ರಾಜ್ಯಗಳು ಒಂದಾಗಿ ವಿಶಾಲ ಆರ್ಯಾವರ್ತ ಸಾಮ್ರಾಜ್ಯವನ್ನು ಕಟ್ಟಬಹು

ದೆಂದು, ಪ್ರಸುಕುತ್ಸ ಮಹಾರಾಜರು ಕ್ಷೇಮದಿಂದ ಇಲ್ಲಿಯೇ ಇರುವರೆಂದೂ ಇದಕ್ಕೆ ಅವರ ಸಮ್ಮತಿ ಇದೆಯೆಂದೂ ತಾವೇ ಕಾಶೀ ವಿಶ್ವನಾಥನ ಸನ್ನಿಧಿಯಲ್ಲಿ ನಮ್ಮ ವಿವಾಹ ನಡೆಯ ಲೆಂದು ಹೇಳಿದುದಾಗಿಯೂ" ಸಂದೇಶ ಬಂತು.

ಪುರುಕುತ್ಸಾನಿ "ಮೊದಲು ಗಂಡನನ್ನು ತಂದು ಒಪ್ಪಿಸು, ಆಮೇಲೆ ಮಾತ ಡೋಣ" ಎಂದು ಹಟಹಿಡಿದಳು. ಭದ್ರಾಯು ಅದಕ್ಕೆ ಒಪ್ಪಲಿಲ್ಲ. ಅಯೋಧ್ಯೆ ಅವನಿಗೆ ಕಂಟಕವಾಗಿತ್ತು. ಅದನ್ನು ದಾಟದ ಹೊರತು ಕಾಶಿಯು ಅಲಭ್ಯವಾಗಿತ್ತು. ಮೇಲಾಗಿ ತನ್ನ ಊನ ಅವಸ್ಥೆಗೆ ಪುರುಕುತ್ಸಾನಿ ಮಾಡಿದ ಅಪಚಾರವೆಂದು ಸಿಡಿಮಿಡಿಗೊಂಡನು. "ನೂರು ರಾಜಕುವರಿಯರನ್ನು ಲಗ್ನವಾಗಿ ನೂರು ಮಕ್ಕಳನ್ನು ಪಡೆದು, ನಿಃಸಂತಾನ —ಪುರುಕುತ್ಸಾನಿಗೆ ತನ್ನ ಸಂತಾನ ಸಾಮರ್ಥ್ಯವನ್ನು ತೋರ್ಪಡಿಸಿದನ." ಪುರುಕುತ್ಸಾನಿ ಜಗ್ಗಲಿಲ್ಲ. ಭದ್ರಾಯುವಿಗೆ ಬಾಗಲಿಲ್ಲ! ಆದರೆ........

II

೧

ತ್ರಸದಸ್ಯು ಪುರುಕುತ್ಸಾನಿಯ ಒಬ್ಬನೇ ಮಗ!

ಭದ್ರಾಯುವಿನ ವಿವಾಹಬೇಡಿಕೆ ಬಂದಾಗ ಪುರುಕುತ್ಸ ಸೆರೆಯಾಳಾಗಿ ಹೋಗಿ ಎರಡು ವರ್ಷವಾಗಿತ್ತು. ಭದ್ರಾಯುವಿನ ಸಂದೇಶದಲ್ಲಿ ಪುರುಕುತ್ಸನ ಸಮ್ಮತಿಯೂ ಸೇರಿದೆ ಎಂಬ ಮಾತು ಇದ್ದರೂ ಪುರುಕುತ್ಸಾನಿ ಅಭಿಮಾನದಿಂದ ತಿರಸ್ಕರಿಸಿದ್ದಳು. ಈ ಎಲ್ಲ ಸಂಗತಿ ಅಯೋಧ್ಯೆಯ ಊರಿಗೆ ಊರೆ ತಿಳಿದಿತ್ತು. ಊರಿನ ಎಲ್ಲ ಪ್ರತಿಷ್ಠಿತರು ಸೇರಿ ಸಭೆ-ಸಮ್ಮೇಲನಮಾಡಿ ಸಾಧಕ-ಬಾಧಕ, ಧಾರ್ಮಿಕ-ರಾಜಕೀಯ ಎಲ್ಲ ದೃಷ್ಟಿಕೋನ ಗಳಿಂದ ವಿಚಾರಮಾಡಿ ಆಕೆ ಭದ್ರಾಯುವನ್ನು ಲಗ್ನ ಮಾಡಿಕೊಳ್ಳಲಿ ಎಂಬ ನಿರ್ಣಯಕ್ಕೆ ಬಂದಿದ್ದರು. ಅದಕ್ಕೆ ಪುರುಕುತ್ಸ ಮಹಾರಾಜನ ಸಮ್ಮತಿ ಇದೆಯೆಂಬುದೂ ಕಾರಣ ವಾಗಿತ್ತು. ತಮ್ಮ ರಾಣಿ ಅವರಿಗೆ ಔರಸಪುತ್ರನನ್ನು ಕೊಡಲಿ. ಕೊಟ್ಟು ತನ್ನ ಕರ್ತವ್ಯ ನೆರವೇರಿಸಲಿ ಎಂಬ ಆಶೆಯಿತ್ತು. "ಪುರುಕುತ್ಸನ ಮನಸ್ಸು ನಾವು ಯಾರೂ ಸಮಕ್ಷಮ ನೋಡಿಲ್ಲ" ಎಂಬ ತರ್ಕಬದ್ಧ ಉತ್ತರದಿಂದ ಮತ್ತು "ದಶಾರ್ಣದವರು ಪುರುಕುತ್ಸ ಮಹಾರಾಜನನ್ನು ಕದ್ದು ಒಯ್ದಿದ್ದಾರೆ; ಅವರು ಅವನನ್ನು ತಂದು ಒಪ್ಪಿಸಲಿ" ಎಂಬ ಶೌರ್ಯದ, ಮರ್ಯಾದ, ನುಡಿ, ಇದು ಆಕೆಯ ಹೊರಗಿನ ಉತ್ತರವಾದರೆ, ಆಕೆಯ ಅಂತರಂಗದಲ್ಲಿ ಹಲವಾರು ವಿಚಾರಗಳ ತುಮುಲವೇ ನಡೆಯಿತು.

ಭದ್ರಾಯು ಶೂರನೇನೊ ಹೌದು. ಆದರೆ ಜನ್ಮದಿಂದಲೇ ಊನರೂಪಿ ಕೈಕಾಲುಗಳು ಅಪ್ಪಿದೊ ವಿಷದ ಪ್ರಭಾವದಿಂದ ಊನನಾಗಿದ್ದನು. "ಮಗುವಿಗೆ ಕೈಗಳೂ ಇಲ್ಲ. ಕೈ ಇರುವ ಜಾಗೆಯಲ್ಲಿ ಒಂದೇ ಗಣಿಲಿನ ಭುಜಗಳು. ಅವುಗಳಿಗೆ ಪುಟ್ಟ ಹಸ್ತಗಳು ಕಾಲುಗಳೂ ಒಂದೇ ಗಣಿಲು. ಪಾದಗಳಿಗೆ ವಿನಸದಂತೆ [illegible] ಒಂದೇ ಬೆಟ್ಟು ಐದ ಬೆರಳುಗಳ ಸ್ಥಾನವನ್ನೂ ಆಕ್ರಮಿಸಿತ್ತು." ಕೂಸು ಬೆಳೆದ ಹಾಗೆಲ್ಲ [illegible]— ಕುರೂಪಿ ಆಯಿತು. ಅಂತೆಯೇ ಅರಣ್ಯದಲ್ಲಿ ಅವನ ಜೀವಣಿಗೆಯಾಯಿತು.

ಪುರುಕುತ್ಸಾನಿ ಭದ್ರಾಯುವನ್ನು ನೋಡದಿದ್ದರೂ ತನ್ನ ಚರರಿಂದ ಅವನ ಬಗ್ಗೆ ಸಾಕಷ್ಟು ಸಮಾಚಾರವನ್ನು ಸಂಗ್ರಹಿಸಿದ್ದಳು. ಶೂರಧೀರನಾದ ಅವನು ಅರಮನೆಯನ್ನು ಮುತ್ತಿ ಆಕೆಯನ್ನು ಎತ್ತಿಕೊಂಡು ಹೋಗಿದ್ದರೆ, ಆಕೆಯನ್ನು ಬಲುಮೆಯಿಂದ ಲಗ್ನ ಮಾಡಿಕೊಂಡಿದ್ದರೆ, ಆಕೆ ಅಡ್ಡಿ ಬರುತ್ತಿದ್ದಿಲ್ಲ. ಪೌರಪ್ರಜರೂ ತಪ್ಪು ಎಣಿಸುತ್ತಿದ್ದಿಲ್ಲ. ಆದರೆ ಈಗ ಹಾಗಾಗಿಲ್ಲ. ಅವಳು ಸ್ವತಂತ್ರಳು. ಇಷ್ಟು ರಾಜ್ಯ ಗೆದ್ದ ಭದ್ರಾಯು ಇನ್ನೊಮ್ಮೆ ದಾಳಿ ಮಾಡಿಯೇ ಮಾಡುತ್ತಾನೆ. ಆಗ ಅವನನ್ನು ಸರ್ವ ಪ್ರಯತ್ನಮಾಡಿ ಸೋಲಿಸಬೇಕು. ಅದಾಗದಿದ್ದರೆ ಮದುವೆಯ ಬೇಡಿಕೆಗೆ ಒಪ್ಪಂದ. ಆಕೆಯ ಮನದ ಆಳದಲ್ಲಿ ಇನ್ನೊಂದು ಅತೃಪ್ತಿಯೂ ಇತ್ತು. ತಾನಾಗಿಯೆ ಭದ್ರಾಯುವಿಗೆ ಅವನ ಅಂತಃಪುರದ ಯಃಕಶ್ಚಿತ್ ರಾಣಿ ಆಗಬೇಕೆ—ಎಂಬುದು. ಅವನೇ ಗೆದ್ದು ಆಕೆಯನ್ನು ಮದುವೆಯಾದರೆ ಆಕೆಗೆ ಅಭ್ಯಂತರವಿದ್ದಿಲ್ಲ. ಅಯೋಧ್ಯೆಯ ಜನರು ಅವನೊಂದಿಗೆ ಒಪ್ಪಂದನಾಡಿ ತನ್ನನ್ನು ಒಪ್ಪಿಸಿದ್ದರೂ ಆಕೆಗೆ ಅಭ್ಯಂತರವಿದ್ದಿಲ್ಲ. ಆದರೆ "ದುರ್ದೈವದಿಂದ ವಿಶ್ವವಿಜೇತನಾಗಬೇಕಾದ ಭದ್ರಾಯು ಇನ್ನೊಮ್ಮೆ ದಾಳಿ ಮಾಡಲೇ ಇಲ್ಲ." ಮದುವೆ—ಮಗುವಿನ ಜನನ—ಇವುಗಳ ಆಶೆ ಅಲ್ಲಿಯೆ ಮುದುಡಿತು, ಅಸನೂ ತನ್ನ ಮಕ್ಕಳ ಸಾವನ್ನು ಕಂಡು ಹೃದಯಾಘಾತದಿಂದ ಸಾಯಲು—ಪುರುಕುತ್ಸಾನಿಗೆ. ಆದರೆ ಅದು ಸ್ಮಶಾನ ವೈರಾಗ್ಯ !....

೨

ಹತಾಶಳಾದ ಪುರುಕುತ್ಸಾನಿ ಒಬ್ಬಳೇ ಅಮರುಗ್ರಾಮಕ್ಕೆ ಹೋಗಿ ವರ್ತಮಾನವೆಲ್ಲವನ್ನೂ ದೇವದೇವ ಋಷಿಯರಿಗೆ ಹೇಳಿದಳು. "ಪುತ್ರವತೀಭವ" ಎಂಬ ಅವರ ಆಶೀರ್ವಾದವನ್ನು ನೆನಪಿಗೆ ತಂದುಕೊಟ್ಟಳು. ಇನ್ನು ಗಂಡನ ಅವಸ್ಥೆ ಏನೂ ತಿಳಿಯದು. 'ಔರಸ ಸಂತತಿ ಇಲ್ಲದೆ ಪೌರರು ಮಿಡುಕುತ್ತಾರೆ'. ತಾನೆಷ್ಟು ದಿನ ಬದುಕಬಹುದು ? "ವಂಶದ ಕುಡಿ ಬೆಳೆಸುವ ಉಪಾಯ ಹೇಳಿರಿ...." ಎಂದು ಪ್ರಾರ್ಥಿಸಿದಳು. ದೇವದೇವರು "ನಿನಗೆ ಪುತ್ರಸಂತಾನ ಯೋಗ ಇದ್ದೇ ಇದೆ. ಈಗ ನಿಯೋಗ ಯಜ್ಞವನ್ನು ಮಾಡಿಸಬಹುದು" ಎಂದರು. ಆಕೆ ದೇವದೇವರಿಗೆ ಅಲ್ಲಿಯೆ ಆಶ್ರಮದಲ್ಲಿ ನಿಯೋಗ ನಡೆಯಲೆಂದಳು. ಆಶ್ರಮದಲ್ಲಿ ನಿಯೋಗ ಅರ್ಥಾತ್ ಮೈತ್ರಾವರುಣಯಜ್ಞ ನಡೆಯಿತು. ಅಯೋಧ್ಯೆಯ ಚತುರ್ವೇದಿ ಬ್ರಾಹ್ಮಣ ಸಿಂಹಭಟ್ಟ ಪುರೋಹಿತನಾದ. ಯಜ್ಞ ಸಾಂಗವಾಗಿ ನಡೆಯಿತು. ಅದರ ಫಲವೇ ತ್ರಸದಸ್ಯು. ತ್ರಸದಸ್ಯು ರಾಣಿಯ ಮೋಹದ ಶಿಶುವಾಗಿ ಬೆಳೆದ.

೩

ಪುರುಕುತ್ಸ ಇಪ್ಪತ್ತು ವರ್ಷಗಳಿಂದ ದಶಾರ್ಣದ ಅಹಿಚ್ಛತ್ರ ಕಾರಾಗೃಹದಲ್ಲಿ ಬಂಧಿತ. ಅವನ ಸಮಾಚಾರ ಅಯೋಧ್ಯೆಯವರಿಗೆ ಸರಿಯಾಗಿ ತಿಳಿಯದು ಆ ಕಾರಾಗೃಹದಿಂದ ಬಿಡಿಸಿ ತರುವ ಹಂಬಲ ರಾಣಿಗೆ ಇದ್ದಿತು. ಆದರೆ ಯುದ್ಧಕ್ಕಿಂತ ಸಂಧಾನದ ಮೂಲಕ ತರುವುದು ವಿಹಿತ ಎಂದು ಸಂಧಾನಕ್ಕೆ ರುಕ್ಮಾಂಗದನ ಬಳಿಯಲ್ಲಿ ತನ್ನ ಮಂತ್ರಿಗಳನ್ನು ಕಳಿಸಿದಳು. "ನಮ್ಮ ಮಹಾರಾಜ ಪುರುಕುತ್ಸರು ತಮ್ಮ ಕಾರಾಗೃಹವನ್ನು

ಸೇರಿ ಸುಮಾರು ಹದಿನೆಂಟು ಇಪ್ಪತ್ತು ವರ್ಷಗಳಾದವು. ತಾವು ಕೃಪೆದೋರಿ ಅವರನ್ನು ಅಯೋಧ್ಯೆಗೆ ಕಳಿಸಿದರೆ ನಮಗೆ ಜೀವದಾನ ಮಾಡಿದಂತೆ! ಸೌಭಾಗ್ಯ ದಾನಮಾಡಿದಂತೆ" ಎಂದು ಮುಂತಾಗಿ ಹೇಳಿಕಳಿಸಿದ್ದಳು. ಮಹಾರಾಜನ ಬಿಡುಗಡೆ ಆಯಿತು. ಆದರೆ ಆತ ತನ್ನ ಊರನ್ನೇ ಮುಟ್ಟಲಿಲ್ಲ. ಅಹಿಚ್ಛತ್ರದಲ್ಲೇ ಆತನ ವಧೆಯಾಯಿತು. ಮಾಡಿದವನು ರಾಣಿಯ ನಚ್ಚಿನ ಅಧಿಕಾರಿ ತಾರ್ಕ್ಷ್ಯ.

ತಾರ್ಕ್ಷ್ಯ ಮಹಾರಾಜರನ್ನು ಕೊಂದದ್ದು ಮುಖ್ಯವಾಗಿ ಅವರು ಕುಷ್ಟರೋಗದಿಂದ ಬಳಲಿ ಬೆಂಡಾಗಿದ್ದರು. ಕಾಲುಕೈಗಳ ಬೆರಳುಗಳು ಕುಷ್ಟದಿಂದ ಬಿದ್ದುಹೋಗಿದ್ದವು. ಅಂತಹ ವ್ಯಕ್ತಿಯಿಂದ ಮಹಾರಾಣಿಗೆ ಇನ್ನಷ್ಟು ದುಃಖ ಇನ್ನಷ್ಟು ಸಮಸ್ಯೆಗಳೇ ಸೃಷ್ಟಿಯಾಗುತ್ತವೆ ಎಂಬ ಸದುದ್ದೇಶವೇ ಕಾರಣವಾಗಿತ್ತು. ಪರಮಂಡಲಗಳಲ್ಲಿ ನುಗ್ಗಿ ಅವನ್ನು ಹಿಡಿದುಕೊಳ್ಳುವಲ್ಲಿ ತಾರ್ಕ್ಷ್ಯ ಸಾಕಷ್ಟು ಅಯೋಧ್ಯೆಯ ರಾಜ್ಯದ ಸೇವೆಗೈದಿದ್ದ. ಅಂತೆಯೆ ಮಹಾರಾಣಿ ಅವನನ್ನೇ ತ್ರಸದಸ್ಯುವಿಗೆ ವಿದ್ಯೆ ಯುದ್ಧಕಲೆ ಇತ್ಯಾದಿಗಳನ್ನು ಕಲಿಸಲು ನೇಮಿಸಿದ್ದಳು. ಬಾಲ್ಯದಿಂದ ತಾರ್ಕ್ಷ್ಯನ ಜೀವನ ಅಯೋಧ್ಯೆಯೊಂದಿಗೆ ಬೆಸೆದಿತ್ತು. ನಿಯೋಗದ ನೆನಪಿನಲ್ಲಿ ಹುಚ್ಚನಾದ ಸಿಂಹಭಟ್ಟನ ಸಹವಾಸದಿಂದ ಹುಚ್ಚಿಯಾದಳು; ಕಾಮದ ತೃಷೆಯ ಕೈಗೊಂಬೆಯಾದಳು—ಮಹಾರಾಣಿ; ತಾರ್ಕ್ಷ್ಯನನ್ನು ಬೆರೆತಳು.

III

೧

ಕಾಶಿಯಲ್ಲಿ ತ್ರಸದಸ್ಯು ಅನಿರೀಕ್ಷಿತವಾಗಿ ಸೆರೆಯಲ್ಲಿ ಸಿಕ್ಕಾಗ ಅವನನ್ನು ಬಿಡಿಸಲು ಯತ್ನಿಸುತ್ತಿರುವಲ್ಲಿ ತನ್ನ ಇಡೀ ಜೀವನದಲ್ಲಿ ಘಟಿಸಿದ ಘಟನೆಗಳನ್ನು ಒಂದು ಬಗೆಯ ಸಿಂಹಾವಲೋಕನ ಕ್ರಮದಿಂದ ತಾರ್ಕ್ಷ್ಯ ಜ್ಞಾಪಿಸಿಕೊಳ್ಳುತ್ತಾನೆ:

"ನಾನೇಕೆ ಇಷ್ಟು ಪರವಶನಾಗಿದ್ದೇನೆ? ಅಯೋಧ್ಯೆಗೂ ನನಗೂ ಏನು ಸಂಬಂಧ? ನಾನು ಖಾಸಿಗುಡ್ಡದ ಹುಡುಗನಾಗಿದ್ದೆ. ಮಾಂಧಾತ ಅರಸನಿಗೆ ಅಡವಿಯಲ್ಲಿ ದಾರಿತೋರಿ ಪ್ರಾಗ್ಜ್ಯೋತಿಷ ನಗರಕ್ಕೆ ಒಯ್ದುದಕ್ಕೆ ಮೆಚ್ಚಿ ಅಲ್ಲಿಂದಲೇ ನನ್ನನ್ನು ಅಯೋಧ್ಯೆಗೆ ಕರಕೊಂಡು ಬಂದ. ಅನಂತರ ತಂದೆ ತಾಯಿಗಳನ್ನು ನೋಡಿಲ್ಲ. ಅರಮನೆಯ ಗುಲಾಮನಾಗಿ ಬೆಳೆದೆ. ಪುರುಕುತ್ಸ ಮಹಾರಾಜರ ಕೈಕೆಳಗೆ ಬಾಲ ಪ್ರತಿಹಾರಿಯಾಗಿ ಅಂತಃಪುರದಲ್ಲಿ ಕೆಲಸಮಾಡುತ್ತಿದ್ದೆ. ಮಾಂಧಾತನ ರಾಣಿ ಪ್ರೀತಿಯಿಂದ ಬೆಳೆಸಿದಳು. ಉಳಿದ ಅಂತಃಪುರದ ಬಾಲೆಯರಿಂದ ಜೋಕೆಯಾಗಿ ಕಾಯುತ್ತಿದ್ದಳು. ಪುರುಕುತ್ಸಾನಿ ಅಣ್ಣ ನನ್ನ ಬೆನ್ನಟ್ಟಿದಾಗ ಅಡ್ಡ ನಿಂತದ್ದಕ್ಕಾಗಿ ಬಡಿತ ತಿಂದೆ. ಅಲ್ಲದೆ ತಂದೆಗೆ ಹೇಳಿ ಅಂತಃಪುರದಿಂದ ದೂರಮಾಡಿದಳು. ಕುದುರೆ ಲಾಯದಲ್ಲಿ ಲದ್ದಿ ಎತ್ತುತ್ತ ಮೈತೊಳೆಯುತ್ತ ವರಾಹಕೇಸರದಿಂದ ತೊನಸೆ ಕೆತ್ತುತ್ತ ದೊಡ್ಡವನಾದೆ. ಸಾರಥ್ಯ ಕಲಿತುಕೊಂಡೆ. ರಾಜನ ಸಾರಥಿ ಜೇನೆ ಬಿದ್ದಾಗ ಹದಿನಾಲ್ಕು ವರ್ಷದ ನಾನು ಸಾರಥ್ಯ ವಹಿಸಿ ಮಾಂಧಾತನ ನಚ್ಚಿನ ಸಾರಥಿಯಾದೆ. ಕಾನ್ಯಕುಬ್ಜದ ದಾಳಿಯಲ್ಲಿ ಮಾಂಧಾತನ ಮೇಲೆ ಗುರಿಯಿಟ್ಟು ಹೊಡೆದ ಬಾಣಕ್ಕೆ ಅಡ್ಡ ಭುಜ ಕೊಟ್ಟು ಗಾಯಗೊಂಡು ರಥದಿಂದ ಉರುಳಿದೆ. ಕೋಟೆಗೆ

ಲಗ್ಗೆ ಇಡುವ ಭರದಲ್ಲಿ ಮಾಂಧಾತ ನನ್ನನ್ನು ಸತ್ತನೆಂದೇ ವಿಕಲ್ಪಿಸಿ ಮುಂದೆ ಸಾಗಿದ; ಒಂದು ಕೈಯ್ಯಲ್ಲಿ ಲಗಾಮು, ಇನ್ನೊಂದು ಕೈಯಲ್ಲಿ ಖಡ್ಗ ಹಿಡಿದು, ನಿಜವಾದ ವೀರನಂತೆ. ಅಸುರರು ನನ್ನನ್ನೆತ್ತಿಕೊಂಡು ಅಡವಿಯಲ್ಲಿ ಅವರ ಮನೆಗೆ ಒಯ್ದರು. ಹದಿನಾರು ವರ್ಷದ ನಾನು ಅವರಲ್ಲೇ ನಾಲ್ಕು ವರ್ಷ ಇದ್ದುಕೊಂಡು ಶಂಬರಾಸುರನ ತಾತನಿಂದ ಅವರ ಗುಪ್ತವಿದ್ಯೆಗಳನ್ನು ಕಲಿತೆ. ಶಂಬರಾಸುರನ ಹಿರಿಯ ಅಕ್ಕ ನನ್ನನ್ನು ಮೋಹಿಸಿ ಉಪಚರಿಸಿದಳು. ಹಿರಿಯರ ಕಣ್ಣು ತಪ್ಪಿಸಿ ಅಡವಿಗೆ ಎಳೆಯುತ್ತಿದ್ದಳು. ತಂಗಿಯರ ಲಗ್ನವಾಗಿ ತನ್ನನ್ನು ಯಾರೂ ವರಿಸಲಿಲ್ಲವಾದ್ದರಿಂದ ತನಗೆ ಸ್ವಯಂವರದ ಅಧಿಕಾರವಿದೆ ಎಂದು ಹೇಳುತ್ತಿದ್ದಳು. ಆಕೆಯ ಸಂತೃಪ್ತಿಗಾಗಿ ನಾನು ಹೆಣ್ಣು ಕುದುರೆಯ ಹಾಲು ಕುಡಿದು ವೀರ್ಯವಂತನಾದೆ. ಆದರೆ ಜೊತೆಗೆ ಹೆಣ್ಣಿನ ಸಂಯೋಗವೂ ಬೇಡವಾಯಿತು. ತಾತನಿಗೆ ನನ್ನನ್ನು ಲಗ್ನವಾಗುತ್ತೇನೆಂದು ಆಕೆ ಹೇಳಿದಾಗ, ಊರೆ ನನ್ನನ್ನು ವಿರೋಧಿಸಿ ಅಲ್ಲಿಂದ ಉಚ್ಚಾಟನೆಗೊಳಿಸಿತು. ಅಯೋಧ್ಯೆಗೆ ಮರಳಿದೆ. ಮಾಂಧಾತ ಸೋಜಿಗಪಟ್ಟು ಮತ್ತೆ ಆಸರೆಕೊಟ್ಟ. ಪುರುಕುತ್ಸ ರಾಜನಾದ ಮೇಲೆ ವಿಟನಾಗಿ ವೇಶ್ಯೆಯರನ್ನು ತಂದು ಒಪ್ಪಿಸುವ ಕೆಲಸ ಕೈಕೊಂಡೆ. ಮಾಂಧಾತನಂಥ ಲೋಕೈಕ ವೀರನಿಗೆ ಇಂಥಸ್ತ್ರೈಣ ಮಗನಾಗಬೇಕೆ? ಮಗಳಲ್ಲಿ ಅವನ ಅಂಶ ಕಂಡೆ. ಮಹಾರಾಣಿ ಪುರುಕುತ್ಸಾನಿ ಒಂದೇ ದಿನದ ಧೀರಕರ್ಮದಿಂದ ರಾಜ್ಯ ಸೂತ್ರವಹಿಸಿಕೊಂಡಳು. ಯಾವ ಕ್ಷಣ ಏನು ಮಾಡಬೇಕೆಂಬುದನ್ನು ಅರಿತ ಆ ಧೀರೆ ಇಲ್ಲಿಯವರೆಗೆ ನನಗೆ ತಕ್ಕ ಹೊಣೆ ಒಪ್ಪಿಸುತ್ತ, ನನ್ನ ಕೆಲಸದ ಪರಿಣಾಮಗಳನ್ನಷ್ಟೇ ನೋಡುತ್ತ, ನಿವೃತ್ತನಾಗಬಯಸುವ ನನ್ನ ಎಲ್ಲ ಯತ್ನಗಳನ್ನು ವಿಫಲಗೊಳಿಸಿದಳು. ಬಾಲ್ಯದ ಒಂದು ಅಪಚಾರವನ್ನು ಬಿಟ್ಟರೆ, ಜೀವನದಾದ್ಯಂತ ನನಗೆ ಭಕ್ತಿಯ ವಿಷಯಳಾದಳು. ನಿಷ್ಠ ಸೇವೆಪಡೆದಳು. ಕೊನೆಗೆ ತನ್ನ ಹಾಸಿಗೆಯಲ್ಲೂ ಕರೆದುಕೊಂಡಳು. ನಾನೇಕೆ ಪುರುಕುತ್ಸನನ್ನು ವಧೆ ಮಾಡಿದೆ?—ಆಕೆಯ ಕಲ್ಯಾಣಕ್ಕಾಗಿ, ಬದುಕಿದ್ದರೆ, ಆಕೆಗೆ ಮೀರಿದ ಸಮಸ್ಯೆಗಳನ್ನು ತಂದೊಡ್ಡುತ್ತಿದ್ದ. ತಾನು ಎಂಥ ಸಮಸ್ಯೆಯೆಂಬುದನ್ನು ತಾನೇ ಅರಿಯ. ರಾಣಿಗೆ ಗೊತ್ತಿಲ್ಲವಾದರೂ ಆಕೆಯ ಪತಿಯ ಹಂತಕನಾದ ನಾನು ಆಕೆಯ ಹಾಸಿಗೆಯ ಮೇಲೆ ನೊಂದುಕೊಳ್ಳುತ್ತೇನೆ. ಯಾವುದೋ ಅಳುಕು ಬಾಧಿಸುತ್ತದೆ. ಈಗ ತ್ರಸದಸ್ಯು ಸೆರೆಯಾಳಾಗಿದ್ದಾನೆ. ಅವನು ಪಾರಾಗುವುದಾದರೆ ನಾನು ಬದುಕಬಹುದು. ಈಗಾಗಲೆ ಅವನು ಸತ್ತಿದ್ದರೆ, ನಾನು ರಾಣಿಗೆ ಮುಖ ತೋರಲಾರೆ. ಖಚಿತಪಡಿಸಿಕೊಂಡು ಅಸುರನು ಕಲಿಸಿದ ವಿಷಪ್ರಾಶನಮಾಡಿ ನಾನೂ ಸಾಯುತ್ತೇನೆ. ಅಯೋಧ್ಯೆಗಾಗಿ ಅಲ್ಲ, ಪುರುಕುತ್ಸಾನಿಗಾಗಿ; ಇಡೀ ಜೀವನದ ಚಿತ್ರಗಳು ಅವನ ಸುಪ್ತಚೇತನದ ಎದಿರು ದಿಗ್ಗನೆ ಎದ್ದುನಿಂತು ಅವನನ್ನು ಅಧೀರನನ್ನಾಗಿ ಮಾಡಿದವು." ಭೂತದ ಪೆಡಂಭೂತ ಆಕೃತಿಗಳನ್ನು ಅವನು ಇದುವರೆಗೆ ಎಂದೂ ನೋಡಿದ್ದಿಲ್ಲ.

೨

ಭೂತದಿಂದ ಭವಿಷ್ಯತ್ತಿಗೆ ಇಳಿದ–ತಾರ್ಕ್ಷ್ಯ; ಕಾಶಿಯಲ್ಲಿ, ಕೈದೀಖಾನೆಯಲ್ಲಿ ಬಂಧಿತನಾಗಿರುವ ತ್ರಸದಸ್ಯುವನ್ನು ಉಳಿಸುವ ಬಗೆಯ ಚಿಂತನೆಯಲ್ಲಿ. ಅಯೋಧ್ಯೆಯ

ಆರು ಸೈನಿಕರು ಅಥವಾ ತ್ರಿಸಾನುಗಳ (ಅಯೋಧ್ಯೆಯ ನ್ಯಾಯಾಧೀಶ) ಅಜಾಗರೂಕತೆಯಿಂದ ಒಳಗಿನ ಕಾವಲುಗಾರರಿಗೆ ಈ ಸೆರೆಯಾಳು ಅಯೋಧ್ಯೆಯ ಅರಸ ಎಂದು ಗೊತ್ತಾದರೆ ಕಠಿಣ. ಈಗಾಗಲೆ ಕೋಟೆಯ ಒಳಗಿನ ಕದನಕ್ಕೆ ತ್ರಸದಸ್ಯು ಬಲಿಯಾಗಿದ್ದರೆ ಅದಂತೂ ಹೇಳಲಾಗದ ದುರಂತ. ಕಾಶಿಯಲ್ಲಿ ಇರುವಾಗ ಅದನ್ನು ಸ್ಪಷ್ಟ ಮಾಡಿಕೊಳ್ಳಲಿಕ್ಕೆ ಮಾರ್ಗ ಇದ್ದಿಲ್ಲ. ಇಡಿ ಆಯುಷ್ಯದ ಸೇವೆ ಒಂದು ಕ್ಷಣದ ಅಜಾಗರೂಕತೆಯಿಂದ ವಿಷವಾಗುವ ಸಂದರ್ಭ. ಅದನ್ನು ನೆನಸಿ ತಾರ್ಕ್ಷ್ಯ ವಿಹ್ವಲನಾದ. ಆದರೂ ಮಹಾರಾಣಿಗೆ ತಿಳಿಸದೆ ಇರಲು ಸಾಧ್ಯವಿದ್ದಿಲ್ಲ. ದೇವರ ಮೇಲೆ ಭಾರ ಹಾಕಿ ಎಲ್ಲ ವರದಿಯನ್ನೂ ರಾಣಿಗೆ ಒಪ್ಪಿಸಿದ. ರಾಣಿ ಶಾಂತ ಮನಸ್ಸಿನಿಂದ ಕೇಳಿದಳು. ಸ್ತ್ರೀ ಸಹಜ ಗುಣದಿಂದ ತನ್ನ ಈಡೇರಿಸದ ಪಶುಪತಿನಾಥನ ದರ್ಶನಕ್ಕೆ ಹೋಗುವ ಸಂಕಲ್ಪವನ್ನು ಮಹಾರಾಣಿ ಜ್ಞಾಪಿಸಿಕೊಂಡಳು. ಒಳಗೆ ಹೋಗಿ ದೇವರಿಗೆ ದೀಪಹಚ್ಚಿ ನಾಣ್ಯವೊಂದನ್ನು ಮುಡಿಪು ಕಟ್ಟಿಟ್ಟಳು. "ದೇವರೇ ಪಶುಪತಿನಾಥ! ನನ್ನ ಮಗನನ್ನು ಸಂರಕ್ಷಿಸು. ಮುಂದಿನ ಕಾರ್ತೀಕ ಏಕಾದಶಿಗೆ ಪಶುಪತಿನಾಥನಿಗೆ ಸಹಸ್ರದೀಪ ಬೆಳಗಿ ಸಹಸ್ರ ಬ್ರಾಹ್ಮಣ ಭೋಜನ ಮಾಡಿಸುತ್ತೇನೆ, ಕರುಣಿಸು" ಎಂದು ಬೇಡಿಕೊಂಡಳು.

"ಎಲ್ಲಿಯವರೆಗೆ ಪರಿಸ್ಥಿತಿ ವಿಚಾರದ ಸಾಧ್ಯಾಸಾಧ್ಯತೆಯ ಅಂಕೆಯಲ್ಲಿ ಇರುತ್ತದೆ; ಅಲ್ಲಿಯವರೆಗೆ ವೈಚಾರಿಕತೆ ಕೆಲಸಮಾಡಬಲ್ಲದು.

ಎಲ್ಲಿ ವಿಚಾರದ ಅಂಕೆಗೆ ಸಿಕ್ಕದ ತೊಡಕು ಉಂಟಾಗುತ್ತದೆ ಅಲ್ಲಿ....ಬುದ್ಧಿವಂತ ಕಂಗೆಡುತ್ತಾನೆ.

ದೇವರನ್ನು ನಂಬದವನಿಗೆ ದೇವರೇ ಗತಿ. ಒಳಗೆಯೆ ಕನಲಿಬೆಂಡಾಗುತ್ತಾನೆ."

ತಾರ್ಕ್ಷ್ಯ ತನ್ನ ಅಂತರಾಳದ ಚಿಂತನೆಯ ಕಳವಳದ ಭಾಂಡಾರವನ್ನು ರಾಣಿಯ ಮುಂದೆ ಸುರುವಿ ಬರಿದಾಗಿದ್ದ; ಮುಂದಿನ ಚಿಂತನೆಗೆ ಅಣಿಯಾಗಿದ್ದ.

೩

ಮರುದಿನ ತಾರ್ಕ್ಷ್ಯ ಶಂಬರಾಸುರ–ನಿಕುಂಭಾಸುರ ಜೊತೆಗೆ ರಥದಲ್ಲಿ ಮುಸುಕಿನಲ್ಲಿ ಕುಳಿತಿದ್ದ ಅವರ ಭುಶುಂಡಿ (explosive material=ಸಿಡಿಮದ್ದು) ಇತ್ಯಾದಿಗಳನ್ನು ತೆಗೆದುಕೊಂಡು ಕಾಶಿಗೆ ಹೋಗಲು ಸಿದ್ಧನಾದ. ಅಸುರರು ರಾಣಿಗೆ ತ್ರಸದಸ್ಯುವನ್ನು ಬಿಡಿಸಿಕೊಂಡು ಬರುವುದಾಗಿ ತಮ್ಮ ದೇವತೆಗಳಾದ ಅರ್ತೀಮಿದೇವಿ, ನಕುಲೀಶದೇವ—ಇವರನ್ನು ಸ್ಮರಿಸಿ ಹೇಳಿದರು. ಮಹಾದೇವಿ ಅವರನ್ನು ಹರಸಿದಳು. ಕಾಶೀ ಕೋಟೆಯನ್ನು ಭುಶುಂಡಿಯ ಸಹಾಯದಿಂದ ವಶಪಡಿಸಿಕೊಂಡರು, ತ್ರಸದಸ್ಯುವನ್ನು ಬಿಡಿಸಿಕೊಂಡರು. ಆದರೆ ಆ ಕಾರ್ಯಾಚರಣೆಯಲ್ಲಿ ಶಂಬರಾಸುರ ಸತ್ತುಹೋದ. ಅವನ ದೇಹವನ್ನು ಅಯೋಧ್ಯೆಗೆ ತಂದು ರಾಜಮರ್ಯಾದೆಯಿಂದ ಶವಸಂಸ್ಕಾರ ಮಾಡಿದರು. ಮಹಾರಾಣಿ ಮೊದಲಾಗಿ ಎಲ್ಲರೂ ಮೃತನಿಗೆ ತಮ್ಮ ಶ್ರದ್ಧೆಯನ್ನು ಅರ್ಪಿಸಿದರು.

೪

ತ್ರಸದಸ್ಯು, ಜಾಬಾಲಿಋಷಿಯ ಹಾಗೆ ತನ್ನ ತಾಯಿಗೆ ತನ್ನ ಜನನದ ಬಗ್ಗೆ ಸಂದೇಹ ಮೂಡಿದಾಗ ತಾನಾರ ಮಗನೆಂದು ಕೇಳಿದ್ದ. ಮಹಾರಾಣಿ ಜಬಲಾ ಹೇಳಿದ

ಹಾಗೆ ಸತ್ಯ ಹೇಳದೆ ಅವನು ಪುರುಕುತ್ಸನ ಮಗನೆಂದೂ ಮೈತ್ರಾವರುಣಿಯ ವರದಿಂದ ಹುಟ್ಟಿದವನೆಂದೂ ಕೋಪಕ್ರೋಧದಲ್ಲಿ ಸಿದ್ಧಪಡಿಸಿದಳು; ಒಪ್ಪುವಂತೆ ಮಾಡಿದಳು. "ಅವನಲ್ಲಿ ಪ್ರವೇಶಿಸಿದ ಮೈತ್ರಾವರುಣಿಯ ದರ್ಶನವು ಅಪಾರವಾದ ಶ್ರದ್ಧೆಯಿಂದ ತುಂಬಿಬಿಟ್ಟಿತು. ತಾನು ಅರ್ಧದೇವನೆಂದು ಸಿದ್ಧಗೊಳಿಸುವದರಲ್ಲೇ ಅನೇಕ ಯಜ್ಞ ಯಾಗಾದಿಗಳನ್ನು ಮಾಡಿದನು." ಹಿಮಾಲಯದಿಂದ ಹಿಂತುರಿಗಿದ ವಾಮದೇವ ಮಹರ್ಷಿಗಳು ಅವನ ದಾನಶೂರತ್ವವನ್ನು ವೇದಗಳ ಮಂತ್ರಗಳಲ್ಲಿ ಹಾಡಿಹೊಗಳಿದರು. ಆರು ವರುಷದ ಮೇಲೆ ಪುರುಕುತ್ಸಾನಿ ಆಮ್ರವನದಲ್ಲಿ ಹಾವು ಕಚ್ಚಿ ಸತ್ತಳು. ಅನಂತರ ತಾರ್ಕ್ಷ್ಯನು ಹತ್ತು ವರ್ಷ ಬದುಕಿದ್ದ. ತ್ರಸದಸ್ಯುವಿಗೆ ತಂದೆ–ತಾಯಿ–ಗುರು–ಮಂತ್ರಿ ಆಗಿ ಅಯೋಧ್ಯೆಯನ್ನು ಸ್ತಿಮಿತಕ್ಕೆ ತಂದಿದ್ದ. ತ್ರಸದಸ್ಯುವಿನ ಮಗನಿಗೆ ತಮ್ಮ ತಂದೆಯ ಹೆಸರೇ ಇಟ್ಟಿದ್ದ—ತೃಕ್ಷ!

*   *   *

ವಾಸ್ತವದಲ್ಲಿ ಈ ಕಾದಂಬರಿ ತ್ರಿಕೋನವಲ್ಲ, ಷಡ್ಭುಜ. ಇಲ್ಲಿ ಇಬ್ಬರು ನಾಯಕರು: ಪುರುಕುತ್ಸ, ತ್ರಸದಸ್ಯು; ಇಬ್ಬರು ನಾಯಕಿಯರು: ಪುರುಕುತ್ಸಾನಿ, ಮೃಗನಯನೆ; ಮತ್ತು ಇಬ್ಬರು ಖಳನಾಯಕರು: ಭದ್ರಾಯು ಮತ್ತು ತಾರ್ಕ್ಷ್ಯ. ಈ ಯಾವ ಪಾತ್ರಗಳೂ, ಹೆಸರುಗಳನ್ನು ಬಿಟ್ಟರೆ, ಇದುವರೆಗೆ ದೊರೆತ ಯಾವ ಆಕರಗಳಿಗೂ ಸರಿಯಾಗಿ ಹೊಂದುವುದಿಲ್ಲ. ತೌಲನಿಕ ಅಧ್ಯಯನ ತಲೆಕೆಳಗಾಗುತ್ತದೆ. ಇದು ವಿ. ಎಸ್. ಖಾಂಡೇಕರರ 'ಯಯಾತಿ'ಯ ಎತ್ತರಕ್ಕೆ ಏರಲು ಹವಣಿಸುತ್ತದೆ. ಏರಲಿ ಬಿಡಲಿ ಓದುಗನಿಗೆ ಲಫಂಗತನದ ಕಿಂಚಿತ್ ಖುಷಿಯಂತೂ ಕೊಡುತ್ತದೆ. ಬ್ರಾಹ್ಮಣರ ಅಲ್ಪತನವನ್ನು ಬಯಲಿಗೆಳೆದಿದೆ. ಆಶೆ, ಆಮಿಷ, ಸ್ವಾರ್ಥಸಾಧನೆ ಎಲ್ಲ ಜೀವಗಳಿಗೂ ಸಮಾನವಲ್ಲವೆ?

ಕೆಟ್ಟದ್ದನ್ನು ಮಾಡದಿರಬೇಕಾದರೆ ಕೆಟ್ಟದ್ದರಿಂದ ಪೂರ್ಣವಾಗಿ ದೂರವಿರಬೇಕು.

ಗಾಂಧೀಜಿ

ನೆಹರೂ ಶತಾಬ್ಧಿ ವರ್ಷ

ಪಂಡಿತ ಜವಾಹರಲಾಲ ನೆಹರೂ— ಕೆಲವು ನೆನಪುಗಳು

ಡಾ. ಹರಿದತ್ತ ಭಟ್ಟ ಶೈಲೇಶ

ಡೆಹರಾಡೂನಿನ ಪೆವಿಲಿಯನ್ ಮೈದಾನದಲ್ಲಿ ಪಂಡಿತ ಜವಹರ ಲಾಲ ನೆಹರೂರವರ ಭಾಷಣ. ಎಲ್ಲಿ ನೋಡಿದರೂ ಜನಗಳ ನೂಕುನುಗ್ಗಲು. ಆ ಕಾಲದಲ್ಲಿ ಜನ ಹೀಗೆ ತಾವಾಗಿಯೇ ಸೇರುತ್ತಿದ್ದರು. ಇವತ್ತಿನಂತಹ ಪರಿಸ್ಥಿತಿ ಇರಲಿಲ್ಲ. ವಾರಗಟ್ಟಲೆ ಮೊದಲಿನಿಂದ ಭರಾಟೆಯ ಪ್ರಚಾರ, ಎಲ್ಲೆಂದರಲ್ಲಿ ಭಿತ್ತಿಪತ್ರಗಳ ಸುರಿಮಳೆ ಇರುತ್ತಿರಲಿಲ್ಲ. ಬಸ್ಸು, ರೈಲು, ಲಾರಿಗಳಲ್ಲಿ ಜನ ಹಿಂಡುಹಿಂಡಾಗಿ ಕುಳಿತು ಬರುತ್ತಿರಲಿಲ್ಲ. ಭದ್ರತಾಪಡೆಯ ಅಂಗರಕ್ಷಕರ ಹಾಗೂ ಪೋಲಿಸು ಸಿಬ್ಬಂದಿಯ ಗುಂಪುಗುಂಪೇ ನೆರೆಯುತ್ತಿರಲಿಲ್ಲ. ಅಂದಿಗೂ ಇಂದಿಗೂ ಭೂಮ್ಯಾಕಾಶಗಳಷ್ಟು ವ್ಯತ್ಯಾಸ.

ಪೆವಿಲಿಯನ್ ಜನರಿಂದ ಜಿಗಿಜಿಗಿ ತುಂಬಿಹೋಗಿತ್ತು. ಎಲ್ಲೂ ಸೂಜಿಯ ಮೊನೆಯಷ್ಟು ಜಾಗ ಸಹ ಇಲ್ಲ. ಪಂಡಿತ ನೆಹರೂರವರು ವೇದಿಕೆಯ ಮೇಲೆ ಬಂದು ಭಾಷಣ ಮಾಡತೊಡಗಿದರು. ಬಯಲಿನಲ್ಲಿ ಕುಳಿತ ನಾಲ್ಕಾರು ಜನ ಒಂದೆಡೆಯಲ್ಲಿದ್ದವರು ಏಕೋ ಏನೋ ಗುಸುಗುಸು ಮಾತಿನಲ್ಲಿ ತೊಡಗಿದ್ದರು. ಅವರ ಮಾತು ಹೆಚ್ಚಾದಾಗ ಡೂನ್‌ಘಟ್ಟಗಳ ಹುಲಿಯೆನಿಸಿದ್ದ ಮಹಾವೀರ ತ್ಯಾಗಿಯವರು ಕೈಸನ್ನೆ ಮಾಡಿದರೂ ಏನೂ ಪ್ರಯೋಜನವಾಗಲಿಲ್ಲ. ಆ ಜನರಿಗೆ ಅದು ಗೊತ್ತಾಗಲೇ ಇಲ್ಲವೆನಿಸುತ್ತದೆ. ಇದ್ದಕ್ಕಿದ್ದಂತೆ ಪಂಡಿತ ನೆಹರೂರವರ ಗಮನ ಅತ್ತ ಹರಿದಾಗ ಬಿರುಗಾಳಿಯೇ ಬೀಸಿದಂತಾಯಿತು. ಅವರು ಹಿಂದೆ ಮುಂದೆ

೧೯೮೯ ಫೆಬ್ರವರಿ ತಿಂಗಳ 'ನವನೀತ'ದಲ್ಲಿ ಪ್ರಕಟವಾದ ಡಾ. ಹರಿದತ್ತ ಭಟ್ಟ 'ಶೈಲೇಶ' ಅವರ 'ಪಂಡಿತ ಜವಾಹರಲಾಲ್ ನೆಹರೂ; ಕುಛ್ ಝುಲಕಿಂಯಾಂ' ಲೇಖನದ ಅನುವಾದ.

ನೋಡದೆ ಒಂದೇ ಬಾರಿಗೆ ವೇದಿಕೆಯಿಂದ ಧುಮುಕಿ ನೇರವಾಗಿ ಮಾತನಾಡುತ್ತಿದ್ದ ಆ ಗುಂಪಿನ ಹತ್ತಿರ ಹೊರಟುಹೋದರು. ನೆಹರೂರವರನ್ನು ಸಾಕ್ಷಾತ್ ಎದುರಿಗೆ ಕಂಡಾಗ ಆ ಮಂದಿ ಹಾವು ಮುಟ್ಟಿದಷ್ಟು ಸ್ತಬ್ಧರಾದರು. ಸೊಲ್ಲಡಗಿಹೋಯಿತು. ತತ್ಕ್ಷಣ ಶಾಂತಿ ನೆಲೆಸಿತು. ಸುಮಾರು ಒಂದು ಗಂಟೆಯ ಕಾಲ ಪಂಡಿತಜೀಯವರ ಭಾಷಣ ಸಾಗಿತು. ಆದರೆ ಮಧ್ಯದಲ್ಲಿ ಗುಸುಗುಸು ಮಾತನಾಡಲು ಯಾರಿಗೆ ತಾನೇ ಧೈರ್ಯ! ಹಾಗಾಗಿ ಈ ದೃಶ್ಯ ಕಣ್ಣಮುಂದೆ ಸುಳಿದಾಡುತ್ತದೆ.

೧೯೪೮ರ ಇಸವಿಯ ಮಾತು. ಮಸೂರಿಯಲ್ಲಿ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಚಟುವಟಿಕೆ ಕಂಡುಬರುತ್ತಿತ್ತು. ಪಂಡಿತ ನೆಹರೂ, ಡಾ. ರಾಜೇಂದ್ರ ಪ್ರಸಾದ್, ಸರದಾರ್ ಪಟೇಲ್, ಪಂಡಿತ ಪಂತ್ ಮುಂತಾದ ದೊಡ್ಡ ದೊಡ್ಡ ನಾಯಕರೆಲ್ಲ ಸೇರುವವರಿದ್ದರು. ವಿಶೇಷವಾದ ಒಂದು ಸಭೆ ನಡೆಯಲಿತ್ತು.

ಪಂಡಿತ್ ನೆಹರೂರವರು ನಿಗದಿಯಾದ ಸ್ಥಳವನ್ನು ತಲುಪಿದರು. ಸಭೆ ನಡೆಯುವ ಜಾಗಕ್ಕೆ ಅವರನ್ನು ಕೊಂಡೊಯ್ಯಲು ಅಲಂಕರಿಸಿದ ಇನ್ನೊಂದು ಕಾರು ಪಕ್ಕದಲ್ಲಿ ನಿಂತಿತ್ತು. ಆದರೆ ನೆಹರೂರವರು ಕುದುರೆಯ ಮೇಲೆ ಕುಳಿತು ಹೋಗಬಯಸಿದರು. ಸ್ವಲ್ಪಹೊತ್ತಿನಲ್ಲಿ ಕುದುರೆ ಸಹ ತಯಾರಾಯಿತು. ನೆಹರೂಜೀ ಕುದುರೆಯ ಮೇಲೆ ಕುಳಿತು ಹೊರಟರು. ಉಳಿದವರೆಲ್ಲ ಅವರ ಹಿಂದೆ ಹಿಂದೆ.

ಸಭೆ ಮುಗಿದ ಮೇಲೆ ನೆಹರೂರವರು ಕುದುರೆಯ ಮೇಲೆ ಕುಳಿತೇ ತಾವು ಹೊರಟ ಜಾಗಕ್ಕೆ ಹಿಂದಿರುಗಿದರು. ಅಲ್ಲಿಂದ ಅವರು ಮಾಲ್‌ರೋಡ್ ಎಂಬ ರಸ್ತೆಯ ಮೂಲಕ ಹಾದು ಹೋಗುವ ಕಾರ್ಯಕ್ರಮವಿತ್ತು. ಅವರಿಗಾಗಿ ಕಾರು ಸಿದ್ಧವಾಗಿ ನಿಂತಿತ್ತು. ಆದರೆ ನೆಹರೂ ಇದ್ದಕ್ಕಿದ್ದಂತೆ ಅಂದರು—'ಮಾಲ್‌ರೋಡಿನ ಮೇಲೆ ಕಾರಿನಲ್ಲಿ ಹೋಗಲು ನಿಷೇಧವಿದೆ. ಹಾಗಿದ್ದಲ್ಲಿ ನಾನು ಹೇಗೆ ಹೋಗಬಲ್ಲೆ?' ಅವರು ಸರಸರ ಹೆಜ್ಜೆ ಹಾಕುತ್ತಾ ನಡೆದು ಹೋಗಲಾರಂಭಿಸಿದರು. ಯಾರಿಗೇ ಆಗಲಿ ಏನಾದರೂ ಹೇಳುವ ಧೈರ್ಯವೆಲ್ಲಿ?

ಮಾಲ್‌ರೋಡಿನಲ್ಲಿ ಸ್ವಲ್ಪ ಹೊತ್ತಿನಲ್ಲಿಯೇ ಒಂದು ಕಾರು ಕಾಣಿಸಿಕೊಂಡಿತು. ನೆಹರೂಜಿ ತಮ್ಮ ಕೈಯಲ್ಲಿದ್ದ ಬೆತ್ತವನ್ನು ಅಡ್ಡಹಿಡಿದು ಕಾರು ನಿಲ್ಲಿಸಿದರು. ಒಳಗೆ ನೋಡುತ್ತಾರೆ, ಡಾ. ರಾಜೇಂದ್ರಬಾಬು ಕುಳಿತಿದ್ದಾರೆ. ಜೊತೆಯಲ್ಲಿ ಒಬ್ಬರು ಡಾಕ್ಟರು ಬೇರೆ. ಡಾಕ್ಟರು ಕೂಡಲೇ ನೆಹರೂ ಅವರಿಗೆ ಸಮಜಾಯಿಷಿ ನೀಡುತ್ತಾ ಡಾ. ರಾಜೇಂದ್ರ ಬಾಬು ಉಬ್ಬಸದ ರೋಗಿ ಎಂದು ಹೇಳಿದರು. ಅವರ ಆರೋಗ್ಯ ಚೆನ್ನಾಗಿಲ್ಲದ್ದರಿಂದ ನಡೆಯಲು ಕಷ್ಟವೆಂದು ಸಹ ಹೇಳಿದರು. ಅವರ ಕಾರು ಮುಂದೆ ಹೋಯಿತು. ನೆಹರೂ ಅಲ್ಲಿಯ ವಾತಾವರಣವನ್ನು ಸಂತೋಷದಿಂದ ನೋಡುತ್ತಾ ನಗುನಗುತ್ತಲೇ ಮುಂದೆ ಹೆಜ್ಜೆಹಾಕುತ್ತಿದ್ದರು. ಅಷ್ಟರಲ್ಲಿ ದಡದಡ ಸದ್ದು ಮಾಡುತ್ತಾ ಇನ್ನೊಂದು ಕಾರು ಬಂತು. ನೆಹರೂ ಕೋಪಗೊಂಡು ತಮ್ಮ ಬೆತ್ತದಿಂದ ಕಾರಿನ ಮುಂಭಾಗಕ್ಕೆ ಹೊಡೆದು ನಿಲ್ಲಿಸಿದರು. ನೋಡುತ್ತಾರೆ—ಪಂಡಿತ ಪಂತ್ ಅವರು ಒಳಗೆ ವಿರಾಜಮಾನರಾಗಿದ್ದಾರೆ. ಅಷ್ಟೆ, ಇನ್ನೇನು ತಾನೇ ಹೇಳುವುದು. ನೆಹರೂ ಲೇವಡಿಮಾಡುತ್ತ ಅಂದರು—'ಆಹಾ ನೋಡಿ ಉತ್ತರಪ್ರದೇಶದ ಸರಕಾರವೇ ಬರುತ್ತಿದೆಯಲ್ಲಾ! ಅಂದ

ಮೇಲೆ ಮಾಲ್‌ರೋಡಿನಲ್ಲಿ ಕಾರು ನಡೆಸದಂತೆ ಇವರನ್ನು ಯಾರುತಾನೇ ತಡೆಯ ಬಲ್ಲರು?'

ಪಾಪ, ಪಂತರು ಸಂಕೋಚಪಡುತ್ತಲೇ ಕಾರಿನಿಂದ ಹೊರಗಿಳಿದು ನೆಹರೂರವರ ಜೊತೆಯಲ್ಲಿ ಹೆಜ್ಜೆ ಹಾಕತೊಡಗಿದರು. ನೆಹರೂ ಕೂಡಲೇ ಕಾರನ್ನು ಹಿಂದಕ್ಕೆ ಕಳಿಸಿ ಬಿಟ್ಟರು. ಮಾಲ್‌ರೋಡಿನಲ್ಲಿ ಕಾರು ನಡೆಸಲು ನಿಷೇಧವಿದೆಯೆಂದು ಚಾಲಕನಿಗೆ ಒತ್ತಿ ಹೇಳಿದರು.

* * *

ಪಂಡಿತ ನೆಹರೂ ಸರ್ಕಿಟ್‌ಹೌಸಿನಲ್ಲಿ ತಂಗಿದ್ದರು. ನಾಲ್ಕೂ ಕಡೆಗಳಲ್ಲಿ ಎಲ್ಲಿ ನೋಡಿದರೂ ಹಚ್ಚಹಸಿರು. ಆ ದಿನಗಳಲ್ಲಿ ಡೆಹರಾಡೂನಿನ ಹವಾಗುಣ ಕಣ್ಣು ಮುಚ್ಚಾಲೆಯಾಡುತ್ತಿತ್ತು. ಸ್ವಲ್ಪ ಬಿಸಿಲು ಬಿತ್ತೋ ಇಲ್ಲವೋ ಎನ್ನುವಷ್ಟರಲ್ಲಿ ಬಿರುಗಾಳಿ ಜೋರುಮಳೆ ಶುರುವಾಗುತ್ತಿತ್ತು. ಸುಂಟರಗಾಳಿಯ ಕಾರಣದಿಂದ ಮಾವಿನ ಕಾಯಿಗಳು ಮರದಿಂದ ಬೀಳತೊಡಗಿದವು. ಪ್ರವಾಸಿಗೃಹದ ಕಾವಲುಗಾರ ರಾಮು ಪ್ರಸಾದ ತರಾತುರಿಯಿಂದ ಮಾವಿನಕಾಯಿಗಳನ್ನು ಆರಿಸತೊಡಗಿದ. ಪಂಡಿತಜೀಯವರಿಗೆ ಮಾವಿನಕಾಯಿಯ ರಸ ತುಂಬಾ ಇಷ್ಟವೆಂದು ಅವನಿಗೆ ಗೊತ್ತಿತ್ತು.

ಅಲ್ಲೇ ಅಡ್ಡಾಡುತ್ತಿದ್ದ ಪಂಡಿತ ನೆಹರೂ ರಾಮುಪ್ರಸಾದನನ್ನು ನೋಡಿ ಪ್ರಶ್ನೆ ಮಾಡಿದರು—'ಮಾವಿನಕಾಯಿ ಏಕೆ ಆರಿಸುತ್ತಿದ್ದಿ ?'

'ತಮಗೋಸ್ಕರ.'

'ಬೇಡ ಬೇಡ, ಇವೆಲ್ಲಾ ಗುತ್ತಿಗೆದಾರನಿಗೆ ಸೇರಿದ್ದು. ಗುತ್ತಿಗೆದಾರ ತೋಟದ ಗುತ್ತಿಗೆ ಹಿಡಿದಿರುತ್ತಾನೆ.'

ಬಡಪಾಯಿ ರಾಮುಪ್ರಸಾದ ಏನು ಮಾಡಲೂ ತೋರದೆ ನಿಂತುಬಿಟ್ಟ, ನೆಹರುರವರು ಸಣ್ಣ ಸಣ್ಣ ವಿಚಾರಗಳಲ್ಲೂ ಎಷ್ಟು ಗಮನ ಹರಿಸುತ್ತಾರೆ ಎಂಬುದು ಮನವರಿಕೆಗೊಂಡಾಗ ಅವನಿಗೆ ಆಶ್ಚರ್ಯವಾಗಿತ್ತು.

ನೆಹರೂಜಿ ಗರ್ಮಿಯಲ್ಲಿ ಡೆಹರಾಡೂನಿಗೆ ಬಂದಿದ್ದರು. ಸರ್ಕೀಟ್ ಹೌಸಿನಲ್ಲಿ ಅವರು ತಂಗಲು ಏರ್ಪಾಟು ಮಾಡಲಾಗಿತ್ತು. ಅವರ ಆರೋಗ್ಯ ಬೇರೆ ಸ್ವಲ್ಪ ಸರಿಯಾಗಿರಲಿಲ್ಲ. ಒಂದುಕಡೆ ಸರಕಾರಿ ಕೆಲಸಗಳ ನಡುವೆ ಉಸಿರಾಡಲೂ ಪುರುಸೊತ್ತಿಲ್ಲದಷ್ಟು ಪರಿಸ್ಥಿತಿ. ಇನ್ನೊಂಡೆಡೆ ರಾಜಧಾನಿಯ ಗಿಜಿಗಿಜಿ ವಾತಾವರಣ. ಇವುಗಳಿಂದ ದೂರವಾಗಿ ನಾಲ್ಕಾರು ದಿನ ವಿಶ್ರಮಿಸಿಕೊಳ್ಳಲು ಅವರಿಗೆ ಇಷ್ಟವಾಗಿತ್ತು. ಹಾಗಾಗಿ ಅಂತಹ ಸಂದರ್ಭಗಳಲ್ಲಿ ಹೆಚ್ಚು ಗದ್ದಲಕ್ಕೆ ಅವಕಾಶಕೊಡದೆ ಡೆಹರಾಡೂನಿಗೆ ಬಂದುಬಿಡುತ್ತಿದ್ದರು. ಈ ಬಾರಿ ಅವರು ಬರುವ ವಿಚಾರ ಹೆಚ್ಚು ಜನಕ್ಕೆ ತಿಳಿಯುವ ಅವಕಾಶವಿರಲಿಲ್ಲ. ಆದ್ದರಿಂದ ಯಾವುದೇ ಬಗೆಯ ಕಾವಲು ಸಿಬ್ಬಂದಿ, ಅಧಿಕಾರಿಗಳ ಓಡಾಟ, ರಸ್ತೆಗಳ ಮೇಲೆ ಸಿಪಾಯಿಗಳು ಯಾವುದೂ ಇರಲಿಲ್ಲ. ಯಾವುದೇ ಸಭೆ ಸಮಾರಂಭ, ಭೇಟಿ ಕಾರ್ಯಕ್ರಮಗಳು ವ್ಯವಸ್ಥೆಗೊಂಡಿರಲಿಲ್ಲ. ಜೊತೆಯಲ್ಲಿ ಶ್ರೀಮತಿ ಇಂದಿರಾ ಗಾಂಧಿ ಇದ್ದರು. ರಾಜೀವ ಮತ್ತು ಸಂಜಯರು ಆ ದಿನಗಳಲ್ಲಿ ಡೆಹರಾಡೂನ್ ಶಾಲೆಯಲ್ಲಿ ಓದುತ್ತಿದ್ದರು.

ಶ್ರೀಮತಿ ಇಂದಿರಾಗಾಂಧಿ
ಬಾದು ರಾತ್ರಿ ಊಟಕ್ಕಾಗಿ ನೆಹರೂಜಿ ಮತ್ತು ಶ್ರೀಮತಿ ಇಂದಿರಾಗಾಂಧಿ
ಡೂನ್ ಶಾಲೆಯ ಕಾಶ್ಮೀರ್ ಹೌಸ್ ಎಂಬಲ್ಲಿಗೆ ಬರುವವರಿದ್ದರು. ಇದು ಎಷ್ಟು
ಗೊತ್ತಾಗಿತ್ತೆಂದರೆ ಶಾಲೆಯ ಎಲ್ಲಾ ಅಧ್ಯಾಪಕರಾಗಲೀ ಎಲ್ಲಾ ವಿದ್ಯಾರ್ಥಿಗಳಾಗಲೀ
ಹಾಜರಿರಲಿಲ್ಲ. ಕೇವಲ ಕಾಶ್ಮೀರ್ ಹೌಸಿನ ಸುಮಾರು ೮೦ ಹುಡುಗರು ಹಾಗೂ
೫–೬ ಮಂದಿ ಅಧ್ಯಾಪಕರು ಅಲ್ಲಿ ಸೇರಿದ್ದರು. ಹೊರಗಿನ ಯಾವ ಅತಿಥಿ ಕೂಡ
ಊಟಕ್ಕಾಗಿ ಅಲ್ಲಿಗೆ ಬಂದಿರಲಿಲ್ಲ. ಯಾವುದೇ ಸರಕಾರೀ ಅಧಿಕಾರಿಯ, ಭದ್ರತಾ
ಸಿಬ್ಬಂದಿಯ ಅಥವಾ ಗೂಢಚರ್ಯೆ ವಿಭಾಗದ ಸಿಬ್ಬಂದಿಯ ಹಾಜರಿ ಅಲ್ಲಿ ಕಂಡು
ಬರುತ್ತಿರಲಿಲ್ಲ. ರಾತ್ರಿ ೮–೩೦ ವೇಳೆಗೆ ಭೋಜನ ನಡೆಯತಕ್ಕದ್ದೆಂದು ಗೊತ್ತುಮಾಡ
ಲಾಗಿತ್ತು. ಅಲ್ಲಿಯ ನಿಲಯಪಾಲಕರ ಮನೆಯಲ್ಲಿ ನೆಹರೂರವರ ಬರುವಿಕೆಗಾಗಿ
ನಿರೀಕ್ಷಿಸುತ್ತಿದ್ದರು. ಗ್ಯಾಲರಿಯ ಬಾಗಿಲಲ್ಲಿ ಮುಖ್ಯೋಪಾಧ್ಯಾಯರು, ನಿಲಯ
ಪಾಲಕರು ಹಾಗೂ ೫–೬ ಮಂದಿ ಅಧ್ಯಾಪಕರು ಸ್ವಾಗತಿಸಲು ಕಾದು ನಿಂತಿದ್ದರು.
ಶ್ರೀಮತಿ ಇಂದಿರಾಗಾಂಧಿ ಸ್ವಲ್ಪ ಮೊದಲೇ ಬಂದಿದ್ದರು. ಅವರು ಅಧ್ಯಾಪಕರ ಮಡದಿ
ಯರ ಜೊತೆಯಲ್ಲಿ ಕುಳಿತು ಮಾತುಕತೆಯಾಡುತ್ತಿದ್ದರು.

"ನೆಹರೂಜೀ ಬರುತ್ತಿದ್ದಾರೆ" ನಿಲಯಪಾಲಕರು ಎಲ್ಲರಿಗೂ ಕೂಗಿ ಹೇಳಿದರು.
ಅವರನ್ನು ಬರಮಾಡಿಕೊಳ್ಳಲು ಎಲ್ಲರೂ ಮುಂದೆ ಹೋದರು. ನೆಹರೂರವರು ಕಾರಿ
ನಿಂದ ಇಳಿದು ನಿಲಯಪಾಲಕರ ಮತ್ತು ಮುಖ್ಯೋಪಾಧ್ಯಾಯರ ಕೈಕುಲುಕಿ ಹಜಾರ
ವನ್ನು ಪ್ರವೇಶಿಸಿದರು. ಎಡಗಡೆ ನಿಂತಿದ್ದ ಅಧ್ಯಾಪಕರು ಅವರಿಗೆ ಕೈಮುಗಿದರು.
ನೆಹರೂಜಿ ಮುಗುಳ್ನಗುತ್ತಾ ಪ್ರತಿಯಾಗಿ ಕೈಕುಲುಕುತ್ತಾ ಮುಂದೆ ನಡೆದರು. ಜಾಗ
ಇಕ್ಕಟ್ಟಾಗಿದ್ದರಿಂದ, ನಾನು ಸ್ವಲ್ಪ ಹಿಂದೆ ನಿಂತಿದ್ದೆ. ನಾನು ಕೈಮುಗಿದಾಗ ಅವರೂ
ಸಹ ಕೈಮುಗಿದು ನನ್ನ ಕೈ ಕುಲುಕದೆ ಹಾಗೆಯೇ ಮುಂದೆ ಹೋಗಿಬಿಟ್ಟರು.

ಪಂಡಿತಜೀ ನನ್ನೊಂದಿಗೆ ಏಕೆ ಕೈ ಕುಲುಕಲಿಲ್ಲ ಎಂದು ನನಗೆ ಆತಂಕವಾಯಿತು.
ಸ್ವಲ್ಪ ಹೊತ್ತು ಹಜಾರದಲ್ಲಿ ಕುಳಿತಿದ್ದು ಆಮೇಲೆ ಎಲ್ಲರೂ ಊಟದ ಮನೆಗೆ ಬಂದರು.
ಊಟ ಪ್ರಾರಂಭವಾಯಿತು. ಮಧ್ಯೆ ಮಧ್ಯೆ ಮಾತುಕತೆ ಸಹ ಸಾಗುತ್ತಿತ್ತು. ನಾನು
ಇದಕ್ಕೆ ಮೊದಲು ಪ್ರಧಾನಮಂತ್ರಿಗಳ ನಿವಾಸದಲ್ಲಿ ಐದು ದಿನಗಳ ಕಾಲ ಶ್ರೀಮತಿ
ಇಂದಿರಾಗಾಂಧಿಯವರ ಆತಿಥ್ಯದಲ್ಲಿದ್ದೆ. ನೆಹರೂರವರು ಆಗ ಹೊರಗಡೆ ಎಲ್ಲೋ
ಹೋಗಿದ್ದರು. ಆದರಿಂದಾಗಿ ತೀನ್‌ಮೂರ್ತಿ ಭವನದಲ್ಲಿ ಅವರನ್ನು ಭೇಟಿಯಾಗಲು
ಸಾಧ್ಯವಾಗಿರಲಿಲ್ಲ.

ನನ್ನ ವಿಚಾರವಾಗಿ ಅವರಿಗೆ ಗೊತ್ತಾದಾಗ ಊಟ ಮುಗಿದ ಮೇಲೆ ಅವರು
ನಗುತ್ತಾ ನನ್ನ ಬೆನ್ನು ತಟ್ಟುತ್ತಾ ಹೇಳಿದರು "ನಾನು ಅಲ್ಲಿ ಗ್ಯಾಲರಿಯ ಬಳಿ ನಿಮ್ಮನ್ನು
ಸರಕಾರೀ ಅಧಿಕಾರಿ ಎಂದುಕೊಂಡುಬಿಟ್ಟಿದ್ದೆ. ನಾನು ಎಷ್ಟೇ ಬೇಡವೆಂದರೂ ಈ ಜನ
ನನ್ನನ್ನು ಇಲ್ಲೂ ಬಿಡಲಿಲ್ಲವಲ್ಲ ಎಂದುಕೊಳ್ಳುತ್ತಿದ್ದೆ. ಇಲ್ಲೂ ಯಾರನ್ನೋ ನೇಮಿ
ಸಿದ್ದಾರಲ್ಲಾ ಎಂದು ಮುಜುಗರವಾಗಿತ್ತು. ಯಾವಾಗಲೂ ಯಾರಾದರೂ ನನ್ನ ಬೆನ್ನ
ಹಿಂದೆ ಇರುವುದು ನನಗೆ ಸ್ವಲ್ಪವೂ ಇಷ್ಟವಿಲ್ಲ."

ಅವರ ತಿಳಿಹಾಸ್ಯದ ನಗೆಯಲ್ಲಿ ಎಲ್ಲರೂ ಸೇರಿಕೊಂಡರು.

* * *

ಅವೆಷ್ಟು ಜೀವಂತವಾದ ಸಿಹಿನೆನಪುಗಳು, ಅದೆಷ್ಟು ಬಣ್ಣಬಣ್ಣದ ಕಿರುನೋಟಗಳು, ಅವೆಷ್ಟು ಭಾವ ತುಂಬಿದ ಅನುಭವಗಳು. ಹಾಗೆ ನೋಡಿದರೆ ಡೆಹರಾಡೂನ್ ಘಟ್ಟಗಳ ಪ್ರತಿಯೊಂದು ಮಿಡಿತದಲ್ಲಿಯೂ ನೆಹರೂಜಿಯವರು ಒಂದಾಗಿಹೋಗಿದ್ದಾರೆ. ಅವರನ್ನು ಕುರಿತ ಮಧುರ ನೆನಪುಗಳು ಡೆಹರಾಡೂನಿನ ಉಸಿರಿನಲ್ಲಿ ಉಸಿರಾಗಿ ಬೆರೆತು ಹೋಗಿವೆ.

ವಾಸ್ತವವಾಗಿ ಡೆಹರಾಡೂನ್ ಘಟ್ಟಗಳ ವಿಚಾರವೇ ವಿಶಿಷ್ಟವಾದುದು—ಹಾಗೆ ನೋಡಿದರೆ ಡೆಹರಾಡೂನ್ ಮತ್ತು ಮಸೂರಿಗಳೆಂದರೆ ಪಂಡಿತ ನೆಹರೂರವರಿಗೆ ಮೊದಲಿನಿಂದಲೂ ತುಂಬಾ ಪ್ರೀತಿ. ಆದ್ದರಿಂದಲೇ ಅವರು ಆಗಾಗ್ಗೆ ಇಲ್ಲಿಗೆ ಬರುತ್ತಿದ್ದರು. ಎಲ್ಲಕ್ಕಿಂತ ಮೊದಲು ೧೯೨೧ರಲ್ಲಿ ನೆಹರೂ ಡೆಹರಾಡೂನಿನಲ್ಲಿ ತಮ್ಮ ಮೊದಲ ಚಿರಿತ್ರಾರ್ಹವೆನಿಸಿದ ಭಾಷಣ ಮಾಡಿದ್ದರು. ಇಲ್ಲಿಯ ಜೈಲಿನಲ್ಲೇ ಅವರ ಅನೇಕ ದಿನಗಳು ಕಳೆದವು. ಅದೆಷ್ಟು ಪುಟಗಳು ಮಸಿಯಿಂದ ಬಣ್ಣವೇರಿಸಿಕೊಂಡವೋ ಯಾರಿಗೆ ತಾನೇ ಗೊತ್ತು ?

ಡೆಹರಾಡೂನ್ ಘಟ್ಟಪ್ರದೇಶ ಪಂಡಿತ ನೆಹರೂರವರ ಮಧುರ ಸ್ಮೃತಿಗಳಿಂದ ತುಂಬಿತುಳುಕುತ್ತಿದೆ. ಅದೆಷ್ಟು ಬಗೆಯ ಮಾತುಗಳು, ಲೆಕ್ಕವಿಲ್ಲದಷ್ಟು ಸಣ್ಣಸಣ್ಣ ಘಟನೆಗಳು, ಕೆಲವೊಂದು ದೊಡ್ಡ ಘಟನೆಗಳು. ಒಂದು ಎಳೆ ಹಿಡಿದು ನೆನಪಿನ ಸುರುಳಿಯನ್ನು ಬಿಚ್ಚಿದರೆಂದರೆ ಅದೆಷ್ಟು ಸಿಹಿ ಪ್ರಸಂಗಗಳು ಬಿಚ್ಚಿಕೊಳ್ಳುತ್ತಾ ಹೋಗುವುವೋ ಏನೋ.

೧೯೩೮ರಲ್ಲಿಯೇ ಅವರು ನಮ್ಮ ಪಂಚವಾರ್ಷಿಕ ಯೋಜನೆಗಳ ರೂಪರೇಖೆಗಳನ್ನು ಮನಃಪಟಲದಲ್ಲೇ ತಂಗೂರಿಸಿಕೊಂಡಿದ್ದರು. ಡೆಹರಾಡೂನಿನ ಜೈಲಿನಲ್ಲಿ ತಮ್ಮ ಜೊತೆಗಾರರಿಗೆ ಆಗಾಗ್ಗೆ ಅವನ್ನು ಓದಿಹೇಳುತ್ತಿದ್ದರು. ಅಲ್ಲದೆ ತಾವೂ ಶ್ರದ್ಧೆಯಿಂದ ಆ ಬಗ್ಗೆ ಮತ್ತೆ ಮತ್ತೆ ಚಿಂತನೆ ನಡೆಸುತ್ತಿದ್ದನು. ಬ್ಯಾಡ್‌ಮಿಂಟನ್ ಆಟದಲ್ಲಿ ಎಲ್ಲರನ್ನೂ ಸುಲಭವಾಗಿ ಸೋಲಿಸಿಬಿಡುತ್ತಿದ್ದರು. ಜೈಲಿನ ಲಾಟೀನು ಬೆಳಕಿನಲ್ಲಿ ಪಂಡಿತ್ ನೆಹರೂರವರು ತಮ್ಮ ಅನೇಕ ಪುಸ್ತಕಗಳನ್ನು ಬರೆದರು.

೧೯೪೧ನೆ ಇಸವಿಯ ಮಾತು. ಡೆಹರಾಡೂನ್ ಜೈಲಿನಲ್ಲಿ ಪಂಡಿತ್ ನೆಹರೂರವರ ಎದುರುಗಡೆ ವಾರ್ಡಿನಲ್ಲಿ ಶಾಂತಿಪ್ರಸನ್ನಶರ್ಮಾ ಎಂಬ ಮಹನೀಯರಿದ್ದರು. ವಾರ್ಡ್ ಬೇರೆ ಬೇರೆಯಾದರೂ ಅವರಿಬ್ಬರೂ ಆಗಾಗ್ಗೆ ಭೇಟಿಯಾಗುತ್ತಲೇ ಇದ್ದರು. ರಾಜಕೀಯವನ್ನು ಕುರಿತ ಚರ್ಚೆ ಸಹ ನಡೆಯುತ್ತಿತ್ತು. ಒಮ್ಮೆ ಶರ್ಮಾ ಅಂದರು—'ಈಗ ಜೈಲಿನಲ್ಲಿ ಪತ್ರಿಕೆ ಓದಲು ಅನುಮತಿ ದೊರಕಿದೆ. ಇದೊಂದು ಸಿಹಿ ಸುದ್ದಿ. ಆದರೆ ಸೆನ್ಸಾರ್ ಮಾಡಿ ಕೊಡುತ್ತಾರೆ.' ಪಂಡಿತ ನೆಹರೂ ಬೆಂಕಿಯಂತಾಗಿ ಹೇಳಿದರು. 'ಇಂತಹ ಪತ್ರಿಕೆಗಳನ್ನು ಯಾರು ಮುಟ್ಟುತ್ತಾರೆ? ಈ ಮಾತಾಡಲು ನಿಮಗೆಷ್ಟು ಧೈರ್ಯ?' ಶಾಂತಿಪ್ರಸನ್ನರು ಸದ್ದಿಲ್ಲದೆ ಅಲ್ಲಿಂದ ಜಾರಿಕೊಂಡರು. ಕಾಲುಗಂಟೆಯಾದ ಮೇಲೆ ನೆಹರೂರವರು ಅವರನ್ನು ಹತ್ತಿರ ಕರೆದು ಅಂದರು—'ಸಿಟ್ಟಿನಲ್ಲಿ ಏನೇನೋ ಅಂದು ಬಿಟ್ಟೆ. ಬೇಜಾರು ಮಾಡಿಕೊಳ್ಳಬೇಡಿ.'

ದೀಪಾವಳಿ ಹಬ್ಬದಂದು ನೆಹರೂ ಅವರು ಎಲ್ಲ ಸೆರೆಯಾಳುಗಳಿಗೂ ತಮ್ಮ ಕಡೆಯಿಂದಲೇ ಸಿಹಿ ಹಂಚುತ್ತಿದ್ದರು. ಎಲ್ಲರೊಡನೆ ಪ್ರೀತಿಯಿಂದ ಬೆರೆಯುತ್ತಿದ್ದರು.

ಜೈಲಿನಲ್ಲಿ ತಾವೇ ಚಹಾ ತಯಾರಿಸುತ್ತಿದ್ದರು. ಮೊದಲಿನಿಂದಲೂ ಜೈಲಿನಲ್ಲಿ ಶೀರ್ಷಾಸನ ಮಾಡುತ್ತಿದ್ದರು.

ಸ್ವಾತಂತ್ರ್ಯ ಬಂದ ಮೇಲೆ ಡೆಹರಾಡೂನಿಗೆ ಬಂದಾಗಲೆಲ್ಲಾ ನೆಹರೂ ಅವರು ಶಾಂತಿಪ್ರಸನ್ನರನ್ನು ಬೇರೆಯಾಗಿ ಪಕ್ಕಕ್ಕೆ ಕರೆದುಕೊಂಡು ಹೋಗಿ ಕೇಳುತ್ತಿದ್ದರು—'ಖಂಡಿತವಾಗಿ ನಿಜಹೇಳಿ ಜನ ನನ್ನ ಬಗ್ಗೆ ಏನೇನು ಮಾತನಾಡಿಕೊಳ್ಳುತ್ತಾರೆ? ಏಕೆಂದರೆ ನನಗೆ ನಿಮ್ಮ ಮೇಲೆ ಪೂರ್ತಿ ಭರವಸೆ ಇದೆ. ನೀವು ಏನೇ ಹೇಳಿದರೂ ನಿಜ ಹೇಳುತ್ತೀರೆಂಬ ನಂಬಿಕೆ ಇದೆ.'

ಪಂಡಿತ್ ನೆಹರೂ ಅವರು ಒಂದೊಂದು ವಿಚಾರವನ್ನೂ ಅನೇಕಬಾರಿ ಬರೆಯುತ್ತಿದ್ದರು, ಹೊಡೆಯುತ್ತಿದ್ದರು ಹಾಗೂ ಮತ್ತೆ ಮತ್ತೆ ಸರಿಪಡಿಸಿ ಬರೆಯುತ್ತಿದ್ದರು.

ಶಾಂತಿಪ್ರಸನ್ನ ಶರ್ಮಾ ಅವರು ಒಮ್ಮೆ ಇಂದಿರಾಜಿಯವರ ಮದುವೆಗೆ ಸಂಬಂಧ ಪಟ್ಟಂತೆ ಒಂದು ತಮಾಷೆಯ ಪ್ರಸಂಗವನ್ನು ಕುರಿತು ಹೇಳಿದರು. ಶಾಂತಿಪ್ರಸನ್ನರು ಅಲ್ಲಿಗೆ ಹೋದಕೂಡಲೇ ನೆಹರೂಜಿಯವರು ಅವರನ್ನು ಎಳೆದುಕೊಂಡು ಹೋಗಿ ಎಲ್ಲರಿಗಿಂತ ಮುಂದೆ ಒಂದು ದೊಡ್ಡ ಬೆಲೆಬಾಳುವ ಸೋಫಾದ ಮೇಲೆ ಕೂಡಿಸಿದರು. ಶಾಂತಿಯವರಿಗೆ ಕಕ್ಕಾಬಿಕ್ಕಿಯಾಯಿತು. 'ಇದು ಅತಿಥಿಗಳು ಕುಳಿತುಕೊಳ್ಳುವ ಸಲುವಾಗಿ, ನಾನೇನೂ ಅತಿಥಿಯಲ್ಲವಲ್ಲ' ಅಂದರು ಅವರು. ಅದಕ್ಕೆ ಪಂಡಿತಜೀ ಹೀಗೆಂದರು—'ಅದಕ್ಕಾಗಿಯೇ ನಿಮ್ಮನ್ನು ಕೂಡಿಸುತ್ತಿರುವುದು. ಇದು ಹೀಗೇ ಖಾಲಿ ಇದ್ದರೆ ಯಾರಾದರೂ ಕುಳಿತುಬಿಡುತ್ತಾರೆ. ತುಂಬಾ ಬೇಕಾದ ಅತಿಥಿಗಳು ಬಂದಾಗ ತಕ್ಷಣ ನಿಮ್ಮನ್ನು ಎಬ್ಬಿಸಿ ಅವರನ್ನು ಕೂಡಿಸಿಬಿಡುತ್ತೇನೆ. ಅದಕ್ಕಾಗಿ ಜಾಗ ಹಿಡಿದುಕೊಂಡಿರಿ.'

ಶ್ರೀ ಆರ್. ಎಸ್. ತನಖಾ ಇನ್ನೊಂದು ಘಟನೆಯನ್ನು ಕುರಿತು ಹೇಳಿದರು—'ನೆಹರೂ ಪ್ರಧಾನಮಂತ್ರಿಯಾದಮೇಲೆ ಮೊದಲಬಾರಿಗೆ ಅಮೆರಿಕೆಗೆ ಹೊರಡುವುದರಲ್ಲಿದ್ದರು. ಆಗ ಶ್ರೀ ತನಖಾ ಅವರು ಡೆಹರಾಡೂನಿನಿಂದ ಆನಂದಮಯಿ ದೇವಿಯ ಪ್ರಸಾದವನ್ನು ತೆಗೆದುಕೊಂಡು ತೀನ್‌ಮೂರ್ತಿ ಭವನಕ್ಕೆ ಬಂದರು. ಶ್ರೀಮತಿ ಗಾಂಧಿ ಅಂದರು—ನಾನು ಅವರಿಗೆ ಈ ಬಗ್ಗೆ ತಿಳಿಸುತ್ತೇನೆ. ಅವರು ಹಚ್ಚಿಸಿಕೊಳ್ಳಲು ಇಷ್ಟಪಡುವುದಾದರೆ ಹಚ್ಚುತ್ತೇನೆ.'

ಪಂಡಿತ ನೆಹರೂರವರು ಕೋಣೆಯಿಂದ ಹೊರಬಂದ ಮೇಲೆ ಶ್ರೀಮತಿ ಇಂದಿರಾ ಗಾಂಧಿಯವರು ಡೆಹರಾಡೂನಿನಿಂದ ತನಖಾ ಅವರು ದೇವಿಯ ಪ್ರಸಾದ ತಂದಿರುವ ಬಗ್ಗೆ ತಿಳಿಸಿದರು. ವಿಭೂತಿಯನ್ನು ಹಣೆಯ ಮೇಲೆ ಹಚ್ಚಬೇಕೆಂದು ಹೇಳಿರುವುದಾಗಿ ಸಹ ತಿಳಿಸಿದರು.

ನೆಹರೂರವರು ಹಣೆಗೆ ವಿಭೂತಿ ಹಚ್ಚಿಕೊಂಡು, ಪ್ರಸಾದ ಸ್ವೀಕರಿಸಿ ಕೆಳಗೆ ಇಳಿದರು. ಶ್ರೀ ತನಖಾ ಅಲ್ಲೇ ನಿಂತಿದ್ದರು. ಅವರ ಹತ್ತಿರ ಬಂದು ಪಂಡಿತಜೀ ಅಂದರು—'ನಿಮ್ಮ ಆಜ್ಞೆಯನ್ನು ಪಾಲಿಸಿದ್ದಾಗಿದೆ.'

ಎರಡು ಮೂರು ಬಾರಿ ಆನಂದಮಯಿ ದೇವಿಯ ಹತ್ತಿರ ಹೋದಾಗ ಮೆಟ್ಟಿಲು ಹತ್ತಬೇಕಾದರೆ ಶ್ರೀ ತನಖಾ ನೆಹರೂರವರಿಗೆ ನೆರವಾಗಲು ಮುಂದಾದಾಗಲೆಲ್ಲಾ—

'ಪರವಾಗಿಲ್ಲ, ನಾನು ಚೆನ್ನಾಗಿದ್ದೇನೆ' ಎನ್ನುತ್ತಾ ನೆಹರೂರವರು ಸರಸರ ಮೆಟ್ಟಿಲು ಹತ್ತಿ ಹೋಗುತ್ತಿದ್ದರು. ಆದರೆ ೨೭ ಮೇ ೧೯೬೪ರಲ್ಲಿ ಡೆಹರಾಡೂನಿನಿಂದ ದೆಹಲಿಗೆ ಹೋಗಬೇಕಾದರೆ ಹೆಲಿಕಾಪ್ಟರ್ ಹತ್ತುವ ಸಮಯದಲ್ಲಿ ತನಖಾ ಅವರು ನೆರವಾಗಲು ಮುಂದಾದಾಗ ನೆಹರೂರವರು ಕೂಡಲೇ ಸಮ್ಮತಿಸಿದರು. ತನಖಾ ಅವರಿಗೆ ತುಂಬಾ ಗಾಬರಿಯಾಯಿತು. ಇವತ್ತು ಇದೇನಾಯಿತು ಎಂದು ಅಚ್ಚರಿಗೊಂಡರು. ನೆಹರೂರವರು ಇಷ್ಟು ಅಶಕ್ತರಾದರೆ? ಎಂದು ಚಿಂತೆಯಾಯಿತು. ಕೆಲವು ಕಾಲದ ಅನಂತರ ದೆಹಲಿಯಿಂದ ಇದ್ದಕ್ಕಿದ್ದಂತೆ ಪಂಡಿತಜೀಯವರ ಸಾವಿನ ಸಮಾಚಾರ ಕೇಳಿಬಂದಾಗ ತನಖಾ ಸ್ತಬ್ಧರಾದರು.

ಶ್ರೀ ಶಿವಾನಂದ ಪಾಟಿಯಾಲಾ, ಮಸೂರಿ ಮತ್ತು ಚಕರೌತಾಗಳಿಗೆ ಸಂಬಂಧಪಟ್ಟಂತೆ ಕೆಲವು ಪ್ರಸಂಗಗಳನ್ನು ಹೇಳಿದರು. ಅವರು ಮೊದಲು ಚಕರೌತಾ ಪ್ರದೇಶದ ವಿಷಯವಾಗಿ ಪ್ರಾರಂಭಿಸಿದರು—೧೯೫೭ನೇ ಇಸವಿ. ಪಂಡಿತ್ ನೆಹರೂ ಮೊದಲಬಾರಿಗೆ ಚಕರೌತಾಗೆ ಬಂದಿದ್ದರು. ಸ್ವಲ್ಪಕಾಲದ ಮೇಲೆ ನಾವು ನೆಹರೂ ಅವರು ಉಳಿದುಕೊಂಡಿದ್ದ ಲೋಂಗ್‌ಸ್ಟ್ಯಾಫ್ ಹೌಸ್ ಎಂಬಲ್ಲಿಗೆ ಬಂದೆವು. ನೆಹರೂರವರು ಕೈ ಹಿಂದಕ್ಕೆ ಕಟ್ಟಿಕೊಂಡು ತಲೆ ಬಗ್ಗಿಸಿಕೊಂಡು ಹುಲ್ಲಿಹಾಸಿನ ಮೇಲೆ ಓಡಾಡುತ್ತಿದ್ದರು. ನಾವು ಬಂದ ಶಬ್ದ ಕೇಳಿ ಈ ಕಡೆ ತಿರುಗಿದರು. ನಾವೆಲ್ಲಾ 'ಜೈ ಹಿಂದ್' ಎಂದೆವು. ಅವರ ಹತ್ತಿರ ಹೋಗಿ ಒಬ್ಬ ಶಾಸಕರು ಹೇಳಿದರು—'ಪಂಡಿತಜೀ, ಮೊದಲ ಬಾರಿಗೆ ಚಕರೌತಾಗೆ ಬರುತ್ತಿರುವ ತಮಗೆ ನಾವೆಲಾ ಹಾರ್ದಿಕ ಸ್ವಾಗತ ಬಯಸುತ್ತೇವೆ.'

ಅದನ್ನು ಕೇಳಿ ನೆಹರೂರವರು ಜೋರಾಗಿ ನಕ್ಕರು—'ಒಳ್ಳೆಯದು, ಹಾಗಾದರೆ ನೀವೆಲ್ಲಾ ನನ್ನನ್ನು ಸ್ವಾಗತಿಸಲು ಬಂದಿದ್ದೀರಲ್ಲವೆ. ನಿಮ್ಮ ಈ ಪ್ರದೇಶ ನಿಜವಾಗಿಯೂ ತುಂಬಾ ಸುಂದರವಾಗಿದೆ.'

ಶ್ರೀ ಪಾಟಿಯಾಲರು ಆ ಶಾಸಕರನ್ನೂ ಹಾಗೂ ಅವರ ಜೊತೆಗಾರರನ್ನು ಪರಿಚಯ ಮಾಡಿಕೊಟ್ಟರು. ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಪರಾಭವಗೊಳಿಸಿ ವಿಧಾನಸಭೆಗೆ ಆ ಶಾಸಕರು ಹೋಗಿದ್ದಾರೆಂದು ಸಹ ಹೇಳಿದರು. ಕ್ಷಣಕಾಲ ಗಂಭೀರರಾದ ನೆಹರೂರವರು—'ಓಹೋ, ನೀವು ಈ ವಿಭಾಗದ ಎಂ.ಎಲ್.ಎಗಳಲ್ಲವೆ?' ಅಂದರು. ಅನಂತರ ಬೇರೆ ಬೇರೆ ವಿಚಾರವಾಗಿ ಮಾತುಕತೆ ಮುಂದುವರೆಯಿತು.

೧೯೬೪ರಲ್ಲಿ ತಮ್ಮ ಬದುಕಿನ ಕೊನೆಯ ದಿನಗಳಲ್ಲಿ ನೆಹರು ಡೆಹರಾಡೂನಿಗೆ ಬಂದಿದ್ದರು. ಸಹಸ್ರಧಾರಾ ಎಂಬಲ್ಲಿಂದ ಸರ್ಕೀಟ್‌ಹೌಸಿಗೆ ಅವರು ಬಂದಾಗ ಶ್ರೀ ಪಾಟಿಯಾಲ ಮತ್ತು ಶ್ರೀ ಭಾರದ್ವಾಜ ಅವರು 'ಹೂವಿನ ಘಟ್ಟ' ಎಂದು ಕರೆಸಿಕೊಳ್ಳುತ್ತಿದ್ದ ಆ ಪ್ರದೇಶದ ಅನೇಕ ಸ್ಲೈಡ್ ಚಿತ್ರಗಳನ್ನು ಪಂಡಿತಜೀ ಅವರಿಗೆ ತೋರಿಸಿದರು.

ಪಂಡಿತಜೀಯವರು ತುಂಬಾ ದಣಿದಿದ್ದರೂ ಕೂಡ ಒಂದೊಂದು ಚಿತ್ರವನ್ನೂ ತುಂಬ ಶ್ರದ್ಧೆಯಿಂದ ನೋಡುತ್ತಾ ಮಧ್ಯೆ ಮಧ್ಯೆ ಹಲವಾರು ಪ್ರಶ್ನೆಗಳನ್ನು ಹಾಕುತ್ತಾ

ಉತ್ತರ ಪಡೆದುಕೊಳ್ಳುತ್ತಿದ್ದರು. ಸ್ವಲ್ಪ ಹೊತ್ತಿನಲ್ಲೇ ಎಲ್ಲ ಚಿತ್ರಗಳನ್ನೂ ನೋಡಿ ಮುಗಿಸಿದರು.

ಮಕ್ಕಳ ಚಾಚಾ, ಹೊಸಭಾರತದ ನಿರ್ಮಾಣಕಾರ ಎಂದು ಹೆಸರಾಗಿದ್ದ ಪಂಡಿತ ಜವಾಹರ ನೆಹರೂ ಅವರು ಮಕ್ಕಳೆಂದರೆ ತುಂಬ ಇಷ್ಟಪಡುತ್ತಿದ್ದರು. ಮಕ್ಕಳೆಂದರೆ ಅವರಿಗೆ ಅತೀವ ಪ್ರೀತಿ. ಯಾವಾಗ ಎಲ್ಲಿಯಾದರೂ ಸ್ವಲ್ಪ ಅವಕಾಶ ಸಿಕ್ಕಿದರೂ ಸಾಕು ಮಕ್ಕಳೊಡನೆ ಸೇರಿಬಿಡುತ್ತಿದ್ದರು. ಅವರೊಡನೆ ನಗುನಗುತ್ತಾ ತಮಾಷೆಯಾಗಿ ಮಾತನಾಡುತ್ತಾ ಬೆರೆಯುತ್ತಿದ್ದರು. ಅವರ ಮುಗುಳ್ನಗೆ ಮಕ್ಕಳಿಗೆ ತುಂಬಾ ಪ್ರೀತಿಯದಾಗಿತ್ತು.

ಮಕ್ಕಳೊಡನೆ ಪಂಡಿತ ನೆಹರೂ ಅವರು ಮಾತನಾಡಬೇಕಾದರೆ ಮನಸ್ಸು ಬಿಚ್ಚಿ ಅವರೊಡನೆ ಬೆರೆಯುತ್ತಿದ್ದರು. ನಗುನಗುತ್ತಾ, ಒಬ್ಬ ಸ್ನೇಹಿತನಂತೆ ಮಕ್ಕಳೊಡನೆ ಮಾತಿಗಿಳಿಯುತ್ತಿದ್ದರು. 'ಮಕ್ಕಳೇ! ನೀವು ತುಂಬಾ ಅದೃಷ್ಟವಂತರು. ಸ್ವತಂತ್ರ ಭಾರತದಲ್ಲಿ ನಿಮ್ಮ ಓದುಬರಹ ನಡೆಯುತ್ತಿದೆ. ಈಗ ಕಾಲ ತುಂಬಾ ಮುಂದುವರೆದಿದೆ. ನಮ್ಮ ಕಾಲ ಬೇರೆರೀತಿಯದಾಗಿತ್ತು. ಆ ಕಾಲಕ್ಕೆ ಏರೋಪ್ಲೇನೇ ತುಂಬಾ ಆಶ್ಚರ್ಯದ ವಿಷಯವಾಗಿತ್ತು. ಆದರೆ ನೀವು ಇವತ್ತು ರಾಕೆಟ್‌ಯುಗದಲ್ಲಿದ್ದೀರಿ.'

ಮಕ್ಕಳೆಂದರೆ ನೆಹರೂರವರ ದೃಷ್ಟಿಯಲ್ಲಿ ರಾಷ್ಟ್ರದ ಭಾವೀ ಪ್ರಜೆಗಳು, ನಿರ್ಮಾಪಕರು. ಮಕ್ಕಳಲ್ಲಿ ಶಿಸ್ತು, ದೇಶಪ್ರೇಮ, ಕರ್ತವ್ಯಪ್ರಜ್ಞೆ ಸೇವಾಭಾವನೆ ಮುಂತಾದ ಸದ್ಗುಣಗಳು ತುಂಬಿರಬೇಕೆಂದು ನೆಹರೂರವರು ಬಯಸುತ್ತಿದ್ದರು. ಏಕೆಂದರೆ ಮಕ್ಕಳ ಮನಸ್ಸಿನ ಮೇಲೆ ಏನು ಅಚ್ಚೊತ್ತಿದರೂ ಎಂದೆಂದಿಗೂ ಅದು ಅಳಿಸಲಾಗದಷ್ಟು ಪ್ರಭಾವವನ್ನು ಉಂಟುಮಾಡುತ್ತದೆಂಬುದು ಅವರ ದೃಢ ಭಾವನೆಯಾಗಿತ್ತು.

ಅನು : ಉಮಾ ಅರೋರ

ಹಿಂಸೆಯಿಂದ ಹಿಂಸೆಯೇ ಪ್ರಾಪ್ತವಾದೀತೆ ಹೊರತು, ಅಹಿಂಸೆಯಲ್ಲ, ಶಾಂತಿಯಲ್ಲ.

ಗಾಂಧೀಜಿ

‘ವಿಶ್ವ ಒಂದೇ ಎಂಬ ಆದರ್ಶದಿಂದ ಪ್ರೇರಣೆಗೊಂಡ

ಬಹುಮುಖ ಪ್ರತಿಭೆಯ ಸಾಹಿತಿ-ಶಿಕ್ಷಕ ಉಮಾಶಂಕರ ಜೋಶಿ

ಪ್ರಕಾಶ ತ್ರಿವೇದಿ

ನಾಡಿನ ಅನೇಕ ದೊಡ್ಡ ದೊಡ್ಡ ಸಾಹಿತ್ಯ ಪುರಸ್ಕಾರಗಳಿಂದ ಗೌರವಗಳಿಂದ ವಿಭೂಷಿತರಾದ ಶ್ರೀ ಉಮಾಶಂಕರ ಜೋಶಿಯವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದವರು. ಗುಜರಾತ್ ವಿಶ್ವವಿದ್ಯಾಲಯ ಮತ್ತು ವಿಶ್ವಭಾರತಿ ವಿಶ್ವ ವಿದ್ಯಾನಿಲಯಗಳ ಉಪಕುಲಪತಿ ಹಾಗೂ ಕುಲಪತಿಗಳಾಗಿದ್ದವರು. ಭಾರತೀಯ ಸಾಹಿತ್ಯ ಜಗತ್ತಿನಲ್ಲಿ ಒಬ್ಬ ವಿಭೂತಿಪುರುಷರೆನಿಸಿದ್ದ ಅವರ ನಿಧನದ ಸಂದರ್ಭದಲ್ಲಿ ಇದೊಂದು ವಿನಮ್ರ ಶ್ರದ್ಧಾಂಜಲಿ.

ನಾಡಿನ ಮುಂಚೂಣಿಯ ಸಾಹಿತಿಗಳಲ್ಲಿ ಒಬ್ಬರೆನಿಸಿದ ಶ್ರೀ ಉಮಾಶಂಕರ ಜೋಶಿಯವರು ೧೯ ಡಿಸೆಂಬರ್ ೧೯೮೮ ಸೋಮವಾರದಂದು (ಜನನ: ಜುಲೈ ೨೧, ೧೯೧೧) ತಮ್ಮ ಎಪ್ಪತ್ತೇಳನೆಯ ವಯಸ್ಸಿನಲ್ಲಿ ಸ್ವರ್ಗಸ್ಥರಾದರು. ಅವರ ನಿಧನದೊಂದಿಗೆ ಭಾರತೀಯ ಸಾರಸ್ವತ ಜಗತ್ತಿಗೆ ಅಪಾರ ನಷ್ಟವುಂಟಾಗಿದೆ. ಅವರು ತುಂಬ ವರ್ಷಗಳಿಂದ ಕ್ಯಾನ್ಸರಿನಿಂದ ಬಳಲುತ್ತಿದ್ದರು.

“ನಾನು ಗುಜರಾತಿಯಲ್ಲಿ ಬರೆಯುವ ಭಾರತೀಯ” ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ಜೋಶಿಯವರು ಭಾರತೀಯ ಸಂಸ್ಕೃತಿ, ಶಿಕ್ಷಣ, ಸಾಹಿತ್ಯ, ಪತ್ರಿಕೋದ್ಯಮ, ರಾಜನೀತಿ, ಕಲೆ ಇವೆಲ್ಲವುಗಳ ಬಗೆಗೆ ಅಪಾರ ಕಾಳಜಿಯನ್ನು ಹೊಂದಿದ್ದರು, ಕಳಕಳಿ ವ್ಯಕ್ತಪಡಿಸುತ್ತಿದ್ದರು. ಅವರ ಬದುಕಿನುದ್ದಕ್ಕೂ ಈ ಅಂಶಗಳನ್ನು ಗುರುತಿಸಬಹುದು. ಧರ್ಮನಿರಪೇಕ್ಷತೆಗೆ ಅವರೊಂದು ಜ್ವಲಂತ

೧೯೮೯ ಫೆಬ್ರವರಿ ೨೦ಗಳ ‘ನವನೀತ’ದಲ್ಲಿ ಪ್ರಕಟವಾದ ಶ್ರೀ ಪ್ರಕಾಶ ತ್ರಿವೇದಿ ಅವರ ‘ಬಹುಮುಖೀ ಪ್ರತಿಭಾ ಕೀ ಧನೀ ಉಮಾಶಂಕರ ಜೋಶೀ’ ಲೇಖನದ ಕನ್ನಡಾನುವಾದ.

ಉದಾಹರಣೆಯಾಗಿದ್ದರು. ಮೇಲೆ ಹೇಳಿದ ಮಾತನ್ನು ಆಗಾಗ್ಗೆ ಪುನರುಚ್ಚರಿಸುತ್ತಿದ್ದ ಅವರು ತಮ್ಮನ್ನು ಕೇವಲ ಭಾರತೀಯ ಎಂದಷ್ಟೆ ಅಲ್ಲ, ಸಮಗ್ರ ವಿಶ್ವದ ಪ್ರಜೆಯೆಂದು ಕರೆದುಕೊಳ್ಳುತ್ತಿದ್ದರು. 'ಒಂದು ವಿಶ್ವ, ಒಂದು ಕುಟುಂಬ' ಎಂಬ ಆದರ್ಶದಿಂದ ಅವರು ಸ್ಫೂರ್ತಿಗೊಂಡಿದ್ದರು. 'ವಿಶ್ವಶಾಂತಿ' ಎಂಬ ತಮ್ಮ ಮೊದಲ ಕೃತಿಯನ್ನು ಹೆಸರಾಂತ ಸಮಾಜಸೇವಕರೊಬ್ಬರಿಗೆ ಸಮರ್ಪಿಸಿಕೊಂಡಾಗ ತಮಗೇ ಗೌರವ ಸಂದಂತಾಯಿತೆಂದು ಅವರು ಸಂತೋಷಪಟ್ಟಿದ್ದರು.

ಬೊಂಬಾಯಿ ಜೋಶಿಯವರ ಪ್ರಮುಖ ಕಾರ್ಯಕ್ಷೇತ್ರವಾಗಿತ್ತು. ಆ ನಗರವೆಂದರೆ ಅವರಿಗೆ ತುಂಬ ಪ್ರೀತಿ, ಆಕರ್ಷಣೆ. ಅವರು ಓದಿದ್ದು ಬರೆದದ್ದು ಎಲ್ಲ ಬೊಂಬಾಯಿಯಲ್ಲೇ. ಅವರು ಮೊದಲಬಾರಿಗೆ ಅಧ್ಯಾಪಕರಾಗಿ ನೇಮಕಗೊಂಡದ್ದು ಅಲ್ಲೇ. ನಾಡಿನ ಸ್ವಾತಂತ್ರ್ಯ ಹೋರಾಟದಲ್ಲಿ ಅವರು ಸಕ್ರಿಯವಾಗಿ ಭಾಗವಹಿಸಿದ್ದು ಅಲ್ಲೇ. ಬೊಂಬಾಯಿಯ ಲೋಕಲ್ ಟ್ರೈನುಗಳಲ್ಲಿ ಓಡಾಡುತ್ತಲೆ ಅವರು ತಮ್ಮ 'ನಿಶೀಥ' ಮತ್ತು 'ಲೋಕಲ್ ಟ್ರೇನ್'ಗಳಂಥ ಅತ್ಯುತ್ತಮವಾದ ಕವನಗಳ ಸೃಷ್ಟಿಗೆ ಲಯವನ್ನೂ ಛಂದೋಗತಿಯನ್ನು ಪಡೆದುಕೊಂಡರು. ತಮ್ಮ ಮೆಚ್ಚಿನ ಮಡದಿ ಜ್ಯೋತ್ಸ್ನಾ ಅವರನ್ನು ಕಳೆದುಕೊಂಡಾಗ ಜೋಶಿಯವರು ಅಗಲಿಕೆಯ ನೋವಿನ ದಿನಗಳನ್ನು ದೂಡಿದ್ದು ಬೊಂಬಾಯಿಯಲ್ಲೇ. ಶ್ರೀ ಮುಂಶಿಯವರ ಕೈಯಲ್ಲಿ ಅಪೂರ್ವವಾದ ಗೌರವಕ್ಕೆ ಅವರು ಭಾಜನರಾದದ್ದು ಸಹ ಅಲ್ಲಿಯೇ. ೧೯೬೮ರಲ್ಲಿ ಜೋಶಿಯವರಿಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ ಲಭಿಸಿದಾಗ ಅವರು ಕಾರ್ಯನಿರತರಾಗಿದ್ದುದು ಬೊಂಬಾಯಿಯಲ್ಲೇ.

ಮೂವತ್ತು–ಮೂವತ್ತೈದು ವರ್ಷಗಳ ತಮ್ಮ ಪ್ರೌಢ ಸಾಹಿತ್ಯ ಬದುಕಿನ ಅವಧಿಯಲ್ಲಿ ಉಮಾಶಂಕರರ ಹನ್ನೊಂದು ಕವನ ಸಂಗ್ರಹಗಳು ಪ್ರಕಟಗೊಂಡವು. ಅವರ ಮೊದಲ ಕವನ ಸಂಗ್ರಹ ಹೊರಬಿದ್ದ ತರುಣದಲ್ಲಿ ಅವರು ಒಂದು ವಿಶಿಷ್ಟ ಬಗೆಯ ಕಾವ್ಯ ಶೈಲಿಯನ್ನು ಕಂಡುಕೊಳ್ಳುವಲ್ಲಿ ತತ್ಪರರಾಗಿದ್ದರು. ಅವರ ಬರವಣಿಗೆಯಲ್ಲಿ ಮೈವೆತ್ತಿದ ರಚನಾ ಪ್ರಕ್ರಿಯೆಯಲ್ಲಿ ಪ್ರಮುಖವಾಗಿ ರೋಮ್ಯಾಂಟಿಕ್ ಅಂಶಗಳು ಹಾಗೂ ಭಾವಾತ್ಮಕತೆಗೆ ಹೆಚ್ಚು ಮಹತ್ವ ದೊರೆತಿತ್ತು. ಭಾರತೀಯತೆಯನ್ನು ಪ್ರತಿಪಾದಿಸುವ ಅತ್ಯಂತ ಶ್ರೇಷ್ಠವೆನಿಸಿದ ಮೂಲತತ್ವಗಳೊಟ್ಟಿಗೇ ಅವರ ಬರವಣಿಗೆಯಲ್ಲಿ ಒಂದು ವಿಸ್ಮಯಲೋಕದ ಸಾಕ್ಷಾತ್ಕಾರ ಸಹ ಉಂಟಾಗುತ್ತದೆ. ಬದುಕಿನ ಬಗೆಗೆ ಅವರ ಕೃತಿಗಳಲ್ಲಿ ಎದ್ದು ಕಾಣುತ್ತಿದ್ದ ತೀವ್ರ ಜಿಜ್ಞಾಸೆ–ಉತ್ಸಾಹಗಳು, ಮುಕ್ತವಾದ ಭಾವಾಭಿವ್ಯಕ್ತಿ ಓದುಗರನ್ನು ಸೆರೆಹಿಡಿಯುವ ಪ್ರಮುಖ ಅಂಶಗಳಾಗಿದ್ದವು.

ಉಮಾಶಂಕರ ಜೋಶಿಯವರು ಅನೇಕ ಬಗೆಯ ಕಾವ್ಯ ಸೃಷ್ಟಿಗೆ ಕೈಹಾಕಿದರು. ಸಣ್ಣ ಸಣ್ಣ ಪದ್ಯಗಳು, ಹಾಡುಗಳು, ದೀರ್ಘವಾದ ವರ್ಣನಾತ್ಮಕ ಕವನಗಳೆ ಅಲ್ಲದೆ ದ್ವಿಪದಿಗಳು ಸಹ ಅವರ ಲೇಖನಿಯಲ್ಲಿ ಮೈದುಂಬಿಕೊಂಡು ಹೊರಬಂದವು. ಕೇವಲ ವ್ಯಂಗ್ಯ ಮಾತ್ರವಲ್ಲದೆ ಅವರ ಬರವಣಿಗೆಯಲ್ಲಿ ದಾರ್ಶನಿಕ ವಿಚಾರಗಳು ಸಹ ಕಂಡು ಬರುತ್ತವೆ. ಪದ್ಯಗಳನ್ನು ಬಳಸಿಕೊಂಡು ಅವರು ಛಂದೋಬದ್ಧವಾದ ನಾಟಕಗಳನ್ನು ಬರೆದರಾದರೂ ಆ ನಿಟ್ಟಿನಲ್ಲಿ ಸಾಕಷ್ಟು ಯಶಸ್ಸು ದೊರೆಯಲಿಲ್ಲ. ಈ ಸಾಲಿನಲ್ಲಿ ಅವರ

'ಪ್ರಾಚೀನಾ' (೧೯೪೪) ಹಾಗೂ 'ಮಹಾಪ್ರಸ್ಥಾನ' ದಂತಹ ಕೃತಿಗಳು ವಿಮರ್ಶಕರ ದೃಷ್ಟಿಯಲ್ಲಿ ಉಪಾದೇಯವೆನಿಸಿಕೊಳ್ಳದೆ ಹೋದರೂ ಅವುಗಳಲ್ಲಿ ಕಂಡುಬರುವ ತಾಜಾತನ ಇವತ್ತಿಗೂ ಅರ್ಥವತ್ತಾಗಿದೆ.

ಉತ್ತರ ಗುಜರಾತಿನ ಹರಯದ ಲೇಖಕ ಉಮಾಶಂಕರ ಜೋಶಿಯವರ ಮೊದಲ ರಚನೆಗಳು ಪ್ರಾರಂಭದಲ್ಲಿ ಸಹಜವಾಗಿ–ಸ್ವಾಭಾವಿಕವಾಗಿ ಕಂಡುಬರುತ್ತಿದ್ದರೂ, ಅವುಗಳಲ್ಲಿ ಒಂದು ವಿಶಿಷ್ಟ ಬಗೆಯ ವಿಚ್ಛೃಂಖಲ ಭಾವನೆ ಹಾಗೂ ಅರ್ಥಪೂರ್ಣವಾದ ತುಡಿತ ಎದ್ದು ಕಾಣುತ್ತಿದ್ದವು. ಬರವಣಿಗೆ ಕಸನಾಗುತ್ತಾ ಹೋದಂತೆ ಕ್ರಮೇಣ ಕವಿಹೃದಯ ಅಚೇತನದಿಂದ ಚೇತನದತ್ತ ಅಂತರ್ಯಾತ್ರೆಯನ್ನು ಆರಂಭಿಸಿತು. ೧೯೫೬ ರ ವೇಳೆಗೆ ಅವರ ಕಾವ್ಯದೃಷ್ಟಿ ವ್ಯಾಪಕವಾಯಿತು. ಸಂವೇಗಾತ್ಮಕತೆಯ ಕಾರಣದಿಂದಾಗಿ ಅವರ ಕಲಾಭಿವ್ಯಕ್ತಿ ಹೆಚ್ಚು ಆಯಾಮಗಳನ್ನು ಪಡೆದುಕೊಂಡಿತು. ಹಾಗೆ ನೋಡಿದರೆ, ೧೯೪೭ ರಿಂದಲೇ ಅವರ ದೃಷ್ಟಿ ಹಾಗೂ ಮೌಲ್ಯಗಳಲ್ಲಿ ಸ್ವಲ್ಪ ಏರುಪೇರಿನ ಲಕ್ಷಣಗಳು ಕಂಡುಬರತೊಡಗಿದ್ದವು. ಅವರ ಕವನಗಳಲ್ಲಿ ಒಂದು ಬಗೆಯ ಅವಸಾದ ಇಲ್ಲವೆ ವಿಷಾದದ ತೆಳುಪದರವೊಂದು ಕಾಣಿಸಿಕೊಳ್ಳತೊಡಗಿತ್ತು. ಇದ್ದಕ್ಕಿದ್ದಂತೆ ಯಾವುದೋ ದುಷ್ಟ ಜಗತ್ತಿನಲ್ಲಿ ಸೇರಿಕೊಂಡ ನೋವಿನ ಅನುಭವ ಕವಿ ಹೃದಯಕ್ಕೆ ಆಗುತ್ತಿದ್ದ ಸ್ಪಷ್ಟ ಲಕ್ಷಣಗಳು ಕವನಗಳಲ್ಲಿ ದೃಷ್ಟಿಗತವಾಗತೊಡಗಿದವು. ಕಷ್ಟದಿಂದ ಹೋರಾಡಿ ದೊರಕಿಸಿಕೊಂಡ ಸ್ವಾತಂತ್ರ್ಯದ ಬೆನ್ನಿಗಂಟಿಕೊಂಡಂತೆಯೆ ರಾಷ್ಟ್ರ ಎರಡು ಹೋಳಾಗಿ ಒಡೆದದ್ದು, ಆ ನಿಮಿತ್ತವಾಗಿ ನಡೆದ ಭೀಕರ ದಂಗೆಗಳು, ಅತ್ಯಾಚಾರ, ಮಹಾತ್ಮಾ ಗಾಂಧೀಜಿಯವರ ಹತ್ಯೆ ಇವೆಲ್ಲ ಆಗಸ್ಟ್ ೧೯೪೭ ರ ವೇಳೆಗೆ ಸಂಭವಿಸಲಿದ್ದ ಮಹಾ ವಿಪತ್ತಿನ ಆಭಾಸ ಜೋಶಿಯವರಿಗೆ ಸ್ಪಷ್ಟವಾಗಿ ಉಂಟಾಗಿತ್ತು. ಆಗಸ್ಟ್ ೧೫ ರ ಬಗೆಗೆ ಅವರು ಬರೆದ ಕವನದಲ್ಲಿ ಹಾಗಾಗಿ ಯಾವ ಭಾವೋತ್ಕಟತೆಯಾಗಲಿ ಸಂತಸವಾಗಲಿ ಕಂಡುಬರುವುದಿಲ್ಲ. 'ಇನ್ನೂ ಹೆಚ್ಚು ಆತ್ಮವಿಶ್ವಾಸವನ್ನು ತುಂಬಿಕೊ' ಎಂಬ ಸಾಲುಗಳನ್ನು ಒಳಗೊಂಡ ಈ ಕವನ ನಾಲ್ಕು ಕಡೆಗಳಲ್ಲಿ ದಟ್ಟವಾಗಿ ಹರಡಿದ ಕಗ್ಗತ್ತಲನ್ನು ಓಡಿಸಲೆಣಿಸುವ ಸಣ್ಣ ಮಿಣುಕು ದೀಪದ ವ್ಯರ್ಥ ಪ್ರಯತ್ನವೇನೊ ಎಂಬಂತೆ ತೋರಿ ಬರುತ್ತದೆ.

ಈ ವಿಷಾದ ಭಾವನೆ ಕವಿ ಉಮಾಶಂಕರರಲ್ಲಿ ಬಹಳ ಕಾಲ ಮನೆ ಮಾಡಿತ್ತು. ಈ ವಿಷಯವಾಗಿ ಹೃದಯದಲ್ಲಿ ಮತ್ತು ಬರವಣಿಗೆಯಲ್ಲಿ ಸಾಕಷ್ಟು ಮಥನ ನಡೆದ ಅನಂತರವೇ ಅವರು ಇದರಿಂದ ಮುಕ್ತರಾದರು.

೧೯೫೬ರಲ್ಲಿ ಅವರು ಬರೆದ 'ಛಿನ್ನ ಭಿನ್ನ ಛೂ' ಎಂಬ ಕವನ ಸಮಕಾಲೀನ ಗುಜರಾತಿ ಸಾಹಿತ್ಯದಲ್ಲಿ ಹೊಸ ರಚನಾ ಪ್ರಕಾರವೊಂದಕ್ಕೆ ನಾಂದಿಹಾಡುತ್ತಾ ಪ್ರಕಟವಾಯಿತು. 'ವಿಶ್ವಶಾಂತಿ' ಎಂಬ ಅವರ ಇನ್ನೊಂದು ಕವನ ಸಹ ಆ ಸಾಹಿತ್ಯದಲ್ಲಿ ಅಂಥದೇ ಮಹತ್ವವನ್ನು ಪಡೆದುಕೊಂಡ ರಚನೆ. 'ಸಪ್ತಪದಿ' ಎಂಬ ಹೆಸರಿನಲ್ಲಿ ಹೊರಬಂದ ಅವರ ದೀರ್ಘವಾದ ಕವನಗಳು ಗುಜರಾತಿ ಕಾವ್ಯ ಸಾಹಿತ್ಯ ನಡೆದುಬಂದ ದಾರಿಯನ್ನೂ ಮೈಗೂಡಿಸಿಕೊಂಡ ಬದಲಾವಣೆಗಳನ್ನೂ ಸ್ಪಷ್ಟವಾಗಿ ನಿರೂಪಿಸುತ್ತವೆ. ವಾಸ್ತವವಾಗಿ ಈ ಕವನಗಳು ಜೋಶಿಯವರನ್ನು ತಮ್ಮ ಭಾಷಾಸಾಹಿತ್ಯದ ಹೊಸ ಪೀಳಿಗೆಯ ಅಗ್ರಗಣ್ಯ ಕವಿಗಳ ಸಾಲಿನಲ್ಲಿ ಪ್ರತಿಷ್ಠಾಪಿಸಿದವು.

ನಲವತ್ತನೆಯ ದಶಕದಲ್ಲಿ ಅವರು ಸೃಷ್ಟಿಸಿದ ಕಾವ್ಯದ ಸ್ವರೂಪ ಅದಕ್ಕಿಂತ ಮೊದಲು ಹೊರಬಂದ ಅವರ ಕಾವ್ಯದ ಸ್ವರೂಪಕ್ಕಿಂತ ಭಿನ್ನವಾಗಿತ್ತು. ನಲವತ್ತನೆಯ ದಶಕದ ಅವರ ಕವನದಲ್ಲಿ ರೋಮ್ಯಾಂಟಿಕ್ ಭಾವನೆಗಳು ಕಡಿಮೆಯಾಗಿದ್ದು, ನಿಗದಿತ ಸೂತ್ರಬದ್ಧತೆಗಿಂತ ಹೊರತಾದ ಸೃಷ್ಟಿ ಕಂಡುಬರುತ್ತಿತ್ತು; ಭಾವೋತ್ಕಟತೆಯ ಅಂಶ ಕಡಿಮೆಯಾಗಿ ಬೌದ್ಧಿಕ ಚಿಂತನೆಯ ಪ್ರಮಾಣ ಅಧಿಕವಾಗಿತ್ತು. 'ಸಪ್ತಪದೀ' ಎಂಬ ಏಳು ದೀರ್ಘವಾದ ಪದ್ಯಗಳನ್ನೊಳಗೊಂಡ ಅವರ ಕವನ ಸಂಕಲನದಲ್ಲಿ ಈ ಕಾಲದ ಕ್ರಮಾನುಗತವಾದ ಬೆಳವಣಿಗೆಯನ್ನು ಮತ್ತು ಬದಲಾವಣೆಯನ್ನು ಗುರುತಿಸ ಬಹುದು.

ಉಮಾಶಂಕರರು ಒಮ್ಮೆ "ಕಾವ್ಯ ಕಿವಿಯಿಂದ ಆಲಿಸುವ ಕಲೆ" ಎಂದು ಹೇಳಿದ್ದ ನೆನಪು. ಅವರು ತಮ್ಮ ಕವನಗಳನ್ನು ಓದತೊಡಗಿದಾಗ ಈ ಮಾತಿನ ವಾಸ್ತವತೆಯು ಬಗೆಗೆ ಕೇಳುಗರಿಗೆ ಅರಿವಾಗುತ್ತಿತ್ತು. ಅವರ ಸ್ವರ ಮೃದುವಾಗಿದ್ದರೂ ಸ್ಪಷ್ಟವಾಗಿತ್ತು, ದೃಢವಾಗಿತ್ತು. ಕೇಳುಗರ ಮೇಲೆ ಪರಿಣಾಮ ಬೀರುವ ಶಕ್ತಿ ಹಾಗೂ ಮೋಹಕತೆ ಅವರ ವಾಚನಕಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಂಡುಬರುತ್ತಿತ್ತು. ಬೊಂಬಾಯಿಯ ಸಹೃದಯ ಶ್ರೋತೃಗಳು ಜೋಶಿಯವರಿಗೆ ವಿಶೇಷವಾಗಿ ಆಭಾರಿಗಳು, ಏಕೆಂದರೆ ಕವಿ ಅಲ್ಲಿ ಎರಡುಬಾರಿ ಸುಶ್ರಾವ್ಯವಾಗಿ ತಮ್ಮ ಕವನಗಳನ್ನು ವಾಚನಮಾಡಿ ಕೇಳುಗರನ್ನು ಮಂತ್ರಮುಗ್ಧರನ್ನಾಗಿ ಮಾಡಿದ್ದರು.

ಕಳೆದ ಐವತ್ತು ವರ್ಷಗಳಿಂದ ಉಮಾಶಂಕರ ಜೋಶಿಯವರು ಗುಜರಾತಿ ಸಾಹಿತ್ಯಾಕಾಶದ ಉದ್ದಗಲಕ್ಕೂ ತಮ್ಮ ಕಾವ್ಯ ಪ್ರಭೆಯನ್ನು ಹರಡಿದ್ದರು. ನಿಜ ವಾಗಿಯೂ ಈ ಅವಧಿಗೆ 'ಉಮಾಶಂಕರ ಜೋಶಿಯವರ ಯುಗ' ಎಂದು ಕರೆದರೆ ಸೂಕ್ತವಾಗಬಹುದು. ಹನ್ನೊಂದು ಕವನ ಸಂಗ್ರಹಗಳನ್ನೇ ಅಲ್ಲದೆ ಅವರು ಒಂದು ಕಾದಂಬರಿಯನ್ನು ಬರೆದರು. ಇಷ್ಟೇ ಅಲ್ಲದೆ ಅವರ ಬರಣಿಗೆಗಳಲ್ಲಿ ಎರಡು ಸಣ್ಣಕತೆಗಳ ಸಂಕಲನಗಳು, ಏಕಾಂಕ ನಾಟಕಗಳು, ಸಂಶೋಧನ ಗ್ರಂಥಗಳು, ವಿಮರ್ಶೆಗಳು, ಪ್ರಬಂಧಗಳು, ಶಬ್ದಚಿತ್ರಗಳು, ಒಂದು ಡೈರಿ, ಒಂದು ಪ್ರವಾಸಕಥನ ಇವೆಲ್ಲ ಸೇರುತ್ತವೆ. ಇವುಗಳೊಟ್ಟಿಗೆ ಅವರು ಸಂಸ್ಕೃತ ಸಾಹಿತ್ಯದ ಎರಡು ಅಮರ ನಾಟಕ ಕೃತಿಗಳನ್ನು— ಕಾಳಿದಾಸನ 'ಅಭಿಜ್ಞಾನ ಶಾಕುಂತಲಮ್' ಮತ್ತು ಭವಭೂತಿಯ 'ಉತ್ತರ ರಾಮ ಚರಿತಮ್'—ಗುಜರಾತಿಗೆ ಭಾಷಾಂತರ ಮಾಡಿದ್ದಾರೆ. ಅವರು ರಚಿಸಿರುವ ವೈವಿಧ್ಯ ಮಯವಾದ ಸಾಹಿತ್ಯ ರಾಶಿಯನ್ನು ಪಟ್ಟಿಮಾಡಿದರೆ ಅವರ ವಿದ್ವತ್ತು ಎಷ್ಟು ವಿಶಾಲ ವಾಗಿತ್ತು, ಎಷ್ಟು ಆಳವಾಗಿತ್ತು, ಅವರ ಸಾಹಿತ್ಯಿಕ ಪ್ರತಿಭೆ ಎಷ್ಟು ಬಹುಮುಖಿ ಯಾಗಿತ್ತು ಎಂಬ ಅಂಶಗಳು ಮನದಟ್ಟಾಗುತ್ತವೆ. ಅವರು ೧೯೪೭ ರಿಂದ ೧೯೮೮ರವರೆಗೆ, ಕೊನೆಯವರೆಗೆ 'ಸಂಸ್ಕೃತಿ' ಪತ್ರಿಕೆಯ ಸಂಪಾದಕರೂ ಆಗಿದ್ದರು.

ಉನ್ನತ ಮಟ್ಟದ ಶಿಕ್ಷಣ ತಜ್ಞ

ಉಮಾಶಂಕರ ಜೋಶಿಯವರು ಕೇವಲ ಒಬ್ಬ ಪ್ರಕಾಂಡ ಪಂಡಿತ, ಮೊದಲ ದರ್ಜೆಯ ಸೃಜನಶೀಲ ಸಾಹಿತಿ ಇಷ್ಟೇ ಆಗಿದ್ದರೂ ಗುಜರಾತಿ ಜನತೆಯ ಗೌರವಾದರ

ಗಳಿಗೆ ಪಾತ್ರರಾಗುತ್ತಿದ್ದರು. ಆದರೆ ಅವರ ಕಾರ್ಯರಂಗದ ಪರಿಧಿ ಇಷ್ಟಕ್ಕೇ ಸೀಮಿತಗೊಂಡಿರಲಿಲ್ಲ. ಇದಕ್ಕಿಂತಲೂ ಭಿನ್ನವಾಗಿ ಅವರಿಗೆ ಹೆಸರು ತಂದ ಬೇರೆ ಕ್ಷೇತ್ರಗಳೂ ಇದ್ದವು.

ಅವರು ಒಬ್ಬ ಒಳ್ಳೆಯ ಮಾತುಗಾರರಾಗಿದ್ದರು, ಪ್ರಭಾವ ಬೀರುವಂತಹ ಭಾಷಣಕಾರರೆನಿಸಿದ್ದರು. ಅಷ್ಟರ ಮಟ್ಟಿಗೇ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಬಲ್ಲ ಉತ್ತಮ ಅಧ್ಯಾಪಕರೂ ಆಗಿದ್ದರು. ಒಬ್ಬ ಶ್ರೇಷ್ಠ ಅಧ್ಯಾಪಕರೆನಿಸಿಗೊಂಡಿದ್ದ ಕಾರಣದಿಂದಲೇ ಅವರು ಗುಜರಾತ್ ವಿಶ್ವವಿದ್ಯಾಲಯದ ಉಪಕುಲಪತಿಗಳಾದರು. ಶಾಂತಿನಿಕೇತನದಲ್ಲಿರುವ 'ವಿಶ್ವಭಾರತೀ' ವಿಶ್ವವಿದ್ಯಾನಿಲಯದ ಕುಲಪತಿಗಳಾಗಿಯೂ ನೇಮಕಗೊಂಡರು. ಜೋಶಿಯವರಿಗಿಂತ ಮೊದಲಿಗೆ 'ವಿಶ್ವಭಾರತಿ'ಗೆ ಕುಲಪತಿಗಳಾಗುವ ಸವಲತ್ತು ಕೇವಲ ನಾಡಿನ ಪ್ರಧಾನಮಂತ್ರಿಯವರಿಗೆ ಮಾತ್ರ ಮೀಸಲಾಗಿತ್ತು. ಕಲ್ಕತ್ತೆಯಲ್ಲಿ ಟಾಗೂರರ ವಿಚಾರವಾಗಿ ಅವರು ನೀಡಿದ ಭಾಷಣಗಳಿಂದ ಆ ಜನರಿಗೆ ಅವರ ಪಾಂಡಿತ್ಯದ ಪರಿಚಯವಾಯಿತು. ಮಾಸ್ಕೊನಲ್ಲಿ ವ್ಯವಸ್ಥೆಗೊಂಡಿದ್ದ ಟಾಲ್‌ಸ್ಟಾಯ್‌ರವರ ನೂರೈವತ್ತನೆಯ ಜನ್ಮದಿನದ ಅಂಗವಾಗಿ ನಡೆದ ವಿಚಾರಗೋಷ್ಠಿಯಲ್ಲಿ ಜೋಶಿಯವರು ಟಾಲ್‌ಸ್ಟಾಯ್‌ರವರ ಮಾನವ ಪ್ರೇಮದ ಪಾವನ ಸಂದೇಶ ಭಾರತೀಯರ ಮನಸ್ಸಿನಲ್ಲಿ ಎಷ್ಟು ಆಳವಾಗಿ ಹೊಕ್ಕು ಒಂದಾಗಿಹೋಗಿದೆ ಎಂಬುದನ್ನು ಸೊಗಸಾಗಿ ನಿರೂಪಿಸಿದರು.

೧೯೭೦ರಲ್ಲಿ ಜೋಶಿಯವರು ಆರುವರ್ಷಗಳ ಕಾಲ ರಾಜ್ಯಸಭೆಯ ಸದಸ್ಯರಾಗಿ ನಾಮಕರಣಗೊಂಡರು. ೧೯೭೮ರಲ್ಲಿ ಅವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ನೇಮಕಗೊಂಡರು. ಈ ಎರಡು ಹುದ್ದೆಗಳಲ್ಲೂ ಅವರು ಸಂಬಂಧಪಟ್ಟ ಎಲ್ಲರ ಮೆಚ್ಚುಗೆ ಗಳಿಸಿ ಸೇವೆ ಸಲ್ಲಿಸಿದರು.

ತುರ್ತುಪರಿಸ್ಥಿತಿಯಲ್ಲಿ ಉಮಾಶಂಕರ ಜೋಶಿಯವರು ಅತ್ಯಾಚಾರಗಳಿಗೆ ತುತ್ತಾದ ಜನತೆಯನ್ನು ಪಾಂಚಾಲಿಗೆ ಹೋಲಿಸಿ ನಾಡಿನ ನಾಯಕರನೇಕರನ್ನು ಛೇಡಿಸಿ ಅವರಿಗೆ ತಲೆನೋವು ಉಂಟುಮಾಡಿದ್ದರು. ಜೋಶಿಯವರು ತುರ್ತು ಪರಿಸ್ಥಿತಿಯ ವಿರೋಧವಾಗಿ ಯಾವ ಸೊಲ್ಲನ್ನು ಎತ್ತಲಾರರೆಂದೇ ಬಹುಮಂದಿ ನಾಯಕರು ಭಾವಿಸಿದ್ದರು. ಲೋಕಸಭೆಯ ಸದಸ್ಯರ ಎದುರಿಗೇ ಅವರು ಅತ್ಯಾಚಾರಿಗಳು ಪಾಂಚಾಲಿರೂಪಿಯಾದ ಉಪೇಕ್ಷಿತಳಾದ ತಿರಸ್ಕೃತಳಾದ ಸ್ವಾತಂತ್ರ್ಯದೇವಿಯ ಮೇಲೆ ಕೈಮಾಡಿದ್ದಾರೆಂದು ಆಕ್ರೋಶದಿಂದ ಹೇಳಿದಾಗ, ಬಹುಮಂದಿ ಸದಸ್ಯರು ಸ್ತಬ್ಧರಾಗಿಹೋಗಿದ್ದರು. ಜೋಶಿಯವರ ಮಾತಿಗೆ ಪ್ರತ್ಯುತ್ತರ ನೀಡುವ ಸಾಹಸ ಯಾರಿಗೂ ಉಂಟಾಗಲಿಲ್ಲ.

ವಿನಯಸಂಪನ್ನರು, ಸ್ನೇಹಪರರು

ತಮ್ಮ ಇಷ್ಟೊಂದು ಅಸಾಧಾರಣವಾದ ಸಾಧನೆಗಳ ನಡುವೆಯೂ ಜೋಶಿಯವರದು ವಿನಮ್ರ ವ್ಯಕ್ತಿತ್ವ. ಅವರು ಮೃದುಭಾಷಿಗಳು, ಸ್ನೇಹಪರರು ಆಗಿದ್ದರು. ಅವರು ತುಂಬ ಸಹಜವಾಗಿ ಜನರೊಡನೆ ಒಂದಾಗಿ ಬೆರೆಯುತ್ತಿದ್ದರು. ತಮ್ಮ ಅಹಂಭಾವದ ಒಣ ಪ್ರದರ್ಶನವನ್ನು ಯಾರ ಎದುರಿಗೆ ಆಗಲಿ ಮಾಡುವುದು ಅವರಿಗೆ ಸ್ವಲ್ಪವೂ ಸರಿಹೋಗುತ್ತಿರಲಿಲ್ಲ.

ಅವರ ಸೌಜನ್ಯ ಹಾಗೂ ವಿನಮ್ರತೆಗಳನ್ನು ಕುರಿತಂತೆ ಸಣ್ಣ ಘಟನೆಯೊಂದನ್ನು ಇಲ್ಲಿ ಉಲ್ಲೇಖಿಸುತ್ತಿದ್ದೇನೆ. ಅವರು ನಿಧನರಾಗುವುದಕ್ಕೆ ಸ್ವಲ್ಪ ಮುಂಚೆ ಅಹಮದಾಬಾದಿನಲ್ಲಿದ್ದ ಅವರ ಮನೆ 'ಸೇತು'ವಿನಲ್ಲಿ ನಾನು ಅವರನ್ನು ಭೇಟಿಯಾಗಿದ್ದೆ. ಅದೂ ಇದೂ ಮಾತನಾಡುತ್ತ ನಾನು ಅವರಿಗೆ ಹೇಳಿದೆ—"ತಾವು ತಮ್ಮ ಗುಜರಾತಿ ಕವನಗಳನ್ನು ಇಂಗ್ಲಿಷಿಗೆ ಭಾಷಾಂತರಿಸಿದ್ದೀರಿ ಎಂಬುದನ್ನು ನಾನು ಬಲ್ಲೆ. ಇಂಗ್ಲಿಷಿಗೆ ಅನುವಾದಗೊಂಡಿರುವ ಆ ಕವನಗಳೆಲ್ಲ ಪ್ರಕಾಶಗೊಂಡರೆ ಗುಜರಾತಿ ಬಾರದ, ಆದರೆ ಇಂಗ್ಲಿಷ್ ಬಲ್ಲ ಓದುಗರಿಗೆ ತಮ್ಮ ಕೃತಿಗಳ ಪರಿಚಯ ಮಾಡಿಕೊಳ್ಳುವ ಅವಕಾಶ ದೊರೆಯುತ್ತದಲ್ಲ. ಹಾಗೆ ದೊರೆತರೆ ಎಷ್ಟು ಚೆನ್ನಾಗಿರುತ್ತದೆ."

ಅವರು ತುಂಬ ಸರಳವಾಗಿ ವಿನಮ್ರರಾಗಿ ಉತ್ತರಿಸಿದರು—"ನನ್ನ ಬಳಿ ಅಷ್ಟೊಂದು ಹೆಚ್ಚು ಸಂಖ್ಯೆಯಲ್ಲಿ ಅನುವಾದಗೊಂಡ ಕವನಗಳು ಇಲ್ಲ. ಆದರೆ ಅನೇಕ ಮಂದಿ ಪ್ರಕಾಶಕರು ಈ ವಿಚಾರವಾಗಿ ಬೇಡಿಕೆ ಸಲ್ಲಿಸಿದ್ದಾರೆ ಎಂಬುದಂತೂ ನಿಜ."

ಅದಕ್ಕೆ ನಾನು ಬದಲು ಹೇಳಿದೆ—"ಅನೇಕ ಮಂದಿ ಪ್ರಕಾಶಕರು ಈ ಬಗೆಯ ಬೇಡಿಕೆ ಸಲ್ಲಿಸಿರುವುದರಿಂದ ತಾವು ಯಾರಾದರೂ ಒಬ್ಬ ಯೋಗ್ಯ ವ್ಯಕ್ತಿಯಿಂದ ಇವೆಲ್ಲವನ್ನೂ ಅನುವಾದ ಮಾಡಿಸುವ ಅಥವಾ ತಾವೇ ಮಾಡುವ ಹಾಗಾದರೆ ಉತ್ತಮವಾಗುವುದಿಲ್ಲವೆ?"

"ನಿಮ್ಮ ಸಲಹೆಯೇನೊ ಉತ್ತಮವಾದದ್ದೆ. ಆದರೆ ಈ ಕೆಲಸದಲ್ಲಿ ತೊಡಗಿಸಿಕೊಳ್ಳಲು ಈಗ ನನ್ನಲ್ಲಿ ಉತ್ಸಾಹವಾಗಲಿ, ಆಸಕ್ತಿಯಾಗಲಿ ಉಳಿದಿಲ್ಲ. ಈ ಬಗೆಯ ಅನುವಾದ ಕಾರ್ಯವನ್ನು ಮಾಡುವ ಇಲ್ಲವೆ ಮಾಡಿಸುವ ಆಸಕ್ತಿಯುಳ್ಳವರು ತಾವೇ ಸ್ವತಃ ಈ ದಿಕ್ಕಿನಲ್ಲಿ ಮುಂದುವರಿಯಬೇಕಷ್ಟೆ. ಇಂಗ್ಲಿಷ್ ಅಥವಾ ಫ್ರೆಂಚ್ ಮಂದಿ ಈವರೆಗೆ ನನ್ನ ಕೃತಿಗಳನ್ನು ಅನುವಾದಿಸಿಕೊಳ್ಳುವ ದಿಕ್ಕಿನಲ್ಲಿ ಯಾವ ಪ್ರಯತ್ನವನ್ನೂ ನಡೆಸಿಲ್ಲ."

"ಆದರೆ ತಾವು ಅಂತಾರಾಷ್ಟ್ರೀಯ ಖ್ಯಾತಿಯ ಕವಿ. ಈ ಕೆಲಸ ಅವಶ್ಯವಾಗಿ ಆಗಲೇಬೇಕು."

ಸೌಮ್ಯವಾಗಿ ಮುಗುಳ್ನಗುತ್ತಾ ಉಮಾಶಂಕರರು ತುಂಬ ಸೌಜನ್ಯದಿಂದ ಅಂದರು—"ಈಗ ಈ ವಿಚಾರಗಳು ಮೊದಲಿನಂತೆ ಸುಲಭವಾಗಿಲ್ಲ. ಕೇವಲ ವಿಮಾನದ ಟಿಕೆಟ್ ಪಡೆದೇ ಯಾರೇ ಆಗಲಿ ಅಂತಾರಾಷ್ಟ್ರೀಯ ಕವಿಯಾಗಬಲ್ಲ ಕಾಲ ಇದು."

ಈ ಸಂದರ್ಭದಲ್ಲಿ ಜೋಶಿಯವರ ಕವನಗಳ ಬಗೆಗೆ ನಾನು ಹೇಳಬಯಸುವುದೇನೆಂದರೆ ಅವು ಭಾವಾತಿರೇಕದಿಂದ ಮುಕ್ತವಾಗಿದ್ದರೂ ನಿಮ್ಮನ್ನು ನಗಿಸಬಲ್ಲವು, ಅಥವಾ ನಿಮ್ಮ ಕಣ್ಣಲ್ಲಿ ನೀರು ತರಿಸಬಲ್ಲವು. ಮುಂಬರುವ ದಿನಗಳು ಅವರ ಕಾವ್ಯದ ಬಗೆಗೆ ಯಾವ ನಿಲುವನ್ನು ತಳೆಯುತ್ತವೆಯೊ ಈಗಲೇ ಹೇಳಲು ಸಾಧ್ಯವಾಗಲಾರದು. ಆದರೆ ಅವರ ಬರವಣಿಗೆ ನಮ್ಮನ್ನು ಆಳವಾಗಿ ಯೋಚಿಸುವಂತೆ ಮಾಡುತ್ತವೆ, ಬೆಳವಣಿಗೆಯ ದಿಕ್ಕಿನಲ್ಲಿ ಮುನ್ನಡೆಯಲು ಪ್ರೇರಣೆ ನೀಡುತ್ತವೆ.

ಗುಜರಾತಿಯ ಈ ಶ್ರೇಷ್ಠ ಸಾಹಿತಿಯ ವಿಚಾರದಲ್ಲಿ ನಾವು ಸಲ್ಲಿಸಬಹುದಾದ ಅತ್ಯುತ್ತಮ ರೀತಿಯ ಶ್ರದ್ಧಾಂಜಲಿಯೆಂದರೆ ಸಾಹಿತ್ಯ ಅಕಾಡೆಮಿ ಹಾಗೂ ಇತರ

ಪ್ರಕಾಶಕರು ಅವರ ಕೃತಿಗಳನ್ನು ಭಾರತೀಯ ಮತ್ತು ವಿದೇಶಿ ಭಾಷೆಗಳಿಗೆ ಚೆನ್ನಾಗಿ ಅನುವಾದ ಮಾಡಿಸಿ ಪ್ರಕಟಿಸಬೇಕು. ಅವರ ಕೃತಿಗಳನ್ನು ಇಂಗ್ಲಿಷಿನಲ್ಲಿ ಹೊರ ತರುವುದರ ಮೂಲಕ ಅವರ ಹೆಸರು ವಿದೇಶೀಯರಿಗೂ ಪರಿಚಯವಾದಂತಾಗುತ್ತದೆ. ಅವರ ಸಾಹಿತ್ಯದ ಪರಿಮಳ ಅಲ್ಲೂ ಹರಡಲು ಅವಕಾಶವಾಗುತ್ತದೆ.

ಅವರ ಪವಿತ್ರ ನೆನಪಿನಲ್ಲಿ ಈ ಕೆಲಸವನ್ನು ಯಾರಾದರೂ ಕೈಗೆತ್ತಿಕೊಳ್ಳಬೇಕು. ಟಾಗೂರ್, ಗಾಂಧೀಜಿ ಮುಂತಾದ ಋಷಿ ಸದೃಶರಾದ ಚಿಂತನಶೀಲರ ಸಾಲಿನಲ್ಲಿ 'ವಸುಧೈವ ಕುಟುಂಬಕಮ್' ಎಂಬುದಾಗಿ ವಿಶ್ವಮಾನವತ್ವವನ್ನು ಸಾರಿದ ಜೋಶಿಯವರ ಹೆಸರು ಕೂಡ ಸೇರುವಂತಾಗಬೇಕು.

ಅನು : ಲಕ್ಷ್ಮೀನಾರಾಯಣ ಅರೋರಾ

ಪ್ರಕೃತಿಯ ನಿಯಮಗಳನ್ನು ತಿಳಿದು ಅಥವಾ ತಿಳಿಯದೆಯೆ ಉಲ್ಲಂಘಿಸುವುದು ಅಸತ್ಯದ ಒಂದು ರೂಪ.

ಪ್ರಪಂಚಕ್ಕೆ ಹೊಸದಾಗಿ ಹೇಳಲು ನನ್ನಲ್ಲಿ ಏನೂ ಇಲ್ಲ. ಸತ್ಯ ಮತ್ತು ಅಹಿಂಸೆಗಳು ಪರ್ವತಗಳಷ್ಟೇ ಹಳೆಯವು.

ಗಾಂಧೀಜಿ


ಕೋಪರ್ನಿಕಸ್

ಹೆಚ್. ಸಂಜೀವಯ್ಯ

ಪ್ಲೇಟೊ, ಅರಿಸ್ಟಾಟಿಲ್ ಮತ್ತು ಟಾಲೆಮಿ ಇವರು ರೂಪಿಸಿದ ವಿಶ್ವ ಚಿತ್ರ ವಿದ್ವಾಂಸರ ಮನಸ್ಸಿನಲ್ಲಿ ಭದ್ರವಾಗಿ ನೆಲೆಸಿತ್ತು. ಇದೂ ಅಲ್ಲದೆ ಈ ಚಿತ್ರ ಬೈಬಲ್ಲಿನ ಬೋಧನೆಗೆ ಹೊಂದಿಕೊಂಡಿತ್ತು. ಆದುದರಿಂದ ಲೆಕ್ಕಾಚಾರಗಳು ಎಷ್ಟೇ ತೊಡಕಾಗುತ್ತ ಹೋದರೂ ಖಗೋಳ ಶಾಸ್ತ್ರಜ್ಞರು ಆ ಸ್ಥಾನದಿಂದ ಕದಲಲಿಲ್ಲ. ಪೈತಾಗೊರಸ್ ಯೂಡಾಕ್ಸಸ್ ಮತ್ತು ಅರಿಸ್ಟಾರ್ಕಸ್ ಅಂಥವರ ಅಭಿಪ್ರಾಯಗಳಿಗೆ ಮನ್ನಣೆ ಸಿಕ್ಕಲಿಲ್ಲ. ಭೂಮಿಯೇ ವಿಶ್ವದ ಕೇಂದ್ರ, ಅದನ್ನು ಬಳಸಿರುವ ಪಾರದರ್ಶಕ ಗೋಳಗಳಿಗೆ ಸೂರ್ಯ, ಚಂದ್ರ, ಗ್ರಹಗಳು ಮತ್ತು ನಕ್ಷತ್ರಗಳು ಅಂಟಿಕೊಂಡಿವೆ; ಈ ಗೋಳ ಸಮೂಹ ಪೂರ್ವ–ಪಶ್ಚಿಮವಾಗಿ ಸುತ್ತುವುದರಿಂದ ಹಗಲು ರಾತ್ರಿಗಳಾಗುತ್ತವೆ ಎಂಬ ಸ್ಥೂಲ ಚಿತ್ರವನ್ನು ಒಂದು ಪರಿಪೂರ್ಣ ಸ್ಥಿತಿಗೆ ತರಲು ಟಾಲೆಮಿ ವೃತ್ತಗಳ ಮೇಲೆ ವೃತ್ತಗಳನ್ನು ನಿಲ್ಲಿಸಿ, ಈ ಅಧಿವೃತ್ತಗಳಲ್ಲಿ ಆಕಾಶಕಾಯಗಳು ಸುತ್ತುತ್ತಾ ಇರುವಂತೆ ಅವುಗಳು ಸ್ಥಾಪನೆಗೊಂಡಿರುವ ವಾಹಕ ವೃತ್ತಗಳು ಭೂಮಿಯ ಸುತ್ತ ತಿರುಗುವಂತೆ ಮಾಡಿದ. ವೀಕ್ಷಣೆಯಲ್ಲಿ ಕಂಡ ತೊಡಕನ್ನು ನಿವಾರಿಸಲು ಅವನು ತನ್ನ ಜಾಮಿತಿ ರಚನೆಯನ್ನು ಅತಿ ಸಂಕೀರ್ಣಗೊಳಿಸಿದ್ದ. ಗೋಳ ಮತ್ತು ವೃತ್ತಗಳನ್ನು ಬಿಟ್ಟು ಬೇರೆ ಯಾವ ಆಕೃತಿಯನ್ನು ಊಹಿಸಿಕೊಳ್ಳಲೂ ಖಗೋಳಶಾಸ್ತ್ರಜ್ಞರು ಸಿದ್ಧರಿರಲಿಲ್ಲ. ಈ ಪರಂಪರೆಯನ್ನು ಹೊತ್ತು ಕೋಪರ್ನಿಕಸ್ ೧೯-೨-೧೪೭೩ ರಂದು ಪೋಲೆಂಡ್ ದೇಶದ ವಿಸ್ಟುಲಾ ನದಿಯ ತೀರದಲ್ಲಿರುವ ಟೋರುನ್ ಪಟ್ಟಣದಲ್ಲಿ ಜನಿಸಿದ. ಅವನ ತಂದೆ ನಿಕೊಲಾಸ್ ಕೋಪರ್ನಿಕ್ ಆ ಪಟ್ಟಣದಲ್ಲಿ ಒಬ್ಬ ಶ್ರೀಮಂತ ವ್ಯಾಪಾರಿಯಾಗಿದ್ದ. ಅವನ ತಾಯಿ ಬಾರ್ಬರ ವಾಕ್ಜೆನ್ರೋಡ್ ಶ್ರೀಮಂತ ಕುಟುಂಬಕ್ಕೆ ಸೇರಿದ್ದಳು. ಕೋಪರ್ನಿಕಸನಿಗೆ ೧೦ ವರ್ಷ ತುಂಬುವ ಮೊದಲೇ ಈ ತಂದೆ

ತಾಯಿಗಳು ತೀರಿಕೊಂಡರು. ಅವನು ಸೋದರಮಾವ ವಾಕ್ಸೆನ್ರೋಡನ ರಕ್ಷಣೆಯಲ್ಲಿ ಬೆಳೆದ.

ವಾಕ್ಸೆನ್ರೋಡ್ ಮತಧರ್ಮದ ವಿಷಯದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದಿದ್ದ. ಧರ್ಮಗುರುವಾಗಿದ್ದ ಅವನು ೧೪೮೯ರಲ್ಲಿ ಎರ್ಮ್ಲೆಂಡ್ ಬಿಷಪ್ ಪದವಿಗೆ ಏರಿದ್ದ. ಅವನಿಗೆ ಕೋಪರ್ನಿಕಸನ ಬಗೆಗೆ ತುಂಬ ಆದರವಿತ್ತು. ಅವನು ತನ್ನ ಸೋದರಳಿಯನೂ ತನ್ನಂತೆಯೆ ಧಾರ್ಮಿಕ ವಿಷಯದಲ್ಲಿ ಉನ್ನತ ವ್ಯಾಸಂಗ ನಡೆಸಿ ಕ್ರೈಸ್ತ



ಚಿತ್ರ ೧. ಟಾಲೆಮಿಯ ವಿಶ್ವ

1 ಭೂಮಿ, 2 ಚಂದ್ರ, 3 ಬುಧ, 4 ಶುಕ್ರ, 5 ಸೂರ್ಯ, 6 ಮಂಗಳ, 7 ಗುರು 8 ಶನಿ, 9 ಸ್ಥಿರ ನಕ್ಷತ್ರಗಳು.

ಮತಮಂಡಳಿಯ ಸದಸ್ಯನಾಗಬೇಕೆಂಬ (ಕ್ಯಾನನ್) ಆಸೆಯನ್ನು ಹೊಂದಿದ್ದ. ಇದರ ಜೊತೆಗೆ ಜನಸೇವೆ ಮಾಡಲು ಅವನು ವೈದ್ಯಕೀಯ ತರಬೇತಿ ಪಡೆಯಬೇಕೆಂಬ ಆಸೆಯೂ ಅವನಿಗಿತ್ತು.

೧೪೯೧ರಲ್ಲಿ ಕೋಪರ್ನಿಕಸ್ ಕ್ರಾಕೌ ವಿಶ್ವವಿದ್ಯಾನಿಲಯವನ್ನು ಸೇರಿದ. ಅಲ್ಲಿ ಅವನು ವೊಜೆಕ್ ಬ್ರುಡ್ಜೆವಸ್ಕಿ ಎಂಬ ಗಣಿತ ಶಾಸ್ತ್ರಜ್ಞನ ಪ್ರಭಾವಕ್ಕೆ ಒಳಗಾದ. ಬ್ರುಡ್ಜೆವಸ್ಕಿ ಟಾಲೆಮಿ ಜ್ಯಾಮಿತಿ ರಚನೆಯ ಬೆಂಬಲಿಗನಾಗಿದ್ದ. ಆದುದರಿಂದ ಕೋಪರ್ನಿಕಸನಿಗೆ ಟಾಲೆಮಿ ವಿಶ್ವರಚನೆಯ ಪರಿಚಯವಾಯಿತು; ಅವನ ಆಸಕ್ತಿ ಖಗೋಳ ಶಾಸ್ತ್ರದ ಕಡೆಗೆ ತಿರುಗಿತು.

ಬಿಷಪ್ ವಾಕ್ಜೆನ್ರೋಡ್ ಸೋದರಳಿಯನನ್ನು ಫ್ರಾನ್ಬರ್ಗಿನ ಕ್ಯಾನನ್ನನಾಗಿ ನೇಮಿಸಲು ಆಸಕ್ತನಾಗಿದ್ದ. ಆದುದರಿಂದ ಅವನನ್ನು ಉನ್ನತ ವ್ಯಾಸಂಗಕ್ಕಾಗಿ ಇಟಲಿಯ ಬಲೋನ್ ವಿಶ್ವವಿದ್ಯಾಲಯಕ್ಕೆ ಕಳುಹಿಸಿದ. ಅಲ್ಲಿ ಕೋಪರ್ನಿಕಸ್ ವೈದ್ಯ ವಿಜ್ಞಾನ, ಖಗೋಳಶಾಸ್ತ್ರ, ಗ್ರೀಕ್ ಭಾಷೆ, ಗಣಿತ, ತತ್ವಶಾಸ್ತ್ರ, ಕ್ಯಾನನ್ ನೀತಿ ಸಂಹಿತೆ ಇವುಗಳ ಅಧ್ಯಯನವನ್ನು ನಡೆಸಿದ. ಗ್ರೀಕ್ ಭಾಷೆಯಲ್ಲಿ ದೊರೆತ ಪರಿಣತಿಯಿಂದ ಅವನಿಗೆ ಅರಿಸ್ಟಾಟಲನ ವಿಜ್ಞಾನದ ಜೊತೆಗೆ ಪೈತಾಗೊರಸ್, ಯುಡಾಕ್ಸಸ್, ಅರಿಸ್ಟಾರ್ಕಸ್ ಮುಂತಾದವರ ಅಭಿಪ್ರಾಯಗಳ ಪರಿಚಯವೂ ಆಯಿತು. ಸೂರ್ಯ ಕೇಂದ್ರ ವಿಶ್ವರಚನೆಯ ಮಸುಕು ಚಿತ್ರ ಅವನ ಮನಸ್ಸಿನಲ್ಲಿ ಮೂಡಿತು.

ಬಲೋನ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಕೋಪರ್ನಿಕಸನಿಗೆ ಅಂದಿನ ಪ್ರಖ್ಯಾತ ಖಗೋಳಶಾಸ್ತ್ರಜ್ಞ ಡೊಮೆನಿಕೊ ನೊವಾರನ ಕೈಕೆಳಗೆ ಕೆಲಸ ಮಾಡುವ ಅವಕಾಶ ಸಿಕ್ಕಿತು; ಈ ಅವಧಿಯಲ್ಲಿ ಅವನು ಆಕಾಶಕಾಯಗಳ ವೀಕ್ಷಣೆಯಲ್ಲಿ ವಿಶೇಷ ತರಬೇತಿಯನ್ನು ಪಡೆದ. ಇದರಿಂದ ಅವನಿಗೆ ೯–೩–೧೪೯೭ರ ರಾತ್ರಿ ರೋಹಿಣಿ ನಕ್ಷತ್ರ ಚಂದ್ರಬಿಂಬದ ಹಿಂದೆ ಮರೆಯಾಗುವುದನ್ನು ನೋಡಲು ಅನುಕೂಲವಾಯಿತು. ಅವನು ಇಂಥ ಘಟನೆಗಳಿಗೆ ಸಂಬಂಧಿಸಿದ ಲೆಕ್ಕಾಚಾರಗಳನ್ನೂ ಕಲಿತುಕೊಂಡ. ಬಲೋನ್ ವಿಶ್ವವಿದ್ಯಾಲಯದಲ್ಲಿ ಅವನು ಇದ್ದದ್ದು ಮೂರೂವರೆ ವರ್ಷ. ಈ ನಡುವೆ ಅವನು ೧೪೯೭ರಲ್ಲಿ, ಗೈರುಹಾಜರಿಯಲ್ಲಿ, ಫ್ರಾನ್ಬರ್ಗಿನ ಕ್ಯಾನನ್ ಆಗಿ ನೇಮಕಗೊಂಡಿದ್ದ.

ಪವಿತ್ರ ಚರ್ಚ್ ೧೫೦೦ರನ್ನು ಜೂಬಿಲಿ ವರ್ಷವೆಂದು ಘೋಷಿಸಿತು. ಕೋಪರ್ನಿಕಸ್ ಅಣ್ಣನೊಂದಿಗೆ ರೋಮ್ ನಗರಕ್ಕೆ ಹೋಗಿ ಹಬ್ಬದ ವೈಭವದಲ್ಲಿ ಪಾಲುಗೊಂಡ. ಅಲ್ಲಿ ಅವನು ಗಣಿತಶಾಸ್ತ್ರದಲ್ಲಿ ಒಂದು ಉಪನ್ಯಾಸ ಮಾಲೆಯನ್ನೂ ಕೊಟ್ಟ. ಮರುವರ್ಷ ಅವನು ವೈದ್ಯಕೀಯ ವ್ಯಾಸಂಗವನ್ನು ಮುಂದುವರಿಸಲು ಇಟಲಿಯ ಪಾಡೊ ವಿಶ್ವವಿದ್ಯಾಲಯಕ್ಕೆ ಹೋದ. ಅಲ್ಲಿ ಅವನು ಎರಡು ವರ್ಷ ವ್ಯಾಸಂಗ ನಡೆಸಿದ. ೧೫೦೩ರಲ್ಲಿ ಅವನಿಗೆ ಫೆರಾರೊ ವಿಶ್ವವಿದ್ಯಾಲಯದ ಡಾಕ್ಟರ್ ಆಫ್ ಕ್ಯಾನನ್ ಲಾ ಪದವಿ ದೊರೆಯಿತು. ೧೫೦೬ರಲ್ಲಿ ಅವನು ಫ್ರಾನ್ಬರ್ಗಿಗೆ ಹಿಂತಿರುಗಿ ಕ್ಯಾನನ್ ಪದವಿಯ ಅಧಿಕಾರವನ್ನು ವಹಿಸಿಕೊಂಡ.

ಕೋಪರ್ನಿಕಸ್ ಗಳಿಸಿದ ವಿದ್ಯೆ ಅಪಾರ, ವೈವಿಧ್ಯಮಯ. ಅಂದಿಗೆ ಲಭ್ಯವಿದ್ದ ಜ್ಞಾನ ಭಂಡಾರವೆಲ್ಲ ಅವನಿಗೆ ವಶವಾಗಿತ್ತು. ಖಗೋಳ ವೀಕ್ಷಣೆಯಲ್ಲಿ ಬಳಸುತ್ತಿದ್ದ ಎಲ್ಲ ಬಗೆಯ ಉಪಕರಣಗಳ ಪರಿಚಯ ಅವನಿಗಾಗಿತ್ತು; ತತ್ಸಂಬಂಧವಾದ ಎಲ್ಲ ಬಗೆಯ

ಲೆಕ್ಕಾಚಾರಗಳೂ ಅವನಿಗೆ ತಿಳಿದಿದ್ದವು. ಬಡವರ ಬಗ್ಗೆ ಅವನು ದಯಾಪರನಾಗಿದ್ದ; ಅವನ ವೈದ್ಯಕೀಯ ಜ್ಞಾನದ ಹೆಚ್ಚು ಉಪಯೋಗ ಅವರಿಗಾಯಿತು.


ವಾಕ್ಸೆನ್ರೋಡ್ ಅನಾರೋಗ್ಯದಿಂದ ನರಳಿದ. ಕೋಪರ್ನಿಕಸ್ ಶ್ರದ್ಧೆಯಿಂದ ಅವನ ಶುಶ್ರೂಷೆಯನ್ನು ಮಾಡಿದ. ಸೋದರಮಾವ ಮತ್ತು ಅಳಿಯ ೧೫೧೨ರಲ್ಲಿ ಪೋಲೆಂಡಿನ ರಾಜ ಕ್ರಾಕೌ ನಗರದಲ್ಲಿ ಏರ್ಪಡಿಸಿದ್ದ ವಿವಾಹ ಭೋಜನಕ್ಕೆ ಹೋದರು. ಹಿಂತಿರುಗುವಾಗ ದಾರಿಯಲ್ಲಿ ವಾಕ್ಸೆನ್ರೋಡ್ ಮೃತನಾದ. ಇದರಿಂದ ಕೋಪರ್ನಿಕಸನಿಗೆ ತುಂಬ ನೋವಾಯಿತು. ಅಲ್ಲಿಂದ ಮುಂದೆ ಅವನು ೩೩ ವರ್ಷಗಳ ಕಾಲ ಫ್ರಾನ್ಬರ್ಗಿನಿಂದ ಹೊರಗೆ ಹೋಗಲಿಲ್ಲ. ತನ್ನ ಎಲ್ಲ ಕಾಲವನ್ನು ಅವನು ಬಡವರ ಸೇವೆಯಲ್ಲೂ ಖಗೋಳ ವಿಜ್ಞಾನದ ಅಧ್ಯಯನದಲ್ಲೂ ಕಳೆದ.

ಫ್ರಾನ್ಬರ್ಗಿನಲ್ಲಿ ನೆಲೆಸಿದಮೇಲೆ ಖಗೋಳಕಾಯಗಳ ವೀಕ್ಷಣೆಗಾಗಿ ಕೋಪರ್ನಿಕಸ್ ಒಂದು ಯೋಜನೆಯನ್ನು ಹಾಕಿಕೊಂಡಿದ್ದಂತೆ ಕಾಣುತ್ತದೆ. ಅಲ್ಲಿ ನಡೆಸಿದ ಅಳತೆಗಳಿಂದ ಅವನು ಸೂರ್ಯ, ಚಂದ್ರ ಮತ್ತು ಗ್ರಹಗಳ ಕಕ್ಷಾಘಟಕಗಳನ್ನು ಮರುನಿರ್ಧರಿಸಿದ. ೧೫೧೬ ರಿಂದ ೧೫೨೯ ರವರೆಗೆ ಅವನು ನಡಸಿದ ಸಂಶೋಧನೆಗಳ ಫಲ ೨೭ ಲೇಖನಗಳಲ್ಲಿ ಪ್ರಕಟಣೆಯನ್ನು ಕಂಡಿತು.

'ನಿರ್ದಿಷ್ಟ ಭವಿಷ್ಯ ನುಡಿಯ' ಖಗೋಳಶಾಸ್ತ್ರದ ಹೆಗ್ಗಳಿಕೆ. ಹಿಂದಿನಿಂದ ಟಾಲೆಮಿಯ ಜ್ಯಾಮಿತಿ ರಚನೆಯನ್ನು ಅನುಸರಿಸಿ ಈ ಕೆಲಸ ನಡೆಯುತ್ತಿತ್ತು. ಲೆಕ್ಕಾಚಾರಗಳಲ್ಲಿ ತೊಡಕು ಉಂಟಾದಾಗಲೆಲ್ಲ ಅಧಿವೃತ್ತಗಳ ಸಂಖ್ಯೆಯನ್ನು ಹೆಚ್ಚಿಸುವುದು ಅನಿವಾರ್ಯವಾಗುತ್ತಿತ್ತು, ತಿಂತಿಣಿವರಿದ ಈ ಅಧಿವೃತ್ತಗಳು ಕೋಪರ್ನಿಕಸನಿಗೆ ಹಿಡಿಸಲಿಲ್ಲ. ಆದರೆ ಆಕಾಶಕಾಯಗಳು ಪರಿಪೂರ್ಣವಾದ ವೃತ್ತ ಪಥದಲ್ಲಿ ಚಲಿಸುತ್ತವೆಂಬುದನ್ನು ಕೈಬಿಡಲು ಅವನು ಸಿದ್ಧನಿರಲಿಲ್ಲ. ಅಷ್ಟರಮಟ್ಟಿಗೆ ಅವನ ಧರ್ಮಶ್ರದ್ಧೆ, ಸೌಂದರ್ಯ ಪ್ರಜ್ಞೆ ಅವನನ್ನು ಬಂಧಿಸಿದ್ದವು. ಭೂಮಿಯನ್ನು ವಿಶ್ವದ ಕೇಂದ್ರಸ್ಥಾನದಿಂದ ತೆಗೆದು ಲೆಕ್ಕಾಚಾರಗಳನ್ನು ಸರಳಗೊಳಿಸಲು ಅವನು ಮುಂದಾದ. ಸೂರ್ಯನನ್ನು ವಿಶ್ವದ ಕೇಂದ್ರ ಸ್ಥಾನದಲ್ಲಿ ಇಟ್ಟ ತಕ್ಷಣ ಲೆಕ್ಕಾಚಾರದ ತೊಡಕುಗಳೆಲ್ಲಾ ಮಾಯವಾದವು. ಸೂರ್ಯಕೇಂದ್ರ ವಿಶ್ವರಚನೆಯ ಚಿತ್ರ ಅವನ ಮನಸ್ಸಿನಲ್ಲಿ ಇದ್ದದ್ದೂ ನಿಜ. ಲೆಕ್ಕಾಚಾರವನ್ನು ಸರಳಗೊಳಿಸುವ ದೃಷ್ಟಿಯಿಂದ ಸೂರ್ಯಕೇಂದ್ರ ವಿಶ್ವರಚನೆಯ ಚಿತ್ರವನ್ನು ಮಂಡಿಸಿದ್ದರೂ ಅದರ ಯಥಾರ್ಥತೆಯನ್ನು ಸ್ವೀಕರಿಸಲು ಅವನಿಗೆ ಹೆಚ್ಚು ಕಾಲ ಬೇಕಾಗಲಿಲ್ಲ.

ಭೂಮಿ ಸಾಮಾನ್ಯ ಗ್ರಹಗಳ ಸ್ಥಾನಕ್ಕೆ ಇಳಿಯಿತು. ಪ್ರತಿದಿನ ತನ್ನ ಅಕ್ಷದ ಮೇಲೆ ತಿರುಗುತ್ತ ವರ್ಷಕ್ಕೊಮ್ಮೆ ಸೂರ್ಯನನ್ನು ಸುತ್ತಿಬರುವ ಸಾಧಾರಣ ಕೈಂಕರ್ಯ ಅದರದ್ದಾಯಿತು. ಇದು ಕ್ರಿಶ್ಚಿಯನ್ ಧರ್ಮದ ಬುಡವನ್ನೆ ಅಲುಗಿಸಿತು. ಕೋಪಾವಿಷ್ಟನಾದ ಲೂಥರ್, "ಈ ಅಲ್ಪೋದ್ಧತ ಜ್ಯೋತಿಷಿಯ ಮಾತಿಗೆ ಯಾರು ಕಿವಿಗೊಡುತ್ತಾರೆ", ಎಂದು ಕೋಪರ್ನಿಕಸನನ್ನು ಹೀಗಳೆದ. ಕಾಲ್ವಿನ್, "ಯಾರು ಕೋಪರ್ನಿಕಸನ ಅಧಿಕಾರವನ್ನು ಪವಿತ್ರಾತ್ಮನ ಅಧಿಕಾರಕ್ಕಿಂತ ಮೇಲಿರಿಸುತ್ತಾರೆ", ಎಂದು ತಾತ್ಸಾರದಿಂದ ನುಡಿದ. ಕೋಪರ್ನಿಕಸನನ್ನು ದೂಷಿಸಲು ಕ್ಯಾಥೊಲಿಕರು ಮತ್ತು ಪ್ರಾಟೆಸ್ಟೆಂಟರು ಪಂಥಭೇದ ಮರೆತು ಒಂದುಗೂಡಿದರು.

ಸೂರ್ಯ ಕೇಂದ್ರ ವಿಶ್ವದ ಚಿತ್ರ ಇದು : ಕೇಂದ್ರದಲ್ಲಿ ಸೂರ್ಯ, ಅದಕ್ಕೆ ಹತ್ತಿರದಲ್ಲಿರುವ ಗ್ರಹ ಬುಧ, ಎರಡನೆಯದು ಶುಕ್ರ, ನಂತರದ್ದು ಭೂಮಿ. ಚಂದ್ರ ವೃತ್ತ ಕಕ್ಷೆಯಲ್ಲಿ ಭೂಮಿಯ ಸುತ್ತ ತಿರುಗುತ್ತದೆ. ಭೂಮಿಯಿಂದ ಹೊರಗೆ ಮಂಗಳ, ಗುರು ಮತ್ತು ಶನಿ ಗ್ರಹಗಳಿವೆ. ಶನಿಗ್ರಹದಿಂದ ಬಹಳ ದೂರದಲ್ಲಿ ಸ್ಥಿರ ನಕ್ಷತ್ರಗಳ ಗೋಳವಿದೆ. ಎಲ್ಲ ಗ್ರಹಗಳೂ ಸೂರ್ಯನ ಸುತ್ತ ವೃತ್ತ ಕಕ್ಷೆಗಳಲ್ಲಿ ಚಲಿಸುತ್ತವೆ. ಒಂದು ಗ್ರಹ ಒಂದುಸಾರಿ ಸೂರ್ಯನ ಸುತ್ತ ಬರುವುದಕ್ಕೆ ತೆಗೆದುಕೊಳ್ಳುವ ಕಾಲ ಅದರ ವರ್ಷ. ಬುಧಗ್ರಹದ ವರ್ಷ ಕನಿಷ್ಠ ಅವಧಿಯದು. ಶನಿಗ್ರಹದ ವರ್ಷ ಗರಿಷ್ಠ ಅವಧಿಯದು. ಒಂದೊಂದು ಗ್ರಹವೂ ಸೂರ್ಯನನ್ನು ಬೇರೆ ಬೇರೆ ವೇಗದಿಂದ ಸುತ್ತುತ್ತವೆ. ಬುಧ ಗ್ರಹದ ವೇಗ ಗರಿಷ್ಠ, ಶನಿಯ ವೇಗ ಕನಿಷ್ಠ. ಇದರಿಂದ ಗ್ರಹಗಳ ತೋರಿಕೆ ಚಲನೆಯನ್ನು ವಿವರಿಸುವುದು, ಖಗೋಳ ಘಟನೆಗಳ ಭವಿಷ್ಯ ನುಡಿಯುವುದು ಸುಲಭವಾಯಿತು.



ಚಿತ್ರ ೨. ಕೋಪರ್ನಿಕಸ್‌ನ ವಿಶ್ವ

1 ಸೂರ್ಯ, 2 ಬುಧ, 3 ಶುಕ್ರ, 4 ಭೂಮಿ, 5 ಚಂದ್ರ, 6 ಮಂಗಳ 7 ಗುರು
8 ಶನಿ, 9 ಸ್ಥಿರ ನಕ್ಷತ್ರಗಳು

ಕೋಪರ್ನಿಕಸ್ ಧರ್ಮಭೀರು. ಬೈಬಲ್ಲಿಗೆ ವಿರೋಧವಾದುದನ್ನು ತಾನು ಮಾಡುತ್ತಿದ್ದೇನೆಂದು ಅವನು ಎಂದೂ ಭಾವಿಸಿರಲಿಲ್ಲ. ತಾನು ಬರೆದ ಮಹಾಗ್ರಂಥ 'ಆಕಾಶ ಕಾಯಗಳ ಪರಿಭ್ರಮಣೆಗಳು' ಅನ್ನು (De Revolutionibus orbium Coelestrium) ಅವನು ಪೋಪ್ ಮೂರನೆ ಪಾಲಸಿಗೆ ಅರ್ಪಿಸಿದ. ಹೀಗೆ ಮಾಡಿದ್ದರಿಂದ ಅವನು ಧರ್ಮಗುರುಗಳ ಖಂಡನೆಯಿಂದ ಪಾರಾದ.

ಪರಿಭ್ರಮಣೆಗಳು ೬ ಭಾಗಗಳನ್ನು ಹೊಂದಿದೆ. ಒಂದನೆ ಭಾಗದಲ್ಲಿ ಭೂಮಿಯ ರಚನೆ ಮತ್ತು ಅದರ ಚಲನೆಯ ವಿವರವಿದೆ. ಎರಡನೆಯ ಭಾಗದಲ್ಲಿ ಕ್ರಾಂತಿವೃತ್ತದ ವಿವರಣೆಯಿದೆ. ಮೂರನೆಯ ಭಾಗದಲ್ಲಿ ಸೂರ್ಯನ ತೋರ್ಕೆ ಚಲನೆಯ ವಿವರಣೆಯಿದೆ. ನಾಲ್ಕನೆಯ ಭಾಗದಲ್ಲಿ ಉಪಗ್ರಹ ಚಂದ್ರನನ್ನು ಕುರಿತಾದ ಪ್ರಸ್ತಾಪವಿದೆ. ಐದು ಮತ್ತು ಆರನೆಯ ಭಾಗಗಳಲ್ಲಿ ಗ್ರಹಗಳ ವಿಚಾರವಿದೆ.

ಪರಿಭ್ರಮಣೆಗಳು ಪ್ರಕಟವಾದದ್ದು ಕೋಪರ್ನಿಕಸನನ್ನು ಸ್ನೇಹಿತರು ಮತ್ತು ಶಿಷ್ಯರು ಒತ್ತಾಯ ಮಾಡಿದುದರಿಂದ. ೧೫೪೩ರಲ್ಲಿ ಅದು ಹೊರಬಿದ್ದಾಗ ಅದರ ಮುದ್ರಣ ಕಾರ್ಯದ ಜವಾಬ್ದಾರಿಯನ್ನು ಹೊತ್ತಿದ್ದ ಓಸಿಯಾಂಡರ್ 'ಸೂರ್ಯ ಕೇಂದ್ರ ಸಿದ್ಧಾಂತ' ಗ್ರಹ ಚಲನೆಗಳ ಲೆಕ್ಕಾಚಾರವನ್ನು ಸರಳಗೊಳಿಸಲು ಮುಂದಿಟ್ಟ ಒಂದು ಆಧಾರ ಕಲ್ಪನೆ ಮಾತ್ರ ಎಂದು ಮುನ್ನುಡಿಯಲ್ಲಿ ಸೇರಿಸಿದ್ದ. ಇದಕ್ಕೆ ಕೋಪರ್ನಿಕಸನ ಒಪ್ಪಿಗೆ ಇದ್ದಿತೆ ಎಂಬುದನ್ನು ಚರ್ಚಿಸುವುದು ಇಲ್ಲಿ ಮುಖ್ಯವಲ್ಲ. ನಿಜ ಇಷ್ಟು: ಮೊದಲು ವಿರೋಧ ಏರ್ಪಟ್ಟರೂ ಕೊನೆಯಲ್ಲಿ ಅವನ ಅಭಿಪ್ರಾಯಗಳಿಗೆ ಸಾರ್ವತ್ರಿಕ ಮನ್ನಣೆ ದೊರೆಯಿತು.

ಕೋಪರ್ನಿಕಸ್ ೨೪-೫-೧೫೪೩ರಲ್ಲಿ ಫ್ರಾನ್ಸ್‌ಬರ್ಗಿನಲ್ಲಿ ಮೃತನಾದ. ಸೂರ್ಯ ಕೇಂದ್ರ ಸಿದ್ಧಾಂತ ಹೊಸ ಯುಗದ ಕ್ರಾಂತಿ ಘೋಷವಾಯಿತು. ಯಾವುದೇ ಕ್ಷೇತ್ರದಲ್ಲಾಗಲಿ ಮೂಲಭೂತ ಬದಲಾವಣೆ ಸಂಭವಿಸಿದಾಗ ಅದನ್ನು 'ಕೋಪರ್ನಿಕಸ್ ಕ್ರಾಂತಿ' ಎಂದು ಕರೆಯುವ ಪರಿಪಾಠ ಬೆಳೆದು ಬಂದಿತು.

ಗುರಿಯಿಲ್ಲದ ಸಾಧನೆಗಳಿಂದ ಏನೂ ಉಪಯೋಗವಿಲ್ಲ. ಗುರಿಯಷ್ಟೇ ಸಾಧನೆಗಳೂ ಶುದ್ಧವಾಗಿರಬೇಕು.

ಗಾಂಧೀಜಿ

ಭೂಜಲದ ಸಮಸ್ಯೆಗಳು-ಭೂಜಲದ ಚಲನೆ ಹೇಗೆ?

ಹೆಚ್. ಎಸ್. ನಾಗಭೂಷಣಯ್ಯ

ಭೂಜಲ ಭೂಮಿಯ ಮೇಲಿನ ನೀರಿನಂತೆಯೇ ಎತ್ತರ ಪ್ರದೇಶದಿಂದ ತಗ್ಗಿನ ಪಲಯಕ್ಕೆ ಹರಿಯಬಲ್ಲದು. ಮಣ್ಣಿನ ಸಚ್ಛಿದ್ರ ರಂಧ್ರಗಳ ಮೂಲಕ ತನ್ನ ಚಲನೆಯನ್ನು ಸಾಧಿಸಬೇಕಾದ್ದರಿಂದ ಸಾಕಷ್ಟು ಅಡಚಣೆಗಳನ್ನು ಎದುರಿಸಬೇಕಾಗಿ ಅದರ ಪರಿಣಾಮದಿಂದ ಚಲನೆಯ ವೇಗ ಅತ್ಯಲ್ಪ ಪ್ರಮಾಣಕ್ಕೆ ಇಳಿಯುವುದು. ಕೆಲವು ವೇಳೆ ಮಾರ್ಗದಲ್ಲಿ ಭೂಜಲ ಚಲನೆಗೆ ತಡೆಯುಂಟಾಗಿ ಭೂಜಲ ಜಲಾಶಯವಾಗಿ ಮಾರ್ಪಾಡಾಗಲು ಸಾಧ್ಯ.

ಭೂಜಲದ ವೇಗ ಪರಿಮಿತಿ ಎಷ್ಟು

ಭೂಮಿಯ ಮೇಲೆ ಹರಿಯುವ ನೀರು ಹಳ್ಳಕೊಳ್ಳಗಳಿಗೋ ಇಲ್ಲವೇ ನದಿ, ಸರೋವರಗಳಿಗೋ ಹಾಗೂ ಕೊನೆಯಲ್ಲಿ ಸಮುದ್ರಕ್ಕೋ ಸೇರುವುದಷ್ಟೆ. ಭೂಜಲವಾದರೋ ತನ್ನ ಅಂತಿಮ ಮಿಲನ ಸಮುದ್ರವಾದರೂ ಮಾರ್ಗದಲ್ಲಿ ನದಿ, ಸರೋವರ ಮತ್ತು ಬಾವಿಗಳನ್ನು ಸಂಧಿಸಿ ಅವುಗಳೊಂದಿಗೆ ಕಲೆಯಬಹುದು. ಭೂಜಲದ ವೇಗ ಮಣ್ಣಿನ ರಚನೆ, ಕಣಗಳ ಜೋಡಣೆ, ಸಚ್ಛಿದ್ರತಾ ರಂಧ್ರಗಳ ಪ್ರಮಾಣ ಮತ್ತು ಗಾತ್ರ, ಮಣ್ಣಿನ ಖರತ್ವಗಳನ್ನು ಅವಲಂಬಿಸಿರುತ್ತದೆ. ಈ ಎಲ್ಲಾ ಅಂಶಗಳನ್ನು ಒಟ್ಟುಗೂಡಿಸಿ ಚಲನೆಯ ವೇಗವನ್ನು ಮಣ್ಣಿನ ವ್ಯಾಪ್ತತೆ ಮೂಲಕ ಸ್ಥಿರಪಡಿಸಬಹುದು. ಈ ಕೆಳಗಿನ ಪಟ್ಟಿ ವಿವಿಧ ಮಣ್ಣಿನ ರಚನೆಗಳಲ್ಲಿ ನೀರಿನ ವ್ಯಾಪ್ಯತೆ ಹಾಗೂ ವೇಗ ಪರಿಮಿತಿಯನ್ನು ಸೂಚಿಸುತ್ತದೆ.

ಮಣ್ಣಿನ ರಚನೆ	ವ್ಯಾಪಕತೆ
ಸಾಮಾನ್ಯ ಜೇಡಿ (ಮಿಶ್ರಿತ)	೧ರಿಂದ ೨೦ ಸೆಂ. ಮಿ. ದಿನಕ್ಕೆ
ಪೂರ್ಣ ಜೇಡಿ	೦ರಿಂದ ೧ ಸೆಂ. ಮೀ. ದಿನಕ್ಕೆ

ಮೆಕ್ಕಲು	೧೦ ಸೆಂ.ಮಿ. ನಿಂದ ೧ ಮಿ. ದಿನಕ್ಕೆ
ಸಣ್ಣ ಮರಳು	೧ ಮಿ. ನಿಂದ ೫ ಮಿ. ದಿನಕ್ಕೆ
ಮಧ್ಯಮ ಮರಳು	೫ ಮಿ. ನಿಂದ ೨೦ ಮಿ. ದಿನಕ್ಕೆ
ದಪ್ಪ ಮರಳು	೨೦ ಮಿ. ನಿಂದ ೧೦೦ ಮಿ. ದಿನಕ್ಕೆ
ಗ್ರಾವಲ್	೧೦೦ ಮಿ. ನಿಂದ ೧೦೦೦ ಮಿ. ದಿನಕ್ಕೆ
ಮರಳು ಮತ್ತು ಗ್ರಾವಲ್ ಮಿಶ್ರ	೫ ರಿಂದ ೧೦೦ ಮಿ. ದಿನಕ್ಕೆ
ಜೇಡಿ, ಮರಳು ಮತ್ತು ಗ್ರಾವಲ್ ಮಿಶ್ರ	೦.೧ಸೆಂ.ಮೀ.ನಿಂದ೧೦ಸೆಂ.ಮೀ.ದಿನಕ್ಕೆ
ಸುಣ್ಣ ಕಲ್ಲು	೧ಸೆಂ.ಮಿ.ನಿಂದ೧೦೦ಸೆಂ.ಮಿ. ದಿನಕ್ಕೆ
ಗಟ್ಟಿ ಬಂಡೆ	ಅತಿ ಸ್ವಲ್ಪ
ಬಿರುಕು ಬಂಡೆಗಳು	೦.೧ ಸೆಂ.ಮಿ. ನಿಂದ ೧೦ ಮಿ. ದಿನಕ್ಕೆ

ಬಿರುಕು ಬಂಡೆಗಳಲ್ಲಿ ಕೊಳವೆ ರೂಪಿತ ಪೊಟರುಗಳು ಏರ್ಪಟ್ಟು ಭೂಜಲ ಹೆಚ್ಚಿನ ವೇಗವನ್ನು ಪಡೆಯಲು ಸಾಧ್ಯ.

ಮಣ್ಣಿನ ಸಾಮಾನ್ಯ ಜೋಡಣೆ ರಚನೆಯಲ್ಲಿ ಭೂಜಲದ ಸರಾಸರಿ ವೇಗ


ಮಣ್ಣಿನ ಜೋಡಣೆ	ಸರಾಸರಿ ಚಲನೆ ವೇಗ
ಮೆಕ್ಕಲು, ಸಣ್ಣಮರಳು	೧.೩ ಸೆಂ. ಮಿ. ದಿನಕ್ಕೆ
ಮರಳು	೩೦ ಸೆಂ. ಮಿ. ದಿನಕ್ಕೆ
ಮರಳು ಮತ್ತು ಗ್ರಾವಲ್ ಮಿಶ್ರ	೧೯ ಸೆಂ. ಮಿ. ದಿನಕ್ಕೆ
ಗ್ರಾವಲ್	೭೫೦ ಸೆಂ. ಮಿ. ದಿನಕ್ಕೆ
ದಪ್ಪ ಗ್ರಾವಲ್	೩೩೦೦ ಸೆಂ. ಮಿ. ದಿನಕ್ಕೆ

ಭೂಜಲ ಚಲನೆ ಎಲ್ಲಿ ಅಂತ್ಯಗೊಳ್ಳುತ್ತದೆ?

ಹಿಂದೆ ತಿಳಿಸಿರುವಂತೆ ಭೂಜಲ ಚಲನೆಗೆ ಸ್ಥಾನ ಶಕ್ತಿಯೇ ಆಧಾರ. ಚಲನೆಯಲ್ಲಿರುವಾಗ ಮಾರ್ಗದಲ್ಲಿ ಪಂಪುಬಾವಿ, ನದಿ, ಸರೋವರಗಳು ತಾತ್ಕಾಲಿಕ ಗಡಿಗಳಾಗಿ ಏರ್ಪಟ್ಟಿದ್ದಲ್ಲಿ ಭೂಜಲ ಅಲ್ಲಿಯೇ ನಿರ್ಗಮಗೊಳ್ಳುವುದು. ಆದರೆ ಸಮುದ್ರ ಎಲ್ಲಕ್ಕಿಂತಲೂ ತಗ್ಗಿನಲ್ಲಿರುವುದರಿಂದ ಭೂಜಲದ ಅಂತಿಮ ನಿರ್ಗಮನ ಸಮುದ್ರದೊಂದಿಗೆ ಅಂತ್ಯಗೊಳ್ಳುವುದು.

ಭೂಜಲ ಜಲಾಶಯಗಳ ರಚನೆ ಹೇಗೆ?

ಭೂಜಲ ಶೇಖರಣೆ ತನ್ನದೇ ಆದ ವೈಶಿಷ್ಟ್ಯವನ್ನು ಪಡೆದಿರುತ್ತದೆ. ಭೂಜಲ ಶೇಖರಣೆಗೆ ಅನುಕೂಲಕಾರಿಯಾದ ರಚನೆಯನ್ನು ಎರಡು ಪಂಗಡಗಳಾಗಿ ವಿಂಗಡಿಸಬಹುದು.



(೧) ತೆರೆದ ಜಲಾಶಯಗಳು—ಭೂಮಿಯಲ್ಲಿ ತಂಗಿದ ನೀರು ಭೂಜಲವನ್ನು ಸೇರಿ ಚಲಿಸುವಾಗ ಮಾರ್ಗದಲ್ಲಿ ಬಂಡೆಯ ಸರಹದ್ದನ್ನೋ ಇಲ್ಲವೇ ಇನ್ನಿತರ ಅವ್ಯಾಪ್ತಿ ರಚನೆಯನ್ನು ಸಂಧಿಸಿ ಅಡಚಣೆಗೊಳಗಾಗಿ ತಟಸ್ಥಗೊಂಡು ಆ ಪ್ರದೇಶದಲ್ಲೇ ಜಲಾಶಯವಾಗಿ ಉಳಿಯುವುದು. ನೆಲಭಾವಿಗಳಿಗೆ ತೆರೆದ ಜಲಾಶಯಗಳು ನೀರನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸಬಲ್ಲವು.

(೨) ಸುರಂಗ ಅಥವಾ ಕೊಳವೆ ಜಲಾಶಯಗಳು—ಎಲ್ಲಿಯೋ ಬಯಲು ಜಲಾನಯನ ಪ್ರದೇಶದಲ್ಲಿ ಭೂಮಿಯನ್ನು ಪ್ರವೇಶಿಸಿ ಅವ್ಯಾಪ್ತ ಗೋಡೆಗಳ ಮಧ್ಯೆ ಸುರಂಗಮಾರ್ಗದಲ್ಲಿ ಚಲಿಸಿ ಹೆಚ್ಚಿನ ಒತ್ತಡಕ್ಕೆ ಒಳಪಟ್ಟು ಜಲಧರಗಳಲ್ಲಿ ಶೇಖರಿಸಲ್ಪಟ್ಟ ಭೂಜಲವೇ ಸುರಂಗ ಜಲಾಶಯ (ಚಿತ್ರ ನೋಡಿ). ಭೂಮಿಯ ಮೇಲಿನ ನೀರು ಸರೋವರದ ವಲಯವನ್ನು ಪೂರ್ತ ಆವರಿಸಿ ಶೇಖರವಾಗಿದ್ದರೆ; ಭೂಜಲ ಮಣ್ಣಿನ ಸಚ್ಛಿದ್ರ ರಂಧ್ರಗಳನ್ನು ತುಂಬಿ ಭೂಜಲ ಜಲಾಶಯವಾಗಿ ಮಾರ್ಪಾಡಾಗಿರುತ್ತದೆ. ಕೆಲವು ವೇಳೆ ಸೀಳು ಅಥವಾ ಬಿರುಕು, ಒಡೆದ ಬಂಡೆಗಳಲ್ಲಿ ಏರ್ಪಟ್ಟ ಕೊಳವೆಗಳ ಜೋಡಣೆಯಲ್ಲೂ ಹಾಗೂ ಪೊಟರುಗಳಿಂದ ಕೂಡಿದ ಸುಣ್ಣ ಕಲ್ಲುಗಳ ಸಂಘಟಿತ ಕೊಳವೆಗಳಲ್ಲೂ ಭೂಜಲ ಕಲೆತು ಭೂಜಲಾಶಯವಾಗಿ ಏರ್ಪಟ್ಟಿರಬಹುದು.

ನೀರು ಜಾರು ಮತ್ತು ಲೋಮನಾಳ ಪಟಲ

ಭೂಮಿಯಲ್ಲಿ ತಂಗಿದ ನೀರು ಪರ್ಯಾಪ್ತ ಅಂದರೆ ಪೂರ್ಣ ಜಲಭರಿತ ವಲಯವನ್ನು ತಲುಪಿದಾಗ ಮಾತ್ರ ಅದು ಭೂಜಲವಾಗುವುದೆಂದು ಹಿಂದೆಯೇ ತಿಳಿಸಿದೆ. ಅಪೂರ್ಣ ಮತ್ತು ಪೂರ್ಣ ಜಲಭರಿತ ವಲಯಗಳನ್ನು ಬೇರ್ಪಡಿಸುವ ಸೀಮೆಯನ್ನು ನೀರುಜಾರೆಂದು ಕರೆಯುತ್ತೇವೆ. ನೀರು ಜಾರಿನ ತಳಭಾಗದಲ್ಲಿ ಶೇಖರಣೆಯಾದ ನೀರೆಲ್ಲವೂ ಭೂಜಲ. ನೀರು ಜಾರಿನ ಮೇಲೆ ಲಗತ್ತಾದ ಕೂದಲೋಪಾದಿಯಲ್ಲಿ ಆವರಿಸಿರುವ ಜಲಸರಣಿಯೇ ಲೋಮನಾಳ ಪಟಲ. ಮಣ್ಣಿನಲ್ಲಿ ಏರ್ಪಟ್ಟ ಕೂದಲಿನಷ್ಟು ಗಾತ್ರದ ಕೊಳವೆಗಳು (ರಂಧ್ರಗಳು) ಕೆಳಗಿನ ನೀರನ್ನು ಹೀರಿ ಎತ್ತಿ ಹಿಡಿಯಬಲ್ಲ ಶಕ್ತಿಯನ್ನು ಪಡೆದಿರುವುವು. ಇದು ಪಾರ್ಶ್ವತಃ ಜಲಭರಿತವಾದ ವಲಯ. ಲೋಮನಾಳಗಳಲ್ಲಿ ಏರ್ಪಟ್ಟ ನೀರಿನ ಎತ್ತರ ಮಣ್ಣಿನ ರಚನೆಯನ್ನು ಅವಲಂಭಿಸಿರುತ್ತದೆ. ಪೂರ್ಣ ಜಲಭರಿತ ವಲಯದಿಂದ ಭೂಜಲವನ್ನು ಹೀರಿ ನೀರುಜಾರಿನ ಮೇಲೆತ್ತಿ ತಡೆ ಹಿಡಿದು ನಿಲ್ಲ ಬಲ್ಲ ಲೋಮನಾಳ ಪಟಲದ ಎತ್ತರ ಮಣ್ಣಿನ ರಚನೆಯನ್ನು ಮತ್ತು ಜೋಡಣೆಯನ್ನು ಅವಲಂಭಿಸಿರುತ್ತದೆ.

ಮಣ್ಣಿನ ರಚನೆ	ಮಣ್ಣಿನ ಕಣಗಳ ಗಾತ್ರ (ಮಿಲಿಮೀಟರ್)	ಲೋಮನಾಳ ಪಟಲದ ಎತ್ತರ (ಸೆಂ. ಮೀ.)
ಜೇಡಿ	0.00೫	೧೫೦
ಮೆಕ್ಕಲು	0.0೫	೧೨೫

ಸಣ್ಣ ಮರಳು	೦.೦೬೨	೮೫
ದಪ್ಪ ಮರಳು	೦.೫೦	೧೫
ಮರಳು ಗೋಡು ಮಿಶ್ರ	—	೧೩೦

ಭೂಜಲ ಭೂಮಟ್ಟಕ್ಕೆ ಸಮೀಪವಾಗಿದ್ದು ಮಣ್ಣಿನ ರಚನೆ ಜೇಡಿ ಮೆಕ್ಕಲು ಗಳಿಂದ ಕೂಡಿದ್ದಲ್ಲಿ, ನೀರು ಜಾರಿನಿಂದ ಭೂಜಲ ನೀಳವಾದ ಲೋಮನಾಳಗಳ ಪತಲಗಳ ಮೂಲಕ ಭೂಮಿಯಿಂದ ಹೊರಬಂದು ಆವಿಯಾಗಿ ವಾಯುಮಂಡಲ ವನ್ನು ಸೇರಬಲ್ಲದು. ಹಾಗೂ ಸಸ್ಯಗಳ ಬೇರಿನ ಪ್ರಾಂತ್ಯಕ್ಕೆ ನೀರನ್ನು ಒದಗಿಸ ಬಲ್ಲದು.

ಭೂಮಿಯನ್ನು ಪ್ರವೇಶಿಸದೆ ಭೂಜಲ ಸಂಶೋಧನೆ

ಭೂಜಲದ ಉಪಯೋಗವನ್ನು ತಿಳಿದಂದಿನಿಂದ ಇದರ ಅನ್ವೇಷಣೆಗೆ ಸಂಬಂಧ ಪಟ್ಟ ಸಂಶೋಧನೆಗಳು ಆಚರಣೆಯಲ್ಲಿವೆ. ಇವುಗಳನ್ನು ಎರಡು ಪಂಗಡಗಳಾಗಿ ವಿಂಗಡಿಸಬಹುದು.

A. ಅಪ್ರತ್ಯಕ್ಷ ವಿಧಾನ :—ಭೂಮಿಯನ್ನು ಪ್ರವೇಶಿಸದೇ ಮೇಲಿನಿಂದಲೇ ಭೂಜಲ ಪರಿಶೀಲನೆ.

B. ಪ್ರತ್ಯಕ್ಷ ವಿಧಾನ :—ಭೂಮಿಯನ್ನು ಕೊರೆದು ಭೂಜಲ ವಿಂಗಡನೆಯ ಪರಿಶೀಲನೆ.

A. ಅಪ್ರತ್ಯಕ್ಷ ವಿಧಾನ :

ಭೂಮಿಯ ಕೆಳಗೆ ಅಡಕವಾಗಿರುವ ಭೂಜಲದ ಉತ್ಪಾದನೆ, ದೊರೆಯಬಲ್ಲ ಸ್ಥಾನ, ಚಲನೆಯ ರೀತಿ, ಶೇಖರಣೆಯ ವೈಶಿಷ್ಟ್ಯತೆ, ಇವುಗಳ ಪರಿಚಯವನ್ನು ಭೂಮಿಯ ಮೇಲೆ ಏರ್ಪಟ್ಟಿರುವ ನದಿ, ಸರೋವರ ಜಲಾಶಯಗಳಷ್ಟು ಕ್ಲುಪ್ತಪಡಿಸಲು ಸಾಧ್ಯವಾಗಲಾರದು ಮತ್ತು ತತ್ಸಂಬಂಧ ಪ್ರಯೋಗಗಳು ಪೂರ್ಣ ಫಲದಾಯಕ ವಾಗಲಾರವು. ಆದರೆ ಭೂಮಿಯನ್ನು ಕೊರೆದು ಪರೀಕ್ಷಿಸುವ ವಿಧಾನಗಳಿಗೆ ಹೋಲಿಸಿದರೆ ಈ ಪ್ರಯೋಗಗಳು ಸುಲಭವಾಗಿದ್ದು ಕಡಿಮೆ ವೆಚ್ಚದಿಂದ ಕೂಡಿರುವುವು. ಕಳೆದ ೩೦ ವರ್ಷಗಳಿಂದ ಭೂ—ಭೌತಿಕ ಶಾಸ್ತ್ರಜ್ಞರು (Geo-Physicalist) ಮೂರು ಮುಖ್ಯ ಪ್ರಯೋಗಗಳನ್ನು ಉಪಯೋಗಿಸುತ್ತಿರುವರು.

೧. ವಿದ್ಯುತ್ ರೋಧ ಪ್ರಯೋಗ
೨. ಕಂಪನ ಭಂಗ ಪ್ರಯೋಗ
೩. ಪಕ್ಷಿನೋಟ ಛಾಯಾ ಪ್ರಯೋಗ

೧. ವಿದ್ಯುತ್‌ರೋಧ ಪ್ರಯೋಗ :

ಬಂಡೆ, ಮಣ್ಣು ಮುಂತಾದ ಭೂರಚನೆಯ ವಸ್ತುಗಳು ತಮ್ಮ ಮೂಲಕ ಪ್ರಸಾರಗೊಳ್ಳುವ ವಿದ್ಯುತ್ ಪ್ರವಾಹಕ್ಕೆ ರೋಧ (ತಡೆ) ಯನ್ನು ಒಡ್ಡುತ್ತವೆ. ಈ ಗುಣವು ಆ ವಸ್ತುಗಳ ಸಾಂದ್ರತೆ, ಸಚ್ಛಿದ್ರತಾ ರಂಧ್ರಗಳ ರಚನೆ (ಆಕಾರ ಮತ್ತು ಗಾತ್ರ), ರಂಧ್ರಗಳಲ್ಲಿ ಅಡಕವಾಗಿರುವ ನೀರಿನ ಅಂಶ ಇವುಗಳನ್ನು ಅವಲಂಬಿಸಿರುತ್ತದೆ. ಗಟ್ಟಿ ಬಂಡೆಗಳು ಹೆಚ್ಚಿನ ರೋಧವನ್ನು ಪ್ರದರ್ಶಿಸಿದರೆ, ಸಚ್ಛಿದ್ರತೆಯಿಂದ ಕೂಡಿದ ಬಂಡೆಗಳು ಮತ್ತು ಹುಡಿ ಮಣ್ಣಿನ ರಚನೆ ವಿದ್ಯುತ್ ಪ್ರವಾಹಕ್ಕೆ ಹೆಚ್ಚಿನ ಅಡಚಣೆ ಒಡ್ಡುವುದಿಲ್ಲ. ಅಲ್ಲದೆ ಕ್ಷಾರ ಮತ್ತು ಲವಣ ಅಂಶಗಳನ್ನೊಳಗೊಂಡ ಭೂಜಲ ಮಣ್ಣಿನ ರಂಧ್ರಗಳಲ್ಲಿ ಅಡಕವಾಗಿದ್ದಲ್ಲಿ ರೋಧಕ ಅಂಶ ಅತ್ಯಂತ ಕನಿಷ್ಠವಾಗಿದ್ದು ವಿದ್ಯುತ್ ಪ್ರವಾಹ ಸುಲಭವಾಗಿ ಪ್ರಸರಿಸಲು ಸಾಧ್ಯ.

ರೋಧಕ ಅಂಶವನ್ನು ನಿರ್ಧರಿಸುವುದರ ಮೂಲಕ ಜಲಧಾರೆಗಳ ಮಣ್ಣಿನ ಕಣಗಳ ಜೋಡಣೆ, ರಚನೆ ಮತ್ತು ಭೂಜಲದ ಸ್ಥಾನಮಾನಗಳನ್ನು ತಿಳಿದುಕೊಳ್ಳ ಬಹುದು. ಭೂಮಿಯ ಮೇಲಿಂದ ವಿದ್ಯುತ್ ಪ್ರವಾಹವನ್ನು ವಿವಿಧ ಆಳಕ್ಕೆ ಕಳುಹಿಸಿ ಅಲ್ಲಿನ ಪ್ರಚಂಡಾಂತರ ಪ್ರವೃತ್ತಿಯನ್ನು ವೋಲ್ಟ್ ಮಾಪಕಗಳ ಸಹಾಯದಿಂದ ಕಂಡು ಹಿಡಿಯುವುದರ ಮೂಲಕ ವಿದ್ಯುತ್ ರೋಧಕ ಅಂಶವನ್ನು ತಿಳಿಯಬಹುದು. ಸಾಮಾನ್ಯ ಮಣ್ಣಿನ ರಚನೆಯಲ್ಲಿ ಹೆಚ್ಚಿನ ಆಳಕ್ಕೆ ವಿದ್ಯುತ್ ಪ್ರವಾಹ ಸರಿದಂತೆ ರೋಧಕ ಅಂಶವೂ ಹೆಚ್ಚುತ್ತಿದ್ದು ಭೂಜಲದ ವಲಯವನ್ನು ಸಂಧಿಸಿದಾಗ ರೋಧಕ ಅಂಶ ಕಡಿತಗೊಳ್ಳುತ್ತದೆ. ಇದರಿಂದ ಆ ಮಟ್ಟದಲ್ಲಿ ಭೂಜಲ ದೊರೆಯುವ ಸೂಚನೆ ತಿಳಿದುಬರುತ್ತದೆ.

೨. ಕಂಪನ ಭಂಗ ಪ್ರಯೋಗ :

ಭೂಮಿಯ ಮೇಲೆ ಯಾವುದಾದರೂ ಉಪಕರಣದಿಂದ (ಡೈನಮೇಟ್ ಇತ್ಯಾದಿ) ಆಸ್ಫೋಟನೆ ಮಾಡುವುದರ ಮೂಲಕ ಕಂಪನವನ್ನು ಸೃಷ್ಟಿಸಿದಲ್ಲಿ ಶಬ್ದದ ಅಲೆಗಳು ಹೊರಡುವುವು. ಈ ಅಲೆಗಳು ಗೊತ್ತಾದ ದೂರವನ್ನು ತಲುಪಲು ಬೇಕಾಗುವ ಕಾಲ ವನ್ನು ತಿಳಿಯುವುದರ (ಶಬ್ದ ಚಲನೆಯ ವೇಗ) ಮೂಲಕ ಭೂಗರ್ಭ ರಚನೆ ಹಾಗೂ ಭೂಜಲ ಉಪಸ್ಥಿತಿ ಸನ್ನಿವೇಶವನ್ನು ಪತ್ತೆಹಚ್ಚಬಹುದು.

ಕಂಪನೆಯನ್ನೊಳಗೊಂಡ ಅಲೆಗಳು ಬೆಳಕಿನ ಕಿರಣಗಳಂತೆ ಯಾವುದಾದರೂ ಮಧ್ಯವರ್ತಿಯನ್ನು ಸಂಧಿಸಿದಾಗ ಪ್ರತಿಫಲಿತ ಇಲ್ಲವೇ ಭಂಗವಾಗಬಹುದು. ಅಲೆಗಳ ಪ್ರತಿ ಫಲಿತವಾಗುವ ವೇಗವು ಹುಡಿ ಮಣ್ಣಿಗಿಂತ ಗಟ್ಟಿಬಂಡೆಗಳಲ್ಲಿ ಹೆಚ್ಚಾಗಿರುವುದು. ಒಣಗಿದ ಮಣ್ಣು ಮತ್ತು ಬಂಡೆಗಳಿಗಿಂತ, ರಂಧ್ರಗಳಿಂದ ಕೂಡಿ ಜಲಭರಿತವಾದ ರಚನೆಯಲ್ಲಿ ಅಲೆಗಳು ಹೆಚ್ಚಿನ ವೇಗವನ್ನು ಪಡೆಯಬಲ್ಲವು.

ಈ ವಿಧಾನದ ನ್ಯೂನತೆಯೆಂದರೆ—ಮಣ್ಣಿನ ರಚನೆ ಒಂದೇ ಸಮನಾಗಿಲ್ಲದಿದ್ದಲ್ಲಿ ಪ್ರತಿಫಲಿತ ಅಥವಾ ಭಂಗದ ಪರಿಶೀಲನೆ ತಪ್ಪಾಗಿ ಪ್ರದರ್ಶಿತವಾಗಬಹುದು. ಅಲ್ಲದೆ ಪ್ರಯೋಗ ಸ್ಥಾನದ ಸಮೀಪದಲ್ಲಿ ವಾಹನಗಳ ಚಲನೆ, ಕಾರ್ಖಾನೆ ಮತ್ತು ಇತರ

ಸಂಬಂಧದಿಂದ ಉತ್ಪತ್ತಿಯಾಗಿ ಹರಡುವ ಶಬ್ದಗಳು ಬಹುಮಟ್ಟಿಗೆ ಪ್ರಯೋಗಕ್ಕೆ ಆತಂಕ ತರಬಹುದು. ಪರೀಕ್ಷೆಯ ಫಲಿತಾಂಶವನ್ನು ಪರಿಶೀಲಿಸಿ ವಿಮರ್ಶೆಮಾಡಲು ಹೆಚ್ಚಿನ ಅನುಭವವುಳ್ಳ ಪರಿಣಿತರು ಅವಶ್ಯಕ.

೩. ಪಕ್ಷಿನೋಟದ ಛಾಯಾ ನಿರೂಪಣೆ:

ಭೂಜಲ ಉತ್ಪಾದನೆ, ಆ ವಲಯದ ಜಲಾನಯನ ಗುಣಲಕ್ಷಣಗಳ ಮೇಲೆ ಅವಲಂಬಿಸಿರುತ್ತದೆ. ಆ ಪ್ರದೇಶದ ಪಕ್ಷಿನೋಟ ಛಾಯೆ, ಅಲ್ಲಿನ ಸಸ್ಯಗಳ ವಿಂಗಡಣೆ, ಬೆಳವಣಿಗೆ, ಭೂ ಪ್ರದೇಶದ ಆಕೃತಿ, ಬಳಕೆ, ಹಳ್ಳಕೊಳ್ಳ, ಕೆರೆ, ಕುಂಟೆಗಳ ನಮೂನೆ, ದಿಟ್ಟಕೊರಕಲುಗಳ ರಚನೆ ಮತ್ತು ಬಣ್ಣ, ಇಳಿಜಾರು ಮತ್ತು ಮೈದಾನಗಳ ವಿಶಾಲತೆ, ಗ್ರಾವಲ್ ಗುಂಡಿಗಳು ಇವುಗಳನ್ನೆಲ್ಲಾ ಒಳಗೊಂಡಿದ್ದು ಭೂ ಜಲದ ಅನ್ವೇಷಣೆಗೆ ಬಹಳ ಉಪಯೋಗಕಾರಿಯಾಗಿರುತ್ತದೆ. ಛಾಯಾಚಿತ್ರದ ವಿವರಗಳು ಭೂಜಲದ ಗುಣಲಕ್ಷಣಗಳನ್ನು ಮತ್ತು ಶೇಖರಣೆಯ ಅಂಶವನ್ನೂ ತಿಳಿಸಲು ಸಾಧ್ಯ. ಇಂತಹ ಛಾಯಾಚಿತ್ರಗಳನ್ನು ವೀಕ್ಷಿಸಿ, ವಿಮರ್ಶೆಮಾಡಿ ಸೂಕ್ತ ಫಲಿತಾಂಶಗಳನ್ನು ಹೊರ ಪಡಿಸಲು ಹೆಚ್ಚಿನ ಅನುಭವವುಳ್ಳ ಪ್ರವೀಣ ತಜ್ಞರ ಸಹಾಯ ಅವಶ್ಯಕ.

A. ಮಾಟಗೋಲು

ಭೂಮಿಯ ಮೇಲಿನಿಂದಲೇ ಭೂಗರ್ಭದಲ್ಲಿ ಅಡಕವಾಗಿರುವ ಭೂಜಲವನ್ನಾಗಲೀ, ಖನಿಜಸಂಪತ್ತನ್ನಾಗಲೀ ಮಾಗೋಲಿನಿಂದ (ಮಂತ್ರಶಕ್ತಿ) ಪತ್ತೆಮಾಡಬಹುದೆಂಬ ಪ್ರತೀಕ ಪ್ರಪಂಚದ ಅನೇಕ ಕಡೆ ಈಗಲೂ ಚಾಲತಿಯಲ್ಲಿದೆ. ಕೆಲವು ಕಡೆ ಕಾಕತಾಳೀಯದಂತೆ ಈ ಪ್ರಯೋಗವು ಯಶಸ್ವಿಯೂ ಆಗಿರಬಹುದು. ಭೂಜಲ ಮತ್ತು ಖನಿಜಗಳು ಅಡಕವಾಗಿರುವ ಸ್ಥಳಗಳಲ್ಲಿ ಭೂಮಿಯ ಮೇಲೆ ನಿಲ್ಲಿಸಿದ ಕವಲು ಗೋಲು ಬಗ್ಗುವುದೆಂದೂ ಮತ್ತು ಈ ಪ್ರಯೋಗ ಕೇವಲ ದೈವಿಕ ಶಕ್ತಿಯನ್ನು ಪಡೆದಿರುವವರಿಂದಲೇ ಸಾಧ್ಯವೆಂದು ಜನಸಾಮಾನ್ಯರಲ್ಲಿ ನಂಬಿಕೆ ಇದೆ. ಭೂಜಲ ವಿಜ್ಞಾನವು ಇಷ್ಟು ತೊಡಕಲಾಗಿರುವಾಗ, ಯಾವ ವೈಜ್ಞಾನಿಕ ಸಲಕರಣೆಗಳೂ ಇಲ್ಲದೆ ಹಾಗೂ ಸಮಂಜಸ ವೈಜ್ಞಾನಿಕ ಕಾರಣಗಳಿಲ್ಲದ ಈ ಪ್ರಯೋಗ ಅನುಮಾನಾಸ್ಪದವಾದುದು. ಜಲಾನಯನ ವಿಸ್ತಾರ, ಭೂಮಿಯ ಅಂತರಂಗದ ರಚನೆ, ಸ್ಥಳದ ವಾಯುಗುಣ, ಇವುಗಳ ಹಿನ್ನೆಲೆಯಿಂದ ತಜ್ಞರು ಭೂಜಲದ ಸ್ಥಾನಮಾನಗಳನ್ನು ಅಂದಾಜಿಸಬಹುದು. ಮಾಗೋಲಿನ ಪ್ರಯೋಗದಿಂದ ಬಾವಿಗಳನ್ನು ತೋಡುವುದು ಕೇವಲ ಹಣವನ್ನು ದುರ್ವ್ಯಯ ಮಾಡಿದಂತೆ. ಪ್ರಪಂಚದ ಅನೇಕ ವಿಜ್ಞಾನ ಸಂಸ್ಥೆಗಳು ಮಾಟಗೋಲಿನ ಸಾಧನೆಯನ್ನು ಮೋಸವೆಂದು ಸಾರಿರುತ್ತವೆ.

B. ಪ್ರತ್ಯಕ್ಷ ಪ್ರಯೋಗ

ಅನೇಕ ಕಡೆ ಉಪಕರಣಗಳ ಸಾಧ್ಯತೆ ಇಲ್ಲದಿದ್ದಲ್ಲಿ ಹಾಗೂ ತಪ್ಪಿಲ್ಲದ ಪ್ರಯೋಗ ನಡೆಸಬೇಕಾದಲ್ಲಿ ಪ್ರತ್ಯಕ್ಷ ಪ್ರಯೋಗ ಅವಶ್ಯಕ. ಈ ಪ್ರಯೋಗವಲ್ಲಿ ನೇರವಾಗಿ ಸಣ್ಣ

ವ್ಯಾಸದ ಕೊಳವೆ ಬಾವಿಯನ್ನು ಕೊರೆದು ವಿವಿಧ ಆಳ ಮಟ್ಟದಲ್ಲಿ ಮಣ್ಣಿನ ರಚನೆಯನ್ನು ಪರೀಕ್ಷಿಸಿ ಭೂಜಲ ಉಪಸ್ಥಿತಿ, ಶೇಖರಣೆಯ ಪ್ರಮಾಣಗಳನ್ನು ತಿಳಿಯಬಹುದು. ಆದರೆ ಇದು ದುಭಾರಿ ಪ್ರಯೋಗ.

ಆಶಾದಾಯಕ ಭೂಜಲ ಜಲಾಶಯಗಳನ್ನು ಭೂಮಿಯ ಮೇಲೆ ಗುರುತಿಸಬಲ್ಲ ಚಿಹ್ನೆಗಳು

ಸಮೃದ್ಧಿಯಾದ ಭೂಜಲ ಧರೆಗಳು ನದೀ ಕಣಿವೆಗಳಲ್ಲಿಯೂ ಬೆಟ್ಟದ ತಪ್ಪಲಿನಲ್ಲೂ ಮತ್ತು ಸರೋವರಗಳ ನೆರೆಯಲ್ಲೂ ದೊರೆಯುವ ಸಾಧ್ಯತೆ ಹೆಚ್ಚು. ಚಿಲುಮೆಗಳೂ, ಬುಗ್ಗೆಗಳೂ, ಜೌಗು, ಪ್ರಕೃತಿಯ ಹಸಿರು ಹುಲ್ಲುಗಾವಲು ಮುಂತಾದುವು ಭೂಜಲ ಭೂಮಿಗೆ ಸಮೀಪವಾಗಿರುವ ಚಿಹ್ನೆಯನ್ನು ಸೂಚಿಸುತ್ತವೆ.

ಶೀಲ ಪ್ರಗತಿಗೆ ಮೂಲ, ಸಂಪತ್ತಿಗೆ ತಳಹದಿ, ಆನಂದ ಶಾಂತಿಗಳಿಗೆ ರಾಜಮಾರ್ಗ.

ಸತ್ಯ ಒಂದು ದೊಡ್ಡ ಮರ ಇದ್ದಂತೆ. ಅದರ ಸ್ನೇಹ ಮಾಡಿದಷ್ಟೂ ಫಲಗಳು ಹೆಚ್ಚುತ್ತವೆ.

ಗಾಂಧೀಜಿ

ಶಾಂತಿ

ಧನೇಶ್ವರ ಪ್ರಸಾದ್

ತಾವು ನನ್ನನ್ನು ಬಹಳ ಹೊತ್ತಿನಿಂದ ದಿಟ್ಟಿಸಿ ನೋಡುತ್ತಿದ್ದೀರಿ. ಈ ಸಣ್ಣ ವಯಸ್ಸಿನಲ್ಲೆ ನನ್ನನ್ನು ಸಾಧುವಿನ ರೂಪದಲ್ಲಿ ನೋಡಿ ನಿಮಗೆ ಬಹುಶಃ ಆಶ್ಚರ್ಯವಾಗಿರಬಹುದು! ಅಥವಾ ಆಗಿರದೆಯೂ ಇರಬಹುದು. ಆದರೆ ನಿಜಸಂಗತಿ ಇದು. ನಾನು ಸಾಧುವಲ್ಲ. ಸಾಧುವಾಗಬೇಕೆಂದು ಅಗತ್ಯವಾಗಿ ಇಚ್ಛಿಸಿದ್ದೆ. ಆದರೆ ಆಗಲು ಸಾಧ್ಯವಾಗಲಿಲ್ಲ. ಸಾಧುವಿನ ವೇಷ ಧರಿಸುವುದರಿಂದಲೇ ಯಾರೂ ಸಾಧು ಆಗುವುದಿಲ್ಲ!

ಹೌದು, ಜೀವನದಲ್ಲಿ ಕೆಲವು ಘಟಿಸಿಹೋಗಿದ್ದವು. ಆಗಲೇ ಈ ರೂಪ ಧರಿಸಿದ್ದಾಯಿತು. ಶಾಂತಿಯನ್ನು ಪಡೆಯುವುದೊಂದೇ ಇಂಥ ವೇಷ ಧರಿಸುವ ಉದ್ದೇಶವಾಗಿತ್ತು.

ಅರೆ, ಇಲ್ಲ ಸಾಹೇಬರೆ. ಶಾಂತಿ ಎಲ್ಲಿ ಸಿಕ್ಕಿತು! ಈಗ ನೀವೇ ಹೇಳಿ. ಯಾವ ವ್ಯಕ್ತಿಯ ಹತ್ತಿರ ಶಾಂತಿ ಇಲ್ಲವೋ ಅವನನ್ನು ಸಾಧು ಎನ್ನಲು ಹೇಗೆ ಸಾಧ್ಯ?

ಹಾ ಹಾ ಹಾ....ಪೂರ್ತಿ ವಿಷಯ ತಿಳಿಯಲು ಇಚ್ಛಿಸುತ್ತೀರ? ಸಾಹೇಬರೆ, ನನಗಂತು ಯಾವ ತೊಂದರೆ ಇಲ್ಲ. ಆದರೆ, ಕೇಳಲು ನಿಮ್ಮ ಬಳಿ ಸಮಯವಿದೆಯೆ?

ಒಳ್ಳೆಯದು. ನಿಮ್ಮ ಹತ್ತಿರ ಒಂದು ಗಂಟೆ ಸಮಯವಿದೆ. ಹಾಗಾದರೆ ಸರಿ. ಇಂದು ನಾನೂ ಕೂಡ ನಿಮ್ಮ ಸಮಕ್ಷಮದಲ್ಲಿ ನನ್ನ ಮನಸ್ಸಿನ ಗಂಟನ್ನು ಬಿಚ್ಚಿ ತೋರಿಸುತ್ತೇನೆ.

*　　*　　*

ನಾನು ಅವಿಭಕ್ತ ಕುಟುಂಬದ ಒಬ್ಬ ಸದಸ್ಯನಾಗಿದ್ದೆ. ಓದುವುದರಲ್ಲಿ ಅಗಾಧ ಆಸಕ್ತಿಯಿತ್ತು. ವಿದ್ಯಾಲಯ ಹಾಗೂ ಮಹಾವಿದ್ಯಾಲಯ

೧೯೮೮ರ ಫೆಬ್ರವರಿ ತಿಂಗಳ 'ನವನೀತ'ದಲ್ಲಿ ಪ್ರಕಟವಾದ ಹಿಂದಿ ಕಥೆಯ ಕನ್ನಡ ಅನುವಾದ.

ಗಳ ಓದನ್ನು ಉತ್ತಮ ಅಂಕಗಳಿಸಿ ಮುಗಿಸಿದ್ದೆ. ನನ್ನ ಬಗೆಗೆ ಕುಟುಂಬದವರಿಗೆ ಬಹಳಷ್ಟು ಆಸೆಗಳಿದ್ದವು. ಆದರೆ ನನಗೆ ಕೇವಲ ಎರಡೇ ಆಸೆ ಇತ್ತು—ಮೊದಲನೆಯದು ಒಂದು ಒಳ್ಳೆಯ ಸರ್ಕಾರಿ ನೌಕರಿಯನ್ನು ಪಡೆಯುವುದು. ಎರಡನೆಯದು ಸುಂದರಿಯಾದ ಜೀವನ ಸಂಗಾತಿಯನ್ನು ಪಡೆಯುವುದು. ಮೊದಲನೆಯ ಆಸೆಯಂತು ಪೂರ್ಣವಾಯಿತು. ಏಕೆಂದರೆ ಅದನ್ನು ಪಡೆಯುವುದು ನನ್ನ ಕೈಯಲ್ಲಿತ್ತು. ಆದರೆ, ಎರಡನೇ ಆಸೆಯ ಲಗಾಮು ನನ್ನ ಕುಟುಂಬದವರ ಕೈಯಲ್ಲಿತ್ತು.

ನಾನು ಬಂಡುಕೋರ ಮತ್ತು ಉಗ್ರಸ್ವಭಾವದವನಾಗಿರಲಿಲ್ಲ. ನನಗೆ ಶಾಂತಿ ಪ್ರಿಯವಾದುದಾಗಿತ್ತು. ಈ ಕಾರಣದಿಂದಾಗಿ ಕುಟುಂಬದ ಎಲ್ಲ ಸದಸ್ಯರು ತಮ್ಮ ಇಚ್ಛಾನುಸಾರ ನನ್ನಿಂದ ಲಾಭ ಪಡೆಯುತ್ತಿದ್ದರು.

ಇದೇ ಸಂದರ್ಭದಲ್ಲಿ ನಿಮಗೆ ನಾನು ಇನ್ನೊಂದು ವಿಚಾರವನ್ನೂ ತಿಳಿಸುತ್ತೇನೆ. ಏನೆಂದರೆ ನಾನು ಬಡಕುಟುಂಬದ ಹುಡುಗನಾಗಿದ್ದೆ. ನನ್ನ ತಂದೆ, ಚಿಕ್ಕಪ್ಪ ಮತ್ತು ಅಣ್ಣ ಎಲ್ಲರೂ ಅಶಿಕ್ಷಿತರ ಶ್ರೇಣಿಯಲ್ಲಿದ್ದರು. ಸಮಾಜದಲ್ಲಿ ನನ್ನ ಕುಟುಂಬಕ್ಕೆ ಯಾವ ಮಾನ್ಯತೆಯೂ ಇರಲಿಲ್ಲ. ಆದರೆ ನನಗೆ ಸರಕಾರಿ ಗೆಜೆಟೆಡ್ ನೌಕರಿ ಸಿಕ್ಕಿದ ಕೂಡಲೆ ಕುಟುಂಬದ ಸ್ವರೂಪವೆ ಬದಲಾಗಿಬಿಟ್ಟಿತು.

ಈಗ ಮನೆಯಲ್ಲಿ ನನ್ನ ಮದುವೆಯ ಚರ್ಚೆ ಆರಂಭವಾಗಿತ್ತು. ಮನೆಯವರು ನನ್ನನ್ನು 'ಬ್ಲಾಂಕ್ ಚೆಕ್'ನಂತೆ ತಿಳಿಯಲಾರಂಭಿಸಿದ್ದರು. ಅದರಲ್ಲಿ ಒಂದು ದೊಡ್ಡ ಮೊತ್ತದ ಹಣವನ್ನು ಬರೆದು ಚಲಾವಣೆ ಮಾಡಲು ಆಶಿಸುತ್ತಿದ್ದರು.

ವರದಕ್ಷಿಣೆಯ ಮಾತುಕತೆ ಆಗುತ್ತಿತ್ತು. ಎಲ್ಲಿ ಒಂದು ಮಾರುವ ವಸ್ತು ಇರುತ್ತದೊ ಅಲ್ಲಿಗೆ ಅನೇಕ ಗಿರಾಕಿಗಳೂ ಬರುತ್ತಾರೆ. ನನ್ನ ಮನೆಯ ಮುಂದೆ ಕೂಡ ಶ್ರೀಮಂತ ಗಿರಾಕಿಗಳ ಗುಂಪು ಸೇರತೊಡಗಿತು. ಒಬ್ಬ ಗೆಜೆಟೆಡ್ ಆಫೀಸರ್ ಮಾರಾಟ ವಾಗುತ್ತಿದ್ದ. ಖರೀದಿಸುವವರಲ್ಲಿ ಪೈಪೋಟಿ ನಡೆಯುತ್ತಿತ್ತು. ನನ್ನ ಮನೆಯವರು ಮನಸಾಇಚ್ಛೆ ಮಾತುಗಳನ್ನು ಹೆಚ್ಚಿಸುತ್ತ ಹೋಗುತ್ತಿದ್ದರು.

ನನ್ನ ಅಪೇಕ್ಷೆಗಳ ಬಗ್ಗೆ ಯಾರಿಗೂ ಚಿಂತೆ ಇದ್ದಂತಿರಲಿಲ್ಲ. ಹಾಗೆ ನೋಡಿದರೆ ಇದು ನಿಯಮಬಾಹಿರ ಕೂಡ ಆಗಿರಲಿಲ್ಲ. ಸರಿ, ಒಂದು ಬಿಕರಿಯಾಗುವ ವಸ್ತುವಿಗೆ ಏನು ತಾನೆ ಅಪೇಕ್ಷೆಗಳು ಇರುತ್ತವೆ?

ಒಂದು ಶ್ರೀಮಂತ ಕುಟುಂಬ ಎಲ್ಲರಿಗಿಂತ ಹೆಚ್ಚಾಗಿ ವರದಕ್ಷಿಣೆ ನೀಡಿ ನನ್ನನ್ನು ಬುಕ್ ಮಾಡಿತು. ತಮ್ಮ ಮಗಳಿಗಾಗಿ ಒಬ್ಬ ಗೆಜೆಟೆಡ್ ಆಫೀಸರನ್ನು ಕೊಂಡುಕೊಂಡ ಆ ಕುಟುಂಬಕ್ಕೆ ಖುಷಿಯಾಗಿತ್ತು ಮತ್ತು ಒಂದು ದೊಡ್ಡ ಮೊತ್ತದ ಹಣವನ್ನು ಪಡೆದ ನನ್ನ ಕುಟುಂಬ ಕೂಡ ಸಂತೋಷದಿಂದಿತ್ತು. ಆದರೆ ನಾನು ಮಾತ್ರ ಉದಾಸೀನನಾಗಿದ್ದೆ; ದುಃಖಿಯಾಗಿದ್ದೆ.

ನಾನು ಅಡಗಿದ ದನಿಯಲ್ಲಿ ತಂದೆಯವರಿಗೆ ಹೇಳಿದೆ—'ಹುಡುಗಿಯನ್ನಾದರೂ ನೋಡಿರಿ.' ತಂದೆಯವರ ಗರ್ಜಿಸುವ ಧ್ವನಿ ಕೇಳಿಬಂತು—'ಅಗತ್ಯವಾದರು ಏನಿದೆ? ಹೆಂಗಸಂತೂ ಹೌದು. ಪದವಿಗಳಿಸಿದ ಕೂಡಲೆ ನಿನ್ನ ಸ್ಥಿತಿ ಮರೆತುಬಿಟ್ಟೆಯಾ?'

ನಾನು ಅರ್ಧ ಅಧೀರ ಮನದಿಂದ ವಿರೋಧಿಸಿದೆ. ಆಗ ಅಣ್ಣ ಹೇಳಿದ—'ನಾನು ಹುಡುಗಿಯನ್ನು ನೋಡಿದ್ದೇನೆ. ನಿನಗೆ ಎಲ್ಲ ರೀತಿಯಲ್ಲೂ ಯೋಗ್ಯಳಾಗಿದ್ದಾಳೆ.'

ನಾನು ಅವರ ಮಾತಿನಲ್ಲಿ ವಿಶ್ವಾಸವಿಟ್ಟು ಸುಮ್ಮನಾದೆ. ಈಗ ನನ್ನ ಬಳಿ ಇದ್ದದ್ದು
ಕೇವಲ ಸವಿಸವಿಯಾದ ಕಲ್ಪನೆಗಳು. ಈ ಕಲ್ಪನೆಗಳ ಆಶ್ರಯದಲ್ಲಿ ನನ್ನ ಸಮಯ
ಕಳೆದುಹೋಗುತ್ತಿತ್ತು.

ಕಡೆಗೆ ನಾನು ಮದುಮಗನಾಗುವ ದಿನವೂ ಬಂತು. ಆ ದಿನ ಎಷ್ಟು ಹಿತಕರ
ವೆನಿಸುತ್ತಿತ್ತು! ಜೀವನದಲ್ಲಿ ಒಂದು ಹೊಸ ತಿರುವು ಒದಗಿಬಂದಂತೆ ಅನುಭವವಾಗು
ತ್ತಿತ್ತು.

ಎರಡನೆಯದಿನ ವಧುವಿನ ಜೊತೆ ಮನೆಗೆ ಹಿಂದಿರುಗಿದೆ. ಮೊದಲ ರಾತ್ರಿಯ
ಕಲ್ಪನೆಯಲ್ಲಿ ನಾನು ಮುಳುಗುತ್ತ ತೇಲುತ್ತ ಇದ್ದೆ. ಈ ಮೊದಲ ರಾತ್ರಿಯ ಬಗ್ಗೆ
ಅದೆಷ್ಟು ಲೇಖಕರು ತಮ್ಮ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೊ ತಿಳಿಯದು.
ನನಗೂ ಕೂಡ ತುಸು ವಿಶಿಷ್ಟತೆಯ ಅನುಭವವಾಗುತ್ತಿತ್ತು. ಹೃದಯದಲ್ಲಿ ಒಂದು
ಬಗೆಯ ಉತ್ಸಾಹ ಮತ್ತು ತಲೆಯಲ್ಲಿ ಸಿಹಿಯಾದ ಕಲ್ಪನೆ.

ಹಗಲು ಕಳೆಯಿತು, ಸಂಜೆಯಾಯಿತು. ಬಂಧುಮಿತ್ರರ ಒಡನಾಟದಲ್ಲಿ ರಾತ್ರಿಯ
ಕೆಲವು ಕ್ಷಣಗಳೂ ಕಳೆದವು. ಸುಮಾರು ಹನ್ನೆರಡು ಗಂಟೆ ರಾತ್ರಿಯಲ್ಲಿ ಅತ್ತಿಗೆಯವರು
ನಸುನಗುತ್ತ ನನ್ನನ್ನು ಒಂದು ಕೊಠಡಿಯೊಳಗೆ ನೂಕಿದರು.

ನಾನು ಬೀಳುವುದನ್ನು ತಪ್ಪಿಸಿಕೊಂಡೆ. ಮುಗುಳ್ನಗುತ್ತ ಅತ್ತಿಗೆಯ ಕಡೆಗೆ
ನೋಡಿದೆ. ಆಕೆ ನಾಚುತ್ತ ಹೇಳಿದಳು—'ಬಾಗಿಲನ್ನು ಮುಚ್ಚಿಕೊಳ್ಳಿ, ಭಾವಾಜಿ'.

ನಾನು ಬಾಗಿಲು ಹಾಕಿಕೊಂಡೆ. ಅವಳು ಹಾಸಿಗೆಯ ಮೇಲೆ ಮುಸುಕನ್ನು
ತೆಗೆದು ಕುಳಿತಿದ್ದಳು. ನಾನು ನಿಂತು ನಿಂತೇ ಯೋಚಿಸುತ್ತಿದ್ದೆ—'ಈಗೇನು ಮಾಡ
ಬೇಕು'? ಹೀಗೆಯೆ ಕೆಲವು ಕ್ಷಣಗಳು ಕಳೆದವು.

ಕಡೆಗೆ ಕಂಪಿಸುವ ಕೈಗಳಿಂದ ನಾನು ಅವಳ ಭುಜಗಳನ್ನು ಸ್ಪರ್ಶಿಸಿದೆ. ಬಹುಶಃ
ಅವಳು ಇದೇ ಸಂಕೇತದ ನಿರೀಕ್ಷೆಯಲ್ಲಿದ್ದಳು. ಅವಳು ಎದ್ದು ನಿಂತಳು. ಅವಳೇ ತಂದಿದ್ದ
ಮಂಚದ ಮೇಲೆ ಅವಳನ್ನು ಕೂರಿಸಿದೆ. ಅನಂತರ ಪರಿಹಾಸದ ದನಿಯಲ್ಲಿ ಹೇಳಿದೆ—
'ಈ ಮುಸುಕಿನೊಳಗಿರುವ ಚಂದ್ರನನ್ನು ನೋಡಲು ಟ್ಯಾಕ್ಸ್ ಕೊಡಬೇಕೇನು'?
ಅವಳು ಮೌನವಾಗಿ ಕೊರಳು ಬಾಗಿಸಿದಳು.

ನಾನು ನಸುನಗುತ್ತ ಒಂದು ಚಿನ್ನದ ಸರವನ್ನು ಅವಳ ಎದುರಿಸಲ್ಲಿಟ್ಟೆ ಮತ್ತು
ಒಂದೇ ಬಾರಿಗೆ ಮುಖಕ್ಕೆ ಮುಚ್ಚಿದ್ದ ಮುಸುಕನ್ನು ತಿರುವಿಹಾಕಿದೆ. ಉಫ್! ನನ್ನ
ಇಚ್ಛೆಯ ಸರ ಮುರಿದು ಚೆಲ್ಲಾಪಿಲ್ಲಿಯಾಗಿ ಬಿತ್ತು. ಈಗಲೇ ಕೊಠಡಿಯಿಂದ ಹೊರಕ್ಕೆ
ಹೋಗಬೇಕೆಂದು ಮನಸ್ಸಾಯಿತು. ಆದರೆ ಅಂಗಳದಲ್ಲಿ ನೆಂಟರ ಹೆಂಗಸರು ಮತ್ತು
ಹೊರಗಿನ ಪಡಸಾಲೆಯಲ್ಲಿ ಬಂಧುಮಿತ್ರರು ಮಲಗಿದ್ದರು. ಯಾರು ಯಾರಿಗೆ ಏನೆಂದು
ಉತ್ತರ ಕೊಡಲಿ, ಇದನ್ನೇ ಯೋಚಿಸುತ್ತ ನನ್ನ ಮನಸ್ಸು ಗಾಬರಿಯಾಯಿತು.

ನಾನು ಬಹಳ ವ್ಯಾಕುಲನಾಗಿದ್ದೆ. ತಲೆ ಸಿಡಿಯುತ್ತಿತ್ತು. ನಾನು ಕುರ್ಚಿಯಲ್ಲಿ
ಕುಳಿತು ಮೇಜಿನ ಮೇಲೆ ತಲೆ ಇಟ್ಟೆ. ಯಾವಾಗ ನಿದ್ದೆ ಬಂದಿತೋ ಗೊತ್ತಿಲ್ಲ.

ನಿದ್ರೆಯಿಂದ ಎಚ್ಚೆತ್ತಾಗ ಬೆಳಗಾಗಿತ್ತು. ಹೆಂಗಸರು ಮಾತನಾಡುವ ಧ್ವನಿ
ಕೇಳಿಬರುತ್ತಿತ್ತು. ನಾನು ಕುರ್ಚಿಯಿಂದ ಏಳುತ್ತಲೆ ಬೆಚ್ಚಿಬಿದ್ದೆ. ಅವಳು ನನ್ನ ಕಾಲು

ಹಿಡಿದುಕೊಂಡೇ ಬಹಳ ಸಂತೋಷದಿಂದ ಹಾಸಿಗೆಯ ಮೇಲೆ ಮಲಗಿದ್ದಳು. ಅವಳ ಕಣ್ಣು ರೆಪ್ಪೆಗಳು ಇನ್ನೂ ಒದ್ದೆಯಾಗಿದ್ದವು. ಕಾಡಿಗೆಯ ಕಪ್ಪು ಕಣ್ಣಿನಿಂದ ಹರಿದು ಕೆನ್ನೆಗಳ ಮೇಲೆ ಹರಡಿತ್ತು. ಆದರೆ ಮುಖದಲ್ಲಿ ಸಂತೋಷ ಮತ್ತು ಸೌಮ್ಯತೆಯ ಪ್ರತಿಬಿಂಬ ಸೂಸುತ್ತಿತ್ತು.

ಇಷ್ಟವಿಲ್ಲದಿದ್ದರೂ ನಾನು ಸುಮ್ಮನೆ ಕುಳಿತಿದ್ದೆ. ಅಷ್ಟರಲ್ಲಿ ಕೊಠಡಿಯ ಹೊರಗೆ ಒಬ್ಬ ಚಿಕ್ಕ ಹುಡುಗ ಅಳುವುದಕ್ಕೆ ಪ್ರಾರಂಭಿಸಿದ್ದ. ಅವಳ ನಿದ್ರೆ ಹರಿಯಿತು. ಗಡಿಬಿಡಿಯಿಂದ ಎದ್ದು ಕುಳಿತಳು ಮತ್ತು ಸೀರೆಯ ಸೆರಗಿನಿಂದ ತಲೆಯನ್ನು ಮುಚ್ಚಿಕೊಂಡು ಒಂದು ಕಡೆಗೆ ಸರಿದಳು. ನಾನು ಅವಳೆಡೆಗೆ ದೃಷ್ಟಿಬೀರಿ ಕೊಠಡಿಯಿಂದ ಹೊರಬಿದ್ದೆ.

ಎಲ್ಲ ನೆಂಟರಿಷ್ಟರು ಅದೇದಿನ ಹೊರಟುಹೋದರು. ಅವರು ಹೋದ ಕೂಡಲೆ ಅದೇ ದಿನ ಸಂಜೆ ನಾನೂ ಕೂಡ ಕೆಲಸಕ್ಕೆ ಹಾಜರಾಗಲೆಂದು ಹೊರಟುಬಿಟ್ಟೆ. ನನ್ನ ರಜೆಯನ್ನು ಕ್ಯಾನ್ಸಲ್ ಮಾಡಿದೆ. ಅವಳನ್ನು ಮನೆಯವರು ತೌರಿಗೆ ಕಳಿಸಿದ್ದಾರೆಂದು ಅನಂತರ ತಿಳಿದುಬಂತು.

ನಾನು ಕೆಲಸಕ್ಕೆ ಹೋದದ್ದೇನೊ ಸರಿ. ಆದರೆ ನನ್ನ ಮನಸ್ಸು ಕೆಲಸ ಮಾಡಲು ಸಿದ್ಧವಿರಲಿಲ್ಲ. ಅವಳ ಅಂದಿನ ಬೆಳಗಿನ ಮೊಗ ನನಗೆ ಪದೇ ಪದೇ ನೆನಪಿಗೆ ಬರುತ್ತಿತ್ತು. ಅದರಿಂದ ನಾನು ಹುಚ್ಚನಂತಾಗುತ್ತಿದ್ದೆ.

ಗೊತ್ತಿಲ್ಲ, ಅದ್ಯಾವ ಪ್ರೇರಣೆಯಿಂದಲೊ ಏನೊ ನಾನು ಅವಳಿಗೆ ಮೊದಲನೆಯ ತಾರೀಕಿನಂದೇ ಪ್ರತ್ಯೇಕವಾಗಿ ಸ್ವಲ್ಪ ಹಣವನ್ನು ಮನಿಆರ್ಡರ್ ಮಾಡುತ್ತಿದ್ದೆ. ಮನಿಆರ್ಡರ್ ಕಳಿಸಿದ ಮೇಲೆ ಈ ಹಣದಿಂದ ಅವಳ ಮನಸ್ಸಿನ ತೃಷೆಯನ್ನು ಹಿಂಗಿಸಲಾಗುವುದೇ ಎಂದು ಯೋಚಿಸುತ್ತ ನನ್ನ ಮನಸ್ಸು ಉದ್ವಿಗ್ನವಾಗುತ್ತಿತ್ತು.

ದಿನದಿಂದ ದಿನಕ್ಕೆ ನನ್ನ ಮನಸ್ಥಿತಿ ಬಿಗಡಾಯಿಸುತ್ತ ಹೋಯಿತು. ಯಾವ ಕೆಲಸವನ್ನೂ ಸರಿಯಾದ ರೀತಿಯಲ್ಲಿ ಮಾಡಲಾಗುತ್ತಿರಲಿಲ್ಲ. ಒಂದು ದಿನ ನನ್ನ ಮೇಲಧಿಕಾರಿಗಳು ಕರೆದು ನನಗೆ ಎಚ್ಚರಿಕೆ ನೀಡಿದ್ದೂ ಆಯಿತು.

ಆ ಅವಸ್ಥೆಯಲ್ಲಿಯೇ ನನಗೆ ಅವಳ ಪತ್ರ ಸಿಕ್ಕಿದ್ದು. ಪತ್ರ ಓದಿ ಕಂಗೆಟ್ಟು ಹೋದೆ. ಮನಸ್ಸು ಜೀವನದಿಂದ ಸಂಪೂರ್ಣ ವಿರಕ್ತವಾಯಿತು. ಕೆಲಸದಲ್ಲಿಯೂ ಆಸಕ್ತಿ ಇರಲಿಲ್ಲ. ಪದವಿಯ ಮೋಹವೂ ಇರಲಿಲ್ಲ. ನಾನು ಕೆಲಸ ಬಿಟ್ಟು, ಶಾಂತಿಯನ್ನು ಅರಸುತ್ತ ಅಜ್ಞಾತ ಸ್ಥಳದೆಡೆಗೆ ಹೊರಟೆ.

ಆದರೆ ಸಾಹೇಬರೆ, ಆ ಶಾಂತಿ ಇದ್ದದ್ದಾದರೂ ಎಲ್ಲಿ? ದೇವಾಲಯ, ಮಸೀದಿ, ಗುರುದ್ವಾರ ಎಲ್ಲೆಲ್ಲಿ ನಾನು ಅಲೆಯಲಿಲ್ಲ. ಇಷ್ಟಾದರೂ ನನಗೆ ಎಲ್ಲಿಯೂ ಶಾಂತಿ ದೊರೆಯಲಿಲ್ಲ.

ಈ ರೀತಿಯ ಅಲೆದಾಟದಲ್ಲಿ ಆರು ತಿಂಗಳು ಕಳೆದವು. ಗಡ್ಡ, ತಲೆಕೂದಲುಗಳು ಬೆಳೆದು ಉದ್ದುದ್ದವಾದವು. ಜೀವನದಿಂದ ಹತಾಶನಾಗಿ ಒಂದು ದಿನ ಗಂಗೆಯ ದಡದಲ್ಲಿ ಕುಳಿತು ಆತ್ಮಹತ್ಯೆಯ ಯೋಚನೆಯಲ್ಲಿ ಮಗ್ನನಾಗಿದ್ದೆ. ಎಲ್ಲಿಂದಲೊ ಸಾಧುವಿನ ರೂಪದಲ್ಲಿ ಒಬ್ಬ ಪೂಜ್ಯರಾದ ವೃದ್ಧರು ಬಂದು, ನನ್ನನ್ನು ತಮ್ಮ ಆಶ್ರಮಕ್ಕೆ ಕರೆದೊಯ್ದರು.

ಆ ವೃದ್ಧರ ಪ್ರವಚನ ಕೇಳುತ್ತ, ಅವರು ಹೇಳಿದ ರೀತಿಯಲ್ಲಿ ಧ್ಯಾನ ಮಾಡುತ್ತ, ಧಾರ್ಮಿಕ ಪುಸ್ತಕಗಳನ್ನು ಓದುತ್ತ ಆಶ್ರಮದಲ್ಲಿ ನನ್ನ ದಿನಚರಿ ನಿರ್ದಿಷ್ಟವಾಯಿತು. ಆದರೂ ನನಗೆ ಶಾಂತಿ ಲಭ್ಯವಾಗಲಿಲ್ಲ. ಏನುಮಾಡಿದರೂ ಅವಳ ಆ ಬೆಳಗಿನ ಮುಖ ಮುದ್ರೆಯೇ ನನ್ನ ಕಣ್ಮುಂದೆ ಸುಳಿಯುತ್ತಿತ್ತು. ಅವಳ ಪತ್ರದ ಮಾತುಗಳು ನೆನಪಿಗೆ ಬರುತ್ತಿದ್ದವು. ನಾನು ಅಶಾಂತನಾಗುತ್ತಿದ್ದೆ.

ಒಂದು ರಾತ್ರಿ ಬಹಳ ಉದಾಸೀನ ಹಾಗೂ ಉದ್ವಿಗ್ನನಾಗಿದ್ದೆ. ಎಷ್ಟೆಂದರೆ ನಾನು ಅಳಲಾರಂಭಿಸಿದ್ದೆ. ಆ ವೃದ್ಧರು ನನ್ನ ಸಮೀಪಕ್ಕೆ ಬಂದರು. ನನ್ನನ್ನು ಸಮಾಧಾನ ಪಡಿಸಿದರು. ಅವರ ಮಾತುಗಳಿಂದ ನಾನು ಸ್ವಲ್ಪಮಟ್ಟಿಗೆ ಶಾಂತನಾದೆ. ಅವರು ಮಧುರ ಸ್ವರದಲ್ಲಿ ಹೇಳಿದರು—"ಕೇಳು ಮಗು, ಈ ರೀತಿ ನಿನ್ನ ಅಮೂಲ್ಯ ಜೀವನವನ್ನು ನಷ್ಟ ಮಾಡಬೇಡ. ನೀನು ಭಾವನೆಗಳಲ್ಲಿ ಕೊಚ್ಚಿಹೋಗಿ ಯಾವುದನ್ನು ಬಿಟ್ಟು ಬಂದಿರುವೆಯೋ ಅದೇ ಗೃಹಸ್ಥಾಶ್ರಮದಲ್ಲಿ ನಿನಗೆ ಶಾಂತಿ ಸಿಕ್ಕುತ್ತದೆ. ಮಾನವನಿಗೆ ಗೃಹಸ್ಥಾಶ್ರಮ ಒಂದು ಶ್ರೇಷ್ಠವಾದ ಕರ್ಮಭೂಮಿ. ಇಲ್ಲಿ ಸುಖ—ದುಃಖ, ಪ್ರೀತಿ—ದ್ವೇಷ, ಸ್ನೇಹ—ವೈರಗಳ ಮಾರ್ಗದಲ್ಲಿ ಸಾಗುತ್ತ ಮಾನವನು ಬದುಕುವ ಕಲೆಯನ್ನು ಕಲಿಯುತ್ತಾನೆ. ಮಗು ಆಸೆಗಳು ಅಸಂಖ್ಯಾತ. ಮನುಷ್ಯನ ಪ್ರತಿಯೊಂದು ಇಚ್ಛೆಯೂ ಪೂರ್ಣವಾಗುವುದು ಸಾಧ್ಯವೆ? ಯಾವುದು ಸತ್ಯವಾಗಿದೆಯೊ ಅದನ್ನು ಸಾಧ್ಯವೆಂದು ತಿಳಿದು ಒಪ್ಪಿಕೊ. ಭಾವನೆಗಳ ಹೊನಲಲ್ಲಿ ಕೊಚ್ಚಿಹೋಗಬೇಡ. ಮನೆಗೆ ಹಿಂತಿರುಗಿ ಹೋಗು.

* * *

ಹೌದು, ಆ ಪತ್ರ ಈಗಲೂ ನನ್ನ ಬಳಿ ಇದೆ. ಹೌದು, ಹೌದು ತೆಗೆದುಕೊಳ್ಳಿ.
ಅಗತ್ಯವಾಗಿ ಓದಿ. ಹ ಹ ಹ....ಒಳ್ಳೆಯದು, ನಾನೇ ಓದಿ ಹೇಳುತ್ತೇನೆ.
ನನ್ನ ಸ್ವಾಮಿ, ಚರಣ ಸ್ಪರ್ಶ!
ನಿಮಗೆ ಪತ್ರ ಬರೆಯಬೇಕೆಂದು ಬಹಳ ದಿನಗಳಿಂದ ಸಾಹಸಪಡುತ್ತಿದ್ದೆ. ನನ್ನ
ಈ ಉದ್ಧಟತೆಗೆ ಕ್ಷಮೆ ಇರಲಿ.
ನಾನು ನಿಮಗೆ ಯೋಗ್ಯಳಲ್ಲವೆಂಬುದನ್ನು ಒಪ್ಪುತ್ತೇನೆ. ನಾನು ಕಪ್ಪಂತೂ
ಹೌದು, ಬಹಳ ಓದಿ ಬರೆದು ಮಾಡಿದಳೂ ಅಲ್ಲ. ಆದರೆ, ಇದರಲ್ಲಿ ನನ್ನ ದೋಷವೇನಿದೆ!
ಬಣ್ಣ—ರೂಪಗಳು ಪ್ರಾಕೃತಿಕ ಕೊಡುಗೆ. ಶಿಕ್ಷಾ—ದೀಕ್ಷೆಗಳು ತಂದೆತಾಯಿಯರ
ಕೊಡುಗೆ. ಅವರು ನನ್ನನ್ನು ಮದುವೆ ಮಾಡಿ ಎಲ್ಲಿಗೆ ಕಳಿಸಿದ್ದರೊ ಅಲ್ಲಿಗೆ ಹೋದೆ.
ಈಗಂತು ಏನು ಆಗಬೇಕಾಗಿತ್ತು ಅದು ಆಗಿಹೋಯಿತು.
ಹೌದು, ನೀವು ನನ್ನ ಪತಿ ಎಂಬ ಮಾತಿನಲ್ಲಿ ನನಗೆ ಹೆಮ್ಮೆಯಿದೆ. ಮದುವೆಯ
ಸಮಯದಲ್ಲಿ ನನ್ನ ಗೆಳತಿಯರು ನಿಮ್ಮನ್ನು ನೋಡಿದ್ದರು. ಅವರು ಇದುವರೆಗೂ ನನ್ನ
ಬಗ್ಗೆ ಅಸೂಯೆಪಡುತ್ತಾರೆ.
ನನಗೆ ಹೀಗೆ ಅನ್ನಿಸುತ್ತದೆ. ಈಗ ನೋಡಿ ನೀವು ನನ್ನನ್ನು ತಿರಸ್ಕರಿಸುತ್ತೀರಿ.
ಆದರೂ ಹಣ ಕಳಿಸುತ್ತಿದ್ದೀರಿ. ಹಾಗೆ ನೋಡಿದರೆ ನನಗೆ ಹಣದ ಅವಶ್ಯಕತೆಯೇನೂ

ಇಲ್ಲ. ಆದರೆ ನಿಮ್ಮ ಮನಿಆರ್ಡರ್ ಬಂದಾಗಲೆಲ್ಲ ನನಗೆ ಸಂತೋಷವಾಗುತ್ತದೆ. ನೀವು ನನ್ನನ್ನು ಸ್ವಲ್ಪವಾದರೂ ನೆನಪಿನಲ್ಲಿಟ್ಟುಕೊಂಡಿದ್ದೀರೆಂದು, ನಿಮ್ಮವಳೆಂದು ತಿಳಿದಿದ್ದೀರೆಂದು ಯೋಚಿಸುತ್ತೇನೆ.

ಒಂದು ಪ್ರಶ್ನೆ ನನ್ನ ಮನಸ್ಸಿನಲ್ಲಿ ಪದೇಪದೇ ಏಳುತ್ತದೆ. ಏನು ಜೀವನದಲ್ಲಿ ಶಾರೀರಕ ಸೌಂದರ್ಯಕ್ಕೆ ಮಾತ್ರ ಬೆಲೆಯೆ? ಆಂತರಿಕ ಸೌಂದರ್ಯಕ್ಕೆ ಬೆಲೆ ಇಲ್ಲವೆ? ತಾವು ನನಗೆ ಸೇವೆಮಾಡಲು ಅವಕಾಶಕೊಟ್ಟರೆ ಎಷ್ಟು ಚೆನ್ನ!

ನನ್ನ ಗೆಳತಿಯರಿಗೂ ಮದುವೆಯಾಗಿದೆ. ಅವರ ಗಂಡಂದಿರು ನಿಮ್ಮಷ್ಟು ಸುಂದರವಾಗಿಲ್ಲ. ನಿಮ್ಮಷ್ಟು ದೊಡ್ಡ ಹುದ್ದೆಯಲ್ಲೂ ಇಲ್ಲ. ಹೌದು, ಅವರೆಲ್ಲ ಈಗ ತಾಯಿಯಾಗಿದ್ದಾರೆ. ಗೆಳತಿಯರ ಮಡಿಲಿನಲ್ಲಿ ಮಗುವನ್ನು ನೋಡಿ ನನ್ನ ಹೃದಯವೂ ಪುಟಿದೇಳುತ್ತದೆ. ನಾನು ಸುಮ್ಮನೆ ರೋದಿಸುತ್ತೇನೆ. ಮತ್ತೆ, ನಾನು ಕಪ್ಪು, ನನಗೆ ತಾಯಿಯಾಗುವ ಅಧಿಕಾರ ಕೂಡ ಇಲ್ಲ ಎಂದು ಯೋಚಿಸಿ ಶಾಂತಳಾಗುತ್ತೇನೆ.

ನಾನು ನಿಮ್ಮನ್ನು ದೂಷಿಸುತ್ತೇನೆಂದು ತಿಳಿಯಬೇಡಿ. ಇದರಲ್ಲಿ ನಿಮ್ಮ ತಪ್ಪೇನೂ ಇಲ್ಲ. ಎಲ್ಲ ತಪ್ಪುಗಳೂ ನಮ್ಮ ತಾಯಿತಂದೆಯರದು. ಇರಲಿ, ನಿಮ್ಮ ಪ್ರೀತಿಯನ್ನು ಪಡೆಯಲಾಗದಿದ್ದರೆ ಏನಂತೆ, ನಿಮ್ಮ ಪೂಜೆಯನ್ನಂತೂ ಮಾಡುತ್ತೇನೆ, ಸಾಕು.

ನಿಮ್ಮವಳು
ಶಾಂತಿ

* * *

ಒಳ್ಳೆಯದು ನೀವು ಮುಂದಿನ ಸ್ಟೇಷನ್‌ನಲ್ಲಿ ಇಳಿಯುತ್ತೀರಲ್ಲವೆ? ಸರಿ, ಏನಂದಿರಿ, ಈಗ ನಾನು ಏನು ನಿರ್ಣಯಿಸಿದ್ದೇನೆಂದೇ?

ನೋಡಿರಲ್ಲ ಸಾಹೇಬರೆ, ಯಾವ ರೈಲಿನಲ್ಲಿ ನಾವು ಹೋಗುತ್ತಿರುವೆವೊ ಅದಕ್ಕೂ ಒಂದು ನಿಲ್ದಾಣವಿದೆ. ಎರಡು ವರ್ಷಗಳಿಂದ ಅಲೆಯುತ್ತಿದ್ದೇನೆ. ಈಗ ಇನ್ನೆಷ್ಟು ಅಲೆಯಲಿ.

ಶಾಂತಿಯನ್ನು ನಾನು ಮನೆಯಲ್ಲಿಯೇ ಬಿಟ್ಟು ಬಂದಿದ್ದೆ. ಶಾಂತಿಯ ಹುಡುಕುವಿಕೆಯಲ್ಲಿ ವ್ಯರ್ಥವಾಗಿ ಅಲೆಯುತ್ತಿದ್ದೆ. ಭಾವನೆಗಳಿಗೆ ಬಲಿಯಾಗಿ ಕೈಗೊಂಡ ನಿರ್ಣಯದಿಂದ ವರ್ತಮಾನ ಮತ್ತು ಭವಿಷ್ಯಗಳೆರಡೂ ನಷ್ಟವಾಗುತ್ತವೆ.

ಹೌದು, ಸತ್ಯವನ್ನೇ ಹೇಳುತ್ತಿದ್ದೀರಿ. ಬೆಳಗ್ಗೆ ಯಾರಾದರೂ ತಪ್ಪುಮಾಡಿ ಸಾಯಂಕಾಲ ಹಿಂತಿರುಗಿ ಬಂದರೆ ಅಂಥವರನ್ನು ದೋಷಿ ಎಂದು ಹೇಳಲಾಗುವುದಿಲ್ಲ!

ಕನ್ನಡಕ್ಕೆ : ವೈ. ಪಿ. ಭಾನುಮತಿ

ಆರ್. ಎಚ್. ಮಕ್ಕಳನ್ನು ಉಳಿಸಬಹುದು

ಡಾ. ಶಿವಾನಂದ ಕಾರ್ಕಲ್

ಪ್ರತಿ ವರ್ಷ ನೂರಾರು ಭಾರತೀಯ ಮಕ್ಕಳು ಜಾಂಡೀಸ್ (ಕಾಮಾಲೆ ಅಥವಾ ಅರಿಸಿನ ಮುಂಡಿಗೆರೋಗ) ಮತ್ತು ಅನೀಮಿಯಾ (ರಕ್ತ ಹೀನತೆ) ರೋಗಪೀಡಿತರಾಗಿ ಹುಟ್ಟುತ್ತಾರೆ. ಕೆಲವು ಮುಂಜಾಗರೂಕತಾ ಕ್ರಮ ಕೈಗೊಳ್ಳದೆ ಇರುವುದರಿಂದ ಕೆಲವರು ಸಾವನ್ನಪ್ಪುತ್ತಾರೆ ಮತ್ತೆ ಕೆಲವರು ನಿರಂತರ ನರಳುತ್ತಾರೆ.

ಸುರೇಖಾ ದೇಶಪಾಂಡೆ ಎಂಬ ಮಹಿಳೆ ಪುಣೆಯ ಹತ್ತಿರವಿರುವ ಒಂದು ಹಳ್ಳಿಯ ರೈತನ ಮಡದಿ. ಇವಳು ಗರ್ಭವತಿಯಾಗಿ ನವ ಮಾಸ ತುಂಬಿದ ನಂತರ ಪ್ರಸವ ವೇದನೆ ಪ್ರಾರಂಭವಾದ ಕೂಡಲೆ ಮುಂಬಯಿಯ ಪ್ರಸೂತಿ ಗೃಹವೊಂದಕ್ಕೆ ದಾಖಲಾದಳು. ಗಂಡು ಮಗುವಿನ ಜನನವಾಯಿತು. ಆದರೆ ಮಗು ಬಿಳಿಚಿ ಕೊಂಡಿದ್ದು ಕಡಿಮೆ ತೂಕವಿದ್ದು ಹುಟ್ಟಿದ ಕ್ಷಣವೇ ಅನಾರೋಗ್ಯ ಪೀಡಿತವಾಗಿ ಹಳದಿ ಬಣ್ಣಕ್ಕೆ ತಿರುಗಿತು.

ಆ ಮಗುವಿಗೆ ಅನೀಮಿಯಾ ರೋಗವಿದ್ದು ಕೇವಲ ಕೆಲವು ಕೆಂಪು ರಕ್ತ ಕಣಗಳು ಮಾತ್ರ ಜೀವರಕ್ಷಕ ಆಮ್ಲಜನಕವನ್ನು ಶ್ವಾಸಕೋಶದಿಂದ ಅಂಗಾಂಶಗಳಿಗೆ ಕೊಂಡೊಯ್ಯುತ್ತಿವೆ,ರಕ್ತವೆಲ್ಲ ಜಾಂಡೀಸ್ ಉಂಟುಮಾಡುವ ಕೆಟ್ಟವಸ್ತು ಬಿಲಿರುಬಿನ್ ಎಂಬ ಹಳದಿ ವಸ್ತುವಿನಿಂದಲೇ ತುಂಬಿದೆ ಎಂದು ಪ್ರಾಯೋಗಿಕ ಪರೀಕ್ಷೆ ಗಳಿಂದ ತಿಳಿಯಿತು. ನಿರ್ದಿಷ್ಟ ಮಟ್ಟಕ್ಕಿಂತ ಈ ಬಿಲಿರುಬಿನ್ ಎಂಬ ವಸ್ತು ನರಕೋಶಗಳ ಒಳಗೆ ಶೇಖರವಾದರೆ ಮೆದುಳಿಗೆ ಹಾನಿಯುಂಟುಮಾಡುತ್ತದೆ. ಇದು ತೀವ್ರವಾದರೆ ಮಗುವಿಗೆ ಸೆಳೆತ ಬರಬಹುದು ಅಥವಾ ಕೆಲವೇ ದಿವಸದಲ್ಲಿ ಮಗು

೧೯೮೩ ನೇ ಜನವರಿ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾಗಿರುವ ಡಾ. ಶಿವಾನಂದ ಕಾರ್ಕಲ್‌ರವರ "ವಿ ಕೆನ್ ಸೇವ್ ದಿ ಆರ್. ಎಚ್. ಬೇಬೀಸ್" ಎಂಬ ಲೇಖನದ ಅನುವಾದ.

ಸಾಯಬಹುದು. ಕೆಟ್ಟ ವಸ್ತುವಿನ ಶೇಖರಣೆ ಕಡಿಮೆಯಾಗಿದ್ದರೆ ಮುಂದೆ ಮಗುವಿಗೆ ಅಂಗವಿಕಲತೆ ಬರಬಹುದು.

ಡಾಕ್ಟರರು ಒಂದು ಸಣ್ಣ ಕೊಳವೆಯನ್ನು ಮಗುವಿನ ಹೊಕ್ಕಳ ನಾಳಕ್ಕೆ ಸೇರಿಸಿ ೨೦ ಮಿಲಿ ರಕ್ತವನ್ನು ಹೊರತೆಗೆದರು. ಇದಕ್ಕೆ ಬದಲಾಗಿ ಅಚ್ಚ ಹೊಸ ರಕ್ತವನ್ನು ಒಬ್ಬ ಆರೋಗ್ಯವಂತ ದಾನಿಯಿಂದ ಪಡೆದು ಆ ಕ್ಷಣವೇ ಸೇರಿಸಿದರು. ಈ ಕಾರ್ಯವನ್ನು ಮತ್ತೆರಡು ದಿನದವರೆಗೆ ಆ ಮಗುವಿನ ದೋಷಯುಕ್ತ ರಕ್ತವನ್ನು ಸಂಪೂರ್ಣವಾಗಿ ಹೊರ ತೆಗೆಯುವವರೆಗೂ ಮಾಡಿದರು. ಇದರ ಜೊತೆಗೆ ಮಗುವಿಗೆ ಮುಂದೊದಗ ಬಹುದಾದ ಅನಾಹುತಗಳನ್ನು ತಪ್ಪಿಸಲು ಬಹಳ ಶ್ರಮಪಟ್ಟರು.

ಈ ಮಗು ಭಾರತ ದೇಶದಲ್ಲಿ ತೀವ್ರವಾದ ಈ ಕಾಯಿಲೆಯಿಂದ ನರಳುವ ನೂರಾರು ಮಕ್ಕಳಲ್ಲಿ ಒಂದು. ಇದಕ್ಕೆ ಮುಖ್ಯ ಕಾರಣ ಮಗುವಿನ ತಾಯಿಯಲ್ಲಿ ಆರ್. ಎಚ್. ಅಂಶ ಇಲ್ಲದೇ ಇರುವುದೇ ಆಗಿದೆ. ಬಹುತೇಕ ಭಾರತೀಯರಲ್ಲಿ ಇದು ಕೆಂಪು ರಕ್ತ ಕಣದಲ್ಲಿರುವುದರಿಂದ ಅವರನ್ನು ಆರ್. ಎಚ್. ಪಾಸಿಟೀವ್ ಅಂತಲೂ ಕೇವಲ ಶೇಕಡಾ ೫ ರಷ್ಟು ಜನಕ್ಕೆ ಮಾತ್ರ ಇದು ಇರುವುದಿಲ್ಲ ಅವರನ್ನು ಆರ್. ಎಚ್. ನೆಗೆಟೀವ್ ಅಂತಲೂ ಕರೆಯುತ್ತೇವೆ. ಆರ್. ಎಚ್. ಇಲ್ಲದೆ ಇರುವ ಅಂಶ ಮನುಷ್ಯನಿಗೆ ಏನೂ ತೊಂದರೆ ಮಾಡುವುದಿಲ್ಲ. ಆದರೆ ಆರ್. ಎಚ್. ನೆಗೆಟೀವ್ ಇರುವ ಹೆಂಗಸು ಆರ್. ಎಚ್. ಪಾಸಿಟೀವ್ ಗಂಡಸನ್ನು ಮದುವೆಯಾದರೆ ಆಗ ಆರ್. ಎಚ್. ಭ್ರೂಣ ಉತ್ಪತ್ತಿಯಾದಾಗ ಅಪಾಯದ ಚಕ್ರ ಪ್ರಾರಂಭವಾಗುತ್ತದೆ. ಗರ್ಭಧರಿಸಿದ ೭ ನೇ ತಿಂಗಳನಂತರ ಮಗುವಿನ ಪ್ಲಾಸೆಂಟಾದಿಂದ (ಗರ್ಭವೇಷ್ಟನ ಅಥವಾ ಸತ್ತೆ) ರಕ್ತ ಸೋರಿ ತಾಯಿಯ ರಕ್ತ ಪರಿಚಲನೆಗೆ ಸೇರುತ್ತಿರುತ್ತದೆ. ಈ ರೀತಿ ಮಗುವಿನ ದೇಹದಿಂದ ರಕ್ತವು ತಾಯಿಯ ರಕ್ತ ಪ್ರವಾಹಕ್ಕೆ ಹರಿಯುವಾಗ ಮಗುವಿನ ರಕ್ತ ಕಣವನ್ನು ಬಾಹ್ಯ ಕಣವೆಂದು ಭಾವಿಸಿ ಅದಕ್ಕೆ ವಿರುದ್ಧವಾದ ಪ್ರತಿಕಣವನ್ನು ತಾಯಿಯ ರಕ್ತದಲ್ಲಿ ಉತ್ಪತ್ತಿ ಮಾಡುತ್ತದೆ.

ಸಾಮಾನ್ಯವಾಗಿ ಮೊದಲ ಮಗುವಿನಲ್ಲಿ ಕೆಟ್ಟ ಪರಿಣಾಮಗಳು ಕಾಣುವುದಿಲ್ಲ. ಏಕೆಂದರೆ ಕಡಿಮೆ ಪ್ರತಿಕಣಗಳು ತಾಯಿಯ ರಕ್ತ ಪ್ರವಾಹದಲ್ಲಿರುತ್ತವೆ. ಆದರೆ ಅನಂತರದ ಗರ್ಭಧಾರಣೆಯಲ್ಲಿ ಇದು ತೀವ್ರವಾದ ಪರಿಣಾಮ ಉಂಟುಮಾಡುತ್ತವೆ. ಏಕೆಂದರೆ ತಾಯಿಯ ರಕ್ತದಲ್ಲಿ ಉಂಟಾಗುವ ಪ್ರತಿರಕ್ತಕಣಗಳು ಬಹಳ ಸಂಖ್ಯೆಯಲ್ಲಿ ಬೆಳವಣಿಗೆಯಾಗಿ ಪ್ಲಾಸೆಂಟಾ ಹಾಯ್ದು ಅವು ಮಗುವಿನ ರಕ್ತ ಸೇರಿ ಮಗುವಿನ ಕೆಂಪು ರಕ್ತಕಣ ಹಾಳು ಮಾಡುತ್ತವೆ. ಬಹಳ ತೀವ್ರವಾಗಿ ತೊಂದರೆಗೊಳಗಾದ ಮಗು ತಾಯಿಯ ಗರ್ಭದಲ್ಲೇ ಮೃತ್ಯುವನ್ನಪ್ಪುತ್ತದೆ. ಮಿಕ್ಕವು ಅನೀಮಿಯಾ ಮತ್ತು ಜಾಂಡೀಸ್ ಮುಂತಾದ ತೀವ್ರತರ ಕಾಯಿಲೆಗಳಿಂದ ನರಳುತ್ತಾ ಹುಟ್ಟುತ್ತವೆ. ಇವುಗಳಿಗೆ ಅತ್ಯುತ್ತಮ ಶುಶ್ರೂಷೆ ದೊರೆತರೆ ಕೆಲವಾದರೂ ಬದುಕುತ್ತವೆ.

ಇಂದು ಆರ್. ಎಚ್. ನಿಂದಾಗಿ ಬದುಕುಳಿಯುವ ಮಕ್ಕಳು ೧೯೬೦ ರಲ್ಲಿ ನ್ಯೂಜಿಲೆಂಡ್‌ನ ಡಾ. ಆಲ್ಬರ್ಟ್‌ವಿಲಿಯಂ ಲಿಲಿಯವರಿಗೆ ಚಿರಋಣಿಗಳಾಗಬೇಕಾಗಿದೆ. ಗರ್ಭಧರಿಸಿದ ಮೊದಲನೇ ಮೂರು ತಿಂಗಳಿನಲ್ಲೇ ತಾಯಿಯ ಆರ್. ಎಚ್. ಗುಂಪನ್ನು

ಮತ್ತು ಆಕೆಯಲ್ಲಿ ಉತ್ಪತ್ತಿಯಾಗಿರುವ ಪ್ರತಿಕಣಗಳನ್ನು ಗುರುತಿಸುವ ವಿಧಾನವನ್ನು ಕಂಡುಹಿಡಿದರು. ಪ್ರತೀ ತಿಂಗಳ ಪರೀಕ್ಷೆಯಿಂದ ಪ್ರತೀಕಣಗಳ ಏರಿಕೆ ಕಂಡುಬಂದರೆ ಭ್ರೂಣ ಆರ್. ಎಚ್. ಪಾಸಿಟೀವ್ ಎಂತಲೂ ಆದರ ಮೇಲೆ ಪ್ರತಿಕಣಗಳು ಧಾಳಿ ಮಾಡುತ್ತಿವೆ ಎಂದು ತಿಳಿಯಬಹುದು.

ಶಬ್ದಾತೀತ ಅಲೆಗಳ ಪರೀಕ್ಷೆಯಿಂದ ಕಾಯಿಲೆ ಪತ್ತೆ ಹಚ್ಚಲು ಗರ್ಭದರಿಸಿದ ೩೦ ನೇ ವಾರದಲ್ಲಿ ಗರ್ಭಿಣಿ ಸ್ತ್ರೀಯ ಗರ್ಭಕೋಶದಿಂದ ಗರ್ಭವೇಷ್ಟನ ದ್ರವವನ್ನು ಹೊರತೆಗೆದರೆ ಇದರ ಪ್ರಯೋಗಶಾಲೆ ವಿಶ್ಲೇಷಣೆಯಿಂದ ಮಗುವಿನ ಪ್ರತಿಕಣಗಳಿಂದ ತೊಂದರೆಯಾಗ ತ್ತಿದೆಯೆ? ಮತ್ತು ಅದು ಎಷ್ಟು ತೀವ್ರವಾಗಿದೆ ಎಂಬುದನ್ನು ಅರಿಯ ಬಹುದು.

ಅನೇಕ ಗರ್ಭಿಣಿ ಸ್ತ್ರೀಯರು ಡಾಕ್ಟರರು ಆರ್. ಎಚ್. ಪರೀಕ್ಷೆ ಮಾಡಿಸಿಕೊಳ್ಳಿ ಎಂದು ತಿಳಿಸಿದರೂ ಅದರ ಬಗ್ಗೆ ಗಮನವಿಡುವುದಿಲ್ಲ ಎಂದು ಡಾಕ್ಟರ್ ಶಿರಿಷ್ ಸೇತ್ ಮುಂಬಯಿಯ ಓರ್ವ ಪ್ರಖ್ಯಾತಿ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು ಹೇಳುತ್ತಾರೆ. ನಗರಗಳಲ್ಲಿ ಅನೇಕ ಪ್ರಮುಖ ಆಸ್ಪತ್ರೆಗಳಲ್ಲಿ ಆರ್. ಎಚ್. ಪರೀಕ್ಷೆಗೆ ವ್ಯವಸ್ಥೆ ಇದ್ದರೂ ಅನೇಕ ಗರ್ಭಿಣಿ ಸ್ತ್ರೀಯರು ಇದರ ಪರೀಕ್ಷೆಗೆ ಮುಂದಾಗದಿರುವುದು ಒಂದು ಶೋಚನೀಯ ಸಂಗತಿ. ಇನ್ನು ಸಣ್ಣ ಪುಟ್ಟ ನಗರಗಳ ಸ್ಥಿತಿ ಕೇಳಬೇಕೆ.

ಎರಡು ಮುಖ್ಯವಾದ ತಂತ್ರಗಳನ್ನು ಈ ಕಾಯಿಲೆ ಗುಣಪಡಿಸುವುದರಲ್ಲಿ ಬಳಸ ಲ್ಪಡುತ್ತಿವೆ. ಬೆಳಕಿನಿಂದ ಗುಣಪಡಿಸುವುದು (ಫೋಟೋ ಥೆರಪಿ) ಮತ್ತು ರಕ್ತ ಪೂರಣೆ (ಬ್ಲಡ್ ಟ್ರಾನ್ಸ್‌ಪ್ಯೂಷನ್). ಇವೆರಡು ತಂತ್ರಜ್ಞಾನದಿಂದ ಈ ಕಾಯಿಲೆಯ ಅಲ್ಪವಾಗಿರುವ ಮಕ್ಕಳನ್ನು ಬದುಕುಳಿಸಬಹುದಾಗಿದೆ. ಫೋಟೋ ಥೆರಪಿಯಲ್ಲಿ ಆಗ ತಾನೆ ಹುಟ್ಟಿದ ಮಗುವನ್ನು ನೀಲಿ ಬೆಳಕಿಗೆ ಒಡ್ಡಬೇಕು. ಅದು ವಿನಾಶಕಾರೀ ಹಳದಿ ಬಣ್ಣವನ್ನು ನಿರ್ವರ್ಣ ಮಾಡುತ್ತದೆ ಮತ್ತು ಆ ಅಪಾಯಕಾರವಲ್ಲದ ನಿರ್ವರ್ಣ ವಸ್ತುವನ್ನು ಸುಲಭವಾಗಿ ವಿಸರ್ಜಿಸುತ್ತದೆ. ರಕ್ತ ಬದಲಾವಣೆ ಕ್ರಿಯೆಯಲ್ಲಿ ಮಗುವಿನ ಆರ್. ಎಚ್. ಪಾಸಿಟೀವ್ ರಕ್ತವನ್ನು ಸಂಪೂರ್ಣವಾಗಿ ತೆಗೆದು ಆರ್. ಎಚ್. ನೆಗೆಟೀವ್ ರಕ್ತ ಸೇರಿಸುವುದು.

ಪ್ರಯೋಗ ಶಾಲೆಯ ಪರೀಕ್ಷೆಗಳು ಮಗುವಿಗೆ ತೀವ್ರವಾದ ರಕ್ತ ಹೀನತೆ ಮತ್ತು ಜಾಂಡೀಸ್ ಇದೆ ಮತ್ತು ಮಗುವಿನ ಜೀವಕ್ಕೆ ತೊಂದರೆಯಿದೆಯೆಂದು ಸ್ಥಿರಪಡಿಸಿದರೆ ರಕ್ತ ಬದಲಾವಣೆಗೆ ಪ್ರಯತ್ನಿಸಬಹುದು. ಶಬ್ದಾತೀತ ಅಲೆಗಳ ಪರೀಕ್ಷೆಯ ಸಹಾಯ ದಿಂದ ಒಂದು ಉದ್ದವಾದ ಒಳನಾಳವಿರುವ ಒಂದು ಸೂಜಿಯನ್ನು ತಾಯಿಯ ಕಿಬ್ಬೊಟ್ಟೆ ಯಲ್ಲಿರುವ ಅವಳ ಗರ್ಭಕೋಶಕ್ಕೆ ಅದು ಮಗುವಿನ ಕಿಬ್ಬೊಟ್ಟೆಯ ಭಾಗಕ್ಕೆ ಸೇರುವಂತೆ ಚುಚ್ಚಬೇಕು. ಅನಂತರ ಒಳನಾಳದಿಂದ ಒಂದು ತೆಳುವಾದ ಪ್ಲಾಸ್ಟಿಕ್ ಕೊಳವೆಯನ್ನು ಸೇರಿಸಿ ಸೂಜಿಯನ್ನು ಹಿಂದಕ್ಕೆ ಪಡೆಯಬೇಕು. ಮಗುವಿಗೆ ಆ ಕೊಳವೆಯ ಮೂಲಕ ಹೊಸ ರಕ್ತವನ್ನು ಕೊಡಬೇಕು.

೧೯೬೦ ರಲ್ಲಿ ಇಂಗ್ಲೆಂಡಿನ ಮತ್ತು ಅಮೆರಿಕಾದ ವಿಜ್ಞಾನಿಗಳು ಈ ಆರ್. ಎಚ್. ಸಮಸ್ಯೆಗೆ ಒಂದು ಅಂತಿಮ ಪರಿಹಾರ ಕಂಡುಹಿಡಿದರು. ಅದು ಏನೆಂದರೆ ಆರ್. ಎಚ್.

ಪಾಸಿಟೀವ್ ರಕ್ತಕ್ಕೆ ಪ್ರತಿಕಣಗಳಲ್ಲಿ ಆರ್. ಎಚ್. ನೆಗೆಟೀವ್ ಹೆಂಗಸಿಗೆ ಅವಳು ಆರ್. ಎಚ್. ಪಾಸಿಟೀವ್ ಮಗುವನ್ನು ಪಡೆದ ೪೮ ಗಂಟೆಗಳಲ್ಲಿ ಚುಚ್ಚು ಮದ್ದಿನ ರೂಪದಲ್ಲಿ ಕೊಡುವುದು. ಇದು ತಾಯಿಯಲ್ಲಿರುವ ಆರ್. ಎಚ್. ಕೆಂಪು ಕಣಗಳನ್ನು ನಿರ್ನಾಮಮಾಡಿ ಆಕೆಯ ದೇಹದಲ್ಲಿ ಆರ್. ಎಚ್. ಪ್ರತಿಕಣಗಳನ್ನು ಉತ್ಪತ್ತಿಯಾಗ ದಂತೆ ಮಾಡುತ್ತದೆ. ಹೀಗಾಗಿ ಮಗುವಿನಿಂದ ಬಂದ ಆರ್. ಎಚ್. ಪಾಸಿಟೀವ್ ಕಣಗಳು ಉಳಿಯದೆ ಮುಂದಿನ ಗರ್ಭಧಾರಣೆಯಲ್ಲಿ ಆರ್. ಎಚ್. ಸಮಸ್ಯೆ ಉದ್ಭವಿ ಸುವುದಿಲ್ಲ.

ಡಾ. ಎಂ. ಎನ್. ಪರೀಖ್ ಮತ್ತೊಬ್ಬ ಮುಂಬಯಿನಗರದ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞರು ಒತ್ತಿ ಹೇಳುವುದೇನೆಂದರೆ, ಈ ರೀತಿ ಆರ್. ಎಚ್. ಪ್ರತಿಕಣ ಆರ್. ಎಚ್. ನೆಗಟೀವ್ ಇರುವ ಸ್ತ್ರೀಯಲ್ಲಿ ಬೆಳೆಯದಂತೆ ಮೊದಲನೇ ಗರ್ಭಧಾರಣೆ ಯಿಂದ ಹಿಡಿದು ಪ್ರತೀ ಗರ್ಭಧಾರಣೆಯಲ್ಲಿ ಮತ್ತು ಗರ್ಭಪಾತದಲ್ಲಿ ಚುಚ್ಚುಮದ್ದು ಕೊಡುತ್ತಾ ಬಂದರೆ ಬಹಳ ಒಳ್ಳೆಯದು. ಈ ವ್ಯವಸ್ಥೆ ಮಾಡದೆ ಮೊದಲ ಹೆರಿಗೆಯಲ್ಲಿ ಈ ಚುಚ್ಚುಮದ್ದು ಕೊಡದೆ ನಂತರದ ಹೆರಿಗೆಯಲ್ಲಿ ಕೊಟ್ಟರೆ ಆ ವೇಳೆಗಾಗಲೇ ಸಾಕಷ್ಟು ಪ್ರತಿಕಣಗಳು ರೂಪುಗೊಂಡು ಹಾನಿಯನ್ನು ಉಂಟುಮಾಡುತ್ತವೆ.

ದುರದೃಷ್ಟದ ಸಂಗತಿಯೆಂದರೆ ಭಾರತದಲ್ಲಿ ಆರ್. ಎಚ್. ಚುಚ್ಚುಮದ್ದನ್ನು ತಯಾರುಮಾಡುತ್ತಿದ್ದರೂ ಒಂದು ಡೋಸ್‌ಗೆ ಮುನ್ನೂರು ರೂಪಾಯಿ ಆಗುತ್ತದೆ. ಇದನ್ನು ಪ್ರತಿ ಹೆರಿಗೆಯಲ್ಲೂ ಕೊಡಬೇಕಾಗಿರುವುದರಿಂದ ಬಹಳ ದುಬಾರಿಯಾಗುತ್ತದೆ. ಆದಕಾರಣ ಬಹುಮುಖ್ಯವಾದ ಚುಚ್ಚುಮದ್ದನ್ನು ಸರಕಾರ ತಾನೇ ತಯಾರುಮಾಡಿ ಬಡಜನರಿಗೆ ಕಡಿಮೆ ದರದಲ್ಲಿ ದೊರಕುವಂತೆ ವ್ಯವಸ್ಥೆ ಮಾಡಬೇಕಾದುದು ಅದರ ಕರ್ತವ್ಯ.

ಗರ್ಭಪಾತ ಸಮಯದಲ್ಲೂ ಪ್ರತಿಕಣಗಳ ಉತ್ಪತ್ತಿಯಾಗುತ್ತದೆ ಆದರೆ ಬಹಳ ಕಡಿಮೆ. ಆರು ವರ್ಷದ ಹಿಂದೆ ಮುಂಬಯಿಯಲ್ಲಿ ಓರ್ವ ಮಹಿಳೆ ಜಾಂಡೀಸ್ ಇರುವ ಹೆಣ್ಣು ಮಗುವಿಗೆ ಜನ್ಮವಿತ್ತಳು. ನಂತರದ ಮೂರು ದಿವಸದಲ್ಲಿ ಆ ಕಾಯಿಲೆ ಎಷ್ಟು ವಿಕೋಪಕ್ಕೆ ಹೋಯಿತೆಂದರೆ ನಾಲ್ಕನೇ ದಿವಸದಂದು ಮಗು ಪ್ರಾಣ ಬಿಟ್ಟಿತು. ಮೂರು ಬಾರಿ ರಕ್ತ ಬದಲಾವಣೆ ಮಾಡಿದರೂ ಪ್ರಯೋಜನವಾಗಲಿಲ್ಲ. ಕಾರಣ ಮಗುವನ್ನು ಪಡೆದ ತಾಯಿಗೆ ಈ ಹೆರಿಗೆಗಿಂತ ಹಿಂದೆ ಎರಡು ಸಾರಿ ಗರ್ಭಪಾತವಾಗಿ ಆರ್. ಎಚ್. ಚುಚ್ಚುಮದ್ದು ತೆಗೆದುಕೊಳ್ಳದೆ ಪ್ರತಿಕಣಗಳ ಬೆಳವಣಿಗೆ ಆ ಮಗುವಿನ ಸಾವಿಗೆ ಕಾರಣ ವಾಯಿತು.

ಟಾಟಾ ಮೆಮೊರಿಯಲ್ ಕ್ಯಾನ್ಸರ್ ಸಂಶೋಧನಾ ಸಂಸ್ಥೆಯ ಡಾ. ಜೆ. ವಿ. ಉಂಡೇವಿಯಾ ಪ್ರಕಾರ ಬಹಳ ಜನಕ್ಕೆ ಆರ್. ಎಚ್. ಸಮಸ್ಯೆಯ ಅರಿವಿಲ್ಲ. ಅನೇಕ ಜನರಲ್ಲಿ ಆರ್. ಎಚ್. ನೆಗಟೀವ್ ಹೆಂಗಸರು ಮಂದಬುದ್ಧಿ ಮಕ್ಕಳನ್ನು ಹಡೆಯು ತ್ತಾರೆ ಎಂಬ ತಪ್ಪು ಅಭಿಪ್ರಾಯವಿದೆ. ಕೆಲವು ಜನ ಹೇಗೆ ಹೆದರಿದ್ದಾರೆಂದರೆ ಆಕಸ್ಮಾತ್ ಹುಡುಗಿಯೊಬ್ಬಳು ಆರ್. ಎಚ್. ನೆಗೆಟೀವ್ ಎಂದರೆ ಆಕೆಯನ್ನು ಮದುವೆ ಮಾಡದೆ ಮುಚ್ಚಿಡುತ್ತಾರೆ. ಈ ಸಮಸ್ಯೆಯನ್ನು ಸುಲಭವಾಗಿ, ಸಕಾಲದಲ್ಲಿ, ಸರಿಯಾದ

ವೈದ್ಯೋಪಚಾರದಿಂದ ಗುಣಪಡಿಸಬಹುದು. ಮುನ್ನೆಚ್ಚರಿಕೆ ವಹಿಸದಿದ್ದರೆ ಇದು ಅಪಾಯಸ್ಥಿತಿ ಮುಟ್ಟುತ್ತದೆ.

ಈ ಆರ್. ಎಚ್. ಬಗ್ಗೆ ಇರುವ ಮೂಢನಂಬಿಕೆ ಮತ್ತು ಅಲ್ಪ ತಿಳುವಳಿಕೆ ಹೋಗಲಾಡಿಸಬೇಕು. ಇದಕ್ಕೆ ವೈದ್ಯರು, ಸಮಾಜಸೇವಕರು ಮತ್ತು ಆರೋಗ್ಯ ಇಲಾಖೆ ಅಧಿಕಾರಿಗಳು ಪ್ರಯತ್ನಿಸಬೇಕು. ಈ ಕೆಳಕಂಡ ಅಂಶಗಳನ್ನು ವೈದ್ಯಕ್ಷೇತ್ರದ ಪ್ರವೀಣರು, ವೈದ್ಯರ ಮತ್ತು ತಾಯಂದಿರ ಗಮನಕ್ಕೆ ತರಲು ಇಚ್ಛಿಸುತ್ತಾರೆ.

೧. ಆರ್. ಎಚ್. ಪರೀಕ್ಷೆ ಎಲ್ಲಾ ಗರ್ಭಿಣಿ ಸ್ತ್ರೀಯರಿಗೂ ಆಗಬೇಕು. ಅದರಲ್ಲೂ ಗರ್ಭಪಾತಕ್ಕೆ ಒಳಗಾದ ಹೆಂಗಸರು ಮತ್ತು ರಕ್ತ ಬದಲಾವಣೆ ಮಾಡಿಸಿಕೊಳ್ಳುವ ಹೆಂಗಸರು ಈ ಪರೀಕ್ಷೆಗೆ ಒಳಗಾಗಬೇಕು. ಯಾವುದೇ ಸಮಯದಲ್ಲೂ ಆರ್. ಎಚ್. ನೆಗೆಟೀವ್ ಹೆಂಗಸರು ಆರ್. ಎಚ್. ಪಾಸಿಟೀವ್ ರಕ್ತ ಪಡೆಯಲೇಬಾರದು.

೨. ಒಬ್ಬ ಆರ್. ಎಚ್. ನೆಗೆಟೀವ್ ಹೆಂಗಸು ಆರ್. ಎಚ್. ಪಾಸಿಟೀವ್ ಮಗುವಿಗೆ ಜನ್ಮವಿತ್ತರೆ ಪ್ರತಿ ಹೆರಿಗೆಯಲ್ಲೂ ಆರ್. ಎಚ್. ಚುಚ್ಚು ಮದ್ದನ್ನು ಪಡೆಯಬೇಕು.

೩. ಪ್ರತೀ ಗರ್ಭಪಾತದ ನಂತರ ಆರ್. ಎಚ್. ನೆಗೆಟೀವ್ ಹೆಂಗಸಿಗೆ ಆರ್. ಎಚ್. ಚುಚ್ಚುಮದ್ದನ್ನು ಪಡೆಯಬೇಕು.

೪ ಒಂದು ಮಗು ಜಾಂಡೀಸ್ ರೋಗ ಹೊತ್ತು ಹುಟ್ಟಿದರೆ ಅದು ಹುಟ್ಟಿದ ದಿನವೇ ತಾಯಿ ಮತ್ತು ಮಗುವನ್ನು ಆರ್. ಎಚ್. ಪರೀಕ್ಷೆಗೆ ಒಳಪಡಿಸುವುದು.

ಈ ಕೆಲವು ಅಂಶಗಳು ಆರ್. ಎಚ್. ರೋಗದಿಂದ ಉಂಟಾಗುವ ಸಾವನ್ನು ಕಡಿಮೆಗೊಳಿಸಿ ಕೆಲವು ಜೀವವನ್ನು ಉಳಿಸಬಲ್ಲವು.

ಅನು : ಎಂ. ಕೆ. ರಾಮಸ್ವಾಮಿ

ಸತ್ಯವೇ ದೇವರು, ದೇವರೇ ಸತ್ಯ.

ಗಾಂಧೀಜಿ

ಒಬ್ಬ ದಾರ್ಶನಿಕನ ದೃಷ್ಟಿಯಲ್ಲಿ : ಯುದ್ಧ

ಡಾ. ಸರ್ವಪಳ್ಳಿ ರಾಧಾಕೃಷ್ಣನ್

ಬಹುಶಃ ಎಲ್ಲ ಧರ್ಮಗಳೂ ಹಿಂಸೆಯನ್ನು ಮಾನವನ ಅಪೂರ್ಣತೆ ಎಂದು ಹೇಳಿವೆಯಲ್ಲದೆ, ಅಹಿಂಸೆಯನ್ನು ಸರ್ವೋತ್ತಮ ಗುಣವೆಂದು ಒಪ್ಪಿಕೊಂಡಿವೆ. ಹಿಂದೂ ಧರ್ಮ ಅಹಿಂಸೆಯನ್ನು ಪರಮಧರ್ಮವೆಂದು ತಿಳಿದಿದೆ. ಆದರೂ, ಅದೂ ಬಲಪ್ರಯೋಗವನ್ನು ಖಡಾಖಂಡಿತವಾಗಿ ನಿಷೇಧಿಸಿಲ್ಲ. ಹೀಗಿದ್ದರೂ ಅನುಚಿತ ಬಲಪ್ರಯೋಗವನ್ನು ಹಿಂಸೆ ಎಂದು ತಿಳಿದಿದೆ. ಒಬ್ಬ ಯೋಧ ಸೇನಾಪತಿ ಸಿಂಹ ಬುದ್ಧನ ಬಳಿ ಬಂದು, "ನಮ್ಮ ಕುಟುಂಬ ಮತ್ತು ಸಮಾಜ ರಕ್ಷಣೆಗಾಗಿ ಯುದ್ಧ ಮಾಡುವುದು ಅಧರ್ಮವೇನು?" ಎಂದು ಕೇಳಿದಾಗ—"ಶಿಕ್ಷೆಗೆ ಪಾತ್ರರಾದವರಿಗೆ, ಶಿಕ್ಷೆಯಾಗಲೇಬೇಕು" ಎಂದು ಉತ್ತರಿಸಿದ ಗೌತಮ. ಕೃಷ್ಣನೂ ಅರ್ಜುನನಿಗೆ, ತನ್ನ ಪರಿಜನರೊಡನೆ ಯುದ್ಧ ಮಾಡಲು ಹಿಂಜರಿದಾಗ, 'ಸ್ವಧರ್ಮ' ಪಾಲನೆಯನ್ನು—ಮಾಡಿ ಯುದ್ಧ ಮಾಡಲು ಉಪದೇಶಿಸಿದ್ದ. ಮನು ಮತ್ತು ಯಾಜ್ಞವಲ್ಕ್ಯರೂ "ಧರ್ಮ ಪಾಲನೆಗಾಗಿ ಆಗಾಗ್ಗೆ ಶಿಕ್ಷೆ ಮತ್ತು ಯುದ್ಧದ ಅವಶ್ಯಕತೆ ಬರುತ್ತದೆ. ಎಂಥಹ ಆಶಿಷ್ಟನೇ ಆಗಿರಲಿ ಹಿಂಜರಿಯದೆ ಅವನನ್ನು ಮುಗಿಸಿಬಿಡಬೇಕು" ಎಂದು ಹೇಳಿದ್ದಾರೆ. ಕೌಟಿಲ್ಯನಾದರೋ ಇಂಥ ಬ್ರಾಹ್ಮಣ ಸೈನಿಕರನ್ನು ಉಲ್ಲೇಖಿಸಿದ್ದಾನೆ. ಇವರು ಶರಣಾಗತ ಶತ್ರುವಿನ ಮೇಲೆ ದಯೆ ತೋರಿ ಪ್ರಸಿದ್ಧರಾಗಿದ್ದರು. ವೇದಗಳಲ್ಲಿಯೂ, ರಾಮಾಯಣ ಮತ್ತು ಮಹಾಭಾರತಗಳಲ್ಲಿಯೂ ಪರಶುರಾಮ, ವಸಿಷ್ಠ, ದ್ರೋಣಾಚಾರ್ಯರಂಥ ಪರಾಕ್ರಮಿಗಳ ಯುದ್ಧದ ವರ್ಣನೆ ಬರುತ್ತದೆ. "ಹಿಂಸೆ-ಮಾಡದವನು ಯಾರು ?" ಎಂದು ಮಹಾಭಾರತದಲ್ಲಿ ಪ್ರಶ್ನೆ ಬರುತ್ತದೆ.

೧೯೮೬ರ ಸೆಪ್ಟೆಂಬರ್ ತಿಂಗಳ 'ನವನೀತ' ಹಿಂದಿ ಮಾಸಪತ್ರಿಕೆಯಲ್ಲಿ ಪ್ರಕಟವಾದ ಡಾ. ಸರ್ವಪಳ್ಳಿ ರಾಧಾಕೃಷ್ಣನ್ ಅವರ "ಯುದ್ಧ : ಏಕ್ ದಾರ್ಶನಿಕ್ ಕೀ ದೃಷ್ಟಿಮೆ" ಲೇಖನದ ಭಾವಾನುವಾದ.

ಅಹಿಂಸಾವ್ರತಿ ತಪಸ್ವಿಯೂ ಸಹ ಹಿಂಸೆಯ ಸೋಂಕಿಗೆ ಒಳಗಾಗುತ್ತಾನೆ. ಆದರೆ ಅಲ್ಪ ಪ್ರಮಾಣದಲ್ಲಿ.

"ಓಲ್ಡ್ ಟೆಸ್ಟಮೆಂಟ್"ನಲ್ಲಿ ಎರಡು ವಿಚಾರ ಸರಣಿಗಳಿವೆ. ಒಂದು ಶಾಂತಿ ಪೂರ್ಣ, ಮತ್ತೊಂದು ಅಧಿಕ ತೀಕ್ಷ್ಣವಾದ ಹಿಂಸಾಪೂರ್ಣ. 'ಓಲ್ಡ್ ಟೆಸ್ಟಮೆಂಟ್'ನ ದೇವರು ಯುದ್ಧ ಮತ್ತು ಸಾಮೂಹಿಕ ಹತ್ಯೆಗಳಿಗೆ ಅನುಮತಿ ಕೊಡುತ್ತಾನೆ.

ಪ್ರಾರಂಭದ ದಿನಗಳಲ್ಲಿ ಚರ್ಚ್ ಯುದ್ಧದ ಪರವಾಗಿ ಪ್ರತಿಪಾದನೆ ಮಾಡಿತು. ಮಾರ್ಸಿಯೋನ್, ಓರಿಗೈನ್, ಸೈಪ್ರಿಯರ್ ಮತ್ತು ಯುಸೇಬಿಯಸ್ ಮುಂತಾದವರು ಯುದ್ಧದ ಬಗ್ಗೆ ಹೇಳುತ್ತಾ, 'ಇದು ಏಸುವಿನ ಉಪದೇಶ ಮತ್ತು ಕ್ರೈಸ್ತಧರ್ಮ-ಸಿದ್ಧಾಂತಗಳಿಗೆ ವಿರುದ್ಧವಾಗಿದೆ' ಎಂದಿದ್ದಾರೆ. ಆದರೆ ಥಿಯೋಡೋಸಿಯಸ್ (೩೭೯-೩೯೫ ಕ್ರಿ.ಶ.)ನ ಆಡಳಿತ ಕಾಲದಲ್ಲಿ ಕ್ರೈಸ್ತಧರ್ಮ ರಾಜ್ಯಧರ್ಮವಾಯಿತು. ಮತ್ತೆ ಆತ ಅಹಿಂಸೆಯನ್ನು ವಿರೋಧಿಸಿ ಯುದ್ಧವನ್ನು ಸಮರ್ಥಿಸಲು ಆರಂಭಿಸಿದ. ಧಾರ್ಮಿಕ ಯುದ್ಧಗಳಿಗೆ ಕ್ರೈಸ್ತ-ಚರ್ಚ್‌ಗಳ ಆಶೀರ್ವಾದ ಸಿಕ್ಕಿತ್ತು. ಅಪರಾಧಿಗಳು ಮತ್ತು ಗುಲಾಮರ ಜತೆ-ಜತೆಗೆ ಯುದ್ಧ ಬಂಧಿಗಳಿಗೆ ಕೊಡುವ ಶಿಕ್ಷೆಗಳು ನ್ಯಾಯೋಚಿತವೆಂದು ಸ್ಥಿರವಾಯಿತು.

ಆಗಿನಿಂದ ಈಗ ಕಾಲ ಸಾಕಷ್ಟು ಬದಲಾಗಿದೆ. ಯುದ್ಧ ವಿವಾದಗಳ ತೀರ್ಮಾನ ಹಳೆಯ ಪದ್ಧತಿಯಾಗಿದೆ ಎಂದು ಜನ ತಿಳಿದಿದ್ದಾರೆ. ಇಂದಿನ ಯುದ್ಧಗಳಲ್ಲಿ ಅವುಗಳ ಉದ್ದೇಶಗಳ ಅನುಪಾತದಿಂದ-ಸಾವಿರಪಟ್ಟು ಹೆಚ್ಚು ಹತ್ಯೆಗಳಾಗುತ್ತಿವೆ. ಯುದ್ಧದ ಔಚಿತ್ಯದ ಬಗ್ಗೆ ಮೊದಲಿದ್ದ ತರ್ಕ ಸರಣಿ, ಈಗ ಸರಿಹೊಂದುತ್ತಿಲ್ಲ. ಆದರೆ ಜತೆಗೆ ಮತ್ತೊಂದು ವಿಷಯವೂ ಸೇರಿಕೊಂಡಿದೆ: 'ಹತ್ಯೆ ಮಾಡುವುದು ಮತ್ತು ಜೀವನವನ್ನು ಅಸಹನೀಯಗೊಳಿಸುವುದು ಮಾನವಸ್ವಭಾವದ ಒಂದು ಅಂಗವೇ. ಯುದ್ಧದ ಆವಶ್ಯ ಕತೆ ಬೇರೆಲ್ಲೋ ಹೊರಗಿರದೆ, ಮಾನವ ಸ್ವಭಾವದಲ್ಲಿಯೇ ಸೇರಿಕೊಂಡಿದೆ' ಎಂದು ತಿಳಿದರು. ಇದರ ಮಾನ್ಯತೆಯನ್ನು ಸಮರ್ಥಿಸಲು ಅನೇಕ ಮನೋವೈಜ್ಞಾನಿಕರು ಹಾಗೂ ಚಿಂತಕರು, "ಯುದ್ಧ-ಪ್ರೇಮ ಸಹಜವಾದ ನಡವಳಿಕೆಯ ಮನೋವೃತ್ತಿ ಯಲ್ಲ, ಆದರೆ ಅದಕ್ಕಿಂತಲೂ ಹೆಚ್ಚಾದ ಮಾನಸಿಕ ಪ್ರವೃತ್ತಿ" ಎಂಬ ಆಶಯದ ಹೇಳಿಕೆ ಗಳನ್ನು ಪ್ರಚುರಪಡಿಸಿದರು.

ಯುದ್ಧಕ್ಕಿಂತಲೂ ಸಹ ಹೆಚ್ಚು ಭಯಂಕರವಾದ ಒಂದು ವಸ್ತುವಿದೆ—ಅದೇ ಆತ್ಮವನ್ನು ನಾಶಗೊಳಿಸುವುದು. ಇದರಲ್ಲಿ ಎಲ್ಲ ಮಾನವೀಯ ಮೌಲ್ಯಗಳನ್ನು ಮತ್ತು ಮಾನವೀಯ ಪ್ರೇಮಗಳನ್ನು ತುಳಿಯುತ್ತಾರೆ. ಇಂತಹವು ಸಾಮಾನ್ಯವಾಗಿ ಯುದ್ಧ ಕಾಲದಲ್ಲಿಯೇ ನಡೆಯುವಂತಹವು. ಆದರಿಂದ ಉಂಟಾಗುವ ದಾರುಣ ದುಷ್ಪರಿಣಾಮ ಗಳು, 'ದ ಟ್ರೂಥ್ ಎಬಾವುಟ್ ಪೀಸ್ ಟ್ರೀಟೀಜ್'ನ ಅಂಶ ಇಲ್ಲವೇ ಭಾಗದಿಂದ ತಿಳಿಯುತ್ತದೆ. "ಜರ್ಮನರು ವಿಲ್ಸನ್‌ನ ಹದಿನಾಲ್ಕು ಅಂಶಗಳ (ವಿಷಯಗಳು) ಆಧಾರದ ವಿಶ್ರಾಂತಿ-ಒಪ್ಪಂದದಲ್ಲಿ ಅವು ಎಷ್ಟೇ ಕಠಿಣ ಷರತ್ತುಗಳಾಗಿದ್ದರೂ—ಸಹಿ ಹಾಕಿದ್ದರು. ಆಗ ಲಾಯ್ಡ್ ಜಾರ್ಜ್ ಹೇಳಿದ ವಿಷಯವೆಂದರೆ—"ಜರ್ಮನ್ ತನ್ನ ಷರತ್ತುಗಳನ್ನು ಪಾಲಿಸಿತು, ಆದರೆ ನಾವು ಹಾಗೆ ಮಾಡಲಿಲ್ಲ. ಒಂದು ಟನ್ ಆಹಾರ

ವನ್ನೂ ಜರ್ಮನಿಗೆ ಕಳುಹಿಸಿಲ್ಲ. ಒಂದು ಕಡೆ ಜರ್ಮನರು ತಿಳಿದೂ–ತಿಳಿದೂ ಹಸಿವಿನಿಂದ ಸಾಯುತ್ತಿದ್ದರು. ಮತ್ತೊಂದು ಕಡೆ ಲಕ್ಷಾಂತರ ಟನ್ ಖಾದ್ಯಗಳು ಜಲಮಾರ್ಗದ ಮೂಲಕ ಜರ್ಮನಿಗೆ ಕೊಂಡೊಯ್ಯಲು ತಯಾರಿದ್ದವು. ಮಿತ್ರರಾಷ್ಟ್ರಗಳು ಭವಿಷ್ಯಕ್ಕಾಗಿ ವಿದ್ವೇಷದ ಬೀಜವನ್ನು ಬಿತ್ತುತ್ತಿದ್ದವು, ಪ್ರಾಣಾಂತಕವಾದ ವೇದನೆಯನ್ನು (ನೋವನ್ನು) ಶೇಖರಿಸುತ್ತಿದ್ದವು, ಜರ್ಮನರಿಗಲ್ಲ, ತಮಗಾಗಿ. ಇಂಥ ವಿದ್ವೇಷಪೂರ್ಣ ಮತ್ತು ಅಮಾನವೀಯ ಕೃತ್ಯಗಳಿಂದಲೇ ಯುದ್ಧಗಳು ಹುಟ್ಟಿಕೊಂಡದ್ದು.'

ಯುದ್ಧದ ಬಗ್ಗೆ ಪ್ರಪಂಚದ ಕೋಟ್ಯಂತರ ಮಂದಿಗಳ ಮನಸ್ಸಿನಲ್ಲಿ ಈ ಭಾವನೆ ಮನೆಮಾಡಿದೆ. ಯುದ್ಧ ಮಾಡುವ ಎರಡೂ ಕಡೆಯುವರಿಗೆ ತಮ್ಮ ಬಗ್ಗೆ ಯಾವುದೇ ಕಾಳಜಿ ಇರುವುದಿಲ್ಲ. ಆದರೆ ಅವರಿಬ್ಬರೂ ತಮ್ಮ ಪ್ರದೇಶಗಳ ಅಥವಾ ಬೇರೆಯುವರ ಹಿತರಕ್ಷಣೆಯ ಸಲುವಾಗಿಯೇ ಹೋರಾಡುತ್ತಾರೆ. ರಾಜ್ಯದ ನಮ್ಮ ಭಾವನೆಯಲ್ಲಿ ಆಮೂಲ ಪರಿವರ್ತನೆಯಾದಾಗಲೇ ಈ ಯುದ್ಧ ಪರಿಸಮಾಪ್ತವಾಗುವುದು. ಒಂದು ರಾಜ್ಯ ಮತ್ತೊಂದು ರಾಜ್ಯಕ್ಕಿಂತ ಹೆಚ್ಚು ಶಕ್ತಿಶಾಲಿಯಾದಾಗ ಅಂದರೆ ಬಲಶಾಲಿಯಾದ ರಾಜ್ಯ ಒತ್ತಾಯಪೂರ್ವಕವಾಗಿ ವಿಶೇಷ ಸೌಕರ್ಯಗಳ ಸಲುವಾಗಿ, ಬೇರೊಂದು ರಾಜ್ಯವನ್ನು ತನ್ನಿಚ್ಛೆಗೆ ಅನುಸಾರವಾಗಿ ಕೆಲಸ ನಿರ್ವಹಿಸಲು ಬಲವಂತಮಾಡುತ್ತದೆ. ಈ ಒತ್ತಡ ಅಥವಾ ಬಲಾತ್ಕಾರದಿಂದ ಪ್ರಪಂಚದಲ್ಲಿ ಅದೆಷ್ಟು ವ್ಯಾಪಕ ವ್ಯಾಧಿ ಹರಡಿದೆಯೆಂದರೆ, ಅದನ್ನು ಹೇಳಲು ಬರುವುದಿಲ್ಲ. ಇದರಿಂದ ಮೊದಲು ಯುದ್ಧ, ಮತ್ತೆ ಸೇಡಿನ ಮನೋಭಾವನೆಯಿಂದ ಸೋತ ಪಕ್ಷದವರ ಮೇಲೆ ಹೇರಲ್ಪಟ್ಟ ಅನ್ಯಾಯದ ಒಪ್ಪಂದ, ಸೋತ ಪಕ್ಷದವರ ಕೋಪೋದ್ರೇಕ, ಮತ್ತೆ ಸೇಡು ತೀರಿಸಿಕೊಳ್ಳುವ ದುರ್ದಮ್ಯ ಸಂಕಲ್ಪ ಮತ್ತು ಪುನಃ ಯುದ್ಧ. ನಾವು ತಿರಸ್ಕಾರದ ಈ ದುಷ್ಚಕ್ರವನ್ನು ಪ್ರೇಮ–ಪ್ರೀತಿಯ ಮೂಲಕ ನಿರ್ನಾಮಗೊಳಿಸುವುದು ಒಳಿತು.

ಅನು : ಮೂರ್ತಿರಾಮನಾಥಪುರ

ಪ್ರೇಮದ ಬಲಕ್ಕಿಂತ ಉನ್ನತವಾದದ್ದು, ಬಲವಾದದ್ದು ಇನ್ನೊಂದಿಲ್ಲ.

ಗಾಂಧೀಜಿ

ಪುಸ್ತಕ ವಿಭಾಗ

ಲಿಯೋ ಟಾಲ್‌ಸ್ಟಾಯ್ ಅವರ ಮಹಾ ಕಾದಂಬರಿ

ಅನ್ನಾ ಕರೆನಿನ

ಪ್ರಥಮ ಕಾಂಡ

ಅನುವಾದ
ದೇಜಗೌ

'ಇನ್ನೂ ಮಲಗಲಿಲ್ಲವೆ? ನಿಜಕ್ಕೂ ಚೆಕ್ಕಸವಾಗುತ್ತಿದೆ!' ಎಂದವಳು ತಲೆ ಮುಸುಕನ್ನು ಝಾಡಿಸಿ, ನಿಲ್ಲದೆ ತನ್ನ ಪಸದನ ಕೋಣೆಗೆ ನೇರವಾಗಿ ಹೋದಳು. 'ತುಂಬ ಹೊತ್ತಾಯ್ತು, ಅಲೆಕ್ಸಿ ಅಲೆಕ್ಸಾಂಡ್ರೊವಿಚ್' ಎಂದವಳು ಕೋಣೆಯೊಳಗಿಂದ ನುಡಿದಳು.

'ಅನ್ನಾ, ನಿನ್ನೊಡನೆ ಮಾತಾಡಬೇಕಾಗಿದೆ.'

'ನನ್ನೊಡನೆ?' ಎಂದವಳು ವಿಸ್ಮಯದಿಂದ ಪುನರುಕ್ತಿಸಿದಳು. ಅವಳು ಹೊರಗೆ ಬಂದು, ಅವನ ಕಡೆಗೆ ನೋಡಿದಳು. 'ಏನದು? ಯಾವ ವಿಷಯದ ಬಗ್ಗೆ?' ಎಂದವಳು ಕುಳಿತುಕೊಳ್ಳುತ್ತ ಕೇಳಿದಳು. 'ಒಳ್ಳೆಯದು, ಅವಶ್ಯವಾದರೆ ಮಾತಾಡೋಣ. ಆದರೆ ನಾನು ಬೇಗ ಮಲಗಬೇಕಾಗಿದೆ.'

ಅನ್ನಾ ತನ್ನ ಮನಸ್ಸಿಗೆ ಮೊದಲು ಬಂದದ್ದನ್ನು ಹೇಳಿಬಿಟ್ಟಳು; ತನ್ನ ಮಾತನ್ನು ತಾನೇ ಕೇಳಿಸಿಕೊಳ್ಳುತ್ತ, ಅಷ್ಟು ಸುಲಭವಾಗಿ ಸುಳ್ಳು ಹೇಳಿದ್ದಕ್ಕೆ ಅವಳು ತನಗೆ ತಾನೆ ಆಶ್ಚರ್ಯ ಚಕಿತೆಯಾದಳು. ಅವಳ ಮಾತೆಷ್ಟು ಸಹಜ ಸರಳವಾಗಿದ್ದುವು! ನಿಜಕ್ಕೂ ಕಣ್ಣಿಗೆ ನಿದ್ದೆ ಹತ್ತಿದವಳಂತೆ ಅವಳೆಷ್ಟರಮಟ್ಟಿಗೆ ಸೋಗುಹಾಕಿದಳು! ಸುಳ್ಳುಗಳ ಅಭೇದ್ಯಲೋಹ ಕವಚದಲ್ಲಿ ತಾನು ಹುದುಗಿಕೊಂಡಿದ್ದಂತೆ ಅವಳು ಭಾವಿಸಿದಳು. ಅಗೋಚರ ಶಕ್ತಿಯೊಂದು ತನಗೆ ಸಹಾಯ ಮಾಡುತ್ತಿದ್ದಂತೆ, ತನ್ನನ್ನು ಪ್ರಚೋದಿಸುತ್ತಿದ್ದಂತೆ ಅವಳು ಭಾವಿಸಿದಳು.

'ಅನ್ನಾ, ನಾನು ನಿನಗೆ ಎಚ್ಚರಿಕೆ ನೀಡಬೇಕಾಗಿದೆ' ಎಂದವನು ನುಡಿದನು.

'ನನಗೆ ಎಚ್ಚರಿಕೆ ನೀಡುವುದೆ? ಯಾವ ವಿಷಯದಲ್ಲಿ?' ಎಂದವಳು ಕೇಳಿದಳು.

ಅವಳು ಮುಗ್ಧತೆಯಿಂದ, ಪ್ರಸನ್ನ ಚಿತ್ತೆಯಾಗಿ ಅವನ ಕಡೆಗೆ ನೋಡಿದಳು; ಗಂಡ ಅವಳನ್ನು ಅರಿತುಕೊಂಡಿದ್ದ ರೀತಿಯಲ್ಲಿ ಅರಿಯದಿದ್ದವರು ಅವಳ ಧ್ವನಿಯಲ್ಲಾಗಲಿ, ಮಾತುಗಳಲ್ಲಾಗಲಿ ಅಸ್ವಾಭಾವಿಕವಾದದ್ದನ್ನು ಕಾಣುವಂತಿರಲಿಲ್ಲ. ಅವಳನ್ನು ತೀರ ಹತ್ತಿರದಿಂದ ಬಲ್ಲ, ಯಾವಾಗಲಾದರು ತಾನು ಐದು ನಿಮಿಷ ತಡವಾಗಿ ಮಲಗಿದ್ದನ್ನು ಗಮನಿಸಿ, ಅದಕ್ಕೆ ಕಾರಣವನ್ನು ಕೇಳುತ್ತಿದ್ದ ಸತಿಯು ಕೈಹಿಡಿದ ಅವನಿಗೆ, ಸುಖದುಃಖ, ನೋವು ನಲಿವುಗಳು ಪ್ರಾಪ್ತವಾದ ಕೂಡಲೇ ಯಾವಾಗಲೂ ತನ್ನೆಡೆಗೆ ಓಡೋಡಿ ಬರುತ್ತಿದ್ದ ಅವಳನ್ನು ಬಲ್ಲ ಆತನಿಗೆ, ಅವನ ಮಾನಸಿಕ ಕ್ಲೇಶವನ್ನು ಗಮನಿಸಲಿಷ್ಟವಿಲ್ಲದ, ತನ್ನ ಬಗ್ಗೆ ಈಗಲೀಗ ಒಂದು ಮಾತನ್ನು ಆಡದ ಅವಳನ್ನು ಕಂಡ ಅವನಿಗೆ ಅವಳ ಇತ್ತೀಚಿನ ನಡತೆ ಅತಿಶಯವಾಗಿ ಹಾಗೂ ವಿಶೇಷವಾಗಿ ಕಾಣುತ್ತಿತ್ತು. ತನ್ನ ಮಟ್ಟಿಗೆ ಯಾವಾಗಲೂ ತೆರೆದಿದ್ದ ಅವಳ ಅಂತರಂಗವೀಗ ಮುಚ್ಚಿಕೊಂಡಿದ್ದಂತೆ ಅವನಿಗೆ ಕಂಡಿತು. ಎಲ್ಲಕ್ಕಿಂತ ಮಿಗಿಲಾಗಿ, ಈ ಬದಲಾವಣೆಯಿಂದ ಅವಳ ಮನಶ್ಶಾಂತಿಗೆ ಭಂಗವುಂಟಾಗಲಿಲ್ಲವೆಂಬ ಸಂಗತಿ ಅವಳ ಧ್ವನಿಯ ಧಾಟಿಯಿಂದ ಅವನಿಗರ್ಥವಾಯಿತು. 'ಹೌದು, ಅದು ನಿಮ್ಮ ಪಾಲಿಗೆ ಮುಚ್ಚಿಕೊಂಡಿದೆ; ಅದು ಹಾಗಾಗಬೇಕಾದ್ದೇ ಸರಿ; ಮುಂದೆಯೂ ಅದು ಹಾಗೆಯೇ ಇರುತ್ತದೆ' ಎಂದವಳು ತನ್ನೊಡನೆ ಹೇಳುತ್ತಿದ್ದಂತೆ ಅವನಿಗೆ ತೋರಿ ಗೃಹಸ್ಥನೊಬ್ಬ ಮನೆಗೆ ಹಿಂದಿರುಗಿದಾಗ, ತನ್ನ ಮನೆಗೆ ಪ್ರವೇಶವಿಲ್ಲದಂತೆ ಬೀಗ ಜಡಿದಿದ್ದರೆ ಏನು ಭಾವ ಅವನ ಹೃದಯದಲ್ಲಿ ಅಂಕುರಿಸುತ್ತಿತ್ತೋ ಅದೇ

ಭಾವ ಅವನ ಹೃದಯವನ್ನೆಲ್ಲ ಆವರಿಸಿಕೊಂಡಿತು. 'ಪ್ರಾಯಶಃ ಕೀಲಿಕೈಗಳನ್ನು ಪತ್ತೆ ಮಾಡಬಲ್ಲೆ' ಎಂದವನು ತನ್ನಷ್ಟಕ್ಕೆ ತಾನು ಹೇಳಿಕೊಂಡನು.

'ನಾನು ನಿನ್ನನ್ನು ಎಚ್ಚರಿಸಬೇಕಾಗಿದೆ' ಎಂದವನು ಮೆಲುದನಿಯಲ್ಲಿ ಮಾತು ತೆಗೆದನು. 'ಆಲೋಚನಾಶೂನ್ಯತೆ ಮತ್ತು ಅವಿವೇಕಗಳ ಮೂಲಕ ಜನ ನಿನ್ನ ಬಗ್ಗೆ ಆಡಿಕೊಳ್ಳಲು ಅವಕಾಶ ನೀಡಿದಂತಾಗಿದೆ. ಸಂಜೆ ಕೌಂಟ್ ವ್ರಾಂಸ್ಕಿಯೊಡನೆ (ಅವನು ಆ ಹೆಸರನ್ನು ದೃಢವಾಗಿ, ಶಾಂತವಾಗಿ ಒತ್ತಿ ಉಚ್ಚರಿಸಿದನು) ಅತ್ಯಂತ ಉತ್ಸಾಹದಿಂದ ನೀನು ನಡಸುತ್ತಿದ್ದ ಸಂಭಾಷಣೆ ಸರ್ವರ ಗಮನವನ್ನು ಸೆಳೆಯಿತು.'

ಅವನು ಮಾತಾಡುತ್ತಿದ್ದಂತೆ ಅವಳ ನಗೆಗಣ್ಣುಗಳನ್ನು ದಿಟ್ಟಿಸಿದನು. ಅವುಗಳ ಅಭೇದ್ಯ ದೃಷ್ಟಿಭಂಗಿಗೆ ಅವನು ಹೆದರಿದನು. ತನ್ನ ಮಾತಿಗೆ ಬೆಲೆಯಿಲ್ಲವೆಂದು, ಅವು ಅನಾವಶ್ಯಕವೆಂದು ಮಾತಾಡುತ್ತಿದ್ದಾಗಲೇ ಅವನಿಗೆ ಗೊತ್ತಾಯಿತು.

'ನೀವು ಯಾವಾಗಲೂ ಹೀಗೆಯೇ' ಎಂದವಳು ಅವನನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲವೆಂಬಂತೆ, ಅವನ ಕೊನೆಯ ಮಾತನ್ನು ಮಾತ್ರ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದಳೆಂಬಂತೆ ನುಡಿದಳು. 'ನಾನಿಂದು ಮಂಕಾಗಿದ್ದರೆ ನಿಮಗೆ ಅತೃಪ್ತಿಯಾಗುತ್ತದೆ; ನಾಳೆ ನಾನು ಉಲ್ಲಾಸದಿಂದಿದ್ದರೆ ನಿಮಗೆ ಅಸಮಾಧಾನವಾಗುತ್ತದೆ. ಈ ಸಂಜೆ ನಾನು ಮಂಕಾಗಿರಲಿಲ್ಲ. ಆದರಿಂದ ನಿಮ್ಮ ಮನಸ್ಸಿಗೆ ನೋವಾಯಿತೇನು?'

ನೆಟಿಕೆ ತೆಗೆಯುವ ಸಲುವಾಗಿ ಕರೆನಿನ್ ಬೆರಳುಗಳನ್ನು ತಿರುಚಿದನು.

'ಓ, ನೆಟಿಕೆಯ ಸದ್ದೆಂದರೆ ನನಗಾಗದು. ದಯೆಯಿಟ್ಟು ಅದನ್ನು ನಿಲ್ಲಿಸಿ. ನನ್ನ ಮನಸ್ಸಿಗೆ ಅಸಹ್ಯವಾಗುತ್ತದೆ' ಎಂದವಳು ನುಡಿದಳು.

'ಅನ್ನಾ, ನನ್ನ ಮುಂದಿರುವವಳು ನೀನೆಯೇನು?' ಎಂದವನು ತನ್ನಂಗ ಚಲನೆಯನ್ನು ತಡೆಯಲು ಪ್ರಯತ್ನಿಸಿದನು.

'ಏಕೆ, ಏನು ಸಮಾಚಾರ?' ಎಂದವಳು ನಿಜವಾಗಿಯೂ ಆಚ್ಚರಿಗೊಂಡಳೆಂಬಂತೆ ವಿನೋದವಾಗಿ ಪ್ರಶ್ನಿಸಿದಳು. 'ನನ್ನನ್ನು ಏನೆಂದು ತಿಳಿದುಕೊಂಡಿದ್ದೀರಿ?'

ಮರುಮಾತಾಡದೆ ಅವನು ತನ್ನ ಹಣೆ ಕಣ್ಣುಗಳನ್ನು ಕೈಯಿಂದೊರಸಿಕೊಂಡನು. ಸಮಾಜದ ಕಣ್ಣಿಗೆ ಬೀಳುವಂಥ ತಪ್ಪೆಸಗಬಾರದೆಂದು ತನ್ನ ಮಡದಿಯನ್ನವನು ಎಚ್ಚರಿಸುವ ಉದ್ದೇಶದಿಂದಿದ್ದನು. ಅದಕ್ಕೆ ಬದಲಾಗಿ ತಾನು ತನ್ನ ಮಡದಿಯ ಆತ್ಮಸಾಕ್ಷಿಗೆ ಸಂಬಂಧಿಸಿದ ವ್ಯವಹಾರದ ಬಗ್ಗೆ ತನಗರಿವಿಲ್ಲದಂತೆಯೇ ತಲೆ ಕೆಡಿಸಿಕೊಂಡು, ತವಿಬ್ಬರ ನಡುವೆ ಇದ್ದಿರಬಹುದೆಂದು ಕಲ್ಪಿಸಿಕೊಂಡಿದ್ದ ಗೋಡೆಗೆ ತನ್ನ ತಲೆ ಯಣೆಯುತ್ತಿದ್ದುದಾಗಿ ಅವನಿಗೆ ಮನದಟ್ಟಾಯಿತು.

'ನಾನು ಹೇಳಬೇಕೆಂದಿದ್ದ ವಿಷಯವಿದು' ಎಂದವನು ಶಾಂತಿಯಿಂದ, ಆದರೆ ಉದಾಸೀನತೆಯಿಂದ ಹೇಳಲನುವಾದನು. 'ನನ್ನ ಮಾತನ್ನು ನೀನು ಸರಿಯಾಗಿ ಕೇಳಿಸಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಮಾತ್ಸರ್ಯ ನೀಚವಾದದ್ದೆಂದು, ಅವಮಾನಕರವಾದದ್ದೆಂದು ನಾನು ತಿಳಿದಿದ್ದೇನೆ. ಆ ವಿಷಯ ನಿನಗೂ ಗೊತ್ತಿದೆ. ಈ ಭಾವಕ್ಕೆ ನಾನೆಂದೂ ನನ್ನನ್ನೊಪ್ಪಿಸಿಕೊಳ್ಳಲಾರೆ. ಆದರೆ ಮರ್ಯಾದೆಯ ನಿಯಮಗಳಿಗೆ ವಿನಾಯಿತಿ ನೀಡುವ ಮೂಲಕ ಅವುಗಳನ್ನು ಮೀರಲಾರೆ. ಈ ಸಂಜೆ ನಿನ್ನ ನಡತೆಯ ಲೋಪದೋಷಗಳನ್ನು, ನಾನು ಹೊರತಾಗಿ, ಎಲ್ಲರೂ ಗಮನಿಸಿದರು'.

'ನಿಮ್ಮ ಮಾತು ನಿಜಕ್ಕೂ ನನಗರ್ಥವಾಗದು' ಎಂದು ಅನ್ನಾ ತನ್ನ ಭುಜಗಳನ್ನೆಗರಿಸಿದಳು. 'ಇವರ ಮಟ್ಟಿಗೆ ಎಲ್ಲವೂ ಒಂದೇ. ಯಾವುದನ್ನೂ ತಲೆಗಂಟಿಸಿಕೊಳ್ಳುವುದಿಲ್ಲ. ಆದರೆ ಇತರರು ಗಮನಿಸಿದ್ದಾರಂತೆ. ಇದು ಇವರ ಚಿಂತೆ' ಎಂದವಳು ತನ್ನೊಳಗೆ ತಾನಂದುಕೊಂಡಳು. 'ನಿಮಗೆ ಸ್ವಸ್ಥವಿಲ್ಲವೆಂದು ತೋರುತ್ತದೆ, ಅಲೆಕ್ಸಿ ಅಲೆಕ್ಸಾಂಡ್ರೊವಿಚ್' ಎಂದವಳು ಗುಡುಗುತ್ತ, ಹೊರಗೆ ಹೋಗಲು ಮೇಲೆದ್ದಳು. ಆದರವನು ಅವಳನ್ನು ತಡೆಯಲೆಂಬಂತೆ ಮುಂದೆ ಹೆಜ್ಜೆ ಹಾಕಿದನು.

ಅವನ ಮುಖ ವಿಕಾರವಾಗಿತ್ತು, ಅಸಹ್ಯವಾಗಿತ್ತು. ಹಿಂದೆಂದೂ ಅವಳು ಅವನನ್ನು ಆ ಸ್ಥಿತಿಯಲ್ಲಿ ನೋಡಿರಲಿಲ್ಲ. ಅವಳು ನಿಂತುಕೊಂಡು, ತಲೆಯನ್ನೊಂದು ಪಕ್ಕಕ್ಕೆ ಹಿಂದುಗಡೆಗೆ ಬಗ್ಗಿಸಿ, ರೂಢಿಯ ಚುರುಕು ಚಲನೆಗಳಿಂದ ಕೂದಲ ಸೂಜಿಗಳನ್ನು ತೆಗೆಯಲಾರಂಭಿಸಿದಳು.

'ಸರಿ, ಸರಿ. ಮುಂದೆ ಸಂಭವಿಸಲಿರುವ ಸಂಗತಿಗಳ ವಿಷಯವನ್ನು ನಿಮ್ಮ ಬಾಯಿಂದಲೇ ಕೇಳಲಿದ್ದೇನೆ' ಎಂದವಳು ತಾಳ್ಮೆಯಿಂದ ವಿಡಂಬನಾತ್ಮಕವಾಗಿ ನುಡಿದಳು. 'ನೀವು ಹೇಳುವುದನ್ನೆಲ್ಲ ಆಸಕ್ತಿಯಿಂದ ಆಲಿಸುತ್ತಿದ್ದೇನೆ. ತೊಂದರೆಯ ಸ್ವರೂಪವನ್ನು ತಿಳಿದುಕೊಳ್ಳುವ ಇಚ್ಛೆ ನನಗಿದೆ.'

ಅವಳು ಮಾತಾಡಿಯೆ ಆಡಿದಳು; ಆತ್ಮವಿಶ್ವಾಸದ, ತಾಳ್ಮೆಯ ಹಾಗೂ ಸಹಜ ಧಾಟಿಯ ತನ್ನ ಮಾತಿಗಾಗಿ, ಮತ್ತು ತಾನು ಬಳಸಿದ ಮಾತುಗಳ ಔಚಿತ್ಯಕ್ಕಾಗಿ ಅವಳು ವಿಸ್ಮಯಗೊಂಡಳು.

'ನಿನ್ನ ಭಾವನೆಗಳ ವಿವರಗಳನ್ನು ಕುರಿತು ಮಾತಾಡುವ ಹಕ್ಕು ನನಗಿಲ್ಲ. ಅಂಥ ಪ್ರಯತ್ನ ನಿಷ್ಪ್ರಯೋಜಕ ಮಾತ್ರವಲ್ಲ, ಅಪಾಯಕಾರಿಯೂ ಅಹುದು' ಎಂದು ಕರೆನಿನ್ ಮಾತು ಪ್ರಾರಂಭಿಸಿದನು. 'ನಮ್ಮ ಹೃದಯಗಳನ್ನು ಒಳಹೊಕ್ಕು ಹುಡುಕುವಲ್ಲಿ, ಯಾರ ಗಮನಕ್ಕೂ ಬಾರದೆ ಹುದುಗಿಕೊಂಡಿರುವ ಸಂಗತಿಗಳನ್ನು ಹಲವು ಸಲ ಬಯಲಿಗೆಳೆಯುತ್ತೇವೆ. ನಿನ್ನ ಭಾವನೆಗಳು ನಿನ್ನ ಸದಸದ್ವಿವೇಚನೆಗೆ ಮಾತ್ರ ಸಂಬಂಧಿಸಿದಂಥವು; ಆದರೆ ನಿನಗೆ, ನನಗೆ ಮತ್ತು ದೇವರಿಗೆ ಜವಾಬ್ದಾರನಾಗಿರುವ ನಾನು ನಿನ್ನ ಕರ್ತವ್ಯಗಳನ್ನೆತ್ತಿತೋರಿಸಬೇಕಾಗಿದೆ. ನಮ್ಮ ಬದುಕನ್ನೊಟ್ಟಿಗೆ ಬೆಸೆದಿರುವವನು ದೇವರೇ ಹೊರತು ಮನುಷ್ಯನಲ್ಲ. ಈ ಐಕ್ಯವನ್ನೊಡೆಯುವುದೇ ಮಹಾಪರಾಧ. ಇಂಥ ಅಪರಾಧಕ್ಕೆ ಕ್ರೂರ ಶಿಕ್ಷೆ ತಪ್ಪಿದ್ದಲ್ಲ.'

'ನನಗೆ ಯಾವುದೂ ಅರ್ಥವಾಗುತ್ತಿಲ್ಲ, ಪ್ರಿಯರೆ. ಭಯಂಕರ ನಿದ್ರೆ ನನ್ನ ಕಣ್ಣನ್ನೊತ್ತುತ್ತಿದೆ' ಎನ್ನುತ್ತ ಅವಳು ಉಳಿದ ಕೂದಲ ಸೂಜಿಗಳನ್ನು ಹುಡುಕುವ ಸಲುವಾಗಿ ಬಿರುಬಿರನೆ ತನ್ನ ಕೂದಲಲ್ಲಿ ಕೈಯಾಡಿಸಿದಳು.

'ಅನ್ನಾ ದೇವರಾಣೆಗೂ ಆ ರೀತಿ ಮಾತಾಡಬೇಡ' ಎಂದವನು ದೈನ್ಯದಿಂದ ನುಡಿದನು. 'ಪ್ರಾಯಶಃ ನೀನು ನನ್ನನ್ನು ತಪ್ಪಾಗಿ ತಿಳಿದುಕೊಂಡಿರುವಂತೆ ತೋರುತ್ತದೆ. ಆದರೆ ನಾನು ಹೇಳಿದ್ದೆಲ್ಲ ನಿನ್ನ ಕ್ಷೇಮಕ್ಕಾಗಿ, ನನ್ನ ಕ್ಷೇಮಕ್ಕಾಗಿ ಎಂಬುದನ್ನು ನಂಬು. ನಾನು ನಿನ್ನ ಪತಿ; ನಿನ್ನನ್ನು ಪ್ರೀತಿಸುತ್ತೇನೆ.'

ಕ್ಷಣಕಾಲ ಅವಳು ಅಧೋವದನೆಯಾದಳು. ವಿಡಂಬನೆಯ ಮಿಂಚು ಅವಳ ಕಣ್ಣಿಂದ ಮಾಯವಾಯಿತು. 'ಪ್ರೇಮ' ಎಂಬ ಪದ ಅವಳನ್ನು ಮತ್ತೆ ಕುಪಿತಗೊಳಿಸಿತು.

'ಪ್ರೇಮವೆ? ಇವರು ಪ್ರೀತಿಸಬಲ್ಲರೆ? ಪ್ರೀತಿಯ ಅರ್ಥವಾದರೂ ಇವರಿಗೆ ಗೊತ್ತಿದೆಯೆ? ಪ್ರೇಮವೆಂಬ ವಸ್ತುವಿದೆಯೆಂಬುದನ್ನಿವರು ಕೇಳಿರದಿದ್ದರೆ, ಆ ಪದವನ್ನೆಂದೂ ಇವರು ಪ್ರಯೋಗಿಸುತ್ತಿರಲಿಲ್ಲ. ಪ್ರೇಮವೇನೆಂಬುದೇ ಇವರಿಗೆ ಗೊತ್ತಿಲ್ಲ' ಎಂದವಳು ಚಿಂತಾ ಮಗ್ನಳಾದಳು.

'ಅಲೆಕ್ಸಿ ಅಲೆಕ್ಸಾಂಡ್ರೊವಿಚ್, ನಿಜಕ್ಕೂ ನನಗರ್ಥವಾಗದು. ನಿಮ್ಮ ಮನಸ್ಸಿನಲ್ಲಿರುವುದನ್ನು ಸ್ಪಷ್ಟಪಡಿಸಿ.'

'ತಡಿ. ನನ್ನ ಮಾತು ಮುಗಿಸುವ ತನಕ ಮಧ್ಯೆ ಬಾಯಿ ಹಾಕಬೇಡ. ನಾನು ನಿನ್ನನ್ನು ಪ್ರೀತಿಸುತ್ತೇನೆ. ಆದರೆ ನನ್ನಮಟ್ಟಿಗೆ ನಾನು ಮಾತಾಡುತ್ತಿಲ್ಲ; ಈ ವಿಷಯದಲ್ಲಿ ವಿಶೇಷ ಸಂಬಂಧವುಳ್ಳವರೆಂದರೆ ನಮ್ಮ ಮಗ ಮತ್ತು ನೀನು. ನನ್ನ ಮಾತು ಅನವಶ್ಯವೆಂದು, ಅನುಚಿತವೆಂದು ನಿನಗನ್ನಿಸಬಹುದು. ಆದರೂ ನಾನವುಗಳಿಗೆ ಒತ್ತುಕೊಟ್ಟು ಮತ್ತೆ ಮತ್ತೆ ಹೇಳಬೇಕಾಗಿದೆ. ನನ್ನ ತಪ್ಪು ತಿಳಿವಳಿಕೆಯೇ ಅವುಗಳಿಗೆ ಕಾರಣವಾಗಿದ್ದರೂ ಇರಬಹುದು. ಅದು ನಿಜವಾದರೆ ನಿನ್ನ ಕ್ಷಮೆ ಯಾಚಿಸುತ್ತೇನೆ. ಅವುಗಳಲ್ಲಿ ಎಳ್ಳನಿತಾದರೂ ನಿಜವಿದೆಯೆಂದು ನಿನಗನ್ನಿಸುವುದಾದರೆ, ಅವುಗಳ ಬಗ್ಗೆ ಲಕ್ಷ್ಯವಿಡುವಂತೆ ನಾನು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ನಿನ್ನ ಹೃದಯ ಮಿಡಿಯುವುದಾದರೆ, ಮನಬಿಚ್ಚಿ ನನ್ನೊಡನೆ ಮಾತಾಡು.'

ತಾನು ಸಿದ್ಧಪಡಿಸಿದ್ದ ಭಾಷಣವನ್ನು ಮರೆತು, ಕರೆನಿನ್ ಅದರಲ್ಲಿಲ್ಲದ ವಿಷಯವನ್ನು ಕುರಿತು ಮಾತಾಡುತ್ತಿದ್ದನು.

'ನಾನು ಹೇಳುವಂಥಾದ್ದೇನೂ ಇಲ್ಲ; ಜತೆಗೆ ಮಲಗಲು ವೇಳೆಯಾಗಿದೆ' ಎಂದವಳು ನಗುವನ್ನದುಮಲು ಕಷ್ಟಪಡುತ್ತ, ಬಿರುಬಿರನೆ ಮಾತು ಮುಗಿಸಿದಳು.

ಅವನು ನಿಡುಸುಯ್ಯುತ್ತ, ಮರುಮಾತಾಡದೆ, ಶಯನಮಂದಿರದೊಳಗೆ ಹೋದನು.

ಅವಳು ಒಳಗೆ ಬರುವ ಹೊತ್ತಿಗೆ, ಅವನು ಹಾಸುಗೆಯ ಮೇಲೆ ಹೊರಳಾಡುತ್ತಿದ್ದನು. ಒತ್ತಿ ಸೇರಿಕೊಂಡಿದ್ದ ತುಟಿಗಳಲ್ಲಿ ಉಗ್ರತೆ ಎದ್ದುಕಾಣುತ್ತಿತ್ತು. ಅವನ ಕಣ್ಣು ಅವಳ ಕಡೆಗೆ ಹೊರಳುತ್ತಿರಲಿಲ್ಲ. ಅವಳು ತನ್ನ ಹಾಸುಗೆಯ ಮೇಲೆ ಬಿದ್ದುಕೊಂಡು, ಯಾವ ಕ್ಷಣದಲ್ಲಾದರೂ ಅವನು ಮಾತು ಪುನರಾರಂಭಿಸಬಹುದೆಂಬ ನಿರೀಕ್ಷೆಯಲ್ಲಿದ್ದಳು. ಅವನೇನು ಹೇಳಬಹುದೆಂಬುದರ ಬಗ್ಗೆ ಅವಳು ಅಂಜಿದ್ದಳು; ಆದರೂ ಅದನ್ನಾಲಿಸಲು ತವಕಿಸಿದಳು. ಅವನು ತುಟಿ ಬಿಚ್ಚಲಿಲ್ಲ. ತುಸು ಹೊತ್ತಿನ ನಂತರ ಅವಳವನನ್ನು ಸಂಪೂರ್ಣವಾಗಿ ಮರೆತಳು. ಮತ್ತೊಬ್ಬ ಪುರುಷನ ಬಗ್ಗೆ ಅವಳು ಆಲೋಚಿಸತೊಡಗಿದಳು; ಅವನವಳ ನೆನಹುಗಣ್ ಮುಂದೆ ಪ್ರತ್ಯಕ್ಷನಾದನು; ಭಾವೋದ್ರೇಕದಿಂದ, ಕೃತಾಪರಾಧದ ಆನಂದದಿಂದ ಅವಳ ಹೃದಯ ನರ್ತಿಸಿತು. ಒಡನೆಯೇ ಶಾಂತಿಯುತ ಗೊರಕೆ ಅವಳಿಗೆ ಕೇಳಿಸಿತು. ಒಂದು ಕ್ಷಣ ತನ್ನ ಗೊರಕೆಗೆ ತಾನೆ ಅಂಜಿದಂತೆ ಕರೆನಿನ್ ಕಂಡನು. ಅದು ನಿಂತಿತು. ಆದರೆ ತುಸು ಸದ್ದಿಲ ಉಸುರಾಟದ ನಂತರ ಗೊರಕೆ ಶಾಂತವಾಗಿ, ಲಯ ಬದ್ಧವಾಗಿ ಪ್ರಾರಂಭವಾಯಿತು.

‘ಹೊತ್ತಾಯಿತು, ತುಂಬ ಹೊತ್ತಾಯಿತು, ಮೊದಲೇ ಹೊತ್ತಾಯಿತು’ ಎಂದವಳು ಸುಸ್ಮಿತೆಯಾಗಿ ಗೊಣಗಿಕೊಂಡಳು. ಅವಳು ಅಲುಗಾಡದೆ ಕಣ್ಣು ಬಿಟ್ಟು ಕೊಂಡು ಬಿದ್ದಿದ್ದಳು ; ಕತ್ತಲೆಯಲ್ಲಿಯೂ ತನ್ನ ಕಣ್ಣಿನ ಹೊಳಪು ತನಗೆ ಕಾಣಿಸು ತ್ತಿದ್ದಂತೆ ಅವಳು ಕಲ್ಪಿಸಿಕೊಂಡಳು.

೧೦

ಆ ರಾತ್ರಿಯಿಂದ ಮೊದಲುಗೊಂಡು ಕರೆನಿನ್ ಮತ್ತು ಅವನ ಮಡದಿ ಹೊಸ ಬದುಕನ್ನಾರಂಭಿಸಿದರು. ವಿಶೇಷ ಪ್ರಮಾದವೇನೂ ಸಂಭವಿಸಿರಲಿಲ್ಲ. ಅನ್ನಾ ಎಂದಿ ನಂತೆ ಸಮಾಜದ ಕಾರ್ಯಕ್ರಮಗಳಿಗೆ ಹೋಗಿ ಬರುತ್ತಿದ್ದಳು ; ಎಂದಿಗಿಂತ ಹೆಚ್ಚು ಸಲ ರಾಜಕುಮಾರಿ ಬೆತ್ಸಿಯನ್ನು ಭೇಟಿಮಾಡುತ್ತಿದ್ದಳು ; ಹೋದೆಡೆಯಲ್ಲೆಲ್ಲ ವ್ರಾನ್‌ಸ್ಕಿ ಯನ್ನು ಸಂಧಿಸುತ್ತಿದ್ದಳು. ಆ ವಿಷಯ ತನ್ನ ಗಮನಕ್ಕೆ ಬಂದಿದ್ದರೂ ಕರೆನಿನ್ ಏನೂ ಮಾಡುವಂತಿರಲಿಲ್ಲ. ಮುಚ್ಚುಮರೆಯಿಲ್ಲದೆ ಅವಳೊಡನೆ ಚರ್ಚಿಸಬೇಕೆನ್ನುವ ಅವನ ಸರ್ವಪ್ರಯತ್ನಗಳಿಗವಳು ಹಲವು ಅಡಚಣೆಯೊಡ್ಡುತ್ತಿದ್ದಳು. ವಿನೋದಾತ್ಮಕವಾದ ಗೊಂದಲಗಳಿಂದ ಅವಳು ನಿರ್ಮಿಸಿದ ಗೋಡೆಗಳು ಅವನಿಗೆ ಅಭೇದ್ಯವಾಗಿದ್ದುವು. ಹೊರಹೊರಗೆ ಎಲ್ಲವೂ ಹಿಂದಿನಂತೆಯೇ ನಡೆಯುತ್ತಿತ್ತು. ಆದರೆ ಅವರ ಆಂತರಿಕ ಬಾಂಧವ್ಯಗಳು ಪೂರ್ಣ ಭಿನ್ನವಾಗಿದ್ದುವು. ರಾಜಕೀಯ ವ್ಯವಹಾರಗಳಲ್ಲಿ ಹಾಗೂ ಆಡಳಿತ ವಿಚಾರಗಳಲ್ಲಿ ಅತ್ಯಂತ ಪ್ರಬಲನಾಗಿದ್ದ ಕರೆನಿನ್ ಈ ವಿಷಯದಲ್ಲಿ ಸಂಪೂರ್ಣ ಅಸಹಾಯಕನಾಗಿದ್ದನು. ವಧಸ್ಥಾನಕ್ಕೆ ಕೊಂಡೊಯ್ದ ಗೂಳಿಯಂತೆ ಅವನು ವಿನೀತ ನಾಗಿ ತನ್ನ ತಲೆಯನ್ನು ತಗ್ಗಿಸಿದನು ; ಮಚ್ಚಿನ ಹೊಡೆತಕ್ಕಾಗಿ ಸಿದ್ಧವಾದನು. ಆ ವಿಷಯವನ್ನು ನೆನೆದಾಗಲೆಲ್ಲ, ಮತ್ತೊಮ್ಮೆ ಪ್ರಯತ್ನ ನಡಸಬೇಕೆಂದು ಅವನು ಆಲೋಚಿಸುತ್ತಿದ್ದನು. ದಯೆ ಔದಾರ್ಯಗಳ ಮೂಲಕ, ಒಡಂಬಡಿಕೆಯ ಮೂಲಕ ಅವಳನ್ನು ಮತ್ತೆ ಹಿಂದಿನ ಸ್ಥಿತಿಗೆ ತರಬಹುದು, ಅವಳನ್ನುಳಿಸಬಹುದು ಎಂಬುದಾಗಿ ಅವನು ಒಳಗೊಳಗೆ ಅಂದುಕೊಳ್ಳುತ್ತಿದ್ದನು ; ಆದ್ದರಿಂದ ಅವಳೊಡನೆ ಮಾತಾಡುವು ದಾಗಿ ಪ್ರತಿನಿತ್ಯವೂ ನಿರ್ಧರಿಸಿಕೊಳ್ಳುತ್ತಿದ್ದನು. ಆದರೆ ಆ ವಿಷಯವನ್ನೆತ್ತಿದಾಗಲೆಲ್ಲ, ಅವಳನ್ನು ವಶಪಡಿಸಿಕೊಂಡಿದ್ದ ಬೂಟಾಟಿಕೆಯ ದುಷ್ಟಬುದ್ಧಿ ತನ್ನನ್ನೂ ವಶಪಡಿಸಿ ಕೊಂಡಿದ್ದಂತೆ ಅವನಿಗೆ ಭಾಸವಾಗುತ್ತಿತ್ತು. ಅವನು ಹೇಳಿದ ಸಂಗತಿಗಳಾಗಲಿ, ಧಾಟಿ ಯಾಗಲಿ ಅವನ ಉದ್ದೇಶಕ್ಕನುಗುಣವಾಗಿರಲಿಲ್ಲ. ತಾನು ಹೇಳುತ್ತಿದ್ದುದನ್ನೆ ಅಣಕಿಸುವ ಜನರನ್ನು ಹಾಸ್ಯಮಾಡುವ ಸಾಮಾನ್ಯ ಧಾಟಿಯಲ್ಲಿಯೇ, ತನಗರಿವಿಲ್ಲ ದಂತೆಯೇ ಅವಳೊಡನೆ ತಾನು ಮಾತಾಡುತ್ತಿದ್ದುದಾಗಿ ಅವನಿಗೆ ತೋರಿತು. ತಾನವಳಿಗೆ ಏನು ಹೇಳಬೇಕೆಂದು ಭಾವಿಸಿಕೊಂಡಿದ್ದನೋ ಅದನ್ನದೇ ಧಾಟಿಯಲ್ಲಿ ಹೇಳುವುದವನಿಗೆ ಅಸಾಧ್ಯವಾಗಿ ತೋರಿತು.

೧೧

ಸುಮಾರು ಒಂದು ವರ್ಷದಿಂದ ಹಿಂದಿನ ಬಯಕೆಗಳನ್ನೆಲ್ಲ ಮೆಟ್ಟಿಕ್ಕಿ ಯಾವುದು ವ್ರಾನ್‌ಸ್ಕಿಯ ಜೀವನದ ಏಕೈಕ ಬಯಕೆಯಾಗಿ ಮೈದೋರಿತ್ತೋ, ಅಸಾಧ್ಯವೂ

ಭಯಂಕರವೂ ಆಗಿದ್ದ ಕಾರಣದಿಂದಲೇ ಯಾವುದು ಅನ್ನಾಳ ದೃಷ್ಟಿಯಲ್ಲಿ ಮನ ಮೋಹಕವೂ ಸುಖಾತ್ಮಕವೂ ಆದ ಕನಸಾಗಿತ್ತೋ—ಆ ಬಯಕೆ ಪೂರೈಸಿತ್ತು. ಕೆಳ ದವಡೆ ಕಂಪಿಸುತ್ತಿದ್ದ, ಕಾಂತಿಹೀನವಾಗಿದ್ದ ಅವನೀಗ ಅವಳ ಮುಂದೆ ನಿಂತು ಕೊಂಡು, ಹೇಗೆ ಅಥವಾ ಏಕೆಂಬುದು ತಿಳಿಯದೆ ಶಾಂತಿಯಿಂದಿರುವಂತೆ ಅವಳಲ್ಲಿ ವಿನಂತಿಮಾಡಿಕೊಳ್ಳುತ್ತಿದ್ದನು.

'ಅನ್ನಾ! ಅನ್ನಾ!' ಎಂದವನು ನಡುಗುವ ದನಿಯಲ್ಲಿ, ದೇವರ ಮೇಲೆ ಆಣೆ ಯಿಟ್ಟು ನುಡಿದನು.

ಆದರವನು ಗಟ್ಟಿಯಾಗಿ ಮೊರೆಯಿಟ್ಟುಕೊಂಡಂತಿಲ್ಲ, ಹಿಂದೆ ಗರ್ವದಿಂದ ಉಲ್ಲಾಸದಿಂದ ಮೆರೆಯುತ್ತಿದ್ದ, ಈಗ ಅಪರಾಧಗ್ರಸ್ತವಾದ ಅವಳ ತಲೆ ಜೋಲಾಡು ತ್ತಿತ್ತು. ಸೋಫಾದ ಮೇಲೆ ಕುಳಿತಿದ್ದ ಅವಳು ನೆಲದ ಮೇಲೆ ಅವನ ಚರಣ ತಲದ ಕಡೆಗೆ ಮೆಲ್ಲಮೆಲ್ಲನೆ ಜಾರಿದಳು. ಅವನವಳನ್ನು ಹಿಡಿದುಕೊಳ್ಳದಿದ್ದರೆ, ಜಮಖಾನದ ಮೇಲೆ ಕುಸಿಯುತ್ತಿದ್ದಳು.

'ನನ್ನ ದೇವರೆ! ನನ್ನನ್ನು ಕ್ಷಮಿಸಿ!' ಎಂದವಳು ತನ್ನೆದೆಗೆ ಅವನ ಕೈಯನ್ನವಚಿ ಕೊಂಡು, ಬಿಕ್ಕಿಬಿಕ್ಕಿ ಅತ್ತಳು.

ತಾನು ಮಹಾ ಪಾಪಿಷ್ಠೆಯೆಂದು, ಅಪರಾಧಿಯೆಂದವಳು ಭಾವಿಸಿಕೊಂಡಳು; ತನ್ನನ್ನು ತಾನೇ ಹೀನೈಸಿಕೊಂಡು, ಕ್ಷಮೆ ಯಾಚಿಸಿದಳು. ಇಡೀ ಪ್ರಪಂಚದಲ್ಲಿ ಅವಳಿಗೀಗ ಉಳಿದಿದ್ದವನೆಂದರೆ ಅವನೊಬ್ಬನೇ. ತನ್ನೆಲ್ಲ ಪ್ರಾರ್ಥನೆಗಳನ್ನು ದೈನ್ಯ ಪೂರ್ವಕವಾಗಿ ಅವನಿಗೆ ಸಲ್ಲಿಸಿದಳು. ಅವನ ಕಡೆಗೆ ನೋಡುತ್ತಿದ್ದಂತೆ ತನ್ನ ಕೀಳ್ತನ ಮನಸ್ಸನ್ನಾಕ್ರಮಿಸಿಕೊಳ್ಳುತ್ತಿತ್ತು. ಅವಳ ತುಟಿದೆರೆಯಿಂದ ಬೇರೆ ಯಾವ ಮಾತೂ ಹೊರಡುತ್ತಿರಲಿಲ್ಲ. ತಾನೇ ಜೀವ ತೆಗೆದ ಶರೀರವನ್ನು ನೋಡುತ್ತಿದ್ದಂತೆ ಕೊಲೆ ಗಾರನಲ್ಲಿ ಮೂಡಬಹುದಾದ ಭಾವನೆಯೇ ಅವನಲ್ಲಿ ತಲೆಯೆತ್ತುತ್ತಿತ್ತು. ಜೀವಶೂನ್ಯ ಶರೀರವೇ ಅವರ ಪ್ರೇಮದ ಪುತ್ಥಳಿಯಾಗಿತ್ತು; ಅವರ ಪ್ರೇಮದ ಮೊದಲ ಹಂತ ಅದೆ ತಾನೆ ಪ್ರಾರಂಭವಾಗಿತ್ತು. ಅವಮಾನದ ದುಬಾರಿ ಬೆಲೆ ತೆತ್ತು ಪಡೆದುಕೊಂಡಿದ್ದು ದನ್ನು ನೆನೆದಾಗ ಒಮ್ಮೆಗೆ ಹೇವರಿಕೆ ಭಯಗಳು ಅವಳ ಮನವನ್ನಲುಗಾಡಿಸುತ್ತಿದ್ದುವು. ಧಾರ್ಮಿಕ ನಗ್ನತೆಯ ಅವಮಾನದಿಂದವಳು ಕುಸಿದಳು. ಈ ಅವಮಾನಕ್ಕೆ ಅವನು ಸಹ ಆಹುತಿಯಾದನು. ಆದರೆ ಬಲಿ ತೆಗೆದುಕೊಂಡ ಪ್ರಾಣಿಯ ಶವ ಕೊಲೆಗಾರನನ್ನು ನಡುಗಿಸಿದರೂ, ಅದನ್ನವನು ಚೂರುಚೂರಾಗಿ ಕತ್ತರಿಸಿ, ಅವಿಸಿಡಬೇಕಾಗಿತ್ತು; ಕೊಲೆ ಯಿಂದ ಲಭಿಸಿದ ಲಾಭವನ್ನು ಕೊಲೆಗಾರ ಅನುಭವಿಸಬೇಕಾಗಿತ್ತು.

ಮನೋವಿಕಾರಕ್ಕೆ ಹತ್ತಿರವಾದ ಕೋಪೋಗ್ರತೆಯಿಂದ ಕೊಲೆಗಾರ ಶವದ ಮೇಲೆ ಬಿದ್ದು, ಎಳೆದಾಡಿ, ಚೂರುಚೂರಾಗಿ ಕೊಚ್ಚುತ್ತಾನೆ; ಅದೇ ರೀತಿ ವ್ರಾನ್ಸ್ಕಿ ಅವಳ ಮುಖವನ್ನೂ ಭುಜಗಳನ್ನೂ ಮುತ್ತುಗಳಲ್ಲಿ ಮುಳುಗಿಸಿದನು. ಅವಳು ಅವನ ಕೈ ಹಿಡಿದುಕೊಂಡಳಷ್ಟೇ ಹೊರತು ಅಲುಗಾಡಲಿಲ್ಲ. 'ಹೌದು, ಈ ಮುತ್ತುಗಳೊ– ಮಾನವನ್ನು ಮಾರಿ ಅವುಗಳನ್ನು ಕೊಂಡುಕೊಂಡದ್ದಾಗಿದೆ. ಹೌದು, ಈ ಕೈ– ಯಾವಾಗಲೂ ನನ್ನದಾಗಲಿರುವ ಈ ಕೈ ನನ್ನ ಸಹಾಪರಾಧಿಯ ಕೈಯಾಗಿದೆ. ಅವಳು

ಆ ಕೈಯನ್ನು ಮೇಲೆತ್ತಿ ಚುಂಬಿಸಿದಳು. ಅವನವಳ ಬಳಿ ಮೊಳಕಾಲೂರಿ ಕುಳಿತನು; ಅವಳ ಮುಖವನ್ನವಲೋಕಿಸಲು ಪ್ರಯತ್ನಿಸಿದನು. ಆದರೆ ಅವಳದನ್ನು ಮರೆಮಾಡಿಕೊಂಡಳು; ತುಟಿಪಿಟಕ್ಕೆನ್ನಲಿಲ್ಲ. ಕೊನೆಗೆ ಕಷ್ಟಪಟ್ಟುಕೊಂಡು ಮೇಲೆದ್ದು, ಅವನನ್ನು ದೂರ ನೂಕಿದಳು. ಅವಳ ವದನ ಎಂದಿನಂತೆ ಸೌಂದರ್ಯಪೂರ್ಣವಾಗಿತ್ತು; ಆದ್ದರಿಂದಲೇ ಅದು ಕರುಣಾಜನಕವಾಗಿತ್ತು.

'ಎಲ್ಲ ಮುಗಿಯಿತು. ನನಗಿರುವವರು ನೀವೊಬ್ಬರೇ. ಅದನ್ನು ಮರೆಯಬೇಡಿ' ಎಂದವಳು ನುಡಿದಳು.

'ನನ್ನ ಪಾಲಿಗೆ ನನ್ನ ಬದುಕೇನೆಂಬುದನ್ನು ನೆನೆಯದಿರಲಾರೆ. ಸುಖದಾಯಕವಾದ ಈ ಒಂದು ಕ್ಷಣ?....'

'ಸುಖಸಂತೋಷ!' ಎಂದವಳು ಭಯ ಜುಗುಪ್ಸೆಗಳಿಂದ ಕೂಗಿಕೊಂಡಳು. ಆ ಭಯ ಅವನ ಹೃದಯವನ್ನು ಸಹ ತಟ್ಟಿತು. 'ದೇವರಾಣೆಗೂ ಸೊಲ್ಲೆತ್ತಬೇಡಿ; ಏನೊಂದೂ ಮಾತು ಬೇಡ.'

ಅವಳು ಬಿರುಬಿರನೆ ಮೇಲೆದ್ದು, ಅವನಿಂದ ದೂರ ಸರಿದಳು.

'ಏನೊಂದೂ ಮಾತು ಬೇಡ' ಎಂದವಳು ಪುನರುಕ್ತಿಸಿ, ಅವನಿಗರ್ಥವಾಗದ ಔದಾಸೀನ್ಯ ಬೆರೆತ ನಿರಾಶೆಯ ದೃಷ್ಟಿಯಿಂದ ಅವಳು ಹೊರಗೆ ಹೋದಳು. ನೂತನ ಜೀವನದಿಂದ ಪ್ರಾಪ್ತವಾಗಿದ್ದ ಲಜ್ಜೆ ಸಂತೋಷ ಮತ್ತು ಭಯಗಳ ಸಮ್ಮಿಶ್ರ ಭಾವವನ್ನು ಈ ಕ್ಷಣದಲ್ಲಿ ಮಾತಿನ ಮೂಲಕ ಅಭಿವ್ಯಕ್ತಪಡಿಸಲಾಗದೆಂದವಳು ತಿಳಿದಿದ್ದಳು. ಆ ವಿಷಯವನ್ನು ಕುರಿತು ಅವಳಿಗೆ ಮಾತಾಡಲಿಷ್ಟವಿರಲಿಲ್ಲ; ಅನುಚಿತವಾದ ಹಾಗೂ ಅಸಮರ್ಪಕವಾದ ಮಾತಿನ ಮೂಲಕ ತನ್ನ ಭಾವವನ್ನು ಹದಗೆಡಿಸಲು ಸಹ ಅವಳು ಸಿದ್ಧಳಾಗಿರಲಿಲ್ಲ. ಒಂದೆರಡು ದಿನ ಕಳೆದ ನಂತರವೂ ತನ್ನ ಭಾವನೆಗಳ ಸಂಕೀರ್ಣತೆಯನ್ನು ಅಭಿವ್ಯಕ್ತಪಡಿಸಲು ಸಾಕಷ್ಟು ಶಬ್ದಗಳು ಅವಳಿಗೆ ಸಿಗುತ್ತಿರಲಿಲ್ಲ. ವಾಸ್ತವವಾಗಿ ತನ್ನ ಆತ್ಮವನ್ನೆಲ್ಲ ತುಂಬಿಕೊಂಡಿದ್ದ ಭಾವಭಾವನೆಗಳನ್ನು ಕುರಿತು ಆಲೋಚಿಸಲು ಸಹ ಅವಳಿಗೆ ಸಾಧ್ಯವಾಗಲಿಲ್ಲ.

'ಇಲ್ಲ, ಆ ಬಗ್ಗೆ ನಾನೀಗ ಆಲೋಚಿಸಲಾರೆ. ಅನಂತರ ಮನಸ್ಸಿನ ಅಕ್ಷುಬ್ಧ ಸ್ಥಿತಿಯಲ್ಲಿ ಅದು ಸಾಧ್ಯವಾಗಬಹುದು. ಆದರೆ ಚಿಂತನೆಗೆ ಬೇಕಾದ ಆ ಅಕ್ಷುಬ್ಧ ಸ್ಥಿತಿ ತಲೆದೋರಲೇ ಇಲ್ಲ. ತಾನೆಸಗಿದ್ದ ಕೃತ್ಯವನ್ನು ಕುರಿತು, ಮುಂದೆ ತನಗೇನಾಗಬಹುದೆಂಬುದರ ಬಗ್ಗೆ, ತಾನೇನು ಮಾಡಬೇಕಾಗಿದೆಯೆಂಬುದನ್ನು ಕುರಿತು ಯೋಚಿಸಿದಾಗಲೆಲ್ಲ ಅವಳು ಭಯಭೀತಳಾಗುತ್ತಿದ್ದಳು; ಅವಳ ಆಲೋಚನೆಗಳು ಅದೃಶ್ಯವಾಗುತ್ತಿದ್ದುವು.

'ಆಮೇಲೆ, ಆಮೇಲೆ; ನನ್ನ ಮನಸ್ಸಿಗೆ ಶಾಂತಿ ದೊರೆತಾಗ' ಎಂದವಳು ಹೇಳಿಕೊಳ್ಳುತ್ತಿದ್ದಳು.

ಆದರೆ ಅವಳು ಮಲಗಿಕೊಂಡ ಮೇಲೆ, ತನ್ನ ಆಲೋಚನೆಗಳ ಮೇಲೆ ನಿಯಂತ್ರಣ ತಪ್ಪಿಹೋದಾಗ, ಕನಸಿನಲ್ಲಿ ಅವಳ ಸ್ಥಿತಿ ವಿಕಾರವಾದ ನಗ್ನಸ್ವರೂಪದಲ್ಲಿ ಮೊಗದೋರುತ್ತಿತ್ತು. ಹೆಚ್ಚುಕಡಮೆ ಪ್ರತಿ ರಾತ್ರಿಯೂ ಅದೇ ಕನಸು ಭೇಟಿ

ಕೊಡುತ್ತಿತ್ತು. ಏಕಕಾಲದಲ್ಲಿ ಅವರಿಬ್ಬರೂ ತನಗೆ ಗಂಡಂದಿರಾಗಿದ್ದರೆಂದು, ಇಬ್ಬರೂ ತನ್ನ ಮೇಲೆ ಮುದ್ದು ಮುತ್ತು ಪ್ರೀತ್ಯಾದರಗಳನ್ನು ಧಾರಾಳವಾಗಿ ವ್ಯಯಿಸುತ್ತಿದ್ದರೆಂದು ಅವಳು ಕನಸು ಕಾಣುತ್ತಿದ್ದಳು. ಅಲೆಕ್ಸಿ ಕರೆನಿನ್ ಅತ್ತುಕರೆದು, ಅವಳ ಕೈಗಳನ್ನು ಚುಂಬಿಸಿ, 'ಈಗೆಲ್ಲವೂ ಲೇಸಾಗಿದೆ' ಎಂದು ಹೇಳುತ್ತಿದ್ದನು. ಅಲೆಕ್ಸಿ ವ್ರಾನ್ಸ್ಕಿಯೂ ಅಲ್ಲಿಯೇ ಇರುತ್ತಿದ್ದನು; ಅವನು ಸಹ ಅವಳ ಗಂಡನಾಗಿದ್ದನು. ಈ ಸಂಬಂಧ ಹಿಂದೆ ಅಸಾಧ್ಯವಾಗಿ ಕಂಡದ್ದರಿಂದ ವಿಸ್ಮಯ ಚಕಿತೆಯಾದ ಅವಳು ಅಡೆತಡೆಯಿಲ್ಲದೆ ನಗುತ್ತಿದ್ದಳು; ಈಗೆಲ್ಲ ತುಂಬ ಸುಲಭವಾಗಿದ್ದುದಾಗಿಯೂ, ಇಬ್ಬರೂ ಸುಖಸಂತೃಪ್ತಿಗಳಿಂದಿದ್ದುದಾಗಿಯೂ ಅವಳವರಿಗೆ ವಿವರಿಸಿದಳು. ಆದರೆ ಈ ಕನಸು ಸ್ವಪ್ನಪಿಶಾಚಿಯಂತೆ ಅವಳ ಉಸಿರುಕಟ್ಟಿಸುತ್ತಿತ್ತು; ಅವಳು ಭೀತಿಯಿಂದ ಕಿರಿಚಿಕೊಂಡು ಎಚ್ಚರಗೊಳ್ಳುತ್ತಿದ್ದಳು.

೧೨

ಮಾಸ್ಕೋದಿಂದ ಹಿಂದಿರುಗಿದ ಹೊಸದರಲ್ಲಿ, ಕಿಟ್ಟಿಯ ನಿರಾಕರಣೆಯ ಅವಮಾನವನ್ನು ನೆನೆದಾಗಲೆಲ್ಲ ಲೆವಿನ್ ಕಂಪಿಸುತ್ತಿದ್ದನು; ಅವನ ಮುಖ ಕೆಂಪೇರುತ್ತಿತ್ತು. ಆದರೆ ಅವನು ಕೂಡಲೇ ತನ್ನಷ್ಟಕ್ಕೆ ತಾನು ಯೋಚಿಸುತ್ತಿದ್ದನು : 'ಭೌತ ವಿಜ್ಞಾನದ ಪರೀಕ್ಷೆಯಲ್ಲಿ ಫೇಲಾಗಿ, ಬಡ್ತಿ ದೊರೆಯದಿದ್ದಾಗ, ನಾನು ಇದೇ ರೀತಿ ನಡುಗುತ್ತಿದ್ದುದುಂಟು; ಅದನ್ನು ನೆನೆದಾಗಲೆಲ್ಲ ನನ್ನ ಮುಖ ಕೆಂಪೇರುತ್ತಿತ್ತು. ನನ್ನ ಬದುಕು ಮುಗಿಯಿತೆಂದೇ ನಾನಾಗ ಚಿಂತಿಸುತ್ತಿದ್ದೆ. ನನ್ನ ಸೋದರಿ ನನಗೆ ವಹಿಸಿದ್ದ ವ್ಯವಹಾರದಲ್ಲಿಯೂ ತಪ್ಪು ಮಾಡಿದಾಗ, ನನ್ನ ಬದುಕು ಅಲ್ಲಿಗೇ ಕೊನೆಗೊಂಡಿತೆಂದು ತಿಳಿದಿದ್ದೆ. ಮುಂದೆ ಆದದ್ದೇನು? ಕಾಲವುರುಳಿತು. ಈ ವ್ಯವಹಾರ ನನ್ನನ್ನು ವ್ಯಥೆಗೀಡು ಮಾಡಿದ್ದು ಸರಿಯೆ ಎಂದು ಈಗೀಗ ಅದನ್ನು ನೆನೆದು ಅಚ್ಚರಿಗೊಳ್ಳುತ್ತೇನೆ. ಇತ್ತೀಚಿನ ಈ ವ್ಯವಹಾರದ ಗತಿಯೂ ಇಷ್ಟೇ ಆದೀತು. ಕಾಲ ಉರುಳುತ್ತದೆ; ಈ ಸಂಗತಿ ಸಹ ಮರೆತು ಹೋಗುತ್ತದೆ.

ಮೂರು ತಿಂಗಳು ಕಳೆದರೂ, ಅವನದನ್ನು ಮರೆಯಲಿಲ್ಲ. ಅದು ಮೇಲಿಂದ ಮೇಲೆ ಅವನ ನೆನಪಿಗೆ ಬರುತ್ತಿತ್ತು. ಅದನ್ನು ನೆನೆದಾಗಲೆಲ್ಲ ಮೊದಲಿನಂತೆಯೇ ಅವನಿಗೆ ಯಾತನೆಯಾಗುತ್ತಿತ್ತು. ಬಹುದಿನಗಳಿಂದ ಕೌಟುಂಬಿಕ ಜೀವನದ ಬಗ್ಗೆ ಕನಸು ಕಾಣುತ್ತಿದ್ದ, ಅದಕ್ಕಾಗಿ ಹಾತೊರೆಯುತ್ತಿದ್ದ ತಾನು ಇನ್ನೂ ಮದುವೆಯಾಗದಿದ್ದುದಕ್ಕಾಗಿ, ಮದುವೆಯಾಗುವ ಅವಕಾಶ ಹಿಂದಿಗಿಂತ ಕಡಿಮೆಯಾಗಿದ್ದುದಕ್ಕಾಗಿ ಅವನಿಗೆ ಶಾಂತಿಯಿರಲಿಲ್ಲ. ತನ್ನ ವಯಸ್ಸಿನ ವ್ಯಕ್ತಿ ಒಂಟಿಯಾಗಿ ಬಾಳುವುದು ತರವಲ್ಲವೆಂಬುದನ್ನು ನೆನೆದಾಗ, ಸುತ್ತಮುತ್ತಣ ಜನ ಅದೇ ರೀತಿ ಯೋಚಿಸುತ್ತಿದ್ದಾಗ ಅವನ ಮನಸ್ಸಿಗೆ ಕಸಿವಿಸಿಯಾಗುತ್ತಿತ್ತು. ತನ್ನ ದನಕರುಗಳನ್ನು ನೋಡಿಕೊಳ್ಳುತ್ತಿದ್ದ ಸರಳ ಹೃದಯಿ ನಿಕೊಲಾಯ್‌ನೊಡನೆ ಮಾತಾಡುವುದೆ ಅವನಿಗೊಂದು ಆನಂದವಾಗುತ್ತಿತ್ತು. ಮಾಸ್ಕೋಗೆ ಹೋಗುವ ಮುನ್ನ 'ನೋಡು ನಿಕೊಲಾಯ್, ನಾನು ಮದುವೆಯಾಗಬೇಕೆಂದಿದ್ದೇನೆ' ಎಂದು ಹೇಳಿದ ತನ್ನ ಮಾತನ್ನೂ, 'ಈಗಾಗಲೇ ಅದು ನಡೆಯಬೇಕಿತ್ತು, ಕಾನ್‌ಸ್ಟಂಟೀನ್ ದಿಮಿತ್ರಿಚ್' ಎಂದು ಸಂದೇಹಕ್ಕೆಡೆಯಿಲ್ಲವೆಂಬಂತೆ

ತಕ್ಷಣವೇ ನಿಕೋಲಾಯ್ ಕೊಟ್ಟ ಉತ್ತರವನ್ನೂ ಅವನು ಜ್ಞಾಪಿಸಿಕೊಂಡನು. ಆದರೆ ಅವನ ಮದುವೆ ದೂರದ ಕನಸಾಗಿಯೇ ಉಳಿದಿತ್ತು. ಆಜಾಗ ಭರ್ತಿಯಾಗಿತ್ತು. ಆ ಜಾಗದಲ್ಲಿ ತನ್ನ ಪರಿಚಯದ ಯಾವುದಾದರೂ ಹುಡುಗಿಯನ್ನು ನೆನಪಿಗೆ ತಂದುಕೊಂಡಾಗ, ಅದು ಖಡಿತ ಸಾಧ್ಯವಾಗದೆಂದು ಅವನು ತಿಳಿದಿದ್ದನು. ಅವಳ ನಿರಾಕರಣೆಯ ನೆನಪಿನಿಂದ ಹಾಗೂ ಆ ಸಂದರ್ಭದಲ್ಲಿ ತಾನು ವಹಿಸಿದ ಪಾತ್ರದಿಂದ ಅವಮಾನವಾಗಲಾಗಿ ಅವನು ಯಾತನೆಯ ದವಡೆಯಲ್ಲಿ ಸಿಕ್ಕಿಕೊಂಡು ಒದ್ದಾಡುತ್ತಿದ್ದನು. ತಾನು ತಪ್ಪಿತಸ್ತನಲ್ಲವೆಂದು ಎಷ್ಟು ಸಲ ತನಗೆ ತಾನು ಹೇಳಿಕೊಂಡರೂ, ಈ ನೆನಪು ಇತರ ಅವಮಾನಕರವಾದ ನೆನಪುಗಳೊಂದಿಗೆ ಸೇರಿಕೊಂಡು ಅವನನ್ನು ನಡುಗಿಸುತ್ತಿತ್ತು, ಅವನ ಮುಖದಲ್ಲಿ ಬೆವರಿಳಿಸುತ್ತಿತ್ತು. ಹಿಂದೆ ಇತರರಂತೆ ಅವನೂ ತಪ್ಪು ಮಾಡಿದ್ದನು; ತನ್ನ ತಪ್ಪನ್ನು ತಾನು ಗುರುತಿಸಿದ್ದುದೂ ಉಂಟು. ಅದಕ್ಕಾಗಿ ಅವನ ಆತ್ಮಸಾಕ್ಷಿ ಅವನ ಮನಸ್ಸನ್ನು ಕಲಕಬೇಕಾಗಿತ್ತು. ಆದರೆ ಕ್ಷುದ್ರವೂ, ಒಂದು ವಿಧದಲ್ಲಿ ಅವಮಾನಕಾರಕವೂ ಆದ ಅನುಭವಗಳ ನೆನಪಿಗಿಂತ ಅವನ ತಪ್ಪಿಸಕದ ನೆನಪು ಅವನನ್ನು ಹೆಚ್ಚಾಗಿ ಬಾಧಿಸುತ್ತಿರಲಿಲ್ಲ. ಅವುಗಳ ಗಾಯ ಎಂದೆಂದಿಗೂ ಮಾಯಲಿಲ್ಲ. ಈ ನೆನಪುಗಳ ಜತೆಗೆ ಕಿಟ್ಟಿಯ ನಿರಾಕರಣೆಯನ್ನು ತಳುಕುಹಾಕಿದನು. ಆ ಸಂಜೆ ಅವನು ಇತರರ ಮುಂದೆ ಕನಿಕರನೀಯವಾದ ವ್ಯಕ್ತಿಯಾಗಿ ಕಂಡಿರಬೇಕು. ಆದರೆ ಕಾಲಕರ್ಮಗಳು ಅವನ ಮೇಲೆ ಸತ್ಪರಿಣಾಮಕಾರಿಯಾದ ಪ್ರಭಾವವನ್ನು ಬೀರಿರಬೇಕು; ಹಳ್ಳಿ ಬದುಕಿನ ಅಪ್ರಸಿದ್ಧವಾದ, ಆದರೆ ಪ್ರಮುಖ ಘಟನೆಗಳ ಕೆಳಗೆ ಅವನ ಕಹಿ ನೆನಪುಗಳು ತುಂಬ ಆಳದಲ್ಲಿ ಮುಚ್ಚಿಹೋಗಿರಬೇಕು. ವಾರ ಕಳೆದಂತೆಲ್ಲ ಕಿಟ್ಟಿಯ ಮೇಲಣ ಅವನ ಆಸಕ್ತಿ ಕ್ಷೀಣಿಸುತ್ತಿತ್ತು. ಬರಲಿರುವ ಅಥವಾ ಮುಗಿದುಹೋದ ಅವಳ ಮದುವೆಯ ಸುದ್ದಿಗಾಗಿ ಅವನು ತವಕದಿಂದ ಕಾಯ್ದನು; ಹಲ್ಲನ್ನು ಕಿತ್ತುಹಾಕಿದಂತೆ ಈ ಸುದ್ದಿ ತನ್ನ ನೋವನ್ನು ಗುಣಮಾಡುವುದೆಂದವನು ಬಗೆದನು.

ಈ ಮಧ್ಯೆ, ಇದ್ದಕ್ಕಿದ್ದಂತೆ, ಮರೆಮೋಸ ಅಡೆತಡೆಗಳಿಗವಕಾಶವಿಲ್ಲದೆಯೆ ಸ್ವರ್ಗೀಯ ಸುಂದರ ವಸಂತ, ನರ ಪಶು ತರುಗಳಿಗೆ ಆನಂದವನ್ನುಂಟುಮಾಡುವ ಆ ಅಪರೂಪದ ವಸಂತ ಬಂದೇ ಬಂತು. ಆ ಸುಂದರ ವಸಂತೋದಯದೊಡನೆ ಲೆವಿನ್‌ನ ಮೈಮನಗಳಲ್ಲಿ ನವಚೈತನ್ಯ ಸಂಚರಿಸಿತು; ಏಕಾಂತತೆಯ ಗಟ್ಟಿಮುಟ್ಟಾದ ಸ್ವತಂತ್ರ ಜೀವನವನ್ನು ನಿರ್ಮಿಸಿಕೊಳ್ಳುವ ಸಲುವಾಗಿ ಭೂತಕಾಲದ ಅನುಭವಗಳನ್ನು ತಿರಸ್ಕರಿಸುವ ಅವನ ನಿರ್ಧಾರವನ್ನದು ದೃಢಪಡಿಸಿತು. ಮಾಸ್ಕೋದಿಂದ ಹಿಂದಿರುಗುವಾಗ ರೂಪಿಸಿಕೊಂಡು ಬಂದಿದ್ದ ಅನೇಕ ಭಾವನೆಗಳನ್ನವನು ಕಾರ್ಯಗತಗೊಳಿಸಲು ಸಾಧ್ಯವಾಗದಿದ್ದರೂ, ಸ್ವಚ್ಛ ಜೀವನವನ್ನು ನಡಸಬೇಕೆಂಬ ತನ್ನ ಮುಖ್ಯಾಶಯವನ್ನು ಮಾತ್ರ ಪ್ರಯತ್ನಪೂರ್ವಕವಾಗಿ ಪೂರೈಸಿದ್ದನು. ಪ್ರತಿಪತನದ ತರುವಾಯ ತಾನನುಭವಿಸಿದ ಅವಮಾನವನ್ನು ಸಹಿಸಿಕೊಳ್ಳಬೇಕಾದ ಅಗತ್ಯ ಮತ್ತೆ ಒದಗಲಿಲ್ಲ; ಧೈರ್ಯವಾಗಿ ಕತ್ತೆತ್ತಿ ಜನರ ಮುಖವನ್ನವನು ನೋಡಬಹುದಿತ್ತು.

ಅವನಣ್ಣ ನಿಕೊಲಾಯ್‌ನ ಆರೋಗ್ಯ ತುಂಬ ಕೆಟ್ಟಿತ್ತೆಂದೂ, ವೈದ್ಯರಿಗೆ ತೋರಿಸಲು ಅವನು ಸಿದ್ಧವಾಗಿರಲಿಲ್ಲವೆಂದೂ ಫೆಬ್ರುವರಿ ತಿಂಗಳಲ್ಲಿ ಮಾಷಳಿಂದ ಅವನಿ

ಗೊಂದು ಪತ್ರ ಬಂದಿತ್ತು. ಕೂಡಲೇ ಲೆವಿನ್ ಮಾಸ್ಕೋಗೆ ಹೋದನು. ವೈದ್ಯರ ಸಲಹೆಯನ್ನು ಪಡೆಯುವಂತೆ, ಆರೋಗ್ಯ ಸುಧಾರಣೆಗಾಗಿ ಖನಿಜ ಜಲದ ಊಟೆಯಿರುವ ವಿದೇಶಕ್ಕೆ ಹೋಗುವಂತೆ ತನ್ನಣ್ಣನನ್ನೊಡಂಬಡಿಸಲು ಅವನಿಗೆ ಸಾಧ್ಯವಾಯಿತು. ಸುಲಭವಾಗಿ ತನ್ನಣ್ಣನ ಮನವನ್ನೊಲಿಸಿಕೊಂಡದ್ದಕ್ಕಾಗಿ, ಅವನ ಸಿಟ್ಟು ಕೆರಳಿಸದೆಯೆ ಪ್ರಯಾಣಕ್ಕಗತ್ಯವಾದ ಹಣವನ್ನು ಕೊಟ್ಟದ್ದಕ್ಕಾಗಿ ಅವನು ಸಂತೃಪ್ತನಾದನು. ವಸಂತಋತುವಿನಲ್ಲಿ ವಿಶೇಷ ಗಮನ ಹರಿಸಬೇಕಾದ ಆಸ್ತಿಯ ನಿರ್ವಹಣೆಯ ಜತೆಗೆ, ಹಾಗೂ ವ್ಯಾಪಕ ವ್ಯಾಸಂಗದ ಜತೆಗೆ, ಚಳಿಗಾಲದಲ್ಲಿ ಪ್ರಾರಂಭಿಸಿದ್ದ ಕೃಷಿಗೆ ಸಂಬಂಧಿಸಿದ ಲೇಖನವನ್ನು ಲೆವಿನ್ ಮುಂದುವರಿಸಿದನು. ಹವೆಯ ಮತ್ತು ನೆಲದ ಗುಣದಂತೆಯೇ ಕೃಷಿಕಾರ್ಮಿಕನ ಸ್ವಭಾವವನ್ನೂ ವಿಶಿಷ್ಟ ಕಾರಣವಾಗಿ ಪರಿಗ್ರಹಿಸಬೇಕೆಂಬುದೇ ಅವನ ಲೇಖನದ ಮುಖ್ಯ ವಸ್ತುವಾಗಿತ್ತು. ಹವಾ ಮತ್ತು ನೆಲಗಳೊದಗಿಸುವ ಕೇವಲ ಮಾಹಿತಿಗಳ ಆಧಾರದ ಮೇಲಲ್ಲದೆ, ಅವುಗಳ ಜತೆಗೆ ಕೃಷಿಕಾರ್ಮಿಕನ ಸ್ವಭಾವದಲ್ಲಿ ತೋರುವ ಕೆಲವು ಖಾಯಂ ಗುಣಗಳನ್ನು ಸಹ ಸೇರಿಸಿಕೊಂಡು, ಅವುಗಳ ಆಧಾರದ ಮೇಲೆ ವ್ಯವಸಾಯಕ್ಕೆ ಸಂಬಂಧಿಸಿದ ಸಕಲ ವೈಜ್ಞಾನಿಕ ತತ್ತ್ವಗಳನ್ನು ಅನುಮಿಸಬೇಕೆಂದವನು ನಿರ್ಣಯಿಸಿಕೊಂಡಿದ್ದನು. ಆದ್ದರಿಂದ ಲೆವಿನ್ ಏಕಾಕಿಯಾಗಿದ್ದರೂ, ಪ್ರಾಯಶಃ ಆ ಕಾರಣದಿಂದಲೇ ಅವನ ಬದುಕು ಪರಿಪೂರ್ಣವಾಗಿತ್ತು; ಅವನು ಮೇಲಿಂದ ಮೇಲೆ ಅಗಫಿಯಾ ಮಿಖೈಲೋವ್ನಳ ಜತೆಯಲ್ಲಿ ಭೌತವಿಜ್ಞಾನ, ಕೃಷಿಸಿದ್ಧಾಂತ ಮತ್ತು ವಿಶೇಷವಾಗಿ ತತ್ತ್ವಶಾಸ್ತ್ರಗಳಿಗೆ ಸಂಬಂಧಿಸಿದ ವಿಷಯಗಳನ್ನು ಕುರಿತು ಚರ್ಚಿಸುತ್ತಿದ್ದರೂ, ಅಪರೂಪದ ಸಂದರ್ಭಗಳಲ್ಲಿ ಮಾತ್ರ ತನ್ನ ತಲೆಯಲ್ಲಿ ಮುತ್ತುತ್ತಿದ್ದ ಭಾವನೆಗಳನ್ನು ಇತರರೊಡನೆ ಹಂಚಿಕೊಳ್ಳಲು ಬಯಸುತ್ತಿದ್ದನು. ತತ್ತ್ವಶಾಸ್ತ್ರ ಅಗಫಿಯಾ ಮಿಖೈಲೋವ್ನಳ ಮೆಚ್ಚಿನ ವಿಷಯವಾಗಿತ್ತು.

ವಸಂತಾಗಮನ ನಿಧಾನವಾಗಿ ಜರುಗುತ್ತಿತ್ತು. ಲೆಂಟ್‌ನ ಕೊನೆಯ ವಾರಗಳಲ್ಲಿ ಹವೆ ನಿರ್ಮಲವಾಗಿತ್ತು, ಚಳಿಚಳಿಯಾಗಿತ್ತು. ಹಗಲಲ್ಲಿ ಸೂರ್ಯನ ಕಾವಿಗೆ ಮಂಜು ಕರಗುತ್ತಿತ್ತು; ಆದರೆ ರಾತ್ರಿಯ ಹೊತ್ತಿಗೆ ಹವೆ ಶೂನ್ಯದಿಂದ ಏಳು ಮಾನಗಳಷ್ಟು ಕೆಳಗಿಳಿಯುತ್ತಿತ್ತು. ಆದ್ದರಿಂದ ಮಂಜು ಎಲ್ಲೆಲ್ಲೂ ದಟ್ಟವಾಗಿ ಹೆಪ್ಪುಗಟ್ಟಿತ್ತು. ರಸ್ತೆಯಿರಲಿ, ಇಲ್ಲದಿರಲಿ, ಜಾರುಬಂಡಿಗಳು ಅದರ ಮೇಲೆ ಸರಾಗವಾಗಿ ಚಲಿಸುತ್ತಿದ್ದುವು. ಮಂಜಿನ ಒಡಲಲ್ಲಿಯೇ ಈಸ್ಟರ್ ಹಬ್ಬವನ್ನು ಆಚರಿಸಲಾಯಿತು. ತರುವಾಯ ಕೂಡಲೇ ಈಸ್ಟರ್ ಸೋಮವಾರವಂದು ಬಿಸಿಗಾಳಿ ಎದ್ದಿತು, ಬಿರುಗಾಳಿಯೊಡಗೂಡಿದ ಮೋಡಗಳು ದಟ್ಟೈಸಿದುವು; ಮೂರು ಹಗಲು ಮೂರಿರುಳು ಮಳೆ ಧಾರಾಕಾರವಾಗಿ ಸುರಿಯಿತು. ಗುರುವಾರ ಗಾಳಿ ನಿಂತಿತು. ನಿಸರ್ಗದಲ್ಲಿ ನಡೆಯುತ್ತಿದ್ದ ಪರಿವರ್ತನೆಯ ರಹಸ್ಯವನ್ನು ಮರೆಮಾಡಲೆಂಬಂತೆ ದಟ್ಟವಾದ ಬೂದಿ ಬಣ್ಣದ ಕಾವಳ ಭೂಮಿಯ ಮೇಲೆಲ್ಲ ಕವಿಯಿತು. ಮಂಜಿನ ಹೊಟ್ಟೆಯೊಳಗೆ ನದಿ ಹರಿಯಿತು; ಮಂಜುಗೆಡ್ಡೆಯ ಮೇಲ್ಚಿಪ್ಪು ಬಿರುಕುಬಿಟ್ಟು, ಕೀಲಿತು; ನೊರೆಗೂಡಿ, ಪ್ರಕ್ಷುಬ್ಧಗೊಂಡ ಹೊಳೆಗಳ ವೇಗ ತೀವ್ರವಾಯಿತು; ತರುವಾಯದ ಭಾನುವಾರದ ಸಂಜೆಯ ಹೊತ್ತಿಗೆ ಮಂಜು ಕರಿಯಿತು; ಭಾರವಾದ ಮೇಘಗಳು ಚಿಕಯ ತುಪ್ಪುಳಿನಂಥ ಸಣ್ಣ

ಮೋಡಗಳಾಗಿ ಪರಿವರ್ತನೆ ಹೊಂದಿದುವು; ಆಕಾಶ ನಿರ್ಮಲವಾಯಿತು; ನಿಜಕ್ಕೂ ವಸಂತ ಗೋಚರಿಸಿದನು. ಬೆಳಗಿನ ನೇಸರು ಪ್ರಕಾಶಮಾನವಾಗಿ ಮೂಡಿದನು; ಬಿರುಬಿರನೆ ಕೆರೆಕೊಳಗಳ ಮೇಲೆ ಹೆಪ್ಪುಗಟ್ಟಿದ್ದ ತೆಳ್ಳನೆಯ ಮಂಜನ್ನು ನುಂಗಿ ನೊಣೆದನು; ಎಚ್ಚತ್ತ ನೆಲದಿಂದೆದ್ದ ಆವಿಯ ಭಾರದಿಂದ ಬಿಸಿಗಾಳಿ ತತ್ತರಿಸಿತು. ಪುನಶ್ಚೇತನಗೊಂಡ ಹಿಂದಿನ ವರ್ಷದ ಹುಲ್ಲಿನಲ್ಲಿ ಹಸುರುಕ್ಕುತ್ತಿತ್ತು; ಆದೇತಾನೆ ಎಸಳೆಕುತ್ತಿದ್ದ ನವ ಶಾದ್ವಲದಲ್ಲಿ ಹಸುರು ಮುಕ್ಕಳಿಸುತ್ತಿತ್ತು; ಗುಲಾಬಿಯ ಮೊಗ್ಗು ಉಬ್ಬುತ್ತಿತ್ತು; ದ್ವೀಪ ದ್ರಾಕ್ಷಿಗಳ ಪೊದೆಗಳಲ್ಲಿ ಕುಡಿಯೊಡೆಯುತ್ತಿದ್ದುವು; ಭೂರ್ಜ ಶಾಖೆಗಳಲ್ಲಿ ಹೂಮೊಗ್ಗುಗಳು ಅಂಟಂಟಾದ ರಸದಿಂದ ಊದಿಕೊಂಡಿದ್ದುವು. ಜೇನು ಗೂಡಿನಲ್ಲಿ ಚಳಿಗಾಲ ಕಳೆದು, ರೆಕ್ಕೆ ಬಲಿತ ಜೇನ್ನೊಣವೊಂದು ಮಧು ಅನ್ವೇಷಣೆಗಾಗಿ ಹೊರಟು, ವಿಲೋಮರದಲ್ಲಿ ನೇತಾಡುತ್ತಿದ್ದ ಹೇಮವರ್ಣದ ಹೂಗೊಂಚಲಿನಲ್ಲಿ ಮೊರೆಯುತ್ತಿತ್ತು. ಮಕಮಲ್ಲಿನಷ್ಟು ಮೃದುವಾದ ಎಳೆ ಹಸುರಿನ ಹೊಲಗಳ ಮತ್ತು ಮಂಜಿಡಿದಕೂಳೆ ಭೂಮಿಯ ಮೇಲೆ ಕಣ್ಣಿಗೆ ಕಾಣದ ಬಾನಾಡಿಗಳು ಹರ್ಷಗೀತೆ ಹಾಡುತ್ತಿದ್ದುವು; ಪ್ರವಾಹ ನಿಂತನಂತರ ತಗ್ಗು ಮತ್ತು ಜೌಗು ಪ್ರದೇಶಗಳಲ್ಲಿ ನೀರು ನಿಂತು ಉಂಟಾದ ಕೊಳ್ಳಗಳ ಮೇಲೆ ಟಿಟ್ಟಿಭಗಳು ಹಾರಾಡುತ್ತ ಹಲುಬುತ್ತಿದ್ದುವು; ವಸಂತಋತುವಿನ ಕೂಗುಗಳನ್ನೆಬ್ಬಿಸುತ್ತ ಕೊಕ್ಕರೆಗಳೂ ಕಾಡು ಬಾತುಕೋಳಿಗಳೂ ಗಗನದಲ್ಲಿ ಉಡ್ಡಯನ ಗೈಯುತ್ತಿದ್ದುವು. ಉದುರದ ಕಡೆ ಹಳೆಗೂದಲು ಕುಚ್ಚು ಕುಚ್ಚಾಗಿದ್ದ, ಹೊಸಗೂದಲು ಬರದ ಕಡೆ ಬೋಳುಬೋಳಾಗಿದ್ದ ದನಗಳು ಹುಲ್ಲುಗಾವಲಲ್ಲಿ ಕೂಗುತ್ತಿದ್ದುವು; ಸಾಕಷ್ಟು ತುಪ್ಪಟ ಬೆಳೆಯದ, ಬಿಲ್ಲುಗಾಲುಗಳ ಕುರಿಮರಿಗಳು ಅರಚುತ್ತಿದ್ದ ತಮ್ಮ ತಾಯಂದಿರ ಸುತ್ತ ನೆಗೆದಾಡುತ್ತಿದ್ದುವು; ತಮ್ಮ ಹಿಂದೆ ಬೆತ್ತಲೆ ಹೆಜ್ಜೆಯ ಮುದ್ರೆಗಳನ್ನಂಕಿಸುತ್ತ, ಚುರುಕುಗತಿಯ ಮಕ್ಕಳು ತೇವ ಆರಿದ ದಾರಿಗಳಲ್ಲಿ ಓಡುತ್ತಿದ್ದರು. ತಮ್ಮ ಬಟ್ಟೆ ಬರೆಗಳನ್ನೊಗೆಯುತ್ತಿದ್ದ ರೈತ ಸ್ತ್ರೀಯರ ಉಲ್ಲಾಸದ ಹರಟೆ ಕೊಳದ ಕಡೆಯಿಂದ ಕೇಳಿಸುತ್ತಿತ್ತು; ಕುಂಟೆ ಹಲುಬೆ ನೇಗಿಲುಗಳನ್ನು ಸರಿಪಡಿಸುತ್ತಿದ್ದ ರೈತರ ಸುತ್ತಿಗೆ ಕೊಡಲಿಗಳ ಟಪಟಪ ಸದ್ದು ಅಂಗಳದ ಕಡೆಯಿಂದ ತೂರಿ ಬರುತ್ತಿತ್ತು. ಕಡೆಗೂ ವಸಂತ ಬಂದೇ ಬಂತು.

೧೩

ಲೆವಿನ್ ಎತ್ತರದ ಬೂಟು ಹಾಕಿಕೊಂಡನು; ಮೊತ್ತಮೊದಲ ಬಾರಿಗೆ ಕುರಿ ದೊವಲಿನ ಬದಲಾಗಿ ಉಣ್ಣೆಯ ಜಾಕೀಟು ಧರಿಸಿದನು; ಬಿಸಿಲಿನಲ್ಲಿ ರಗರಗನೆ ಹೊಳೆಯುತ್ತಿದ್ದ ಕಾಲ್ಪೊಳೆಗಳನ್ನು ದಾಟುತ್ತ, ಒಮ್ಮೆ ಮಂಜುಗಡ್ಡೆಯ ಮೇಲೆ, ಮತ್ತೊಮ್ಮೆ ಅಂಟಿಕೊಳ್ಳುತ್ತಿದ್ದ ಕೆಸರಿನ ಮೇಲೆ ಹೆಜ್ಜೆಯಿಡುತ್ತ, ಹೊಲಗದ್ದೆಗಳ ತನಿಖೆಗಾಗಿ ಹೊರಗೆ ನಡೆದನು.

ವಸಂತಮಾಸ ಬಂತೆಂದರೆ ಯೋಜನೆ ಕಾರ್ಯಕ್ರಮಗಳ ಸಡಗರ. ಊದಿಕೊಂಡಿರುವ ತನ್ನ ಮೊಗ್ಗುಗಳ ಗರ್ಭದಲ್ಲಿ ಹುದುಗಿರುವ ಕುಡಿ ಕೊಂಬೆಗಳು ಯಾವ ದಿಕ್ಕಿನಲ್ಲಿ ಬೆಳೆಯುತ್ತವೆಂಬುದನ್ನರಿಯದ ವಸಂತ ಋತುವಿನ ವೃಕ್ಷದಂತೆ ಲೆವಿನ್‌ನಿಗೆ ಮನೆಯಿಂದ

ಹೊರಗೆ ಬಂದಾಗ, ತನಗೆ ಪ್ರಿಯವಾದ ಕೃಷಿಕರ್ಮದಲ್ಲಿ ತಾನು ಏನೇನು ವಿಧಾನಗಳನ್ನನುಸರಿಸುತ್ತೇನೆಂಬ ವಿಷಯದಲ್ಲಿ ಸುಸ್ಪಷ್ಟವಾದ ಕಲ್ಪನೆಯಿರಲಿಲ್ಲ. ತನ್ನ ಬಳಿ ಅತ್ಯುತ್ಕೃಷ್ಟವಾದ ಯೋಜನೆ ಮತ್ತು ಕಾರ್ಯಕ್ರಮಗಳಿದ್ದುವೆಂಬುದನ್ನು ಮಾತ್ರ ಅವನು ತಿಳಿದಿದ್ದನು. ಅವನು ಮೊತ್ತಮೊದಲು ತನ್ನ ದನಕರುಗಳ ತನಿಖೆಗಾಗಿ ಹೋದನು. ಹಸುಗಳು ತಡಿಕೆರೊಪ್ಪದಲ್ಲಿ ಮೈಕಾಯಿಸಿಕೊಳ್ಳುತ್ತಿದ್ದುವು; ಹೊಂಬಿಸಿಲಲ್ಲಿ ನುಣ್ ಹೊಳಪಿನ ಹೊಸತ್ವಕ್ಕುಗಳು ಮನಮೋಹಕವಾಗಿ ಮಿರುಗುತ್ತಿದ್ದುವು; ಹುಲ್ಲುಗಾವಲಿಗೆ ಹೋಗುವ ಕಾತರತೆಯಿಂದ ಅವು ಅಂಬಾ ಎಂದು ಕೂಗುತ್ತಿದ್ದುವು. ಅವುಗಳ ಸ್ಥಿತಿಗತಿಗಳನ್ನು ಅತ್ಯಂತ ಆತ್ಮೀಯತೆಯಿಂದ ಬಲ್ಲ ಅವನು ಆನಂದಪರವಶನಾಗಿ ಅವುಗಳನ್ನು ನಿಟ್ಟಿಸಿದನು. ಅವುಗಳನ್ನು ಹುಲ್ಲುಗಾವಲಿಗಟ್ಟುವಂತೆ, ಕರುಗಳನ್ನು ರೊಪ್ಪಕ್ಕೆ ಕೂಡುವಂತೆ ಅವನು ಅಜ್ಞಾಪಿಸಿದನು. ಗೋವುಗಳನ್ನು ಹುಲ್ಲುಗಾವಲಿಗೆ ಬಿಡಲು ಗೋವಳಿಗ ಸಂತೋಷದಿಂದ ಓಡಿದನು. ದನಗಾಹಿ ಹೆಂಗಸರು ತಮ್ಮ ಪಾವುಡೆಗಳನ್ನು ಮೇಲಕ್ಕೆ ಸಿಕ್ಕಿಸಿಕೊಂಡು, ಬಿಸಿಲಿಂದ ಇನ್ನೂ ಕಂದು ಬಣ್ಣಕ್ಕೆ ತಿರುಗದ ಬಿಳಿಯ ಬೆತ್ತಲೆ ಕಾಲುಗಳಿಂದ ಕೆಸರು ತುಳಿಯುತ್ತ, ಮುಂದೆ ಹರಿದು, ವಸಂತ ಸಂಭ್ರಮದ ಆನಂದದಲ್ಲಿ ಮುಳುಗಿದ್ದ ಹಾಗೂ ಅರಚುತ್ತಿದ್ದ ಕರುಗಳನ್ನು ಕೋಲುಬೀಸಿ, ತಡಿಕೆ ರೊಪ್ಪಕ್ಕಟ್ಟುತ್ತಿದ್ದರು.

ಎಂದೂ ಇಲ್ಲದಷ್ಟು ಚೆನ್ನಾಗಿದ್ದ ಈ ವರ್ಷದ ಕರುಗಳನ್ನವನು ಮುದ್ದಿಸಿದನು. ಮೊದಲು ಹುಟ್ಟಿದ ಕರುಗಳಂತು ರೈತರ ಹಸುವಿನಷ್ಟೇ ಗಾತ್ರವಾಗಿದ್ದುವು. ಪಾವಳಮಗಳು ಮೂರು ತಿಂಗಳಿಗೆ ಒಂದು ವರ್ಷದ ಕರುವಿನಷ್ಟೇ ದೊಡ್ಡದಾಗಿತ್ತು. ಲೆವಿನ್ ಬಾನೆಗಳನ್ನು ಹೊರಗೆ ತರಿಸಿ, ಬೇಲಿರೊಪ್ಪದಲ್ಲಿಯೇ ಅವುಗಳಿಗೆ ಮೇವು ಹಾಕಿಸಿದನು. ಚಳಿಗಾಲದಲ್ಲದು ಬಳಕೆಯಲ್ಲಿರಲಿಲ್ಲವಾದ್ದರಿಂದ, ಶರತ್ಕಾಲದಲ್ಲಿ ನಿರ್ಮಿಸಿದ ಎತ್ತು ಬೇಲಿ ಜೀರ್ಣವಾಗಿತ್ತು. ಆ ದಿನ ಒಕ್ಕುಯಂತ್ರವನ್ನು ಸರಿಪಡಿಸಬೇಕಾಗಿದ್ದ ಬಡಗಿಗೆ ಅವನು ಹೇಳಿ ಕಳಿಸಿದನು. ಆದರೆ ಬಡಗಿ ಅದಕ್ಕೆ ಬದಲಾಗಿ ಲೆಂಟ್ ಹಬ್ಬಕ್ಕೆ ಮೊದಲೇ ಸಿದ್ಧವಾಗಬೇಕಾಗಿದ್ದ ಕುಂಟೆ ಹಲುಬೆಗಳನ್ನು ಸರಿಪಡಿಸುತ್ತಿದ್ದನು. ಲೆವಿನ್‌ಗೆ ಅಸಮಾಧಾನವಾಯಿತು. ಹಲವು ವರ್ಷಗಳಿಂದ ಅವನು ಶಕ್ತಿಮೀರಿ ಕ್ರಮಬದ್ಧವಾದ ವ್ಯವಸ್ಥೆಗಾಗಿ ಹೋರಾಡುತ್ತಿದ್ದನು. ಆದರೂ ಕ್ರಮಬದ್ಧತೆಯನ್ನು ಸಾಧಿಸಲಾರದೆ, ಅವ್ಯವಸ್ಥೆ ನಿರಂತರವಾಗಿ ಸಾಗುತ್ತಿದ್ದುದರಿಂದ ಅವನಿಗೆ ತುಂಬ ಅಸಮಾಧಾನವಾಗಿತ್ತು. ಚಳಿಗಾಲದಲ್ಲಿ ಬಳಸದ ಬೇಲಿ ಚೌಕಟ್ಟುಗಳನ್ನು ಗಾಡಿ ಕುದುರೆಗಳ ಲಾಯದಲ್ಲಿ ಅಡಕಿದ್ದುದಾಗಿ ಅವನಿಗೆ ಆನಂತರ ತಿಳಿಯಿತು. ಆ ಲಾಯದಲ್ಲವು ಮುರಿದು ಅವಸ್ತುಗಳಂತೆ ಚೆಲ್ಲಾಪಿಲ್ಲಿಯಾಗಿ ಒದ್ದಾಡುತ್ತಿದ್ದುವು. ಹಲುಬೆಗಳನ್ನೂ ಕೃಷಿ ಉಪಕರಣಗಳನ್ನೂ ಪರೀಕ್ಷಿಸಿ, ಚಳಿಗಾಲದಲ್ಲಿಯೇ ರಿಪೇರಿ ಮಾಡಬೇಕೆಂದವನು ಮೂವರು ಬಡಗಿಗಳನ್ನು ನೇಮಿಸಿದ್ದನು. ಸಕಾಲದಲ್ಲವನ್ನು ರಿಪೇರಿಸಿರಲಿಲ್ಲ. ಹೊಲದ ಕೆಲಸಕ್ಕೆ ಬೇಕಾಗಿದ್ದಾಗಲೇ ಅವುಗಳ ರಿಪೇರಿಯನ್ನು ಕೈಗೊಳ್ಳಲಾಗಿತ್ತು. ತನ್ನ ಪಾರುಪತ್ಯಗಾರನನ್ನು ಕರೆತರುವಂತೆ ಅವನು ಹೇಳಿಕಳಿಸಿದನು. ಕಾಯುವ ಸಹನೆಯಿಲ್ಲದೆ ಅವನೇ ಪಾರುಪತ್ಯಗಾರನನ್ನು ಹುಡುಕಿಕೊಂಡು ಹೊರಟನು. ಆಸ್ಟ್ರಖಾನಿನ ಕುರಿಮರಿಯ ತೊಗಲುಡುಪನ್ನು ಧರಿಸಿದ್ದ

ಪಾರುಪತ್ಯಗಾರ ಕಣದಿಂದ ಎದುರಿಗೆ ಬರುತ್ತಿದ್ದನು. ಅವನು ತನ್ನ ಬೆರಳುಗಳಿಂದ ಹುಲ್ಲುಕಡ್ಡಿಯನ್ನು ಮುರಿಯುತ್ತಿದ್ದನು. ಆ ದಿನ ಎಲ್ಲರ ಮುಖಗಳಂತೆ ಅವನ ಮುಖ ಸಹ ಕಾಂತಿ ಸೂಸುತ್ತಿತ್ತು.

'ಬಡಗಿ ಒಕ್ಕುಯಂತ್ರವನ್ನೇಕೆ ರಿಪೇರಿಸುತ್ತಿಲ್ಲ?'

'ಓ, ನಿನ್ನೆ ಅದನ್ನೇ ನಿಮಗೆ ತಿಳಿಸಬೇಕೆಂದಿದ್ದೆ. ಹಲುಬೆಗಳನ್ನು ರಿಪೇರಿಸಬೇಕಾಗಿದೆ. ಅವುಗಳನ್ನು ಈ ಕೂಡಲೇ ಕೆಲಸಕ್ಕೆ ಬಳಸಬೇಕಾಗಿದೆ.'

'ಹಾಗಾದರೆ ಚಳಿಗಾಲದಲ್ಲಿ ಅವರೇನು ಮಾಡುತ್ತಿದ್ದರು?'

'ಈಗ ನಿಮಗೆ ಬಡಗಿಗಳಿಂದ ಏನಾಗಬೇಕಾಗಿದೆ?'

'ರೊಪ್ಪಗಳ ಬೇಲಿ ಚೌಕಟ್ಟುಗಳೆಲ್ಲಿವೆ?'

'ಅವುಗಳನ್ನು ಸರಿಮಾಡಿ ನಿಲ್ಲಿಸುವಂತೆ ಹೇಳಿದೆ. ಆದರೆ ಅಂಥ ಜನರಿಂದ ಏನು ತಾನೆ ನಿರೀಕ್ಷಿಸಲಾದೀತು?' ಎಂದು ಪಾರುಪತ್ಯಗಾರ ಅಸಮಾಧಾನ ಸೂಚಕವಾಗಿ ಕೈ ಬೀಸುತ್ತ ನುಡಿದನು.

'ಅಂಥ ಜನರಿಂದ ಎಂದುಕೊಂಡೆಯಾ? ಅಲ್ಲ, ಅಲ್ಲ, ಇಂಥ ಪಾರುಪತ್ಯಗಾರನಿಂದ' ಎಂದು ಲೆವಿನ್ ನುಡಿಯುವಾಗ ಅವನ ಕೋಪ ಉರಿಯುತ್ತಿತ್ತು. 'ನಾನು ನಿನ್ನನ್ನು ಸಂಬಳಕ್ಕಿಟ್ಟುಕೊಂಡದ್ದೇಕೆ?' ಎಂದವನು ಕೂಗಿಕೊಂಡನು. ಆದರೆ ತನ್ನ ಭಾವೋದ್ರೇಕದಿಂದ ಏನೇನೂ ಪ್ರಯೋಜನವಾಗದೆಂಬುದನ್ನು ನೆನೆದು ಅವನು ತನ್ನನ್ನು ತಾನೆ ಸಂಯಮಿಸಿಕೊಂಡನು; ತುಸು ಸುಮ್ಮನು. 'ಬಿತ್ತನೆ ಪ್ರಾರಂಭಿಸಬಹುದೇನು?' ಎಂದವನು ತುಸು ತಡೆದು ಪ್ರಶ್ನಿಸಿದನು.

'ತುರ್ಕಿನೊ ಆಚೆಗಿನ ಹೊಲಗಳಲ್ಲಿ ನಾಳೆ ಅಥವಾ ನಾಡಿದ್ದು ನಾವು ಶುರು ಮಾಡಬಹುದು'.

'ಹುರುಳಿಯ ವಿಷಯ ಏನಾಯಿತು?'

'ನಾನು ವಸಿಲಿ ಮತ್ತು ಮಿಷ್ಕರನ್ನು ಕಳಿಸಿದ್ದೇನೆ. ಅವರದನ್ನು ಚೆಲ್ಲುತ್ತಾರೆ. ಆದರೆ ನೆಲದಲ್ಲಿ ತುಂಬ ತೇವವಿರುವ ಕಾರಣದಿಂದ ಅದನ್ನು ಮುಗಿಸುತ್ತಾರೋ, ಇಲ್ಲವೋ ಕಾಣೆ.'

'ಎಷ್ಟು ಎಕರೆ?'

'ಸುಮಾರು ಹದಿನೈದು.'

'ಹದಿನೈದೆಕರೆ ಮಾತ್ರ ಏಕೆ? ಎಲ್ಲಕ್ಕೂ ಏಕೆ ಬಿತ್ತಲಿಲ್ಲ?' ಎಂದು ಲೆವಿನ್ ಆಲಿದನು.

ಇಡೀ ಹೊಲಕ್ಕೆ ಬದಲಾಗಿ ಹದಿನೈದೆಕರೆಗೆ ಮಾತ್ರ ಹುರುಳಿ ಬಿತ್ತುತ್ತಿದ್ದ ಸಂಗತಿ ಹೆಚ್ಚು ಉದ್ರೇಕಕಾರಿಯಾಗಿತ್ತು. ಮಂಜು ಕರಗುವ ಮುನ್ನ, ತುಂಬ ಮುಂಚಿತ ವಾಗಿಯೇ ಹುರುಳಿಯನ್ನು ಚೆಲ್ಲಬೇಕೆಂಬ ಪಾಠವನ್ನು ಶಾಸ್ತ್ರ ಮತ್ತು ಪ್ರಯೋಗಗಳು ಅವನಿಗೆ ಕಲಿಸಿದ್ದುವು; ಆದರೆ ಅವನ್ನವನು ಸಂಪೂರ್ಣವಾಗಿ ಅನುಷ್ಠಾನದಲ್ಲಿ ತಂದಿರಲಿಲ್ಲ.

'ಕೆಲಸಗಾರರಿಲ್ಲ. ಅಂಥ ಜನರಿಂದ ಏನನ್ನು ತಾನೆ ನಿರೀಕ್ಷಿಸಲಾದೀತು? ಮೂವರಂತು ಕೆಲಸಕ್ಕೆ ಬರಲೇ ಇಲ್ಲ. ಈ ಸಿಮ್ಯಾನ್ ಇದ್ದಾನಲ್ಲ—'

'ಚಾವಣಿ ಕೆಲಸ ಬಿಡಿಸಿ ಕೆಲವರನ್ನು ಈ ಕೆಲಸಕ್ಕೆ ಹಾಕಬಹುದಿತ್ತು'

'ನಾನು ಮಾಡಿದ್ದೇ ಅದು.'

'ಹಾಗಾದರೆ ಅವರೆಲ್ಲ ಎಲ್ಲಿದ್ದಾರೆ ?'

'ಅವರಲ್ಲೈವರು ಗೊಬ್ರ (ಹಸುರೆಲೆ ಗೊಬ್ಬರ) ಮಾಡ್ತಾ ಅವ್ರೆ. ನಾಲ್ವರು ಓಟು ಧಾನ್ಯವನ್ನು ಬೇರೆ ಕಡೆಗೆ ಬದಲಾಯಿಸುತ್ತಾ ಅವ್ರೆ. ಧಾನ್ಯದ ಸುತ್ತ ಹೊರಕೆ ಬೆಳೆಯುವ ಅಪಾಯವಿದೆ, ಕಾನ್‌ಸ್ಟೆಂಟಿನ್ ದಿಮಿತ್ರಿಚ್.'

ಹೊರಕೆ ಬೆಳೆಯುವುದೆಂದರೆ ಬೂಷ್ಟೆಂಬುದು ಲೆವಿನ್‌ನಿಗೆ ಗೊತ್ತು. ಇಂಗ್ಲೆಂಡಿನಿಂದ ತರಿಸಿದ್ದ ಬೀಜದ ಧಾನ್ಯವೆಲ್ಲ ಅಷ್ಟು ಹೊತ್ತಿಗೆ ಹಾಳಾಗಿತ್ತೆಂಬುದೂ ಅವನಿಗೆ ತಿಳಿದಿತ್ತು. ಅವನ ಆಜ್ಞೆಯನ್ನು ಉಪೇಕ್ಷಿಸಿದ್ದುದೇ ಅದಕ್ಕೆ ಕಾರಣ.

'ಲೆಂಟ್‌ಗೆ ಮೊದಲೇ ನಿನಗೆ ಹೇಳಿದ್ದೆ, ಕೊಳವೆಗಳನ್ನಳವಡಿಸುವಂತೆ' ಎಂದು ಲೆವಿನ್ ಅಬ್ಬರಿಸಿದನು.

'ಭಯ ಬೇಡಿ. ಎಲ್ಲವೂ ಸಕಾಲದಲ್ಲಿ ಸರಿಹೋಗುತ್ತದೆ.'

ಲೆವಿನ್ ಕೋಪದಿಂದ ಕೈ ಜಳಪಿಸಿ, ಲಾಯಗಳಿಗೆ ಹೋಗುವ ಮುನ್ನ ಓಟ್ಸ್ ನೋಡುವ ಸಲುವಾಗಿ ಉಗ್ರಾಣದ ಕಡೆಗೆ ಹೋದನು. ಓಟ್ಸ್ ಇನ್ನೂ ಕೆಟ್ಟುಹೋಗಿರಲಿಲ್ಲ. ಆದರೆ ಕೆಲಸಗಾರರು ಎಲೆಗುದ್ದಲಿಗಳಿಂದ ಕೆಳಗಣ ಕಣಜಕ್ಕೆ ಜಾರಿಸುವ ಮೂಲಕ ಅದನ್ನು ಸ್ಥಳಾಂತರಿಸುತ್ತಿದ್ದರು. ಅದನ್ನೆಲ್ಲ ಎಸಗುವಂತೆ ಅವನವರಿಗೆ ಆದೇಶ ನೀಡಿ, ಅವರಲ್ಲಿಬ್ಬರನ್ನು ಕರೆದು, ಮೇವು ಬೀಜಗಳ ಬಿತ್ತನೆಯಲ್ಲಿ ಸಹಾಯಮಾಡುವ ಸಲುವಾಗಿ ಅವನನ್ನು ಕಳಿಸಿದ ನಂತರ, ಪಾರುಪತ್ಯಗಾರನಿಂದ ಉಂಟಾಗಿದ್ದ ರೇಗು ಇಳಿಯಿತು. ವಾಸ್ತವವಾಗಿ ಅಂಥ ಸುಂದರ ದಿನದಲ್ಲಿ ಯಾರಲ್ಲಿಯೂ ಕೋಪ ಬಹು ದಿನಗಳ ತನಕ ಉಳಿಯುವಂತಿರಲಿಲ್ಲ.

ಅಂಗಿ ಬಟ್ಟೆಗಳನ್ನು ಮೇಲಕ್ಕೆತ್ತಿಕೊಂಡು, ಬಾವಿಯ ಬಳಿ ಗಾಡಿಯನ್ನು ತೊಳೆಯುತ್ತಿದ್ದ ಚಾಲಕ ಇಗ್ನಾತ್‌ನನ್ನು ಹತ್ತಿರಕ್ಕೆ ಕರೆದು 'ನನಗಾಗಿ ಗಾಡಿ ಅಣಿಗೊಳಿಸು. ಕುದುರೆ ಹೂಡು.' ಎಂದು ಆಜ್ಞಾಪಿಸಿದನು.

'ಯಾವುದು ಸ್ವಾಮಿ ?'

'ಓ, ಯಾವುದಾದರೂ ಸರಿಯೆ—ಕೋಲ್‌ಪಿಕ್ ಸಾಕು ?

'ಆಗಲಿ, ಬುದ್ಧಿ'

ಗಾಡಿಗೆ ಕುದುರೆಗಳನ್ನು ಹೂಡುತ್ತಿರುವಷ್ಟರಲ್ಲಿ, ತನ್ನ ಕಣ್ಮುಂದೆ ಸುಳಿದಾಡುತ್ತಿದ್ದ ಪಾರುಪತ್ಯಗಾರನನ್ನು ಕಂಡ ಲೆವಿನ್ ಹೇಳದೆ ಬಿಟ್ಟು ಹೋಗಿದ್ದ ಸಂಗತಿಗಳನ್ನು ಅವನಿಗೆ ಮನವರಿಕೆ ಮಾಡಿಕೊಡುವ ಸಲುವಾಗಿ ಹತ್ತಿರಕ್ಕೆ ಕರೆದನು; ವಸಂತ ಕಾಲದಲ್ಲಿ ಪೂರೈಸಬೇಕಾದ ಕಾರ್ಯಭಾರವನ್ನೂ ತನ್ನ ಹೊಸ ಯೋಜನೆಗಳನ್ನೂ ಕುರಿತು ಅವನು ಮಾತಾಡತೊಡಗಿದನು.

ಮೊದಲ ಕೊಯ್ಲಿಗೆ ಮುಂಚೆಯೇ ಗೊಬ್ಬರದ ಕೆಲಸ ಮುಗಿಯಬೇಕಾಗಿತ್ತು. ದೂರದ ಹೊಲಗಳ ಉಳುಮೆ ಅಡೆತಡೆಯಿಲ್ಲದೆ ಸಾಗಬೇಕಾಗಿತ್ತು. ಪಾಲು ಕಟ್ಟೆಳೆಯನ್ನು ತೊರೆದು, ಕೂಲಿಕೊಟ್ಟು ಕೊಯ್ಲು ಮುಗಿಸಬೇಕಾಗಿತ್ತು.

ಪಾರುಪತ್ಯಗಾರ ಎಚ್ಚರಿಕೆಯಿಂದ ಆಲಿಸಿದನು, ತನ್ನ ದನಿಯು ಸಲಹೆಗಳಿಗೆ ಕಷ್ಟಪಟ್ಟು ಒಪ್ಪಿಗೆ ಸೂಚಿಸಿದನು, ಆದರೂ ಖಿನ್ನತೆ ವಿಷಣ್ಣತೆಗಳು ಅವನ ಮುಖವನ್ನಾವರಿಸಿಕೊಂಡಿದ್ದುವು. ಲೆವಿನ್‌ನಿಗೆ ಅವುಗಳ ಪರಿಚಯವಿತ್ತು, ಅವನ್ನು ಕಂಡರವನಿಗಾಗುತ್ತಿರಲಿಲ್ಲ. 'ಈ ಯೋಜನೆಗಳೆಲ್ಲ ಸ್ವಾರಸ್ಯವಾಗಿವೆ. ಆದರೆ ಅವು ದೇವರು ನಡಸಿದಂತಾಗುತ್ತವೆ' ಎಂಬುದಾಗಿ ಅವನ ನೋಟ ಹೇಳುವಂತಿತ್ತು.

ಆ ಒಂದು ಧೋರಣೆಯಂತೆ ಬೇರಾವುದೂ ಲೆವಿನ್‌ನನ್ನು ಧೈರ್ಯಗುಂದಿಸಲಿಲ್ಲ. ಅವನು ನೇಮಕಮಾಡಿಕೊಂಡಿದ್ದ ಎಲ್ಲ ಪಾರುಪತ್ಯಗಾರರಲ್ಲಿ ಅದು ಸರ್ವೇಸಾಮಾನ್ಯವಾಗಿತ್ತು. ಅವರೆಲ್ಲರೂ ಅವನ ಯೋಜನೆಗಳನ್ನು ಏಕಪ್ರಕಾರವಾಗಿ ಗಣನೆಗೆ ತೆಗೆದುಕೊಂಡಿದ್ದರು. ಆದ್ದರಿಂದ ಅವನು ಧೈರ್ಯಗುಂದಿದ್ದನೇ ಹೊರತು, ಹೆಚ್ಚು ಕೋಪಗೊಂಡಿರಲಿಲ್ಲ. ಆದರೂ ತನ್ನನ್ನು ಯಾವಾಗಲೂ ವಿರೋಧಿಸುತ್ತಿದ್ದ, ಅದನ್ನು ಹೆಸರಿಸಲಾಗದ, ಆದರೆ 'ದೇವರಿಚ್ಛೆಯಿದ್ದಂತಾಗಲಿ' ಎಂಬ ಸೂತ್ರಕ್ಕೆ ಕಾರಣವಾಗಿದ್ದ ಒಂದು ಬಗೆಯ ಮೂಲ ರೂಪದ ಶಕ್ತಿಯೊಡನೆ ಹೋರಾಟ ನಡಸಲು ಅವನು ಕೃತಸಂಕಲ್ಪನಾಗಿದ್ದನು.

'ಅಷ್ಟಕ್ಕೆಲ್ಲ ನಮಗೆ ಸಮಯವಿರುವುದಾದರೆ, ಕಾನ್‌ಸ್ಟೆಂಟಿನ್ ದಿಮಿತ್ರಿಚ್' ಎಂದು ಪಾರುಪತ್ಯಗಾರ ನುಡಿದನು.

'ಸಮಯವೇಕಿಲ್ಲ?'

'ನಾವು ಹದಿನೈದು ಮಂದಿ ಕೂಲಿಕಾರರನ್ನಾದರೂ ನೇಮಿಸಿಕೊಳ್ಳಬೇಕಾಗಿದೆ. ಆದರೆ ನಿಮಗೆ ಕಾಣುತ್ತಿದೆಯೆ? ಅವರು ಬರುವುದಿಲ್ಲ. ಕೆಲವರು ಈ ಬೆಳಗ್ಗೆ ಬಂದಿದ್ದರು. ಬೇಸಗೆ ಕಾಲವಾದ್ದರಿಂದ ಎಪ್ಪತ್ತು ರೂಬಲ್ ಬೇಕೆಂದು ಕೇಳಿದರು.'

ಲೆವಿನ್ ಉತ್ತರಿಸಲಿಲ್ಲ. ಅವನು ಮತ್ತೆ ಆ ವಿರುದ್ಧ ಶಕ್ತಿಯನ್ನು ಮುಖಾಮುಖಿಯಾಗಿ ಎದುರಿಸಬೇಕಾಯಿತು. ಅವರೆಷ್ಟೇ ಪ್ರಯತ್ನಿಸಲಿ, ಚಾಲ್ತಿಯಲ್ಲಿದ್ದ ರುಸುಮಿಗೆ ಮೂವತ್ತೇಳಕ್ಕಿಂತ ಅಥವಾ ಮೂವತ್ತೆಂಟಕ್ಕಿಂತ, ಹೆಚ್ಚೆಂದರೆ ನಲವತ್ತಕ್ಕಿಂತ ಮಿಗಿಲಾಗಿ ಜನರನ್ನು ಕೂಲಿಗೆ ಅವರು ಸೇರಿಸಿಕೊಳ್ಳಲಾರರೆಂಬುದು ಅವನಿಗೆ ಗೊತ್ತಿತ್ತು. ಹೌದು, ಅವರಿಗೆ ದೊರೆತ ಸಂಖ್ಯೆ ನಲವತ್ತು ಮಾತ್ರ, ಅದಕ್ಕಿಂತ ಹೆಚ್ಚಿಲ್ಲ. ಆದರೂ ಲೆವಿನ್ ಅದರ ವಿರುದ್ಧವಾಗಿ ಹೋರಾಟ ನಿಲ್ಲಿಸುವಂತಿರಲಿಲ್ಲ.

'ಜನ ತಾವಾಗಿಯೇ ಬರಲಿಲ್ಲವೆಂದರೆ ಸೂರಿ ಅಥವಾ ಚೆಫಿರೊವ್ಕ ಮೊದಲಾದ ಹಳ್ಳಿಗಳಿಗೆ ಹೇಳಿ ಕಳಿಸು. ನಾವವರನ್ನು ಪತ್ತೆಹಚ್ಚಬೇಕಾಗಿದೆ.'

'ಕಳಿಸಲೇಬೇಕೆಂದರೆ ಆಗಲಿ' ಎಂದು ಪಾರುಪತ್ಯಗಾರ ನಿರಾಶೆಯಿಂದ ನುಡಿದನು. 'ಆದರೆ ನಾವು ಕುದುರೆಗಳ ವಿಷಯವನ್ನು ಸಹ ಗಣನೆಗೆ ತೆಗೆದುಕೊಳ್ಳಬೇಕಲ್ಲ. ಅವುಗಳಲ್ಲಿ ಏನೇನೂ ತ್ರಾಣ ಉಳಿದಿಲ್ಲ.'

'ಎಷ್ಟು ಬೇಕೋ ಅಷ್ಟನ್ನು ಕೊಂಡುಕೊಳ್ಳೋಣ. ಓ, ನಿನ್ನ ಮರ್ಜಿನನಗೆ ಗೊತ್ತಿಲ್ಲವೆ?' ಎಂದು ಲೆವಿನ್ ನಕ್ಕನು. 'ನಿನಗೇ ಬಿಟ್ಟಿದ್ದಾದರೆ, ನೀನು ಆದಷ್ಟು ಕಡಮೆ ಕೊಳ್ಳುತ್ತೀಯೆ; ಆದಷ್ಟು ಕೆಟ್ಟವನ್ನು ಕೊಳ್ಳುತ್ತೀಯೆ. ಈ ಸಲವಂತು ನಿನ್ನಿಷ್ಟದಂತೆ ವರ್ತಿಸಲು ನಾನು ಅವಕಾಶಕೊಡುವುದಿಲ್ಲ. ಪ್ರತಿಯೊಂದು ವಿವರಗಳಿಗೂ ನಾನೇ ಗಮನ ಕೊಡುತ್ತೇನೆ.'

'ಈಗಲೇ ನಿಮಗೆ ಸಾಕಷ್ಟು ನಿದ್ರೆ ವಿಶ್ರಾಂತಿ ಇದ್ದಂತೆ ತೋರುವುದಿಲ್ಲ, ಬುದ್ಧಿ. ನಮ್ಮ ಮಟ್ಟಿಗೆ ಹೇಳುವುದಾದರೆ, ಧಣಿಗಳ ಕಣ್ಮುಂದೆ ಕೆಲಸ ಮಾಡುವುದೇ ಚೆನ್ನು.'

'ಹಾಗಾದರೆ ಅವರು ಬರ್ಚ್‌ಡೇಲ್‌ನಲ್ಲಿ ಮೇವು ಬೀಜ ಚೆಲ್ಲುತ್ತಿದ್ದಾರಲ್ಲವೆ? ನಾನಲ್ಲಿಗೆ ಹೋಗಿ ನೋಡಿಕೊಂಡು ಬರುತ್ತೇನೆ.' ಎಂದವನು ಗಾಡಿಯಾಳು ಹಿಡಿದು ಕೊಂಡು ಬಂದಿದ್ದ ಕಪಿಲವರ್ಣದ ಚಿಕ್ಕ ಸವಾರಿ ಕುದುರೆಯನ್ನೇರಿದನು.

'ನೀವು ಹೊಳೆ ದಾಟಲಾರಿರಿ, ಕಾನ್‌ಸ್ಟಂಟಿನ್ ದಿಮಿತ್ರಿಚ್' ಎಂದು ಗಾಡಿ ಯಾಳು ಕೂಗಿ ಹೇಳಿದನು.

'ಕಾಡಿನ ಬಳಸುದಾರಿಯಲ್ಲಿ ಹೋಗುತ್ತೇನೆ.'

ತನ್ನ ಜಡ ಜೀವನಕ್ಕೆ ಬೇಸರಗೊಂಡಿದ್ದ ಕುದುರೆ ಲೆವಿನ್‌ನನ್ನು ಹೊತ್ತುಕೊಂಡು, ಉತ್ಸಾಹದಿಂದ ಕುಣಿಕುಣಿಯುತ್ತ, ನೆಗೆಯುತ್ತ ಕೆಸರು ಗುಂಡಿಗಳಲ್ಲಿ ಘೂಂಕರಿಸುತ್ತ, ಕೆಸರು ತುಂಬಿದ್ದ ಅಂಗಳದ ಮೂಲಕ ಹಾಯ್ದು, ಕಡಿವಾಣವನ್ನು ಜಗ್ಗುತ್ತ, ದ್ವಾರ ವನ್ನು ದಾಟಿ, ಹೊಲವನ್ನು ಸೇರಿತು.

ದನದ ಕೊಟ್ಟಿಗೆ ಮತ್ತು ಕಣಜಗಳನ್ನು ನೋಡಿದ ಲೆವಿನ್ ತುಂಬ ಹರ್ಷ ಗೊಂಡಿದ್ದನು. ಹೊಲಗಳಲ್ಲಿ ಅಡಿಯಿಟ್ಟಾಗ ಅವನ ಮನಸ್ಸು ಆನಂದಪರವಶವಾಯಿತು. ಕಪಿಲವರ್ಣದ ಧೀರವಾರುವದ ಮೇಲವನು ಸವಾರಿಸುವಾಗ, ಅವನ ಇಡೀ ದೇಹ ಲಯಬದ್ಧವಾಗಿ ತೊನೆದಾಡುತ್ತಿತ್ತು; ಮಂಜಿನ ಹೊಸ ವಾಸನೆಯಲ್ಲಿ ಹಾಗೂ ಕಾಡುಗಳ ತಂಗಾಳಿಯಲ್ಲಿ ಅವನು ಗಂಭೀರವಾಗಿ ಉಸಿರಾಡುತ್ತಿದ್ದನು; ಕ್ಷೀಣವಾಗು ತ್ತಿದ್ದ ಮಂಜಿನ ತೇಪೆಗಳಲ್ಲಿ ಕರಗುತ್ತಿದ್ದ ಹೆಜ್ಜೆಗಳು ಇನ್ನೂ ಕಾಣುತ್ತಿದ್ದುವು; ಬುಡಗಳಲ್ಲಿ ಹಾಗೂ ಅವುಗಳ ಕೊಂಬೆಗಳ ಮೇಲೆ ಅರಳುತ್ತಿದ್ದ ಮೊಗ್ಗುಗಳ ಮೇಲೆ ಹಸುರುಗಟ್ಟಿದ ಪಾಚಿಯಿಂದಿಡಿದ ಮರಗಳ ದೃಶ್ಯದಿಂದ ಅವನ ಹೃದಯ ಹರ್ಷ ಪುಲಕಿತ ವಾಯಿತು. ಕರಗುತ್ತಿದ್ದ ಮಂಜಿನ ವಿರಳ ಪೊದೆಗಳು ಹೊರತಾಗಿ, ಯಾವೊಂದು ಮಾಲಿನ್ಯವೂ ಇಲ್ಲದ, ಕಣ್ಣಿಗೆ ಕಾಣುವತನಕ ಹರಡಿದ್ದ ಸುವಿಸ್ತಾರವಾದ ಹಸುರು ಮೊಕಮಲ್ಲಿನ ಜಮಖಾನ ಕಾಡುಗಳಿಂದ ಹೊರಗೆ ಬರುತ್ತಿದ್ದಂತೆ ಅವನಿಗೆದುರಾಯಿತು. ಮೊಳಕೆಗಳನ್ನು ತುಳಿಯುತ್ತಿದ್ದ ರೈತರ ಎರಡು ಕುದುರೆಗಳ ದೃಶ್ಯ ಅವನ ಕೋಪವನ್ನು ಕೆರಳಿಸಲಿಲ್ಲ. ಕುದುರೆಗಳನ್ನಟ್ಟುವಂತೆ ತನ್ನ ಮುಂದೆ ಹಾದು ಹೋದ ರೈತನಿಗವನು ಆಜ್ಞಾಪಿಸಿದನು. 'ಬಿತ್ತಲು ಸಮಯವಾಗಿಲ್ಲವೆ? ಇಪಟ್' ಎಂಬ ಅವನ ಪ್ರಶ್ನೆಗೆ 'ಮೊದಲು ಉಳುಮೆ ಮಾಡಬೇಕಾಗಿದೆ. ಕಾನ್‌ಸ್ಟಂಟೀನ್ ದಿಮಿತ್ರಿಚ್' ಎಂಬ ಇಪಟ್‌ನ ಅವಿವೇಕದ ಮತ್ತು ಅಣಕದ ಉತ್ತರ ಸಹ ಅವನನ್ನು ಕೆರಳಿಸಲಿಲ್ಲ. ಮುಂದೆ ಮುಂದೆ ಹೋದಂತೆಲ್ಲ ಅವನ ಹೃದಯ ಹಗುರವಾಯಿತು; ತನ್ನ ಜಮೀನನ್ನು ಉತ್ತಮಪಡಿಸುವ ಯೋಜನೆಗಳು ಒಂದೊಂದಾಗಿ ಅವನ ಕಣ್ಮುಂದೆ ಸುಳಿದುವು; ಒಂದಾದ ಮೇಲೊಂದು ಹೊಳೆದ ಯೋಜನೆಗಳಲ್ಲಿ ಕೊನೆಯದು ಮೊದಲನೆಯದಕ್ಕಿಂತ ಉತ್ತಮವಾಗಿರುತ್ತಿತ್ತು: ಮಂಜು ಉಳಿಯದಿರಲು ತೆಂಕಣದ ಗಡಿಯುದ್ದಕ್ಕೂ ಬೇಲಿಯನ್ನೇಳಿಸಬೇಕೆಂದವನು ನಿರ್ಧರಿಸಿದನು; ಇಡೀ ಜಮೀನನ್ನು ಫಸಲು ಬೆಳೆಯುವ ಆರು ತಾಕುಗಳನ್ನಾಗಿ, ಹಾಗೂ ಮೇವು ಬಿತ್ತುವ ಮೂರು ತಾಕುಗಳನ್ನಾಗಿ ವಿಂಗಡಿ

ಸುವುದೆಂದು ಬಗೆದನು; ಜಮೀನುಗಳ ದೂರದ ಕೊನೆಯಲ್ಲೊಂದು ಜನಗಳ ರೊಪ್ಪ ಕಟ್ಟುವುದಾಗಿಯೂ ಕೊಳವೊಂದನ್ನು ನಿರ್ಮಿಸುವುದಾಗಿಯೂ, ಸಗಣಿಗಂಜಲಗಳ ಸಂಗ್ರಹಣೆಗಾಗಿ ಅಲ್ಲಲ್ಲಿ ಮಂದೆಗಳನ್ನು ಏರ್ಪಡಿಸುವುದಾಗಿಯೂ ಅವನು ಯೋಜನೆ ಹಾಕಿಕೊಂಡನು. ಎಂಟುನೂರು ಎಕರೆ ಜಮೀನಿನಲ್ಲಿ ಗೋಧಿ ಚೆಲ್ಲುವುದಾಗಿಯೂ ಮುನ್ನೂರೆಕರೆ ತಾಕಿನಲ್ಲಿ ಆಲೂಗಡ್ಡೆ ನೆಡುವುದಾಗಿಯೂ, ಮೇವಿಗಾಗಿ ನಾನೂರೆಕರೆ ಮೀಸಲಿರಿಸುವುದಾಗಿಯೂ, ಹೀಗಾಗಿ ಒಂದೆಕರೆಯನ್ನಾದರೂ ಸರಿಯೆ ಖಾಲಿಬಿಡಲು ತಯಾರಿಲ್ಲವಾಗಿಯೂ ಅವನು ಯೋಚಿಸಿದನು.

ಇಂಥವೇ ಆಲೋಚನೆಗಳು ತುಂಬಿದ ಮನಸ್ಸಿನಿಂದ ಅವನು ಮೇವು ಬೀಜ ಚೆಲ್ಲುತ್ತಿದ್ದ ಕಾರ್ಮಿಕನ ಕಡೆಗೆ ತೆರಳಿದನು; ಗೋಧಿಯ ಮೊಳಕೆಗಳು ಪದಾಘಾತಕ್ಕೆ ಸಿಗದಂತೆ ಅವನು ಹೊಲದ ತೆವರಿಯ ಮೇಲೆ ಜಾಗರೂಕತೆಯಿಂದ ಕುದುರೆಯನ್ನು ನಡೆಸಿದನು. ಬಿತ್ತನೆ ಬೀಜವಿದ್ದ ಗಾಡಿ ತೆವರಿಯನ್ನು ಬಿಟ್ಟು ಹೊಲದಲ್ಲಿಯೇ ನಿಂತಿತ್ತು. ಅದರಿಂದಾಗಿ ಚಳಿಗಾಲದ ಗೋಧಿ ಮೊಳಕೆಗಳು ಗಾಡಿಯ ಚಕ್ರಗಳಿಗೆ ಸಿಕ್ಕಿ ಅಪ್ಪಚ್ಚಿ ಯಾಗಿದ್ದುವು; ಗೊರಸುಗಳ ಏಟಿಗೆ ನುಚ್ಚುನುರಿಯಾಗಿದ್ದುವು. ಇಬ್ಬರು ಕೆಲಸಗಾರರೂ ತೆವರಿಯ ಮೇಲೆ ಕುಳಿತುಕೊಂಡು, ಚುಂಗಾಣಿ ಸೇದುತ್ತಿದ್ದರು. ಬೀಜ ಬೆರಕೆಗೊಂಡಿದ್ದ ಮಣ್ಣು ಹುಡಿ ಹುಡಿಯಾಗಿರದೆ, ಹೆಂಟೆ ಹೆಂಟೆಯಾಗಿ ಗಟ್ಟಿಗೊಂಡಿತ್ತು. ತಮ್ಮ ದಣಿ ಕಣ್ಣಿಗೆ ಬಿದ್ದ ಕೂಡಲೇ ವಸಿಲಿ ಗಾಡಿಯ ಬಳಿಗೆ ಹೋದನು, ಮಿಷ ಕಾಳು ಬಿತ್ತಲಾ ರಂಭಿಸಿದನು. ಅವರ ಆ ಸೋಗಿನಿಂದ ಲೆವಿನ್‌ನ ಕೋಪ ಕೆರಳ ಬೇಕಿತ್ತು. ಆದರವನು ಕೆಲಸಗಾರರೊಡನೆ ಕೋಪಗೊಳ್ಳುತ್ತಿದ್ದುದೇ ಅಪರೂಪ. ವಸಿಲಿ ಬಂಡಿಯ ಬಳಿ ಹೋದಾಗ, ಕುದುರೆಯನ್ನು ತೆವರಿಯ ಮೇಲಕ್ಕೆ ಕೊಂಡೊಯ್ಯುವಂತೆ ಲೆವಿನ್ ಆಜ್ಞಾಪಿಸಿದನು.

'ಓ, ಗೋಧಿ ಮತ್ತೆ ಮೊಳೆಯುತ್ತದೆ, ಬುದ್ಧಿ' ಎಂದು ವಸಿಲಿ ಉತ್ತರಿಸಿದನು.

'ಚರ್ಚೆ ಬೇಡ. ಹೇಳಿದಂತೆ ಮಾಡು' ಎಂದು ಲೆವಿನ್ ನುಡಿದನು.

'ಅಪ್ಪಣೆ, ಸ್ವಾಮಿ' ಎಂದು ವಸಿಲಿ ಉತ್ತರಿಸಿ, ಕಡಿವಾಣ ಹಿಡಿದು ಕುದುರೆಯ ನ್ನೆಳೆದೊಯ್ದನು. 'ಒಳ್ಳೆಯ ಬೀಜ, ಬುದ್ಧಿ' ಎಂದವನು ಲೆವಿನ್‌ನ ಅನುಗ್ರಹಕ್ಕಾಗಿ ಅಂಗಲಾಚಿದನು. 'ಅತ್ಯುತ್ತಮವಾದದ್ದು. ನಡೆಯುವುದು ಮಾತ್ರ ಕಷ್ಟ. ಕಾಲಿಗೆ ಮಣಗಟ್ಟಲೆ ಮಣ್ಣು ಅಂಟಿಕೊಳ್ಳುತ್ತದೆ.'

'ಮಣ್ಣನ್ನೇಕೆ ಹುಡಿಮಾಡಿಲ್ಲ?' ಎಂದು ಲೆವಿನ್ ಪ್ರಶ್ನಿಸಿದನು.

'ಅದನ್ನು ಹುಡಿಮಾಡಲಿಕ್ಕಾಗಿ ಬೆರಳು ಬಳಸುತ್ತೇವೆ' ಎಂದು ವಸಿಲಿ, ಹೆಂಟೆ ಯೊಂದನ್ನು ಕೈಗೆತ್ತಿಕೊಂಡು, ಅದನ್ನು ಕೈಗಳಿಂದ ಪುಡಿಪುಡಿ ಮಾಡುತ್ತ ಉತ್ತರಿಸಿದನು.

ಒಂದು ಬಂಡಿ ಭರ್ತಿಯಾಗಿ, ಬೀಜ ಬೆರಸಿದ ಪುಡಿಮಾಡದ ಮಣ್ಣನ್ನು ತುಂಬಿದ್ದು ವಸಿಲಿಯ ತಪ್ಪಲ್ಲ; ಆದರೂ ಲೆವಿನ್ ಮನಸ್ಸಿಗೆ ಕಿರಿಕಿರಿಯಾಯಿತು.

ಅಂಥ ಸಂದರ್ಭದಲ್ಲಿ ತನ್ನ ಭಾವನೆಗಳನ್ನು ಸಂಯಮಿಸಿಕೊಂಡು, ಕೆಟ್ಟದ್ದೆಂದು ತೋರುವಲ್ಲಿ ಒಳ್ಳೆಯದನ್ನು ಕಾಣುವುದೇ ಉತ್ತಮ ಉಪಾಯವೆಂದು ಅವನು ಬಗೆ ದಿದ್ದನು. ಅವನೀಗ ಮಾಡಿದ್ದೇ ಅದು. ಭಾರಿ ಪ್ರಮಾಣದಲ್ಲಿ ಮಣ್ಣು ಅಂಟಿಕೊಂಡಿದ್ದ

ಕಾಲನ್ನೆಳೆಯುತ್ತ, ಹೊಲದಲ್ಲಿ ಅಡ್ಡಾಡುತ್ತಿದ್ದ ವಿಷನನ್ನವನು ತುಸುಹೊತ್ತು ಈಕ್ಷಿಸಿದನು; ತದನಂತರ ಕುದುರೆಯಿಂದಿಳಿದು, ವಸಿಲಿಯಿಂದ ಕಾಳಿನ ಚೀಲವನ್ನೀಸಿಕೊಂಡು, ಬಿತ್ತಲನುವಾದನು.

'ನೀನೆಲ್ಲಿ ನಿಲ್ಲಿಸಿದ್ದೆ?'

ವಸಿಲಿ ತನ್ನ ಕಾಲಿಂದ ಗೆರೆ ಎಳೆದನು. ಲೆವಿನ್ ಶಕ್ತಿಮೀರಿ ಬೀಜ ಬಿತ್ತಲಾರಂಭಿಸಿದನು. ಕೆಸರಿನಲ್ಲೆಷ್ಟು ಕಷ್ಟವೋ ಆ ನೆಲದಲ್ಲಿ ಕಾಲಿಡುವುದೂ ಅಷ್ಟೇ ಕಷ್ಟವಾಗಿತ್ತು. ಒಂದು ನೇಗಿಲ ಸಾಲಿನುದ್ದಕ್ಕೆ ನಡೆಯುವ ಹೊತ್ತಿಗೆ ಅವನು ಬೆವರಿನಲ್ಲದ್ದಿ ಹೋಗಿದ್ದನು. ಅವನು ಆ ಕೆಲಸವನ್ನಷ್ಟಕ್ಕೆ ನಿಲ್ಲಿಸಿ, ಕಾಳಿನ ಚೀಲವನ್ನು ವಸಿಲಿಯ ಕೈಗೆ ಕೊಟ್ಟನು.

'ಸರಿ, ದಣಿಗಳೆ, ಬೇಸಗೆಯಲ್ಲಿ ನೇಗಿಲ ಸಾಲು ಕಾಣಿಸುತ್ತದೆ. ಅದಕ್ಕಾಗಿ ಬಯ್ಯಬೇಡಿ' ಎಂದು ವಸಿಲಿ ನುಡಿದನು.

'ನಾನೇಕೆ ಬಯ್ಯಲಿ?' ಎಂದು ಲೆವಿನ್ ತನ್ನ ವಿಧಾನದ ಪರಿಣಾಮವನ್ನು ಮೆಚ್ಚುತ್ತ, ಉಲ್ಲಾಸದಿಂದ ಉತ್ತರಿಸಿದನು.

'ಬೇಸಗೆ ಬಂದಾಗ ನೀವೇ ನೋಡುವಿರಂತೆ. ಅದು ಎದ್ದು ಕಾಣುತ್ತದೆ. ಕಳೆದ ವಸಂತಕಾಲದಲ್ಲಿ ನಾನು ಬಿತ್ತಿದ ಜಾಗವನ್ನು ನೋಡಿ. ಚಿತ್ರದಂತೆ ಸುಂದರವಾಗಿದೆ. ನೀವು ನನ್ನ ತಂದೆಯೆಂದೇ ತಿಳಿದು, ಶಕ್ತಿಮೀರಿ ದುಡಿದಿದ್ದೇನೆ, ಕಾನ್‌ಸ್ಟಂಟಿನ್ ದಿಮಿತ್ರಿಚ್. ಕಳಪೆ ಕೆಲಸವೆಂದರೆ ನನಗಾಗದು. ಅಂಥ ಕೆಲಸ ಮಾಡಲು ಇತರರಿಗೂ ನಾನು ಅವಕಾಶ ಕೊಡುವುದಿಲ್ಲ. ಯಜಮಾನರಿಗೆ ಯಾವುದು ಇಷ್ಟವೋ ಅದೇ ನಮಗೂ ಇಷ್ಟ. ಆ ಕಡೆಗೆ ತುಸು ದೃಷ್ಟಿ ಹರಿಸಿ, ಸ್ವಾಮಿ' ಎಂದು ವಸಿಲಿ ಹೊಲದ ಕಡೆಗೆ ಕೈತೋರಿಸುತ್ತ ನುಡಿದನು. 'ಅದನ್ನು ನೋಡಿದಾಗ ಮನಸ್ಸಿಗೆ ಸಮಾಧಾನವಾಗುತ್ತದೆ.'

'ಸುಂದರ ವಸಂತ, ವಸಿಲಿ.'

'ಇಂಥ ವಸಂತಮಾಸ ಹಳಬರ ನೆನಪಿಗೂ ಹೊಳೆಯುವಂತಿಲ್ಲ. ನಾನು ಹಳ್ಳಿಗೆ ಹೋಗಿದ್ದೆ. ಮುದುಕನೊಬ್ಬನನ್ನು ಕಂಡೆ. ಅವನು ಎಂಟು ಬಳ್ಳ ಗೋಧಿ ಬಿತ್ತಿದ್ದ. ಅದು ರೈ ಅಷ್ಟೇ ಚೆನ್ನಾಗಿ ಬರುತ್ತದೆಂದು ಹೇಳಿದ.'

'ಗೋಧಿ ಬಿತ್ತುವ ಅಭ್ಯಾಸ ನಿನಗೆ ಬಹುದಿನಗಳಿಂದಿದೆಯೇನು?'

'ಏಕೆ ಹಾಗಂತೀರಿ? ಹಿಂದಿನ ವರ್ಷ ನಮಗದನ್ನು ಕಲಿಸಿದವರೇ ನೀವು. ಎರಡು ಮಾನ ಕಾಳು ಕೊಟ್ಟವರೇ ನೀವು. ನಾವು ಫಸಲು ಬಂದಾಗ ಆರು ಬಳ್ಳ ಮಾರಿದೆವು, ಎಂಟು ಬಳ್ಳ ಬಿತ್ತಿದೆವು.'

'ಅದಿರಲಿ, ನೀನು ಆ ಹೆಂಟೆಗಳನ್ನು ಪುಡಿಪುಡಿ ಮಾಡಬೇಕಾಗಿದೆ' ಎಂದು ಲೆವಿನ್ ತನ್ನ ಕುದುರೆಯ ಬಳಿಗೆ ಹೋಗುವಾಗ ನುಡಿದನು. 'ಮಿಷನ ಮೇಲೆ ಕಣ್ಣಿಡು. ಫಸಲು ಹೊರವಾಗಿ ಬಂದದ್ದಾದರೆ, ಎಕರೆಯೊಂದಕ್ಕೆ ಅರ್ಧ ರೂಬಲ್ಲಿನಂತೆ ನಿನಗೆ ಇನಾಮು ಸಿಗುತ್ತದೆ.'

'ನಿಮ್ಮ ದಯೆಗಾಗಿ ಧನ್ಯವಾದಗಳು. ಈಗಿರುವಷ್ಟರಿಂದಲೇ ನಮಗೆ ತೃಪ್ತಿಯಾಗಿದೆ, ಬುದ್ಧಿ.'

ಲೆವಿನ್ ಕುದುರೆ ಹತ್ತಿ ಮರಳಿದನು ; ಹಿಂದಿನ ವರ್ಷ ಮೇವು ಬೆಳೆಸಿದ್ದ ಹೊಲದ ಕಡೆಗೆ ಮೊದಲು, ವಸಂತಕಾಲದ ಬಿತ್ತನೆಗಾಗಿ ಉತ್ತು ಹಸನುಗೊಳಿಸಿದ್ದ ಹೊಲದ ಕಡೆಗೆ ಅನಂತರ, ಅವನು ಹೋದನು.

ಕೂಳೆ ಹೊಲದ ಮೇವು ನೋಡಲು ಸುಂದರವಾಗಿತ್ತು. ಎಲ್ಲವೂ ಸೊಗಸಾಗಿ ಮೊಳಕೆಯೊಡೆದಿತ್ತು ; ಕಳೆದ ವರ್ಷದ ಬೆಳೆಯ ಕೂಳೆಯು ನಡುವೆ ಹಸುರುಹಸುರಾಗಿ, ಪ್ರಕಾಶಮಾನವಾಗಿ ಹೊಳೆಯುತ್ತಿತ್ತು. ಕುದುರೆಯ ಚುಂಚುಕಾಲು ಕೆಸರಿನಲ್ಲಿ ಹೂತುಕೊಳ್ಳುತ್ತಿತ್ತು ; ಮಂಜು ಕರಗಿ ತೇವಗೊಂಡಿದ್ದ ನೆಲದಿಂದ ಕಾಲನ್ನು ಮೇಲೆತ್ತಿದಾಗ, ಪ್ರತಿಯೊಂದು ಗೊರಸಿನಿಂದ ಹೀರುದನಿಯ ಗಟ್ಟಿಸದ್ದು ಕೇಳಿಸುತ್ತಿತ್ತು. ನಿಜಕ್ಕೂ, ಆ ಬಡ ಪ್ರಾಣಿ ಉತ್ತ ನೆಲವನ್ನು ದಾಟಲು ಶಕ್ತವಾಗಿರಲಿಲ್ಲ. ಮಂಜು ತೇಪೆಗಳ ಮೇಲೆ ಮಾತ್ರ ಅದಕ್ಕೆ ಹಿಡಿತ ಸಿಗುತ್ತಿತ್ತು ; ನೇಗಿಲ ಸಾಲುಗಳಲ್ಲಿ ಅದರ ಮೊಳಕಾಲು ಮುಳುಗುತ್ತಿದ್ದುವು. ಆದರೆ ಉಳುಮೆ ಅಚ್ಚುಕಟ್ಟಾಗಿ ನಡೆದಿತ್ತು ; ಮತ್ತೆರಡು ದಿನಗಳಲ್ಲಿ ಹಲುಬೆ ಹೊಡೆದು, ಬಿತ್ತುವರಿ ಮುಗಿಯುತ್ತಿತ್ತು. ಎಲ್ಲವೂ ಅದ್ಭುತವಾಗಿತ್ತು ; ಆನಂದದಾಯಕವಾಗಿತ್ತು.

ಪ್ರವಾಹ ತಗ್ಗಿರಬೇಕೆಂದು ತಿಳಿದು, ಲೆವಿನ್ ಹೊಳೆದಾರಿಯಲ್ಲಿ ಹಿಂದಿರುಗಿದನು. ಅದು ತಗ್ಗಿತ್ತು. ಅವನು ಸುರಕ್ಷಿತವಾಗಿ ದಾಟುವಾಗ, ಎರಡು ಬಾತುಗಳು ಬೆದರಿದುವು. 'ಇಲ್ಲಿ ಉಲ್ಲಂಗಿ ಹಕ್ಕಿಗಳೂ ಇದ್ದಿರಬೇಕು' ಎಂದವನು ತನ್ನೊಳಗೆ ತಾನಂದುಕೊಂಡನು. ಕೂಡುದಾರಿಯಲ್ಲಿ ಸಂಧಿಸಿದ ಅರಣ್ಯ ರಕ್ಷಕ ಅವನ ಊಹೆಯನ್ನು ಸ್ಥಿರೀಕರಿಸಿದನು.

ಊಟಕ್ಕೆ ವಿಲಂಬವಾಗಬಾರದೆಂದು, ಸಂಜೆಯೊಳಗೆ ತನ್ನ ಕೋವಿಯನ್ನು ಸರಿಪಡಿಸಬೇಕೆಂದು, ಲೆವಿನ್ ಕುಲುಕೋಟದಲ್ಲಿ ಮನೆಗೆ ಹಿಂದಿರುಗಿದನು.

೧೪

ಅವಿತೋಲ್ಲಾಸದಿಂದ ಮನೆಯನ್ನು ಸಮೀಪಿಸುತ್ತಿದ್ದಂತೆ, ಪ್ರಮುಖ ದ್ವಾರ ಪ್ರದೇಶದ ಕಡೆಯಿಂದ ಬರುತ್ತಿದ್ದ ಜಾರುಬಂಡಿಗಳ ಗಂಟೆ ಸದ್ದು ಅವನ ಕಿವಿದೆರೆಯನ್ನು ಮೀಟಿತು.

ಅದು ರೈಲುನಿಲ್ದಾಣದ ಕಡೆಯ ಬಾಗಿಲಾಗಿತ್ತು. 'ಇದೆ ತಾನೆ ಮಾಸ್ಕೊ ಕಡೆಯ ರೈಲು ಬಂದಿರಬೇಕು' ಎಂದವನು ಆಲೋಚಿಸಿದನು. 'ಬಂದವನು ಯಾರಿರಬಹುದು ? ನಿಕೊಲಾಯ್ ಇರಬಹುದೆ ? ಆರೋಗ್ಯ ಸುಧಾರಣೆಗಾಗಿ ಹೊರ ದೇಶಕ್ಕೆ ಹೋಗುವುದಾಗಿ ಹೇಳಿದ್ದ. ಇಲ್ಲಿಗೆ ಮತ್ತೆ ಬರುವುದಾಗಿಯೂ ತಿಳಿಸಿದ್ದ.' ಮೊದ ಮೊದಲು ಲೆವಿನ್‌ನಿಗೆ ಗಾಬರಿಯಾಯಿತು, ವ್ಯಥೆಯಾಯಿತು. ತನ್ನ ಸೋದರನ ಆಗಮನದಿಂದ ವಸಂತೋದಯದ ಆನಂದಕ್ಕೆ ಭಂಗಬರಬಹುದೆಂದು ಅವನು ತಲ್ಲಣಿಸಿದನು. ಆದರೆ ಮರುಕ್ಷಣದಲ್ಲಿಯೇ ಅವನಿಗೆ ನಾಚಿಕೆಯಾಯಿತು. ಒಡನೆಯೇ ತನ್ನ ಆತ್ಮದ ಬಾಹುಗಳನ್ನು ಚಾಚಿದನು ; ಬಂದವನು ತನ್ನಣ್ಣನೆಂದೇ ಊಹಿಸಿಕೊಂಡು, ಅವನಿಗಾಗಿ ಕಾತರತೆಯಿಂದ ಕಾಯುತ್ತಿದ್ದನು. ಅವನು ಕುದುರೆಯನ್ನು ತಟ್ಟಿ, ಚಾಲಿ

ಮರಗಳನ್ನು ದಾಟಿದಾಗ, ಬಾಡಿಗೆಯ ಮುಚ್ಚುದುರೆ ಸಾರೋಟು ಬಂಡಿ ಅವನ ಕಣ್ಣಿಗೆ ಬಿತ್ತು. ಅದು ರೈಲು ನಿಲ್ದಾಣದ ಕಡೆಯಿಂದ ಬರುತ್ತಿತ್ತು; ತುಪ್ಪುಳು ಕೋಟು ಧರಿಸಿದ್ದ ದೊಡ್ಡ ಮನುಷ್ಯನೊಬ್ಬ ಒಳಗೆ ಕುಳಿತಿದ್ದ. ಅವನು ಲೆವಿನ್‌ನ ಸೋದರ ನಾಗಿರಲಿಲ್ಲ. 'ಅವನೇನಾದರೂ ಸಹಾನುಭೂತಿಯುಳ್ಳ ವ್ಯಕ್ತಿಯಾಗಿದ್ದರೆ, ಅವನೊಡನೆ ಒಂದಿಷ್ಟು ಮಾತಾಡಬಹುದು' ಎಂದವನು ಆಲೋಚಿಸಿದನು.

'ಓ!' ಎಂದವನು ಆಬ್ಲಾನ್‌ಸ್ಕಿಯನ್ನು ಗುರುತಿಸಿದ ಕೂಡಲೇ ಹರ್ಷೋದ್ಗಾರ ತೆಗೆದನು. 'ಎಂಥ ಹಿತಕರವಾದ ಆಶ್ಚರ್ಯ! ಪ್ರಿಯ ಮಿತ್ರ. ನಿನ್ನನ್ನು ನೋಡಿ ನನಗೆಷ್ಟು ಆನಂದವಾಗಿದೆ ಗೊತ್ತೆ?' ಈಗವನು ತನ್ನಷ್ಟಕ್ಕೆ ತಾನು ಆಲೋಚಿಸಿಕೊಂಡನು: 'ಅವಳಿಗೆ ಯಾವಾಗ ಮದುವೆಯಾಯಿತು, ಅಥವಾ ಯಾವಾಗ ಆಗಲಿದೆ ಎಂಬ ಸಂಗತಿ ಈಗ ಗೊತ್ತಾಗಲಿದೆ.' ಈ ಸುಂದರ ವಸಂತ ದಿನದಂದು ಅವಳ ನೆನಪಿನಿಂದಾಗಿ ತನಗೇನೂ ನೋವಾಗದೆಂಬುದನ್ನವನು ಅರಿತುಕೊಂಡನು.

'ಅಹ! ನನ್ನ ಬರುವಿಕೆಯ ನಿರೀಕ್ಷೆಯಿರಲಿಲ್ಲ!' ಎಂದು ಆಬ್ಲಾನ್‌ಸ್ಕಿ ಜಾರು ಬಂಡಿಯಿಂದಿಳಿಯುವಾಗ ನುಡಿದನು; ಅವನ ಮೂಗು, ಕೆನ್ನೆ ಮತ್ತು ಹುಬ್ಬುಗಳ ಮೇಲೆ ಕೆಸರಿನ ಕಲೆಗಳಿದ್ದುವು; ಆದರೂ ಅವನ ಮುಖದಲ್ಲಿ ಆರೋಗ್ಯದ ಹಾಗೂ ಸುಖೀ ಜೀವನದ ಚಿಹ್ನೆಗಳು ಹೊಳೆಯುತ್ತಿದ್ದುವು. 'ನಿನ್ನನ್ನು ನೋಡುವುದೇ ನಾನಿಲ್ಲಿಗೆ ಬಂದುದರ ಮೊದಲ ಕಾರಣ' ಎಂದವನು ತನ್ನ ಗೆಳೆಯನನ್ನಪ್ಪಿಕೊಂಡು, ಚುಂಬಿಸಿದನು. ಬೇಟೆಯಾಡಬೇಕೆಂಬುದೇ ಎರಡನೆಯ ಕಾರಣ. ಮೂರನೆಯದಾಗಿ, ಎರ್ಗುಶೋ ವೊದಲ್ಲಿರುವ ಚೌಬೀನೆಯನ್ನು ಮಾರುವ ಸಲುವಾಗಿ ಬಂದಿದ್ದೇನೆ.'

'ಭೇಷ್, ಭೇಷ್! ಎಂಥ ವಸಂತ! ಅದೆಷ್ಟು ಅದ್ಭುತವಾಗಿದೆ! ನೀನು ಜಾರು ಬಂಡಿಯಲ್ಲಿ ಬಂದದ್ದು ಹೇಗೆ?'

'ಸವಾರಿಬಂಡಿಯಲ್ಲಿ ಇನ್ನೂ ಕಷ್ಟವಾಗುತ್ತಿತ್ತು, ಕಾನ್‌ಸ್ಟಂಟಿನ್ ದಿಮಿತ್ರಿಚ್' ಎಂದು ಲೆವಿನ್‌ನಿಗೆ ಗೊತ್ತಿದ್ದ ಚಾಲಕ ನುಡಿದನು.

'ನಿನ್ನ ದರ್ಶನದಿಂದ ನನಗೆ ತುಂಬ ಸಂತೋಷವಾಯಿತು' ಎಂದು ಲೆವಿನ್ ಶಿಶು ಸಹಜವಾದ ಮುಗ್ಧ ಮಂದಹಾಸದಿಂದ ಹಲ್ಲು ಕಿರಿದನು.

ಲೆವಿನ್ ತನ್ನ ಗೆಳೆಯನನ್ನು ಅತಿಥಿ ಮಂದಿರಕ್ಕೆ ಕರೆದೊಯ್ದನು; ಅಲ್ಲಿಗೆ ಅವನ ಸಾಮಾನನ್ನು ತರಿಸಿದನು. ಒಂದು ಕೈಪೆಟ್ಟಿಗೆ, ಬಂದೂಕದ ಒರೆ ಮತ್ತು ಸಿಗರೇಟು ಗಳ ಸಂದೂಕ. ಕೈಕಾಲು ಮುಖ ತೊಳೆದು, ಬಟ್ಟೆ ಬದಲಾಯಿಸುವಂತೆ ಆಬ್ಲಾನ್‌ಸ್ಕಿಗೆ ಹೇಳಿ, ಲೆವಿನ್ ಉಳುಮೆ ಮತ್ತು ಮೇವು ಬೀಜಗಳ ಬಗ್ಗೆ ಮಾತಾಡುವ ಸಲುವಾಗಿ ಕಚೇರಿಗೆ ಹೋದನು. ಮನೆಯ ಗೌರವ ರಕ್ಷಣೆಯ ಬಗ್ಗೆ ಸದಾ ಎಚ್ಚರದಿಂದಿದ್ದ ಅಗಾಫಿಯ ಮಿಖೈಲೋವ್ನ ಭೋಜನ ವ್ಯವಸ್ಥೆಯ ಬಗ್ಗೆ ವಿಚಾರಿಸುವ ಸಲುವಾಗಿ ಅವನನ್ನು ಅಂಗಳದಲ್ಲಿ ಭೇಟಿಮಾಡಿದಳು.

'ನಿನಗಿಷ್ಟವಾದದ್ದನ್ನು ಬಡಿಸು. ಆದರೆ ಅದನ್ನು ಬೇಗ ಅಣಿಗೊಳಿಸು' ಎಂದವನು ಪಾರುಪತ್ಯಗಾರನೊಡನೆ ಮಾತಾಡುವ ಸಲುವಾಗಿ ಆತುರಾತುರವಾಗಿ ಹೋದನು.

ಅವನು ಹಿಂದಿರುಗುವ ಹೊತ್ತಿಗೆ, ಅಬ್ಲಾನ್‌ಸ್ಕಿ ಮಾರ್ಜನ ಕಾರ್ಯ ಮುಗಿಸಿ, ತಲೆ ಬಾಚಿಕೊಂಡು, ಪ್ರದೀಪ್ತ ಮಂದಸ್ಮಿತವದನನಾಗಿ ತನ್ನ ಕೋಣೆಯಿಂದ ಹೊರಗೆ ಬಂದನು. ಇಬ್ಬರೂ ಮಹಡಿಯ ಮೇಲೆ ಹೋದರು.

'ನಾನಿಲ್ಲಿಗೆ ಬಂದದ್ದರಿಂದ ಎಷ್ಟು ಸಂತೋಷವಾಗಿದೆ, ಗೊತ್ತೆ? ಕೊನೆಗೂ ನೀನು ತೊಡಗಿರುವ ರಹಸ್ಯಾತ್ಮಕ ಚಟುವಟಿಕೆಗಳನ್ನರಿಯುವ ಅವಕಾಶ ದೊರೆ ತಂತಾಗಿದೆ. ನಿನ್ನ ಭಾಗ್ಯವೇ ಭಾಗ್ಯ. ಅಂಥ ಅದೃಷ್ಟ ನನಗಿಲ್ಲ. ಎಂಥ ಸೊಗಸಾದ ಭವನ! ಎಲ್ಲವೂ ಎಷ್ಟು ಮನೋಹರವಾಗಿವೆ! ಎಲ್ಲೆಲ್ಲಿಯೂ ಉಲ್ಲಾಸ ತೇಜಸ್ಸುಗಳು ತುಂಬಿ ತುಳುಕುತ್ತಿವೆ!' ಎಂದು ನುಡಿಯುವಾಗ, ಅಬ್ಲಾನ್‌ಸ್ಕಿ ವಸಂತ ಸ್ಥಿರವಲ್ಲ, ಎಲ್ಲ ದಿನಗಳೂ ಆ ದಿನದಂತೆ ಪ್ರಕಾಶಮಾನವಾಗಿರುವುದಿಲ್ಲ ಎಂಬುದನ್ನು ಮರೆತನು.

'ನಿನ್ನ ಮುದಿ ದಾದಿ ಎಂಥ ಆಕರ್ಷಕ ವ್ಯಕ್ತಿ! ಗಂಜಿಹಾಕಿದ ಮುಂಗವಚವನ್ನು ತೊಟ್ಟ ಹರೆಯದ ಸುಂದರ ಸೇವಿಕೆಯೊಬ್ಬಳಿದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು! ಆದರೆ ಕಠಿನ ವ್ರತದ ನಿನ್ನ ಸನ್ಯಾಸಿ ಜೀವನಕ್ಕೆ ಅಂಥವಳಿರುವುದೂ ಲೇಸೇ.'

ಅಬ್ಲಾನ್‌ಸ್ಕಿ ಅನೇಕ ಸ್ವಾರಸ್ಯ ವಾರ್ತೆಗಳನ್ನವನಿಗೆ ವಿವರಿಸಿದನು. ಆ ಬೇಸಗೆ ಯಲ್ಲಿ ಹಳ್ಳಿಗೆ ಭೇಟಿ ಕೊಡಲು ಉದ್ದೇಶಿಸಿದ್ದ ತನ್ನ ಮತ್ತೊಬ್ಬ ಸೋದರ ಕೊಜ್ನಿಶೆವ್‌ನ ವಿಷಯ ಲೆವಿನ್‌ನಿಗೆ ಸ್ವಾರಸ್ಯವಾಗಿ ಕಂಡಿತು.

ಕಿಟ್ಟಿ ಅಥವಾ ಶರ್‌ಬತ್‌ಸ್ಕಿಯರ ಬಗ್ಗೆ ಅವನು ಒಂದು ಮಾತೂ ಎತ್ತಲಿಲ್ಲ; ತನ್ನ ಮಡದಿಯ ಶುಭಾಶಯಗಳನ್ನಷ್ಟೆ ತಿಳಿಸಿದನು. ಲೆವಿನ್ ಅವನ ಜಾಣತನವನ್ನು ಮೆಚ್ಚಿದನು. ಸಹಜವಾಗಿಯೇ ಅವನ ಏಕಾಂತ ಜೀವನ ಆಲೋಚನಾಭಾವಗಳ ಒದಗೆಯಾಗಿತ್ತಷ್ಟೆ. ಆದರೆ ತನ್ನ ಸುತ್ತಮುತ್ತಣವರಿಗೆ ಅವುಗಳನ್ನು ಮುಟ್ಟಿಸುವಂತಿರ ಲಿಲ್ಲ; ವಸಂತಋತುವಿನಲ್ಲಿ ತಾನನುಭವಿಸಿದ ಕಾವ್ಯಾನಂದದ ಧಾರೆಯನ್ನು ಅವನೀಗ ಅಬ್ಲಾನ್‌ಸ್ಕಿಯ ಮುಂದೆ ಹರಿಸಿದನು; ಬೇಸಾಯದಲ್ಲಿ ತನಗೊದಗಿದ ನಿರಾಶೆಗಳನ್ನೂ, ತಾನು ರೂಪಿಸಿಕೊಂಡಿದ್ದ ಯೋಜನೆಗಳನ್ನೂ ಅವನು ವಿವರಿಸಿದನು; ತನ್ನ ವ್ಯಾಸಂಗ ದಿಂದುದ್ಭವಿಸಿದ ಆಲೋಚನೆಗಳನ್ನೂ ಅಭಿಪ್ರಾಯಗಳನ್ನೂ ನಿರೂಪಿಸಿದನು; ಎಲ್ಲಕ್ಕಿಂತ ಮಿಗಿಲಾಗಿ, ತಾನು ಬರೆಯುತ್ತಿದ್ದ ಕೃತಿಯ ಬಗ್ಗೆ ವಿವರಣೆ ನೀಡಿದನು; ಅದರ ಮೂಲ ಸ್ವರೂಪ ಅವನಿಗರಿವಾಗದಿದ್ದರೂ, ಆ ವರೆಗೆ ವ್ಯವಸಾಯದ ಬಗ್ಗೆ ಬಂದಿದ್ದ ಎಲ್ಲ ಕೃತಿಗಳ ವಿಮರ್ಶೆ ವಿಚಾರಗಳ ಸಮುದಾಯವನ್ನದು ಪ್ರತಿನಿಧಿಸುವಂತಿತ್ತು. ಯಾವಾಗಲೂ ಮೋಹಕವ್ಯಕ್ತಿಯಾಗಿದ್ದ, ಕೇವಲ ಸೂಚನೆಯಿಂದಲೇ ಇಡೀ ಭಾವನೆ ಯನ್ನು ಗ್ರಹಿಸಿಕೊಳ್ಳುವ ಸಾಮರ್ಥ್ಯವಿದ್ದ ಅಬ್ಲಾನ್‌ಸ್ಕಿ ಈಗಂತು ವಿಶೇಷ ಆಕರ್ಷ ಣೀಯವಾಗಿ ತೋರಿದನು. ತನ್ನ ಬಗೆಗಿನ ಅವನ ಗೌರವ ಪ್ರಶಂಸೆಯ ರೂಪದಲ್ಲಿ ಅಭಿವ್ಯಕ್ತಗೊಂಡಿದ್ದುದನ್ನೂ, ತನ್ನ ಬಗ್ಗೆ ಅವನ ಸ್ನಿಗ್ಧ ಪ್ರೀತಿ ಅಧಿಕಗೊಂಡಿದ್ದುದನ್ನೂ ಲೆವಿನ್ ಗುರುತಿಸಿದನು.

ವಿಶೇಷ ಭೋಜನವನ್ನಣಿಗೊಳಿಸುವಲ್ಲಿ ಅಗಫಿಯಾ ಮಿಖಾಯಲ್‌ಓವ್ನ ಮತ್ತು ಅಡುಗೆಯವ ಸಾಕಷ್ಟು ತೊಂದರೆ ತೆಗೆದುಕೊಂಡಿದ್ದರು. ಆದರೆ ಹಸಿದಿದ್ದ ಆ ಇಬ್ಬರು ಗೆಳೆಯರು ರೊಟ್ಟಿ ಬೆಣ್ಣೆ, ಮೀನು ಅಣಬೆಗಳನ್ನು ಮೊದಲ ಹಂತದಲ್ಲಿಯೇ ಗಬಗಬನೆ

ತಿಂದರು. ಮಾಂಸದ ಕರ್ಜಿಕಾಯಿಯನ್ನು ಬಿಟ್ಟು ಮಾಂಸದ ಸಾರನ್ನು ಬಡಿಸುವಂತೆ ಲೆವಿನ್ ಆಜ್ಞಾಪಿಸಿದಾಗ, ಕರ್ಜಿಕಾಯಿಯ ತಯಾರಿಕೆಯಲ್ಲಿ ವಿಶೇಷ ಶ್ರಮವಹಿಸಿದ್ದ ಮತ್ತು ಪ್ರಾವೀಣ್ಯವನ್ನು ಮೆರೆದಿದ್ದ ಅಡುಗೆಯವನಿಗೆ ತುಸು ನಿರಾಸೆಯೇ ಆಯಿತು. ಏಕೆಂದರೆ ಕರ್ಜಿಕಾಯಿಯನ್ನು ಸಾರಿನ ಜತೆಯಲ್ಲಿ ಬಳಸಬೇಕಾಗಿತ್ತೆಂಬುದು ಅವನ ಅಭೀಷ್ಟವಾಗಿತ್ತು. ಆದರೆ ಭೋಜನ ರಸಿಕನಾದ ಅಬ್ಲಾನ್‌ಸ್ಕಿಗೂ ಆ ಭೋಜನ ಅತ್ಯುತ್ಕೃಷ್ಟವಾಗಿ ತೋರಿತು; ಸುವಾಸನೆಗಾಗಿ ಗಿಡಮೂಲಿಕೆಗಳನ್ನದ್ದಿದ ಮೋದ್ಕ, ಮನೆಯಲ್ಲಿ ಮಾಡಿದ ರೊಟ್ಟಿ ಮತ್ತು ಬೆಣ್ಣೆ, ಉಪ್ಪುವಿಸಾನು, ಅಣಬೆ, ಮಾಂಸದ ಸಾರು, ಬಿಳಿಯ ಗೊಜ್ಜಿನಲ್ಲದ್ದಿದ ಕೋಳಿಮಾಂಸ, ಬಿಳಿಯ ಕ್ರಿಮಿಯನ್ ವೈನು–ಪ್ರತಿಯೊಂದೂ ಪರಿಪೂರ್ಣವಾಗಿತ್ತು, ದಿವ್ಯವಾಗಿತ್ತು.

'ಎಲ್ಲ ಭರ್ಜರಿಯಾಗಿದೆ ಭೇಷಕ್ಕಾಗಿದೆ!' ಎಂದವನು ಕೋಳಿ ಮುಗಿದ ತರುವಾಯ ದಪ್ಪನೆಯ ಸಿಗರೇಟ್ ಒಂದನ್ನು ಹಚ್ಚಿಕೊಳ್ಳುತ್ತ ನುಡಿದನು. 'ಪ್ರಕ್ಷುಬ್ಧ ಸಾಗರದ ಎಸೆತದಿಂದಾಗಿ ಪ್ರಶಾಂತವಾದ ದಡವನ್ನು ಸೇರಿದಂತಾಗಿದೆ. ಕಾರ್ಮಿಕನ ಸ್ಥಿತಿಗತಿಗಳನ್ನು ಅಧ್ಯಯನ ಮಾಡಬೇಕೆಂದೂ, ಕೃಷಿವಿಧಾನಗಳ ಆಯ್ಕೆಯಲ್ಲಿ ಅದು ಪ್ರಭಾವ ಬೀರಬೇಕೆಂದೂ ನೀನು ಹೇಳುತ್ತಿದ್ದೆ ನನಗವುಗಳ ವಿಷಯ ಗೊತ್ತಿಲ್ಲ. ಆದರೆ ಈ ತತ್ತ್ವ ಮತ್ತು ಅದರ ಅನುಷ್ಠಾನ ಕಾರ್ಮಿಕನ ಮೇಲೆಯೂ ಪ್ರಭಾವ ಬೀರುತ್ತವೆಂದು ನನಗೆ ತೋರುತ್ತದೆ.'

'ಅಹ, ತುಸು ತಡೆಯಿರಿ: ನಾನು ರಾಜಕೀಯಾರ್ಥಿಕ ತತ್ತ್ವವನ್ನು ಕುರಿತು ಮಾತಾಡುತ್ತಿಲ್ಲ; ಕೃಷಿ ವಿಜ್ಞಾನದ ಬಗ್ಗೆ ಮಾತಾಡುತ್ತಿದ್ದೇನೆ. ಪ್ರಾಕೃತಿಕ ವಿಜ್ಞಾನಗಳಂತೆ ಅದು ಕಾರ್ಮಿಕನ ಆರ್ಥಿಕ ಮತ್ತು ಜಾನಾಂಗಿಕ ವಿಚಾರಗಳು ಸೇರಿದಂತೆ ಅನೇಕ ನೈಸರ್ಗಿಕ ಘಟನೆಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.'

ಅದೇತಾನೆ ಅಗಫಿಯಾ ಮಿಖಾಯ್‌ಲೋವ್ನ ಹಣ್ಣು ಪಾಕದ ಪಾತ್ರೆಯೊಡನೆ ಒಳಗೆ ಬಂದಳು.

'ಅಹ, ಅಗಫಿಯಾ ಮಿಖಾಯ್‌ಲೋವ್ನ, ಎಂಥ ಉಪ್ಪುವಿಸಾನು! ಎಂಥ ಮೋದ್ಕ!' ಎಂದು ಅಬ್ಲಾನ್‌ಸ್ಕಿ ತನ್ನ ದುಂಡನೆಯ ಬೆರಳುಗಳನ್ನು ಚುಂಬಿಸುತ್ತ ನುಡಿದನು. 'ಅದಿರಲಿ, ಹೊತ್ತಾಗಲಿಲ್ಲವೆ, ಕಾಸ್ತ್ಯ?' ಎಂದವನು ಪ್ರಶ್ನಿಸಿದನು.

ಕಿಟಕಿಯಾಚೆ ಸೂರ್ಯನ ಕಡೆಗೆ ಲೆವಿನ್ ಕಣ್ಣು ಹೊರಳಿಸಿದನು. ಕಾಡುಗಳ ಬೆತ್ತಲೆಯ ಮರದುದಿಗಳ ಹಿಂದುಗಡೆ ಅವನು ಮುಳುಗುತ್ತಿದ್ದನು.

'ಹೊತ್ತಾಯ್ತು ಕುಜ್ಮ, ಬೋನು ಬಲೆಗಳನ್ನು ತಾ' ಎಂದು ಲೆವಿನ್ ಮಹಡಿಯಿಂದ ದಡದಡನೆ ಇಳಿದನು.

ತನ್ನ ಕೋಣೆಗೆ ಹೋದ ತರುವಾಯ ಅಬ್ಲಾನ್‌ಸ್ಕಿ ಜಾಗರೂಕತೆಯಿಂದ ಮೆರುಗು ಕೊಟ್ಟ ಕೋವಿ ಪೆಟ್ಟಿಗೆಯ ನಾರಿನ ಬಟ್ಟೆಯ ಹೊದಿಕೆಯನ್ನು ಬಿಚ್ಚಿದನು; ಅತ್ಯಾಧುನಿಕ ವಿನ್ಯಾಸದ ಬಹು ಬೆಲೆಯ ಕೋವಿಯನ್ನು ಜೋಡಿಸತೊಡಗಿದನು. ದೊಡ್ಡ ಬಕ್ಷೀಸಿನ ವಾಸನೆ ಹಿಡಿದ ಕುಜ್ಮ ಅಬ್ಲಾನ್‌ಸ್ಕಿಯ ಪಕ್ಕದಿಂದಲುಗಲಿಲ್ಲ; ಅಷ್ಟು ಮಾತ್ರವಲ್ಲ, ಕಾಲ್ಚೀಲ ಬೂಟುಗಳನ್ನು ಅಬ್ಲಾನ್‌ಸ್ಕಿಗೆ ತೋರಿಸಿದನು; ಅಬ್ಲಾನ್‌ಸ್ಕಿ ಸಂತೋಷದಿಂದ ಅವನ ಸೇವೆಯನ್ನು ಮನ್ನಿಸಿದನು.

'ಕಾಸ್ತ್ರ್ಯ, ರ್‍ಯಾಬಿನಿನ್ ವರ್ತಕ ಬಂದದ್ದಾದರೆ–ಈ ಸಂಜೆ ಬರುವಂತೆ ಅವನಿಗೆ ತಿಳಿಸಿದ್ದೆ–ಅವನನ್ನು ಒಳಗೆ ಕೂರಿಸಿ, ನನಗಾಗಿ ಕಾಯುವಂತೆ ಅವನಿಗೆ ತಿಳಿಸಬೇಕೆಂದು ಇಲ್ಲಿರುವವರಿಗೆ ಹೇಳು.'

'ನೀನು ರ್‍ಯಾಬಿನಿನ್‌ಗೆ ತೋಗದ ಮರ ಮಾರುತ್ತೀಯೇನು?' ಎಂದು ಲೆವಿನ್ ಕೇಳಿದನು.

'ಹೌದು. ಏಕೆ? ನಿನಗವನು ಗೊತ್ತೇನು?'

'ಓ, ಹೌದು. ನಾನು ಸಹ ಅವನೊಡನೆಯು "ವ್ಯವಹಾರಗಳನ್ನು ತೃಪ್ತಿಕರ ವಾಗಿ ಪೂರ್ಣ"ಗೊಳಿಸಿದ್ದೇನೆ.'

'ವರ್ತಕನ ಅಚ್ಚುಮೆಚ್ಚಿನ ಹಳಸಲು ನುಡಿಗಳನ್ನು ನೆನೆದು ಆಬ್ಲಾನ್‌ಸ್ಕಿ ನಕ್ಕನು.

'ಅವನು ವಿಷಯಗಳನ್ನು ಮಂಡಿಸುವ ವಿಧಾನ ತಮಾಷೆಯಾಗಿದೆ. ಅಗೋ ನೋಡು, ತನ್ನ ದಣಿ ಎಲ್ಲಿಗೆ ಹೋಗುತ್ತಾನೆಂಬುದು ಅದಕ್ಕೆ ಗೊತ್ತಿದೆ' ಎಂದವನು ಲಾಸ್ಕಳ ತುಪ್ಪುಳನ್ನು ಹಿಡಿದೆಳೆದು, ನುಡಿದನು. ನಾಯಿ ಕುಂಯ್ಗುಡುತ್ತ, ಲೆವಿನ್‌ನ ಕೈ ಬೂಟು ಕೋವಿಗಳನ್ನು ನೆಕ್ಕುತ್ತ ಅವನನ್ನು ಬಳಸುತ್ತಿತ್ತು.

ಅವರು ಹೊರಗೆ ಬರುವ ಹೊತ್ತಿಗೆ ಬೋನುಬಂಡಿ ಮುಖಮಂಟಪದಲ್ಲಿ ನಿಂತಿತ್ತು.

'ಬೋನು ತರುವಂತೆ ನಾನೇ ಹೇಳಿಕಳಿಸಿದ್ದೆ. ಆದರೆ ನಾವು ದೂರ ಹೋಗು ತ್ತಿಲ್ಲ; ಪ್ರಾಯಶಃ ನಡೆದು ಹೋಗುವ ಇಚ್ಛೆ ಇರಬೇಕಲ್ಲವೆ ನಿನಗೆ?'

'ಇಲ್ಲ, ಇಲ್ಲ. ಬಂಡಿಯಲ್ಲಿಯೇ ಹೋಗೋಣ' ಎಂದು ಆಬ್ಲಾನ್‌ಸ್ಕಿ ನುಡಿದನು. ಅವನು ಒಳಗೆ ಪ್ರವೇಶಿಸಿ, ಹುಲಿಯ ಚರ್ಮದ ರಗ್ಗನ್ನು ತನ್ನ ಕಾಲುಗಳಿಗೆ ಹೊದಿಸಿ, ಸಿಗರೇಟು ಹಚ್ಚಿದನು. 'ನೀನು ಸಿಗರೇಟು ಸೇದುವುದಿಲ್ಲವಲ್ಲ, ಹೇಗೆ? ಸಿಗರೇಟೊಂದು ಭೋಗವಸ್ತುವೆಂದು ಹೇಳಲಾರೆ. ಆದರೂ ಅದು ಸುಖಸಂತೋಷಗಳ ಕಿರೀಟವೆಂದು, ಬಾಹ್ಯ ಮುದ್ರೆಯೆಂದು ನಿಸ್ಸಂಕೋಚವಾಗಿ ಹೇಳಬಲ್ಲೆ. ಆಹ! ಬಾಳೆಂದರೆ ಇದು! ಇದೊಂದು ಅದ್ಭುತ! ನಾನು ಬದುಕಬೇಕೆಂದಿರುವುದೇ ಹೀಗೆ!'

'ಸರಿ, ಸರಿ. ನಿನ್ನನ್ನು ಯಾರು ತಡೆಯುತ್ತಾರೆ?' ಎಂದು ಲೆವಿನ್ ಮುಗುಳು ನಗೆ ಬೀರಿದನು.

'ಓ, ನೀನೇ ಅದೃಷ್ಟಶಾಲಿ! ನಿನ್ನ ಮನ ಬಯಸುವುದೆಲ್ಲ ನಿನ್ನಲ್ಲಿದೆ; ನಿನಗೆ ಅಶ್ವಗಳೆಂದರೆ ತುಂಬ ಇಷ್ಟ—ಅವು ನಿನ್ನಲ್ಲಿವೆ; ನಿನಗೆ ನಾಯಿಗಳೆಂದರೆ ಅಚ್ಚುಮೆಚ್ಚು ಅವೂ ನಿನ್ನಲ್ಲಿವೆ; ನಿನಗೆ ಬೇಟೆ ಬೇಕು—ಇಚ್ಛಿಸಿದಾಗ ಅದೂ ಸಿಗುತ್ತದೆ; ನಿನಗೆ ಕೃಷಿಯೆಂದರೆ ಪ್ರಾಣ—ಅದೂ ಇದೆ.'

'ಇದ್ದದ್ದರಲ್ಲಿ ತೃಪ್ತಿಹೊಂದುವುದೇ ಅಷ್ಟಕ್ಕೆಲ್ಲ ಕಾರಣ; ಇಲ್ಲದ್ದಕ್ಕಾಗಿ ನಾನೆಂದೂ ಕುದಿಯುವವನಲ್ಲ' ಎಂದು ಲೆವಿನ್ ಕಿಟ್ಟಿಯನ್ನು ಸ್ಮರಿಸಿಕೊಳ್ಳುತ್ತ ನುಡಿದನು.

ಆಬ್ಲಾನ್‌ಸ್ಕಿಗರ್ಥವಾಯಿತು; ಅವನ ಕಡೆಗೊಮ್ಮೆ ನೋಡಿದನು; ತುಟಿ ಪಿಟಿಕ್ಕೆನ್ನಲಿಲ್ಲ.

ಶೆರ್‌ಬತ್‌ಸ್ಕಿಯರ ಸಂಬಂಧದ ಮಾತುಕತೆ ಲೆವಿನ್‌ಗೆ ಹಿಡಿಸುವುದಿಲ್ಲವೆಂಬುದನ್ನು ಅಬ್ಲಾನ್‌ಸ್ಕಿ ಅರಿತನು. ಆದ್ದರಿಂದವನು ಆ ವಿಷಯವನ್ನು ತೇಲಿಸಿದನು. ಅಬ್ಲಾನ್‌ಸ್ಕಿಯ ಜಾಣ್ಮೆಯನ್ನು ಲೆವಿನ್ ಮೆಚ್ಚಿಕೊಂಡನು. ತನ್ನ ಮನಸ್ಸನ್ನು ಕೊರೆಯುತ್ತಿದ್ದ ಪ್ರಶ್ನೆಗೆ ಉತ್ತರ ಪಡೆಯಲು ಅವನು ತವಕಿಸುತ್ತಿದ್ದನು. ಆದರೆ ಆ ಪ್ರಶ್ನೆಯನ್ನು ಹಾಕುವ ಧೈರ್ಯ ಅವನಿಗಿರಲಿಲ್ಲ.

ಸ್ವಂತ ವ್ಯವಹಾರಗಳಲ್ಲಿಯೇ ಮಗ್ನನಾಗಿದ್ದ ಲೆವಿನ್ ಮನನೊಂದು 'ನಿನ್ನ ವ್ಯವಹಾರ ಹೇಗೆ ನಡೆಯುತ್ತಿದೆ?' ಎಂದು ಪ್ರಶ್ನಿಸಿದನು.

ಅಬ್ಲಾನ್‌ಸ್ಕಿಯ ಕಣ್ಣು ಉಲ್ಲಾಸದಿಂದ ಮಿನುಗುಟ್ಟಿದುವು.

'ಭೂರಿ ಭೋಜನವನ್ನು ಮುಗಿಸಿದ ನಂತರವೂ ಬನ್ನನ್ನಪೇಕ್ಷಿಸುವ ಜನರಿದ್ದಾರೆನ್ನುವ ಸಾಧ್ಯತೆಯನ್ನು ನೀನು ಒಪ್ಪಲಾರೆ. ನಿನ್ನ ಪ್ರಕಾರ ಅದೊಂದು ಅಪರಾಧ. ಆದರೆ ಪ್ರೇಮವಿಲ್ಲದ ಬದುಕಿನ ಕಲ್ಪನೆಯೇ ನನಗೆ ಸಗ್ಗದು' ಎಂದವನು ಲೆವಿನ್‌ನ ಪ್ರಶ್ನೆಯನ್ನು ತನಗೆ ತೋಚಿದಂತೆ ಅರ್ಥಮಾಡಿಕೊಂಡು ನುಡಿದನು. 'ಏನುತಾನೆ ಮಾಡಲಾದೀತು? ನನ್ನ ಬದುಕಿನ ರೀತಿಯೇ ಹಾಗೆ. ನೀನು ಅದೇ ದಾರಿಯಲ್ಲಿ ಮುಂದುವರಿದಾಗ, ಯಾರಿಗೂ ಅಪಾಯವೊದಗುವುದಿಲ್ಲ; ಅದರಿಂದ ನನಗೆ ಅಪಾರ ಸಂತೋಷವಾಗುತ್ತದೆ.'

'ಹಾಗಾದರೆ ನಿನಗೆ ಬೇರೊಬ್ಬರಿದ್ದಾರೇನು?'

'ನಿಜಕ್ಕೂ ಇದ್ದಾರಯ್ಯ, ರಾಜ! ಅಸಿಯನ್ ಮಾದರಿಯ ಹೆಂಗಸರು ನಿನಗೆ ಗೊತ್ತಿರಬೇಕಲ್ಲವೆ?....ಕನಸಿನಲ್ಲಿ ಕಾಣುವಂಥ ಹೆಂಗಸರು....ಇಂಥ ಹೆಂಗಸರನ್ನು ಕೆಲವೊಮ್ಮೆ ವಾಸ್ತವ ಪ್ರಪಂಚದಲ್ಲಿಯೂ ಸಂಧಿಸುತ್ತೇವೆ....ಈ ಹೆಂಗಸರು ಮಹಾ ಪ್ರಲಯಾಂತಕರು! ಒಟ್ಟಿನ ಮೇಲೆ ಹೆಂಗಸರನ್ನು ತಿಳಿಯಲು ಪ್ರಯತ್ನಿಸಿದಷ್ಟೂ, ಅವರು ಹೊಚ್ಚ ಹೊಸದಾಗಿ ಕಾಣುತ್ತಾರೆ.'

'ಹಾಗಾದರೆ, ಅವರನ್ನು ತಿಳಿಯಲು ಪ್ರಯತ್ನಿಸದಿರುವುದೇ ಮೇಲು.'

'ಓ, ಇಲ್ಲ. ಸತ್ಯ ಸಾಕ್ಷಾತ್ಕಾರಕ್ಕಿಂತ ಸತ್ಯಾನ್ವೇಷಣೆಯಲ್ಲಿ ಹೆಚ್ಚು ಆನಂದವಿದೆಯೆಂದೊಬ್ಬ ಗಣಿತ ವಿಜ್ಞಾನಿ ಒಮ್ಮೆ ಹೇಳಿದ್ದುಂಟು.'

ಮೌನಿಯಾಗಿಯೇ ಲೆವಿನ್ ಆಲಿಸಿದನು; ಎಷ್ಟು ಪ್ರಯತ್ನಿಸಿದರೂ ಅವನು ತನ್ನ ಗೆಳೆಯನ ಅಭಿಪ್ರಾಯವನ್ನು ಗ್ರಹಿಸಲಶಕ್ತನಾದನು; ಆ ಬಗೆಯ ಹೆಂಗಸರ ಅಧ್ಯಯನದಲ್ಲಿ ಅವನನುಭವಿಸುತ್ತಿದ್ದ ಸುಖವನ್ನಾಗಲೀ ಭಾವನೆಗಳನ್ನಾಗಲೀ ಲೆವಿನ್ ಅರ್ಥೈಸಿಕೊಳ್ಳಲು ಸಾಧ್ಯವಾಗಲಿಲ್ಲ.

೧೫

ಅವರು ಬೇಟೆಗೆ ಆರಿಸಿಕೊಂಡ ಜಾಗ ನದೀತಟದ ಮೇಲಣ ದೇವದಾರು ವೃಕ್ಷಗಳ ಕಾನನ. ಆ ಕಾನನ ಸಮೀಪಿಸಿದಾಗ ಲೆವಿನ್ ವಾಹನದಿಂದಿಳಿದು, ಮಂಜು ಕರಗಿದ ಜೌಗುದಾರಿಯ ಅಂಚಿಗೆ ಅಬ್ಲಾನ್‌ಸ್ಕಿಯನ್ನು ಕರೆದೊಯ್ದನು. ಅವನು ಅದರ ಎದುರು ತುದಿಯಲ್ಲಿ, ಅವಳಿ ಭೂರ್ಜವೃಕ್ಷದ ಕೆಳಗೆ ನಿಂತುಕೊಂಡನು. ಅವನು ಒಣಗಿದ ಕಾಲು

ಕೀಳ್ಗೊಂಬೆಗೆ ತನ್ನ ಬಂದೂಕವನ್ನೊರಗಿಸಿ, ಕೋಟನ್ನು ತೆಗೆದು, ಸೊಂಟ ಪಟ್ಟಿಯನ್ನು ಬಿಗಿಗೊಳಿಸಿ, ಮಾಂಸಖಂಡಗಳನ್ನು ಸಡಿಲಿಸುವ ಸಲುವಾಗಿ ತೋಳುಗಳನ್ನು ಚಾಚಿದನು.

ಅವರನ್ನು ಹಿಂಬಾಲಿಸಿದ್ದ ಬೂದುಬಣ್ಣದ ಮುದಿ ಲಾಸ್ಕ ಅವನೆದುರಿಗೆ ಕುಳಿತುಕೊಂಡು, ತನ್ನ ಕಿವಿಗಳನ್ನು ನಿಮಿರಿಸಿತು. ಅರಣ್ಯದ ಹಿಂಬದಿಯಲ್ಲಿ ಸೂರ್ಯ ಅಸ್ತಮಿಸುತ್ತಿದ್ದನು. ದೇವದಾರು ವೃಕ್ಷಗಳ ನಡುವೆ ಚೆದರಿಹೋಗಿದ್ದ, ಅದೆ ತಾನೆ ಬಿರಿಯಲಿದ್ದ ಮೊಗ್ಗುಗಳಿಂದ ತುಂಬಿ, ತೊಂಗುತ್ತಿದ್ದ ಕೊಂಬೆಗಳಿಂದಾಗಿ ಭೂರ್ಜವೃಕ್ಷಗಳು ಆಬೈಗು ಬೆಳಕಿನಲ್ಲೆದ್ದು ಕಾಣುತ್ತಿದ್ದುವು.

ಮರಗಳ ನಡುವೆ ಸೊಟ್ಟಸೊಟ್ಟಾಗಿ, ಸುತ್ತುಬಳಸಿನ ದಾರಿಯಲ್ಲಿ ಹರಿಯುತ್ತಿದ್ದ ವಸಂತ ಪ್ರವಾಹದ ಮೆಲ್ದನಿ ಮಂಜು ತೇಪೆಗಳಿಂದ ರಂಜಿತವಾದ ದಟ್ಟಕಾಡಿನ ಕಡೆಯಿಂದ ಬರುತ್ತಿತ್ತು. ಸಣ್ಣ ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿದ್ದುವು, ಆಗಿಂದಾಗ್ಗೆ ಮರದಿಂದ ಮರಕ್ಕೆ ಹಾರಾಡುತ್ತಿದ್ದುವು.

ನಡುನಡುವೆ ಶಿಲಾಮೌನ ಆವರಿಸಿಕೊಂಡಾಗ, ದ್ರವೀಕರಣಗೊಂಡ ನೆಲದಿಂದ ಹಾಗೂ ಬೆಳೆಯುತ್ತಿದ್ದ ಹುಲ್ಲಿನಿಂದ ಅಲುಗಾಡುತ್ತಿದ್ದ ಗತವರ್ಷದ ಪರ್ಣಗಳ ಶಬ್ದ ಕಿವಿಯ ಮೇಲೆ ಬೀಳುತ್ತಿತ್ತು.

'ಕಲ್ಪನೆಯ ಹಕ್ಕಿಹಾರಿದರೆ ಸಾಕು, ಹುಲ್ಲು ಬೆಳೆಯುವುದನ್ನು ನೋಡುವೆ, ಅದು ಬೆಳೆಯುವ ಶಬ್ದವನ್ನು ಕೇಳುವೆ' ಎಂದು ಲೆವಿನ್ ಎಳೆಗರುಕೆಯೆಸಳಿನ ಬಳಿ ಬಿದ್ದಿದ್ದ, ಬೂದು ಬಣ್ಣದ ತೇವದ ದೇವದಾರು ಎಲೆಯ ಚಲನೆಯನ್ನು ಗಮನಿಸುತ್ತ, ತನ್ನಷ್ಟಕ್ಕೆ ತಾನು ಹೇಳಿಕೊಂಡನು. ಅವನು ನಿಸರ್ಗವ್ಯಾಪಾರಗಳ ಕಡೆಗೆ ಕಿವಿಯಾಗಿ ನಿಂತನು; ಒಮ್ಮೆ ಒದ್ದೆ ಮುದ್ದೆಯಾದ ಜವುಗುನೆಲದ ಕಡೆಗೆ, ಮತ್ತೊಮ್ಮೆ ಮೈಯೆಲ್ಲ ಕಿವಿಯಾಗಿದ್ದ ಲಾಸ್ಕ ಕಡೆಗೆ, ಮಗದೊಮ್ಮೆ ಇಳಿಜಾರಿನಲ್ಲಿ ಚಾಚಿಕೊಂಡಿದ್ದ ಬೆತ್ತಲೆ ಮರದುದಿಗಳ ಕಡಲಿನ ಕಡೆಗೆ, ಕಡೆಗೊಮ್ಮೆ ನೀಲಾಕಾಶದಲ್ಲಿ ತೇಲುತ್ತಿದ್ದ ಮೇಘಗಳ ಶ್ವೇತರೇಖೆಗಳ ಕಡೆಗೆ ನಿಟ್ಟಿಸುತ್ತಿದ್ದನು. ಗಿಡುಗನೊಂದು ನಿದಾನವಾಗಿ ರೆಕ್ಕೆ ಬಡಿಯುತ್ತ, ದೂರದ ಬಹುದೂರದ ಅರಣ್ಯ ಶ್ರೇಣಿಯ ಮೇಲೆ ಎತ್ತರದಲ್ಲಿ ಹಾರಿ ಹೋಯಿತು; ಮತ್ತೊಂದು ಅಷ್ಟೇ ನಿದಾನವಾಗಿ, ಅದೇ ದಿಕ್ಕಿನಲ್ಲಿ ಮೇಲೆ ಮೇಲೆ ಹಾರುತ್ತ, ದೃಷ್ಟಿಯಿಂದ ಮರೆಯಾಯಿತು. ಬರಬರುತ್ತ ಕಾನನದ ಪಕ್ಷಿಕೂಜನ ಉತ್ತಾಲವಾಯಿತು, ಕಾತರಮಯವಾಯಿತು. ಅನತಿದೂರದಲ್ಲಿ ಗೂಬೆಯೊಂದು ಘೂಕರಿಸಿತು. ಲಾಸ್ಕ ಮೇಲೆದ್ದು, ಎಚ್ಚರಿಕೆಯಿಂದ ಕೆಲವು ಹೆಜ್ಜೆಗಳನ್ನು ಮುಂದಿಟ್ಟು, ಶಬ್ದ ಕೇಳಿಸಿಕೊಳ್ಳುವ ಸಲುವಾಗಿ ನಿಂತಿತು, ಅದರ ತಲೆ ಒಂದು ಕಡೆಗೆ ಉರುಗಿತ್ತು. ನದಿಯ ಮೇಲಿಂದ ಕೋಗಿಲೆಯ ದನಿ ತೇಲಿ ಬರುತ್ತಿತ್ತು. ವಾಡಿಕೆಯಂತೆ ಎರಡು ಸಾರಿ ಅದು ಕುಹೂಗರೆಯಿತು, ಅನಂತರ ಅದರ ದನಿ ಒರಟಾಯಿತು, ಉದ್ರೇಕಕ್ಕೊಳಗಾಯಿತು; ಅದರ ಸ್ವರಗಳು ಬೆರಕೆಗೊಂಡುವು.

'ಇದೀಗ ಮನಸ್ಸಿನಲ್ಲಿ ಚಿತ್ರಿಸಿಕೊ! ಕೋಗಿಲೆ ಎಷ್ಟು ಬೇಗ!' ಎಂದು ಆಬ್ಲಾನ್‌ಸ್ಕಿ ಪೊದೆಯ ಮರೆಯಿಂದ ಹೊರಗೆ ಬರುತ್ತ ನುಡಿದನು.

‘ಹೌದು. ನಾನೂ ಕೇಳಿಸಿಕೊಂಡೆ’ ಎಂದು ಲೆವಿನ್ ತನಗೆಯೇ ಹಿಡಿಸದ ತನ್ನ ಧ್ವನಿಯಿಂದ ಅರಣ್ಯ ಶಾಂತಿಯನ್ನು ಕದಡಲಿಷ್ಟವಿಲ್ಲದೆ ಉತ್ತರಿಸಿದನು. ‘ಹೆಚ್ಚುಕಡಮೆ ಇದೀಗ ಸಮಯವಾಯಿತು.’

ಆಬ್ಲಾನ್‌ಸ್ಕಿ ಪೊದೆಯ ಹಿಂದೆ ಮರೆಯಾದನು. ಬೆಂಕಿಕಡ್ಡಿಯ ಉರಿಯಲ್ಲದೆ ಲೆವಿನ್‌ನಿಗೆ ಮತ್ತೇನೂ ಕಾಣಿಸಲಿಲ್ಲ. ಅದರ ಹಿಂದೆಯೇ ಸಿಗರೇಟಿನ ಕೆಂಪು ಕಾಂತಿಯೂ ನೀಲಿ ಹೊಗೆಯೂ ಅವನ ಕಣ್ಣಿಗೆ ಬಿದ್ದುವು.

ಆಬ್ಲಾನ್‌ಸ್ಕಿ ಕೋವಿಯ ಕುದುರೆಯನ್ನೆಳೆದು ಸರಿಪಡಿಸುತ್ತಿದ್ದಂತೆ ‘ಚಕ್, ಚಕ್’ ಎಂಬ ಶಬ್ದ ಹೊರಹೊಮ್ಮಿತು.

‘ಏನದು ?’ ಎಂದವನು ಎತ್ತರದ ತೆಳುದನಿಯಲ್ಲಿ ಕುದುರೆಯೇ ಹಷೋರ್ಗನ್ನುತ್ತಿತೆ ಯಿಂದ ಕೆನೆಯುವಂತಿದ್ದ ಸುದೀರ್ಘ ಧ್ವನಿಯ ಕಡೆಗೆ ಲೆವಿನ್‌ನ ಗಮನವನ್ನು ಸೆಳೆದು, ಕೇಳಿದನು.

‘ನಿನಗೆ ಗೊತ್ತಿಲ್ಲವೆ ? ಅದು ಗಂಡುಮೊಲ. ಆದರೆ ಮಾತು ಸಾಕು....ಆಲಿಸು. ಅವರು ಬರುತ್ತಿದ್ದಾರೆ!’ ಎಂದು ಲೆವಿನ್ ಕುದುರೆಯ ಕೋವಿಯನ್ನೆಳೆಯುತ್ತಿದ್ದಂತೆ ಕೂಗಿಕೊಂಡನು.

ದೂರದಲ್ಲಿ ಮೆಲ್ಲನೆಯ ಸಿಳ್ಳೆ ಕೇಳಿಸಿತು. ಎರಡು ಕ್ಷಣಗಳನಂತರ, ಪ್ರತಿಯೊಬ್ಬ ಬೇಟೆಗಾರನೂ ಬಲ್ಲ ಲಯದಲ್ಲಿ ಎರಡನೆಯ ಸಿಳ್ಳೆ ಹಿಂಬಾಲಿಸಿತು; ಅನಂತರ ಮೂರನೆಯ ಸಿಳ್ಳೆ; ತರುವಾಯ ಕೋಳಿಯ ಕರೆ ಕೇಳಿಸಿತು.

ಲೆವಿನ್ ಎಡಕ್ಕೂ ಬಲಕ್ಕೂ, ತದನಂತರ ಎದುರಿಗೆ ನೇರವಾಗಿ ನೋಡಿದನು. ದೇವದಾರು ವೃಕ್ಷಗಳ ತುದಿಯ ಮೃದುವಾದ ಸಣ್ಣರೆಂಬೆಗಳ ಮಸುಕಿನಲ್ಲಿ, ಕಾವಳ ಕವಿದ ನೀಲಾಕಾಶದಡಿಯಲ್ಲಿ ಹಾರಿಹೋಗುತ್ತಿದ್ದ ಪಕ್ಷಿಯನ್ನು ಕಂಡನು. ಅದು ನೇರವಾಗಿ ತನ್ನ ಕಡೆಗೆ ಹಾರಿಬರುತ್ತಿತ್ತು : ಒರಟು ಬಟ್ಟೆಯನ್ನು ಸಮಸಮನಾಗಿ ಹರಿದಂತೆ ಅದರ ಗಂಟಲು ದನಿ ತನ್ನ ತಲೆಯ ಮೇಲಿಂದ ತನ್ನ ಕಡೆಗೆ ಬರುತ್ತಿದ್ದಂತೆ ಕಂಡಿತು ; ಮರುಕ್ಷಣದಲ್ಲಿಯೇ ಅದರ ಉದ್ದನೆಯ ಕೊಕ್ಕು ಕೊರಳುಗಳನ್ನು ನೋಡಬಹುದಿತ್ತು ; ಅವನು ಗುರಿಯಿಡುತ್ತಿದ್ದಂತೆ ಆಬ್ಲಾನ್‌ಸ್ಕಿ ನಿಂತಿದ್ದ ಪೊದೆಯ ಹಿಂದಿನಿಂದ ಕೆಂಪು ಹೊಳಪೊಂದು ತೂರಿಬಂತು ; ಹಕ್ಕಿ ಬಾಣದಂತೆ ಕೆಳಕ್ಕಿಳಿಯಿತು, ಮತ್ತೆ ಮೇಲಕ್ಕೆ ಹಾರಿತು, ಮತ್ತೊಂದು ಹೊಳಪು ಮತ್ತು ಚಟಚಟ ಧ್ವನಿ, ಗಾಳಿಯಲ್ಲಿ ತೇಲುವ ಸಲುವಾಗಿ ತನ್ನ ರೆಕ್ಕೆಗಳನ್ನು ಬಡಿಯುತ್ತ, ಹಕ್ಕಿ ತುಸು ತಡೆದು, ಕ್ಷಣಕಾಲ ತಡವರಿಸುತ್ತ, ಕೊನೆಗೆ ಕೊಚ್ಚೆಯ ನೆಲದ ಮೇಲೆ ಗಡುಸಾಗಿ ಬಿದ್ದಿತು.

‘ನನ್ನ ಗುರಿತಪ್ಪಿತೆ?’ ಎಂದು ಆಬ್ಲಾನ್‌ಸ್ಕಿ ಹೊಗೆಯಿಂದಾಗಿ ಏನೊಂದೂ ಕಾಣಿಸದೆ ಕೂಗಿದನು.

‘ಇಗೋ ಇಲ್ಲಿದೆ!’ ಎಂದು ಲೆವಿನ್ ಲಾಸ್ಕ ಕಡೆಗೆ ಕೈತೋರಿಸಿ ಕೂಗಿದನು. ಒಂದು ಕಿವಿಯನ್ನು ಮೇಲಕ್ಕೆತ್ತಿ, ತನ್ನ ತುಪ್ಪುಳು ಬಾಲದ ತುದಿಯನ್ನಲ್ಲಾಡಿಸುತ್ತ, ಆನಂದವನ್ನು ವರ್ಧಿಸಲೆಂಬಂತೆ, ಮುಖದಲ್ಲಿ ಮುಗುಳುನಗೆಯನ್ನು ಸೂಸುತ್ತಿತ್ತೋ ಎನ್ನುವಂತೆ ಲಾಸ್ಕ ನಿಧಾನವಾಗಿ ಹೆಜ್ಜೆ ಇಡುತ್ತ, ತನ್ನೊಡೆಯನ ಬಳಿಗೆ ಹಕ್ಕಿಯನ್ನು ತರುತ್ತಿತ್ತು.

'ಭೇಷ್, ನಿನಗದು ದಕ್ಕಿದ್ದು ನನಗೆ ಸಂತಸವನ್ನುಂಟುಮಾಡಿದೆ' ಎಂದು ಲೆವಿನ್ ನುಡಿದನಾದರೂ, ಆ ಹಕ್ಕಿಯನ್ನು ಹೊಡೆದವನು ತಾನಲ್ಲವೆಂದು ಮಾತ್ಸರ್ಯಗೊಂಡನು.

'ಬಲಗಡೆ ಕೋವಿಯ ಮೊದಲ ಹೊಡೆತ ತಪ್ಪಿಹೋಯಿತು' ಎಂದು ಆಬ್ಲಾನ್‌ಸ್ಕಿ ಬಂದೂಕಕ್ಕೆ ಚರೆಯನ್ನು ತುಂಬುತ್ತ ಮಾರ್ನುಡಿದನು. 'ಶ್! ಮತ್ತೊಂದು!'

ನಿಜಕ್ಕೂ ಒಂದಾದ ಮೇಲೊಂದು ಕರ್ಣವೇಧಕ ಆಕ್ರಂದನ ಕೇಳಿಸಿದುವು. ಆಟಕ್ಕಾಗಿ ಒಂದನ್ನೊಂದು ಅಟ್ಟುತ್ತ, ಆಕ್ರಂದಿಸದೆ ಸಿಳ್ಳಿಸುತ್ತ, ಎರಡು ಹಕ್ಕಿಗಳು ಬೇಟೆಗಾರರ ತಲೆಗಳಮೇಲೆ ಹಾರಿಹೋದುವು. ನಾಲ್ಕು ಗುಂಡು ಸಿಡಿದುವು, ಮಡಿವಾಳ ಗಳಂತೆ ಆ ಉಲ್ಲಂಗಿಗಳು ಫಕ್ಕನೆ ಮೇಲೇರಿ, ಮರೆಯಾದುವು.

ಗುಂಡುಹಾರಿಕೆ ಅತ್ಯುತ್ತಮವಾಗಿತ್ತು. ಆಬ್ಲಾನ್‌ಸ್ಕಿ ಮತ್ತೆರಡು ಹಕ್ಕಿಗಳನ್ನು ಕೊಂದನು. ಲೆವಿನ್ ಎರಡರ ಮೇಲೆ ಗುಂಡು ಹಾರಿಸಿದರೂ, ಒಂದೂ ಕೈಗೆ ಸಿಗಲಿಲ್ಲ.

ಕತ್ತಲೆ ಕವಿಯುತ್ತಿತ್ತು. ಭೂರ್ಜವೃಕ್ಷಗಳ ಮೂಲಕ ಶುಕ್ರಗ್ರಹ ತನ್ನ ಮಂದ ಕಿರಣವನ್ನು ಪಸರಿಸುತ್ತಿತ್ತು, ಸ್ವಾತಿನಕ್ಷತ್ರದ ಉಜ್ವಲಪ್ರಕಾಶ ಪೂರ್ವಗಗನದ ನೆತ್ತಿಯಲ್ಲಿ ಸ್ಪಂದಿಸುತ್ತಿತ್ತು. ಲೆವಿನ್‌ನ ನೆತ್ತಿಯ ಮೇಲೆ ನೇರವಾಗಿ ಸಪ್ತರ್ಷಿಮಂಡಲದ ನಕ್ಷತ್ರಗಳು ಹೊಳೆದು, ಮರೆಯಾದುವು. ಉಲ್ಲಂಗಿಗಳ ಹಾರಾಟ ನಿಂತುಹೋಗಿತ್ತು; ಭೂರ್ಜಶಾಖೆಯ ಕೆಳಗೆ ಹೊಳೆಯುತ್ತಿದ್ದ ಶುಕ್ರ ಅದರ ಮೇಲೆ ಬರುವ ತನಕ, ಮತ್ತು ಸಪ್ತರ್ಷಿಮಂಡಲದ ಎಲ್ಲ ನಕ್ಷತ್ರಗಳೂ ಸುಸ್ಪಷ್ಟವಾಗಿ ಮೈದೋರುವ ತನಕ ಅಲ್ಲಿಯೇ ನಿಲ್ಲುವುದೆಂದು ಲೆವಿನ್ ನಿಶ್ಚಯಿಸಿಕೊಂಡನು.

ಶುಕ್ರಗ್ರಹ ಭೂರ್ಜಶಾಖೆಯ ಮೇಲೇರಿದನು. ಸಪ್ತರ್ಷಿ ಮಂಡಲದ ತೇರು ಮತ್ತು ಅಚ್ಚುಗಳು ಸುನೀಲ ಗಗನದಲ್ಲಿ ಸುಸ್ಪಷ್ಟವಾಗಿ ಕಾಣಿಸಿಕೊಂಡುವು. ಆದರೂ ಅವನು ಅಲುಗಾಡಲಿಲ್ಲ.

'ಮನೆಗೆ ಹೋಗಲು ಹೊತ್ತಾಗಲಿಲ್ಲವೆ?' ಎಂದು ಆಬ್ಲಾನ್‌ಸ್ಕಿ ಕೇಳಿದನು.

ಪೂರ್ಣಶಾಂತಿ ಕಾನನವನ್ನೆಲ್ಲ ಆವರಿಸಿಕೊಂಡಿತ್ತು; ಗಿಡಹಕ್ಕಿಗಳ ಅಲುಗಾಟ ಸಹ ಕಿವಿಗೆ ಬೀಳುತ್ತಿರಲಿಲ್ಲ.

'ತುಸು ಹೊತ್ತು ಕಾಯೋಣ' ಎಂದು ಲೆವಿನ್ ಉತ್ತರಿಸಿದನು.

'ನಿನ್ನಿಷ್ಟದಂತಾಗಲಿ.'

ಅವರು ಸುಮಾರು ಹದಿನೈದು ಹೆಜ್ಜೆ ದೂರದಲ್ಲಿ ನಿಂತಿದ್ದರು.

'ಸ್ಟೀವ್' ಎಂದು ಲೆವಿನ್ ಅನಿರೀಕ್ಷಿತವಾಗಿ ಮಾತೆತ್ತಿದನು. 'ನಿನ್ನ ನಾದಿನಿಯ ಮದುವೆ ಮುಗಿಯಿತೆ, ಅಥವಾ ಯಾವಾಗ ಮದುವೆಯಾಗುತ್ತದೆ ಎಂಬ ವಿಷಯವನ್ನೇ ನನಗೆ ಹೇಳಲಿಲ್ಲವಲ್ಲ.'

ಉತ್ತರ ಏನೇ ಆಗಿರಲಿ, ಅದರಿಂದ ತನ್ನ ಸಮಸ್ಥಿತಿ ಪಲ್ಲಟಗೊಳ್ಳಲಾರದೆಂಬಷ್ಟು ಮಟ್ಟಿಗೆ ತನ್ನ ಮನಸ್ಸು ಶಾಂತಿ ದೃಢತೆಗಳನ್ನು ಕಳೆದುಕೊಳ್ಳಲಾರದೆಂದು ಲೆವಿನ್ ಭಾವಿಸಿದನು. ಆದರೆ ಆಬ್ಲಾನ್‌ಸ್ಕಿ ನೀಡಿದ ಉತ್ತರವನ್ನು ಸ್ವೀಕರಿಸಲು ಅವನು ಸಿದ್ಧನಾಗಿರಲಿಲ್ಲ.

'ಅವಳಿಗೆ ಮದುವೆಯಾಗಿಲ್ಲ; ಮದುವೆಯಾಗುವ ಉದ್ದೇಶವೂ ಅವಳಿಗಿಲ್ಲ. ಅವಳಿಗೆ ತುಂಬ ಖಾಯಿಲೆಯಾಗಿದೆ. ವೈದ್ಯರು ಅವಳನ್ನು ವಿದೇಶಕ್ಕೆ ಕಳಿಸಿದ್ದಾರೆ. ಅವಳ ಉಳಿವಿನ ಬಗ್ಗೆಯೂ ಅವರಿಗೆ ಅಂಜಿಕೆಯಿದೆ.'

'ಓ, ಇಲ್ಲ!' ಎಂದು ಲೆವಿನ್ ಒರಲಿದನು. 'ಖಾಯಿಲೆ ಅತಿಯಾಗಿದೆಯೆ? ಅವಳಿಗೇನಾಗಿದೆ? ಏನಾಗಿದೆ....?'

ಅವರು ಮಾತಾಡುತ್ತಿದ್ದಾಗ, ನೈಯೆಲ್ಲ ಎಚ್ಚರಿಕೆಯಾಗಿದ್ದ ಲಾಸ್ಕ ಆಗಸದ ಕಡೆಗೂ, ಅನಂತರ ಮುಂದಿಯು ಕಡೆಗೂ ಆಕ್ಷೇಪಪೂರ್ವಕವಾಗಿ ನೋಡಿತು.

ಸಂಭಾಷಣೆಯಲ್ಲಿ ತೊಡಗಲು ಇದೇ ಸುಸಮಯ!' ಎಂದದು ಯೋಚಿಸು ತ್ತಿದ್ದಂತೆ ತೋರಿತು. 'ಹಕ್ಕಿಯೊಂದು ಬರುತ್ತಿದೆ....ಹೌದು. ನಿಜಕ್ಕೂ ಅಗೋ ಅದು ಅಲ್ಲಿದೆ. ಅದು ಅವರಿಂದ ತಪ್ಪಿಸಿಕೊಳ್ಳುತ್ತದೆ.'

ಆದರೆ ಕಿವಿಯನ್ನು ಮೀಟುವಂಥ ಸಿಳ್ಳೆಯನ್ನು ಅವರಿಬ್ಬರೂ ಅದೇ ಕ್ಷಣದಲ್ಲಿ ಕೇಳಿಸಿಕೊಂಡರು. ಇಬ್ಬರೂ ತಂತಮ್ಮ ಬಂದೂಕಗಳನ್ನು ಏಕಕಾಲದಲ್ಲಿ ಕೈಗೆತ್ತಿ ಕೊಂಡರು; ಒಂದೇ ಕ್ಷಣದಲ್ಲಿ ಎರಡು ಉರಿ ಮತ್ತು ಸಿಡಿತಗಳು ಕಾಣಿಸಿಕೊಂಡುವು. ಒಡನೆಯೆ ಎತ್ತರದಲ್ಲಿ ಹಾರುತ್ತಿದ್ದ ಉಲ್ಲಂಗಿಯೊಂದು ತನ್ನ ರೆಕ್ಕೆಗಳನ್ನು ಜೋಲಾಡಿ ಸುತ್ತ, ಹೊದರಿನಲ್ಲಿ ಬಿತ್ತು. ಅದು ಬೀಳುವಾಗ ಹೊದರಿನ ಸಣ್ಣ ಕೊನೆಗಳು ನುಗ್ಗು ನೂರಾದುವು.

'ಭೇಷ್! ಅದ್ಭುತ! ನಮ್ಮಿಬ್ಬರ ಈ ಶಿಕಾರಿ!' ಎಂದು ಉಲ್ಲಂಗಿಯನ್ನು ಹುಡುಕುವ ಸಲುವಾಗಿ ಲಾಸ್ಕ ಜತೆಯಲ್ಲಿ ಪೊದೆಗಳ ಕಡೆಗೆ ನುಗ್ಗಿದ ಲೆವಿನ್ ಕೂಗಿ ಕೊಂಡನು. 'ಅವಳ ಅಸೌಖ್ಯಕ್ಕೆ ಕಾರಣವೇನಿರಬಹುದು?....' ಎಂದವನು ತನ್ನಷ್ಟಕ್ಕೆ ತಾನು ಪ್ರಶ್ನಿಸಿಕೊಂಡನು. 'ಅಹ, ಹೌದು, ಕಿಟ್ಟಿಗೆ ಹುಷಾರಿಲ್ಲ.... ಸಂಕಟದ ವಿಷಯ' ಎಂದವನು ಆಲೋಚಿಸಿದನು.

'ಅಂತು ಪತ್ತೆ ಮಾಡಿದೆಯಲ್ಲ? ಒಳ್ಳೆಯ ನಾಯಿ!' ಎಂದವನು ಲಾಸ್ಕಳ ಬಾಯಿಂದ ಬೆಚ್ಚನೆಯ ಹಕ್ಕಿಯನ್ನು ಕಸಿದುಕೊಂಡು, ಅದನ್ನು ಹೆಚ್ಚು ಕಡಮೆ ಭರ್ತಿ ಯಾಗಿದ್ದ ತನ್ನ ಬೇಟೆ ಹಸುಬೆಯಲ್ಲಿರಿಸಿಕೊಳ್ಳುತ್ತ ನುಡಿದನು. 'ನನಗದು ಸಿಕ್ಕಿತು, ಸ್ಟೀವ್' ಎಂದವನು ಕೂಗಿಕೊಂಡನು.

೧೬

ಮನೆಗೆ ಹಿಂದಿರುಗುವಾಗ ಲೆವಿನ್ ಕಿಟ್ಟಿಯ ಖಾಯಿಲೆಯ ವಿವರಗಳನ್ನು ಶರ್‌ಬತ್‌ಸ್ಕಿಯರ ಹರುವುಗಳನ್ನೂ ಕೇಳಿ ತಿಳಿದುಕೊಂಡನು. ತನ್ನ ತಿಳಿವಳಿಕೆಗೆ ಬಂದ ವಿಷಯಗಳಿಂದ ತನಗೆ ತೃಪ್ತಿಯೊದಗಿದ ಸಂಗತಿಯನ್ನೊಪ್ಪಿಕೊಳ್ಳಲು ಸಂಕೋಚ ವಾದರೂ, ಅವನಿಗೆ ತೃಪ್ತಿಯಾದದ್ದಂತು ನಿಜ. ತನಗಿನ್ನೂ ಭರವಸೆ ಇದ್ದುದೇ ಅವನ ತೃಪ್ತಿಗೆ ಕಾರಣವಾಗಿತ್ತು; ತನ್ನ ಯಾತನೆಗೆ ಕಾರಣವಾಗಿದ್ದ ಅವಳು ತನಗಿಂತ ಹೆಚ್ಚು ಯಾತನೆಗೊಳಗಾಗಿದ್ದುದರಿಂದ ಅವನಿಗೆ ಮತ್ತಷ್ಟು ತೃಪ್ತಿಯಾಗಿತ್ತು. ಆದರೆ ಆಬ್ಲಾನ್‌ಸ್ಕಿ ಕಿಟ್ಟಿಯ ರೋಗಕಾರಣಗಳ ಬಗ್ಗೆ ಮಾತಾಡಲನುವಾಗಿ, ವ್ರಾನ್ಸ್ಕಿಯ ಹೆಸರು ಪ್ರಸ್ತಾಪಿಸಿದಾಗ, ಲೆವಿನ್ ಮಧ್ಯೆ ಬಾಯಿ ಹಾಕಿದನು: 'ಕೌಟುಂಬಿಕ ರಹಸ್ಯ ಗಳನ್ನು ತಿಳಿಯುವ ಹಕ್ಕು ನನಗಿಲ್ಲ. ನಿಜ ಹೇಳುವುದಾದರೆ, ನನಗೆ ಆಸಕ್ತಿಯೂ ಇಲ್ಲ.'

ಲೆವಿನ್‌ನ ಮುಖದಲ್ಲಿ ಕ್ಷಿಪ್ರ ಬದಲಾವಣೆಯನ್ನು ಕಂಡಕೂಡಲೇ ಆಬ್ಲಾನ್‌ಸ್ಕಿ ಕಂಡೂ ಕಾಣದಂತೆ ಮಂದಹಾಸ ಸೂಸಿದನು. ಆ ಬದಲಾವಣೆ ಆಬ್ಲಾನ್‌ಸ್ಕಿಗೆ ಹೊಸದಾಗಿರಲಿಲ್ಲ. ಕೇವಲ ಒಂದು ಕ್ಷಣದ ಹಿಂದೆ ಖುಷಿಯಾಗಿದ್ದ ಅವನ ಮುಖವೀಗ ಅಸಹ್ಯವಾಗಿ ತೋರಿತು.

'ರ್‍ಯಾಬಿನಿನ್ನನ ಜತೆಯಲ್ಲಿ ವ್ಯವಹಾರ ಮುಗಿಯಿತೇನು?' ಎಂದು ಲೆವಿನ್ ಪ್ರಶ್ನಿಸಿದನು.

'ಹೌದು, ವ್ಯವಹಾರ ಮುಗಿದಿದೆ. ಒಳ್ಳೆಯ ಬೆಲೆ, ಮೂವತ್ತೆಂಟು ಸಾವಿರ. ಈಗಲೇ ಎಂಟು ಸಿಗುತ್ತದೆ; ಉಳಿದದ್ದು ಆರುವರ್ಷಗಳ ನಂತರ. ಅದರ ಬಗ್ಗೆ ನಾನು ಬಹುದಿನಗಳಿಂದ ತಲೆಕೆಡಿಸಿಕೊಂಡಿದ್ದೇನೆ. ಯಾರೂ ಅದಕ್ಕಿಂತ ಹೆಚ್ಚಾಗಿ ಕೊಡಲು ಸಿದ್ಧರಾಗಿಲ್ಲ.'

'ನಿನ್ನ ಚೌಬೀನೆಯನ್ನು ಕುರುಡುಕಾಸಿಗೆ ಮಾರಿದಂತಾಗಿದೆ' ಎಂದು ಲೆವಿನ್ ಸಿಡುಕಿನಿಂದ ನುಡಿದನು.

'ಕುರುಡುಕಾಸೆ? ಕುರುಡುಕಾಸೆ?' ಎಂದು ಆಬ್ಲಾನ್‌ಸ್ಕಿ ಎಲ್ಲವೂ ಲೆವಿನ್‌ನ ಮಟ್ಟಿಗೀಗ ತಪ್ಪಾಗಿ ಕಾಣಿಸುತ್ತದೆಂಬುದನ್ನರಿತು, ಸುಮಂದಹಾಸವನ್ನು ಸೂಸಿದನು.

'ಏಕೆಂದರೆ ನಿನ್ನ ಕಾಡುಗಳಿಗೆ ಕೊನೆಯ ಪಕ್ಷ ಎಕರೆಯೊಂದಕ್ಕೆ ನೂರೈವತ್ತು ರೂಬಲ್‌ಗಳಷ್ಟಾದರೂ ಬೆಲೆ ಸಿಗಬೇಕು' ಎಂದು ಲೆವಿನ್ ಉತ್ತರಿಸಿದನು.

'ಓ, ಈ ಹಳ್ಳಿಯ ರೈತರಿದ್ದಾರಲ್ಲ!' ಎಂದು ಆಬ್ಲಾನ್‌ಸ್ಕಿ ವಿನೋದವಾಗಿ ನುಡಿದನು. 'ನಮ್ಮಂಥ ನಗರವಾಸಿಗಳ ಬಗ್ಗೆ ಇವರಿಗೆ ಉಪೇಕ್ಷೆ! ಆದರೆ ವ್ಯವಹಾರದ ವಿಷಯಕ್ಕೆ ಬಂದೆವೆಂದರೆ, ನಾವು ಯಾವಾಗಲೂ ಸರಿಯಾಗಿಯೇ ಕಮಾಯಿಸುತ್ತೇವೆ. ಈ ವ್ಯವಹಾರದ ಎಲ್ಲ ಮುಖಗಳನ್ನೂ ಕೂಲಂಕಷವಾಗಿ ಅವಲೋಕಿಸಿದ್ದೇನೆಂದು ನಿನಗೆ ಭರವಸೆ ಕೊಡುತ್ತೇನೆ. ಮರಗಳನ್ನು ಲಾಭದಾಯಕವಾಗಿಯೇ ಮಾರಿದ್ದಾಗಿದೆ. ಕೊಂಡವನು ಮಾತು ಬದಲಾಯಿಸಿಕೊಳ್ಳದಿದ್ದರೇನೇ ನಮ್ಮ ಭಾಗ್ಯವೆನ್ನಬೇಕು. ಏಕೆಂದರೆ ಅದು ಉತ್ಕೃಷ್ಟವಾದ ಸಾಗುವಾನಿಯಲ್ಲ' ಎಂದು ಆಬ್ಲಾನ್‌ಸ್ಕಿ ವಾದಿಸಿದನು. ಉತ್ಕೃಷ್ಟವಾದ ಸಾಗುವಾನಿ ಎಂಬ ವಾಣಿಜ್ಯ ಪದದ ಬಳಕೆಯ ಮೂಲಕ ಅವನು ತನ್ನ ಸಾಮರ್ಥ್ಯವನ್ನು ಲೆವಿನ್‌ನ ಮುಂದೆ ಪ್ರದರ್ಶಿಸಲು ಪ್ರಯತ್ನಿಸಿದನು. 'ಅದರಲ್ಲಿ ಬಹುಭಾಗವನ್ನು ಸೌದೆಗೆ ಬಳಸಬೇಕಾಗುತ್ತದೆ. ಒಂದು ಎಕರೆಗೆ ಎಪ್ಪತ್ತು ಘನ ಅಡಿಗಿಂತ ಹೆಚ್ಚಾಗಿ ಬಾಳಲಾರದು. ಆದರೂ ಆತ ಎಕರೆಗೆ ಎಪ್ಪತ್ತು ರೂಬಲ್‌ಗಳಷ್ಟು ತೆರುತ್ತಾನೆ.'

ಲೆವಿನ್‌ನ ಮಂದಹಾಸದಲ್ಲಿ ವ್ಯಂಗ್ಯವಿತ್ತು. 'ನನಗೆ ಈ ವ್ಯವಹಾರದ ರೀತಿ ರಿವಾಜುಗಳೆಲ್ಲ ಗೊತ್ತಿದೆ. ಅವು ಇವನಿಗೆ ಮಾತ್ರವೇ ಅನ್ವಯವಾಗುವಂಥವಲ್ಲ. ನಗರದ ಎಲ್ಲ ಜನರ ಹಣೆ ಬರಹವೂ ಇಷ್ಟೇ; ಅವರು ಹತ್ತುವರ್ಷಗಳಲ್ಲಿರಡು ಸಾರಿ ಹಳ್ಳಿಗೆ ಬರುತ್ತಾರೆ; ಒಂದೆರಡು ಹಳ್ಳಿಯ ಪಡೆನುಡಿಗಳನ್ನು ಕಲಿತುಕೊಳ್ಳುತ್ತಾರೆ; ತಮ್ಮ ಪಾಂಡಿತ್ಯವನ್ನು ಮೆರೆಯುವ ಸಲುವಾಗಿ ಅವರು ಅವುಗಳನ್ನು ಔಚಿತ್ಯವರಿತೋ ಅರಿಯದೆಯೋ ಬಳಸುತ್ತಾರೆ. 'ಉತ್ಕೃಷ್ಟ ಸಾಗುವಾನಿ.... ಬಾಳಲಾರದು.... ನಿಜಕ್ಕೂ ಆ ನುಡಿಗಟ್ಟುಗಳ ಅರ್ಥವೇ ಅವನಿಗೆ ಗೊತ್ತಿಲ್ಲ.'

'ನಿನ್ನ ಕಚೇರಿಯ ಕಡತಗಳಲ್ಲಿ ಏನು ಬರೆಯಬೇಕೆಂದು ನಿನಗೆ ಕಲಿಸುವ ಉದ್ಧಟತನ ನನಗಿಲ್ಲ' ಎಂದವನು ಮಾತು ಮುಂದುವರಿಸಿದನು. 'ಅದಕ್ಕೆ ಪ್ರತಿಯಾಗಿ, ಅವಶ್ಯನಾದರೆ ಅಂಥ ವಿಷಯಗಳಲ್ಲಿ ನಿನ್ನ ಸಲಹೆ ಕೇಳುತ್ತೇನೆ. ನೀನೀಗ ಸಾಗುವಾನಿಯ ವ್ಯವಹಾರವನ್ನು ಸಂಪೂರ್ಣ ತಿಳಿದುಕೊಂಡಿರುವುದಾಗಿ ಭಾವಿಸಿದ್ದೀಯೆ. ಅದಷ್ಟು ಸರಳವಾದುದಲ್ಲ. ನೀನು ಮರಗಳನ್ನೆಣಿಸಿದ್ದೀಯೇನು?'

'ಮರ ಎಣಿಸುವುದಾದರೂ ಹೇಗೆ?' ಎಂದು ಆಬ್ಲಾನ್‌ಸ್ಕಿ ನಕ್ಕನು. ತನ್ನ ಗೆಳೆಯನ ಸಿಡುಕನ್ನಿಳಿಸಲು ಅವನು ಕಾತರನಾಗಿದ್ದನು. ಸಾಗರದ ಮರಳು ಕಣಗಳನ್ನಾಗಲಿ, ಸೂರ್ಯನ ಕಿರಣಗಳನ್ನಾಗಲಿ ಎಣಿಸುವುದು ಸಾಧ್ಯವೆ? ಯಾವುದಾದರೂ ಅಲೌಕಿಕ ಶಕ್ತಿಯಿಂದ ಮಾತ್ರ ಅದು ಸಾಧ್ಯವಾದೀತೋ ಏನೋ.'

'ಹೌದು, ರ್‍ಯಾಬಿನಿನ್‌ನ ಅಲೌಕಿಕ ಶಕ್ತಿಗದು ಸಾಧ್ಯ. ಯಾವ ವರ್ತಕನೂ ಮರ ಎಣಿಸದೆ ಕಾಡು ಕೊಳ್ಳಲಾರ. ನಿನ್ನಂತೆ ಕುರುಡುಕಾಸಿಗೆ ಮಾರಿದಾಗ ಅದು ಸಾಧ್ಯವಾಗಬಹುದು. ನಿನ್ನ ಕಾಡುಗಳ ವಿಷಯ ನನಗೆ ಗೊತ್ತಿದೆ. ಮೃಗಯಾವಿಹಾರಕ್ಕಾಗಿ ನಾನಲ್ಲಿಗೆ ಪ್ರತಿವರ್ಷವೂ ಹೋಗುತ್ತೇನೆ. ಎಕರೆಯೊಂದಕ್ಕೆ ನೂರೈವತ್ತು ರೂಬಲ್ ನಗದು ಬೆಲೆ ಸಿಗಬೇಕೆಂಬುದರಲ್ಲಿ ನನಗೆ ಅನುಮಾನವಿಲ್ಲ. ನಿನಗವನು ಅರುವತ್ತನ್ನು ಕಂತುಗಳಲ್ಲಿ ಕೊಡುತ್ತಾನೆ. ಒಟ್ಟನಲ್ಲಿ ನೀನವನಿಗೆ ಮೂವತ್ತು ಸಾವಿರ ರೂಬಲ್ ಕಾಣಿಕೆ ನೀಡಿದಂತಾಗುತ್ತದೆ.'

'ಕಲ್ಪನೆಯ ಬೆನ್ನೇರಿ ಹಾರಬೇಡ. ಹಾಗಾದರೆ ಹೆಚ್ಚು ಬೆಲೆ ಕೊಟ್ಟು ಕೊಳ್ಳಲು ಯಾರೂ ಮುಂದೆ ಬರಲಿಲ್ಲವಲ್ಲ, ಕಾರಣವೇನು?' ಎಂದು ಆಬ್ಲಾನ್‌ಸ್ಕಿ ಮುರುಕದಿಂದ ನುಡಿದನು.

'ಏಕೆ ಗೊತ್ತೆ? ಇತರ ವರ್ತಕರನ್ನವನು ತನ್ನ ಬುಟ್ಟಿಗೆ ಹಾಕಿಕೊಂಡಿದ್ದಾನೆ; ಅವರೊಡನೆ ಮೋಸದ ವ್ಯವಹಾರ ಕುದುರಿಸಿಕೊಂಡಿದ್ದಾನೆ. ಅವರೆಲ್ಲರೊಡನೆಯೂ ನಾನು ವ್ಯವಹಾರ ನಡೆಸಿದ್ದೇನೆ. ಅವರೆಲ್ಲರನ್ನೂ ನಾನು ಪೂರ್ತಿ ಬಲ್ಲೆ. ಅವರು ವರ್ತಕರಲ್ಲ; ಸಟ್ಟಾ ವ್ಯಾಪಾರಿಗಳು. ಶೇಕಡ ಹತ್ತು ಅಥವಾ ಹದಿನೈದರಷ್ಟು ಲಾಭ ಬರುವ ವ್ಯವಹಾರದ ತಂಟೆಗವನು ಹೋಗುವುದಿಲ್ಲ. ಇಪ್ಪತ್ತು ಕೊಪೆಕ್‌ಗಳಿಗೊಂದು ರೂಬಲ್ ದೊರೆಯುವ ತನಕ ಅವನು ಕಾಯುತ್ತಾನೆ.'

'ಆ ವಿಷಯವನ್ನಲ್ಲಿಗೆ ಬಿಡೋಣ. ನಿನ್ನ ಮನಃಸ್ಥಿತಿ ಸರಿಯಾಗಿಲ್ಲ.'

'ಅಂಥದೇನೂ ಇಲ್ಲ' ಎಂದು ಲೆವಿನ್ ಮನೆಯನ್ನು ಪ್ರವೇಶಿಸುವಾಗ ಖಿನ್ನನಾಗಿ ನುಡಿದನು.

ಲೋಹ ಚರ್ಮಗಳಿಂದ ಬಿಗಿಗೊಳಿಸಿದ್ದ ಕೋಶವುಳ್ಳ ಬೋನಿನಂಥ ಬಂಡಿಯೊಂದು ಮುಖಮಂಟಪದಲ್ಲಿ ನಿಂತಿದ್ದುದನ್ನವರು ಕಂಡರು. ಮಿಣಮಿಣನೆ ಮಿರುಗುತ್ತಿದ್ದ ನುಣ್ಮೆಯ್ಯ ಕುದುರೆಯೊಂದನ್ನು ಅಗಲವಾದ ಪಟ್ಟಿಗಳಿಂದ ಆ ಬಂಡಿಗೆ ಭದ್ರವಾಗಿ ಕಟ್ಟಲಾಗಿತ್ತು. ಕರಣಿಕ ಹಾಗೂ ಚಾಲಕನಾಗಿ ರ್‍ಯಾಬಿನಿನ್‌ಸಿಗೆ ಸೇವೆ ಸಲ್ಲಿಸುತ್ತಿದ್ದ, ಸೊಂಟಕ್ಕೆ ಪಟ್ಟಿ ಬಿಗಿದುಕೊಂಡಿದ್ದ ದುಂಡುದುಂಡನೆಯ ಕೊಬ್ಬಿದ ವ್ಯಕ್ತಿಯೊಬ್ಬ ಗಾಡಿಯಲ್ಲಿ ಕುಳಿತಿದ್ದನು. ಮನೆಯೊಳಗಿದ್ದ ರ್‍ಯಾಬಿನಿನ್ ಅವರನ್ನು ಹಜಾರದಲ್ಲಿ ಸಂಧಿಸಿ

ದನು. ಅವನು ಉದ್ದನೆಯ, ತೆಳ್ಳನೆಯ, ಮಧ್ಯವಯಸ್ಸಿನ ವ್ಯಕ್ತಿ; ಮೀಸೆ ಅವನ ಮುಖಕ್ಕೆ ವಿಶಿಷ್ಟ ಶೋಭೆಯನ್ನು ನೀಡಿತ್ತು; ನುಣ್ಣಗೆ ಕ್ಷೌರಮಾಡಿದ ಅವನ ದವಡೆ ಎದ್ದು ಕಾಣುತ್ತಿತ್ತು; ಮಬ್ಬುಮಬ್ಬಾದ ಅವನ ಕಣ್ಣು ಪೆಡ್ಡೆಯಾಗಿದ್ದುವು. ಕುಂಡೆಗಳಿಗಿಂತಲೂ ಕೆಳಗೆ ಗುಂಡಿಗಳಿದ್ದ ಉದ್ದನೆಯ ನೀಲಿಗಪ್ಪಿನ ಮೇಲಂಗಿಯನ್ನವನು ಧರಿಸಿದ್ದನು; ಕಾಲ ಹರಡಿನ ಬಳಿ ಸುಕ್ಕುಸುಕ್ಕಾಗಿ, ಮೀನಖಂಡದ ಮೇಲೆ ನಯವಾಗಿ, ಎತ್ತರವಾಗಿದ್ದ ಬೂಟುಗಳನ್ನೂ, ಅವುಗಳ ಮೇಲೆ ದೊಡ್ಡ ಮೇಲ್ಜೋಡುಗಳನ್ನೂ ಹಾಕಿಕೊಂಡಿದ್ದನು. ಬೆವರುತ್ತಿದ್ದ ಮುಖವನ್ನು ಕೈಚೌಕದಿಂದೊರಸಿಕೊಂಡನು; ತನ್ನ ಮೈಮೇಲೆ ಸರಿಯಾಗಿ ಕುಳಿತುಕೊಂಡಿದ್ದ ಮೇಲಂಗಿಗೆ ಗುಂಡಿ ಹಾಕಿಕೊಂಡು, ಸ್ಮಿತವದನನಾಗಿ ಇಬ್ಬರು ವ್ಯಕ್ತಿಗಳಿಗೂ ಸ್ವಾಗತ ನೀಡಿ, ಏನನ್ನೋ ಹಿಡಿದುಕೊಳ್ಳಲೆಂಬಂತೆ ಅವನು ಆಬ್ಲಾನ್‌ಸ್ಕಿಯ ಮುಂದೆ ಕೈ ಚಾಚಿದನು.

'ಅಂತೂ ನೀವು ಬಂದುಬಿಟ್ಟಿರಲ್ಲ, ಸಂತೋಷ' ಎಂದು ಆಬ್ಲಾನ್‌ಸ್ಕಿ ಸಹ ಅವನಿಗೆ ಹಸ್ತಲಾಘವವನ್ನಿತ್ತನು.

'ರಸ್ತೆತುಂಬ ಹದಗೆಟ್ಟಿದ್ದರೂ, ಪ್ರಭುಗಳ ಆಜ್ಞೆಯನ್ನುಲ್ಲಂಘಿಸುವ ಧೈರ್ಯ ನನಗಿಲ್ಲ. ಇಡೀ ದೂರವನ್ನು ನಡಗೆಯಲ್ಲಿಯೇ ಸವೆಸಿದೆನೆಂದು ಹೇಳಬೇಕು. ನಾನಿಲ್ಲಿಗೆ ಸಕಾಲಕ್ಕೆ ಬಂದೆ. ನಮಸ್ಕಾರ, ಕಾನ್‌ಸ್ಟಂಟಿನ್ ದಿಮಿತ್ರಿಚ್‌ರವರೆ' ಎಂದವನು ಲೆವಿನ್ ಕಡೆಗೆ ತನ್ನ ಕೈ ಚಾಚಿದನು. ಆದರೆ ಲೆವಿನ್ ಅವನ ಚಾಚಿದ ಕೈ ಕಾಣಲಿಲ್ಲವೆಂಬಂತೆ ನಟಿಸುತ್ತ, ಚೀಲದಿಂದ ಉಲ್ಲಂಗಿಯೊಂದನ್ನು ಹೊರತೆಗೆಯಲನುವಾದನು. 'ಮೃಗಯಾವಿಹಾರದ ಮೂಲಕ ಪ್ರಭುಗಳು ವಿಶ್ರಾಂತಿ ಪಡೆಯುವಂತೆ ತೋರುತ್ತದೆ. ಅದೆಂಥ ಹಕ್ಕಿ ಇರಬಹುದು?' ಎಂದು ರ್‍ಯಾಬಿನಿನ್ ಹೇವರಿಕೆಯಿಂದ ಉಲ್ಲಂಗಿಯ ಕಡೆಗೆ ನೋಡುತ್ತ ಪ್ರಶ್ನಿಸಿದನು. 'ಅದು ತುಂಬ ರುಚಿಕರವಾಗಿರಬೇಕಲ್ಲವೆ?' ಎಂದವನು ಕಷ್ಟಕ್ಕೆ ತಕ್ಕ ಫಲ ದೊರೆತಿಲ್ಲವೆಂದು ಶಂಕಿಸುತ್ತಿದ್ದವನಂತೆ ಅಸಮ್ಮತಿ ಸೂಚಕವಾಗಿ ತನ್ನ ತಲೆ ಅಲ್ಲಾಡಿಸಿದನು.

'ನನ್ನ ಅಧ್ಯಯನ ಮಂದಿರದಲ್ಲಿ ನೀವು ಮಾತಾಡಬಹುದಲ್ಲವೆ?' ಎಂದು ಲೆವಿನ್ ಫ್ರೆಂಚ್ ಭಾಷೆಯಲ್ಲಿ ಸಿಡುಕುದನಿಯಿಂದ ಆಬ್ಲಾನ್‌ಸ್ಕಿಯನ್ನು ಪ್ರಶ್ನಿಸಿದನು. 'ಅಧ್ಯಯನಮಂದಿರಕ್ಕೆ ಹೋಗಿ. ನೀವಲ್ಲಿ ನಿಮ್ಮ ವ್ಯವಹಾರಗಳ ಬಗ್ಗೆ ಚರ್ಚೆ ನಡಸಬಹುದು' ಎಂದವನು ರಷ್ಯನ್ ಭಾಷೆಯಲ್ಲಿ ನುಡಿದನು.

'ಹಾಗೆಯೇ ಆಗಬಹುದು' ಎಂದು ರ್‍ಯಾಬಿನಿನ್ ವ್ಯಂಗ್ಯಾತ್ಮಕವಾದ ಗಾಂಭೀರ್ಯದಿಂದ ನುಡಿದನು. ಎಂಥ ಸಂದರ್ಭದಲ್ಲಿಯೇ ಆಗಲಿ, ಹೇಗೆ ವರ್ತಿಸಬೇಕೆಂಬುದರ ಬಗ್ಗೆ ಇತರರು ಕಷ್ಟದಲ್ಲಿರುವಾಗ, ತನಗೆ ಮಾತ್ರ ಯಾವುದೂ ಅಸಾಧ್ಯವಲ್ಲವೆಂಬುದನ್ನು ಪ್ರದರ್ಶಿಸುವ ಗತ್ತಿನಲ್ಲಿ ಅವನು ಗರ್ವಿಸಿದನು.

ಅಧ್ಯಯನ ಮಂದಿರವನ್ನು ಪ್ರವೇಶಿಸಿದನಂತರ ರ್‍ಯಾಬಿನಿನ್ ವಾಡಿಕೆಯಂತೆ ವಿಗ್ರಹಾನ್ವೇಷಣೆಗಾಗಿ ಸುತ್ತಲೂ ದಿಟ್ಟಿ ಹರಿಸಿದನು. ಆದರೆ ಅದು ಕಣ್ಣಿಗೆ ಬಿದ್ದಾಗ ಅವನು ಕ್ರೂಸಿಮಣಿಹವನ್ನು ಸಲ್ಲಿಸಲಿಲ್ಲ. ಅವನು ಪುಸ್ತಕಗಳ ಅಲಮಾರು ಬೀರುಗಳ

ಕಡೆಗೆ ಕಣ್ಣು ಹಾಯಿಸಿ, ಉಲ್ಲಂಗಿಗಳನ್ನು ಕಂಡಿದ್ದ ರೀತಿಯಲ್ಲಿಯೇ ತಿರಸ್ಕಾರಾತ್ಮಕವಾಗಿ ಮಂದಹಾಸ ಬೀರಿದನು; ಬೇಟೆಯಲ್ಲಿ ಕಷ್ಟಕ್ಕೆ ತಕ್ಕ ಫಲ ಸಿಗಲಿಲ್ಲವೆಂಬಂತೆ ಅಸಮ್ಮತಿ ಸೂಚಕವಾಗಿ ತನ್ನ ತಲೆಯಲ್ಲಾಡಿಸಿದನು.

'ಸರಿ, ಹಾಗಾದರೆ, ಹಣ ತಂದಿದ್ದೀರಾ?' ಎಂದು ಆಬ್ಲಾನ್‌ಸ್ಕಿ ಪ್ರಶ್ನಿಸಿದನು. 'ಕುಳಿತುಕೊಳ್ಳುವುದಿಲ್ಲವೆ? ಕುಳಿತುಕೊಳ್ಳಿ.'

'ಹಣದ ಬಗ್ಗೆ ಹೆದರಬೇಕಾಗಿಲ್ಲ. ನಿಮ್ಮನ್ನು ನೋಡಲು, ನಿಮ್ಮೊಡನೆ ಮಾತಾಡಲು ಮಾತ್ರ ನಾನು ಬಂದಿದ್ದೇನೆ.'

'ಮಾತಾಡಲು ವಿಷಯವೇನಿದೆ? ಕುಳಿತುಕೊಳ್ಳಿ.'

'ಆಗಲಿ' ಎಂದು ರ್‍ಯಾಬಿನಿನ್ ಕುಳಿತುಕೊಂಡು, ಕುರ್ಚಿಯಲ್ಲಿ ಹಿಂದಕ್ಕೊರಗಿಕೊಂಡನು. ಕುರ್ಚಿ ಅವನಿಗೆ ಅನಾನುಕೂಲವಾಗಿ ಕಂಡಿತು. 'ರಾಜಕುಮಾರರೆ, ಬೆಲೆಯನ್ನು ತುಸು ಕಳಕ್ಕಿಳಿಸಬೇಕು. ಅಷ್ಟೊಂದು ಬೆಲೆ ಕೇಳುವುದು ಪಾಪ. ಬಿಡಿಗಾಸೂ ಕಡಿಮೆಯಿಲ್ಲದಂತೆ ಹಣ ಸಿದ್ಧವಾಗಿದೆ. ಹಣದ ಬಗ್ಗೆ ಹೆದರಿಕೆ ಬೇಡ.'

ಕೋವಿಯನ್ನು ಒಳಗಿಡಲು ಬಂದಿದ್ದ ಲೆವಿನ್ ಹೊರಗೆ ಹೋಗುವಷ್ಟರಲ್ಲಿ, ಅವನ ಮಾತು ಕೇಳಿಸಿಕೊಂಡು ಗಕ್ಕನೆ ನಿಂತನು.

'ಈಗಾಗಲೇ ನೀವು ಸಾಗುವಾನಿಯನ್ನು ಕುರುಡುಕಾಸಿಗೆ ಕೊಂಡುಕೊಂಡಿದ್ದೀರಿ' ಎಂದವನು ಮಾತು ಮುಂದುವರಿಸಿದನು. 'ನನ್ನ ಗೆಳೆಯ ತಡವಾಗಿ ಬಂದ. ಮೊದಲೇ ಬಂದಿದ್ದರೆ, ಅವನಿಗೆ ಇನ್ನೂ ಒಳ್ಳೆಯ ಬೆಲೆ ಕೊಡಿಸುತ್ತಿದ್ದೆ.'

ರ್‍ಯಾಬಿನಿನ್ ಮಾತಿಲ್ಲಿಯಾಗಿ, ಸುಸ್ಮಿತನಾಗಿ ಮೇಲೆದ್ದು, ಲೆವಿನ್‌ನ ಕಡೆಗೆ ನೋಡುತ್ತ ನಿಂತನು.

'ಕಾನ್‌ಸ್ಟೆಂಟಿನ್ ದಿಮಿತ್ರಿಚ್–ಇವರು ಬಿಗಿಮುಷ್ಟಿಯ ಮನುಷ್ಯ' ಎಂದವನು ನಸುನಗುತ್ತ ಆಬ್ಲಾನ್‌ಸ್ಕಿಯೊಡನೆ ಹೇಳಿದನು. 'ಇವರ ಬಳಿ ವ್ಯಾಪಾರವೇ ಕಷ್ಟ. ಇವರ ಗೋಧಿಗೆ ಒಳ್ಳೆಯ ಬೆಲೆ ಕೊಡಬೇಕೆಂದಿದ್ದೆ.'

'ನಾನೇಕೆ ಗೋಧಿಯನ್ನು ನಿಮಗೆ ಬಿಟ್ಟಿ ಕೊಡಲಿ? ನಾನೇನೂ ಅದನ್ನು ಹೊಲದಲ್ಲಿ ಆರಿಸಿಕೊಂಡು ಬಂದದ್ದಲ್ಲ. ಕದ್ದದ್ದಲ್ಲ.'

'ಓ, ಹೌದು; ನಿಜಕ್ಕೂ ಹೌದು. ಈ ಕಾಲದಲ್ಲಿ ಅದನ್ನು ಕದಿಯಲವಕಾಶವೇ ಇಲ್ಲ. ಈ ದಿನಗಳಲ್ಲಿ ಎಲ್ಲವೂ ಕಾನೂನಿಗನುಗುಣವಾಗಿ ನಡೆಯುತ್ತದೆ, ಎಲ್ಲವೂ ಶಿಷ್ಟರೀತಿಯಲ್ಲಿ ಸಂಭವಿಸುತ್ತದೆ. ಕಳ್ಳತನದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನಾನು ನಿಮ್ಮಲ್ಲಿ ಪ್ರಾಮಾಣಿಕತೆಯಿಂದ ನಡೆದುಕೊಂಡಿದ್ದೇನೆ. ಇವರು ತಮ್ಮ ಸಾಗುವಾನಿಗೆ ಹೆಚ್ಚು ಹಣ ಕೇಳುತ್ತಿದ್ದಾರೆ. ನಗರದಲ್ಲಿ ಏನೂ ಸಫೆ ಸಿಗುವುದಿಲ್ಲ. ಒಂದಿಷ್ಟು ಬೆಲೆ ಇಳಿಸಿರೆಂದು ಮಾತ್ರ ನಾನು ಕೇಳುತ್ತಿದ್ದೇನೆ.'

'ಒಪ್ಪಂದವಾಗಿದೆಯೋ ಇನ್ನೂ ಇಲ್ಲವೋ' ಎಂದು ಲೆವಿನ್ ಕೇಳಿದನು. 'ಒಪ್ಪಂದವಾಗಿದ್ದರೆ, ಆ ಬಗ್ಗೆ ಏನೂ ಹೇಳುವಂತಿಲ್ಲ; ಅದು ಆಗಿಲ್ಲವಾದರೆ, ನಾನು ಸಾಗುವಾನಿಯನ್ನು ಕೊಳ್ಳುತ್ತೇನೆ.'

(ಮುಂದುವರಿಯುವುದು)

ಸಾದರ ಸ್ವೀಕಾರ

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೧ ಇವರ ಪ್ರಕಟಣೆಗಳು:—

೧. ನವಕರ್ನಾಟಕ ಆಡಳಿತ ಪದಕೋಶ—ಸಂಪಾದಕರು: ಅಬ್ದುಲ್ ರಹಮಾನ್ ಪಾಷ, ಎಸ್. ನಾಗವೇಣಿ; ಪುಟ ೩೦೮, ಬೆಲೆ: ಸಾದಾ ಪ್ರತಿ ೪೦ ರೂ, ಅರ್ಧ ಕ್ಯಾಲಿಕೊ ೪೮ ರೂ.

೨. ನಾನೇಕೆ ನಾಸ್ತಿಕ—ಅನುವಾದಕರು: ಎನ್. ಗಾಯತ್ರಿ; ಪುಟ ೫೨, ಬೆಲೆ: ೪ ರೂ.

೩. ಕಣ್ಣಿನ ಸಂರಕ್ಷಣೆ—ಲೇಖಕರು: ಡಾ॥ ಎಚ್. ಎಸ್. ಮೋಹನ್; ಪುಟ ೧೦೨, ಬೆಲೆ: ೧೦ ರೂ.

೪. ಮಕ್ಕಳಿವರೇನಮ್ಮ?—ಲೇಖಕರು: ಜಿ. ರಮೇಶಉಪಾಧ್ಯಾಯ; ಪುಟ ೧೫೮, ಬೆಲೆ: ೧೫ ರೂ.

೫. ಶ್ರೀನಿವಾಸರಾಮಾನುಜನ್—ಲೇಖಕರು: ಜಿ. ಟಿ. ನಾರಾಯಣರಾವ್; ಪುಟ ೧೫೨, ಬೆಲೆ: ೧೩ ರೂ.

೬. ಚಪ್ಪಲಿಗಳು—ಲೇಖಕರು: ಸಾರಾ ಅಬೂಬಕ್ಕರ್; ಪುಟ ೧೪೬, ಬೆಲೆ: ೧೫ ರೂ.

೭. ಎಲೆಕ್ಟ್ರಾನ್‌ಗಳು—ಅನುವಾದಕರು: ವಿ. ಆರ್. ತಿರುವೆಂಕಟಾಚಾರ್, ಪುಟ ೩೪೪, ಬೆಲೆ: ರೂ. ೧೫–೫೦.

೮. ಭಾರತೀಯ ಚಿಂತನೆ ಹಿಂದೂಧರ್ಮ ಕಮ್ಯೂನಿಸಂ—ಲೇಖಕರು: ಬಿ. ವಿ. ಕಕ್ಕಿಲ್ಲಾಯ; ಪುಟ ೬೬, ಬೆಲೆ: ೭ ರೂ.

೯. ಸ್ಟಾಲಿನ್ ವಿದ್ಯಮಾನ—ಅನುವಾದಕರು: ಡಾ॥ ಬಿ. ಶ್ರೀನಿವಾಸ ಕಕ್ಕಿಲ್ಲಾಯ; ಪುಟ ೮೬, ಬೆಲೆ: ೫ ರೂ.

೧೦. ಬಸಂತಿ—ಅನುವಾದಕರು. ಶ್ರೀಮತಿ ಶಾರದಾಸ್ವಾಮಿ, ಡಾ॥ ಎಸ್. ಎಂ. ರಾಮಚಂದ್ರ ಸ್ವಾಮಿ; ಪುಟ ೨೧೮, ಬೆಲೆ: ೨೦ ರೂ.

೧೧. ಪ್ರಾಚೀನ ಭಾರತದಲ್ಲಿ ಭೌತಿಕ ವಾದ—ಅನುವಾದಕರು: ಬಿ. ವಿ. ಕಕ್ಕಿಲ್ಲಾಯ; ಪುಟ ೨೦೦, ಬೆಲೆ: ೧೮ ರೂ.

೧೨. ಸರಕುಗಳು—ಲೇಖಕರು: ಫಕೀರ್ ಮುಹಮ್ಮದ್ ಕಟ್ಪಾಡಿ; ಪುಟ ೧೩೪, ಬೆಲೆ: ೧೫ ರೂ.

೧೩. ತುಂಟ ಕರಡಿಮರಿ—ಅನುವಾದಕರು: ಕೆ. ಎಲ್. ಗೋಪಾಲಕೃಷ್ಣರಾವ್; ಪುಟ ೧೧, ಬೆಲೆ: ರೂ. ೩–೭೫.

೧೪. ಭೂಮಿಯ ಆಕಾರವನ್ನು ಜನ ಹೇಗೆ ಕಂಡು ಹಿಡಿದರು—ಅನುವಾದ: ಕೆ. ಎಲ್. ಗೋಪಾಲಕೃಷ್ಣರಾವ್; ಪುಟ ೮೦, ಬೆಲೆ: ೧೨ ರೂ.

ಅಂಗವಿಕಲ ಮಗುವಿಗೆ ವಿಶೇಷ ಆರೈಕೆ ಅಗತ್ಯ

ನಿಮ್ಮ ಮಗು ಅಂಗವಿಕಲವಾಗಿದ್ದರೆ ನಿರಾಶರಾಗದಿರಿ.

ನಿಮ್ಮ ಮಗುವಿಗೆ ಸಾಧ್ಯವಿರುವ ಎಲ್ಲಾ ಕಾರ್ಯಗಳ ಬಗ್ಗೆ ಚಿಂತಿಸಿರಿ.

ಅಂಗವಿಕಲ ಮಗು ನಿಮ್ಮ ಪ್ರೋತ್ಸಾಹದಿಂದ ಹೆಚ್ಚು ಕಡಿಮೆ ಸ್ವಾಭಾವಿಕ ಜೀವನ ನಡೆಸಲು ಮತ್ತು ಅಂಗವಿಕಲರಿಗೆ ಹೊಂದಿಕೊಳ್ಳಲು ಸಾಧ್ಯವಿದೆ.

ಮನೋದೌರ್ಬಲ್ಯದ ಮಗುವಿನೊಂದಿಗೆ ತಾಳ್ಮೆಯಿಂದ ವರ್ತಿಸಿ. ಆ ಮಗು ತನ್ನ ಮನೋವಿಕಲತೆಯ ಜೀವನಕ್ಕೆ ಹೊಂದಿಕೊಳ್ಳಲು ಸಹಕರಿಸಿ.

ನೆನಪಿಡಿ : ಅಂಗವಿಕಲತೆ ಮಗುವಿನ ತಪ್ಪಲ್ಲ. ಎಷ್ಟಾದರೂ ಅದು ನಿಮ್ಮ ಮಗು ಅಲ್ಲವೇ ?

ನೆನಪಿಡಿ : ಪ್ರತಿಯೊಂದು ಮಗುವಿನಲ್ಲೂ ವಿಶೇಷ ಚೈತನ್ಯವಿದೆ.

ಅದಕ್ಕೆ ನಿಮ್ಮ ಪ್ರೀತಿಯ ಅಗತ್ಯವಿದೆ.

ಹೆಚ್ಚಿನ ವಿವರಗಳಿಗೆ:

ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ
ಕರ್ನಾಟಕ ಸರ್ಕಾರ
ಬೆಂಗಳೂರು—ಇವರನ್ನು ಸಂಪರ್ಕಿಸಿರಿ.

ಕರ್ನಾಟಕ ವಾರ್ತೆ



ಡಾ|| ಉಮಾಶಂಕರ ಜೋಶಿ

ಫೋಟೋ ಕೃಪೆ: ಅರ್ಕೇಶ್, ಮೈಸೂರು